ಸಂವಾದ

ಫೆಬ್ರವರಿ ೨೦೧೦ ರೂ. ೨೦



ತೆಲಂಗಾಣ ಎಚ್ಚರಿಕೆ ಗಂಟೆ

ಕುವೆಂಪು ದೃಷ್ಟಿಯಲ್ಲಿ ಗೋಹತ್ಯೆ

ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ!

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೪

ಫೆಬ್ರವರಿ ೨೦೧೦

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,

ಅಂಜನಾನಗರ, ಮಾಗಡಿ ರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

✆ Editorial: 9448048306

✆ Circulation: 080- 23480278, 9945264687

e- mail : samvaada@hotmail.com

honnapura@yahoo.co.in

EDITOR :

INDUDHARA HONNAPURA



❑ ಪತ್ರಗಳು ೦೩

❑ ಸಂಪಾದಕರೊಂದಿಗೆ ಸಂವಾದ:

○ ಕಿರಣ .ಎಂ ಗಾಜನೂರು ೦೪

○ ಜಿ. ರಾಜಶೇಖರ ೦೬

○ ಡಾ. ಲತಾ ಮೈಸೂರು ೦೮

❑ ವಿಜಯನಗರವೋ? ಮುಘಲರಾಳ್ವಿಕೆಯೋ?... ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ!

○ ಶಿವಸುಂದರ್ ೧೦

❑ ಕಮ್ಯುನಿಸ್ಟ್ ಚಳುವಳಿ ಮತ್ತು ದಲಿತ ಚಳುವಳಿಯ ನಡುವೆ

○ ಡಾ॥ ಕಾ. ವೆಂ. ಶ್ರೀನಿವಾಸಮೂರ್ತಿ ೧೨

❑ ಬೇಡಜಂಗಮರು ಮಾದಿಗರು; ಮಾಲಜಂಗಮರು ಹೊಲೆಯರು?

○ ದಾಸನೂರು ಕೂಸಣ್ಣ ೧೪



❑ ತೆಲಂಗಾಣ ಎಂಬ ಎಚ್ಚರಿಕೆ ಗಂಟೆ

○ ನಾ ದಿವಾಕರ ೧೬

❑ ಭಾರತದ ರಾಜಕಾರಣ ಮತ್ತು ಮುಸ್ಲಿಮರ ತುಷ್ಟೀಕರಣ

○ ಖಾಸಿಂ ಸಾಬ್ .ಎ ೨೨

❑ ಕಥೆ : ಮನದ ಮೊನೆಯ ಕೊನೆ

○ ಎಸ್. ಬಿ. ಜೋಗುರ ೨೬

❑ ಯಾರು ಸಮಸ್ಯೆ, ಮಾವೋವಾದಿಗಳೋ? ಭಾರತದ ಪ್ರಭುತ್ವವೋ?

○ ಮೂಲ : ಹಿಮಾಂಶುಕುಮಾರ್

○ ಅನು : ಚೇತನ್ ೨೮

❑ ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್: ಆಧುನಿಕ ಭಾರತವನ್ನು ರೂಪಿಸಿದ ಚಿಂತಕರು: ಒಂದು ಮರುನೋಟ

○ ಡಿ. ಎಸ್. ನಾಗಭೂಷಣ ೩೪

❑ ಕಾಲಮಾನ... ೩ ಮತ್ತೊಮ್ಮೆ ವಿಮರ್ಶೆಗೊಳಗಾಗುವ ಸಂಸ್ಕೃತಾನುಕರಣ

○ ಡಾ. ಮುಜಾಫರ್ ಅಸ್ಸಾದಿ ೩೮

❑ ಧರೆ ಹತ್ತಿ ಉರಿದರೆ... ೧೮ ರಾಜಕೀಯದ ಬಡತನ– ಒಂದು ವಿಮರ್ಶೆ

○ ಡಾ. ಟಿ. ಆರ್ ಚಂದ್ರಶೇಖರ್ ೪೨

❑ ದಲಿತ್ ಡೈರಿ

○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬

❑ ಬುದ್ಧಾಯಣ ೫೦

○ ಸಿ. ಎಚ್. ರಾಜಶೇಖರ್



ಕವನಗಳು : ❑ ಬಿಡಿ ನನ್ನ ಊರ ಒಳಗೆ ೦೯ ❑ ನೇಣುಗಂಬದಲಿ ನಿರಪರಾಧಿ ೪೦

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಪತ್ರಗಳು

ಸರ್ಕಾರ ಬೀಳಿಸುವ ಪ್ರಜಾಪ್ರತಿನಿಧಿಗಳು!

ಮಾನ್ಯರೆ,

ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ರಾಜ್ಯ ಬಿಜೆಪಿ ಸರ್ಕಾರ ಉರುಳಿಸುವವರು ಜನರೇ ಹೊರತು ದೇವೇಗೌಡರಲ್ಲ ಎಂಬ ಅಭಿಪ್ರಾಯ ಮತ್ತು ಸರ್ಕಾರದ ಅಳಿವು-ಉಳಿವು ಜನರ ಕೈಯಲ್ಲಿದೆ, ದೇವೇಗೌಡರ ಕೈಯಲ್ಲಿಲ್ಲ ಎಂಬ ನಿಲುವು ಕೇವಲ ಕಲ್ಪನೆ ಮಾತ್ರ. ಮತದಾರರು ಶಾಸನಸಭೆಗೆ ಪ್ರತಿನಿಧಿಗಳನ್ನು ಚುನಾಣವಣೆಯಲ್ಲಿ ಆಯ್ಕೆ ಮಾಡುತ್ತಾರೆಯೇ ವಿನಃ ನೇರವಾಗಿ ಯಾವುದೇ ಸರ್ಕಾರವನ್ನೇ ಆಗಲಿ ರಚಿಸುವವರೂ ಅಲ್ಲ ಅಥವಾ ಉರುಳಿಸುವವರೂ ಅಲ್ಲ ಅಥವಾ ಶಾಸಕರು ಮತ್ತು ಸಂಸದರುಗಳಿಗೆ ಆಸೆ ಆಮಿಷಗಳನ್ನು ಕೊಟ್ಟು ಜಾತಿ ರಾಜಕೀಯ ಮಾಡುವವರೂ ಅಲ್ಲ.

ಭಾರತದ ಸಂವಿಧಾನವನ್ನು ಮೊದಲು ಪ್ರಜಾಪ್ರತಿನಿಧಿಗಳು ಅಧ್ಯಯನ ಮಾಡಿ ಅಳವಡಿಸಿಕೊಳ್ಳಬೇಕು ಮತ್ತು ಪರಿಪಾಲಿಸಬೇಕು. ಬಿಜೆಪಿ ಮುಖಂಡರು ಹೇಳುವಷ್ಟು ಸುಳ್ಳು ಬೇರೆ ಇತರೆ ಯಾವುದೇ ಪಕ್ಷದ ಮುಖಂಡರು ಹೇಳುವುದಿಲ್ಲ. ಅಧಿಕಾರವನ್ನು ಬಯಸುವುದು ತಪ್ಪಲ್ಲ, ಆದರೆ ಅಧಿಕಾರದ ಚುಕ್ಕಾಣಿ ಹಿಡಿಯುವ ನೀತಿ-ನಿಯಮಗಳನ್ನು ಎಷ್ಟು ಸಮರ್ಪಕವಾಗಿ ಪಾಲಿಸುತ್ತಾರೆ ಅಷ್ಟು ಹೆಚ್ಚು ಕಾಲ ರಚಿಸಿದ ಸರ್ಕಾರ ಅಧಿಕಾರದಲ್ಲಿ ಉಳಿಯುತ್ತದೆ. ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸರ್ಕಾರವನ್ನು ಅವರ ಪಕ್ಷದ ಶಾಸಕರುಗಳು ಉರುಳಿಸುತ್ತಾರೆಯೇ ವಿನಃ ಬೇರೆ ಯಾರು ಅಲ್ಲ.

ಮುಖ್ಯಮಂತ್ರಿ ಅವರು ಸಚಿವ ಸಂಪುಟ ಪುನರ್‌ರಚಿಸುವಾಗ ಯಾವ ಆಧಾರದ ಮೇಲೆ ಶಾಸಕರಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂಬ ಸ್ಪಷ್ಟ ನಿರ್ಧಾರ ಮೊದಲು ಮುಖ್ಯಮಂತ್ರಿ ಅವರಿಗೆ ಇರಬೇಕು ಮತ್ತು ಪಕ್ಷದ ಹೈಕಮಾಂಡ್ ಎಲ್ಲಾ ರೀತಿಯಲ್ಲೂ ಒಪ್ಪುವಂಥಹ ಉತ್ತಮ ವ್ಯಕ್ತಿ ಮತ್ತು ವ್ಯಕ್ತಿತ್ವ ಹೊಂದಿರುವ ಶಾಸಕರು ಮಾತ್ರ ಸಚಿವರಾಗಲು ಅರ್ಹರೆಂಬ ಪೂರ್ಣಮಾಹಿತಿ ಮುಖ್ಯಮಂತ್ರಿಯವರಿಗೆ ತಿಳಿದಿರಬೇಕು. ಯಾವುದೇ ಕಾರಣಕ್ಕೂ ಭ್ರಷ್ಟರು, ವ್ಯಭಿಚಾರಿಗಳು, ದೇಶದ ಸಂಪತ್ತು ಲೂಟಿ ಮಾಡುವವರು ಸಚಿವ ಸಂಪುಟದಲ್ಲಿ ಸೇರ್ಪಡೆಯಾಗಬಾರದು. ಆಗ ಮಾತ್ರ ಯಾರು ಸರ್ಕಾರ ಬೀಳಿಸಲು ಸಾಧ್ಯವಿಲ್ಲ. ತಪ್ಪಿದಲ್ಲಿ ಸರ್ಕಾರ ಉಳಿಸಿಕೊಳ್ಳಲೂ ಸಹ ಸಾಧ್ಯವಿಲ್ಲ. ಭಾರತದಲ್ಲಿ ಸರ್ವ ಧರ್ಮಿಯರೂ ಇದ್ದಾರೆ.

ಈ ದೇಶದ ಸಂವಿಧಾನ ಸರ್ವ ಧರ್ಮಿಯರಿಗೆ ಹಾಗೂ ಭಾರತೀಯ ಸರ್ವಮಾನವನ ಸಮಾನತೆಗೆ ಮತ್ತು ಹಕ್ಕು ಬಾಧ್ಯತೆ ಕಾಯ್ದುಕೊಳ್ಳಲು ಸರ್ವರಿಗೂ ಅವಕಾಶವಿದೆ.

ಸ್ವಜಾತಿ ಹಾಗೂ ಧರ್ಮಿಯರು ಪ್ರಧಾನಿ ಮತ್ತು ರಾಜ್ಯ ಮುಖ್ಯಮಂತ್ರಿ ಗದ್ದುಗೆ ಏರಲು ಅರ್ಹರಲ್ಲ ಎಂಬುವುದು ಮೊದಲು ಆರ್‌ಎಸ್‌ಎಸ್ ಸಂಸ್ಕೃತಿಯಿಂದ ಬಂದವರಿಗೆ ಆಗಬೇಕು. ಅಸ್ಪ್ರಶ್ಯತೆ ಜೀವನ ನೆಡುಸುತ್ತಿರುವ ಸಮುದಾಯಗಳಿಗೆ ಸೇರಿದ ಎಡಗೈ ಮತ್ತು ಬಲಗೈ ಜನಾಂಗದ ಸಚಿವರು ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ಎಷ್ಟಿದ್ದರು, ಈಗ ಯಡಿಯೂರಪ್ಪನವರ ಸಂಪುಟದಲ್ಲಿ ಎಷ್ಟು ಇದ್ದಾರೆ ಎಂಬ ಮಾಹಿತಿ ಬಿಜೆಪಿ ಶಾಸಕರು ಮತ್ತು ಸಂಸದರಿಗೆ ಹಾಗೂ ಪಕ್ಷದ ಮುಖಂಡರಿಗೆ ಗೊತ್ತಿದ್ದರೆ ಹಾಲಿ ಬಿ.ಜೆ.ಪಿ ಸಂಸದ ರಮೇಶ್ ಜಿಗಜಿಣಗಿ ಅವರು ರಾಜ್ಯ ಸರ್ಕಾರದ ವೈಫಲ್ಯತೆ ಹಾಗೂ ಅಸ್ಪ್ರಶ್ಯರಿಗೆ ಆಗಿರುವ ಸಚಿವಸಂಪುಟದ ಅನ್ಯಾಯದ ಬಗ್ಗೆ ಯಾವುದೇ ಚಕಾರ ಎತ್ತುತಿರಲಿಲ್ಲ ಎಂಬುವುದು ಮೊದಲು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ತಿಳಿಯಬೇಕು.

ಶೇ.15ರಷ್ಟು ಮೀಸಲಾತಿ ಎಲ್ಲಾ ಕ್ಷೇತ್ರದಲ್ಲೂ ಪರಿಶಿಷ್ಟ ಜಾತಿ-ಜನಾಂಗಕ್ಕೆ THE CONSTITUTION (Scheduled castes)ORDER 1950 ಪ್ರಕಾರ ಅಂದು ಅಸ್ಪ್ರಶ್ಯರ ಪಟ್ಟಿಯಲ್ಲಿದ್ದ ಜಾತಿಗಳಿಗೆ ಸಲ್ಲ ಬೇಕು. ತದನಂತರ ಪರಿಶಿಷ್ಟಜಾತಿ ಪಟ್ಟಿಗೆ ಸೇರ್ಪಡೆಯಾದ ಜಾತಿ-ಜಾನಂಗಕ್ಕೆ ಜನ ಸಂಖ್ಯೆ ಆಧಾರದ ಮೇಲೆ ಮೀಸಲಾತಿ ಕೋಟಾ ಜಾಸ್ತಿ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಅಲ್ಲದೆ ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಡುವ ಶೋಷಿತರಿಗೆ ಮತ್ತು ಸಾಮಾಜಿಕ ಪಿಡುಗು ಅನುಭವಿಸುತ್ತಿರುವ ಸಮುದಾಯಗಳಿಗೆ ನ್ಯಾಯ ದೊರಕಿಸಿಕೊಡಬೇಕು.

ಅಸ್ಪೃಶ್ಯರ ಧೀಮಂತ ನಾಯಕ ದಿವಂಗತ ಎನ್. ರಾಚಯ್ಯ ಅವರು ಶೇ.15ರಷ್ಟು ಮೀಸಲಾತಿ ಯಾರಿಗೆ ಲಭಿಸಬೇಕೆಂಬ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ದಾವೆ ಹಾಕಿ ಅವರು ಜೀವಂತವಾಗಿ ಇರುವವರೆಗೂ ನ್ಯಾಯಾಲಯದ ತೀರ್ಪು ಹೊರ ಬರಲಿಲ್ಲ. ಅಸ್ಪೃಶ್ಯತೆ ನೋವನ್ನು ಇಂದಿಗೂ ಅನುಭವಿಸುತ್ತಿರುವ ಶೋಷಿತ ಸಮುದಾಯಗಳಿಗೆ ಸೇರಿದ ಮಾಜಿ ಹಾಗೂ ಹಾಲಿ ಶಾಸಕರು, ಸಂಸದರು, ಸಚಿವರುಗಳು ಒಂದಾಗುವ ಕಾಲ ಸಮೀಪಿಸುತ್ತಿದೆ. ಯಡಿಯೂರಪ್ಪ ಅವರ ಜಾತಿ ರಾಜಕಾರಣದಿಂದ ಅಸ್ಪೃಶ್ಯರು ಎಚ್ಚೆತ್ತುಕೊಂಡಿದ್ದಾರೆ. ಅಂದಹಾಗೆ ಸರ್ಕಾರ ಬೀಳಿಸುವವರು ಪ್ರಜಾಪ್ರತಿನಿಧಿಗಳೇ ಹೊರತು ಜನ ಸಾಮಾನ್ಯರಲ್ಲ ಎಂಬ ಅರಿವು ರಾಜ್ಯದ ಮುಖ್ಯಮಂತ್ರಿಯವರಿಗೆ ಆಗಬೇಕು.

ಎ.ಮಾದಯ್ಯ,
ಮೈಸೂರು

ಚಿಂತನೆಗೆ ಹಚ್ಚುವ ಲೇಖನಗಳು

ಮಾನ್ಯರೇ,

ನಾನು ಮೊದಲಿನಿಂದಲು ನಿಮ್ಮ ಸಂಪಾದಕತ್ವದ 'ಸಂವಾದ'ವನ್ನು ಓದುತ್ತಲಿದ್ದು, ಪತ್ರಿಕೆ ಉನ್ನತ ಸ್ಥಾನದಲ್ಲಿ ಬೆಳೆಯಲಿ ಎಂದು ಆಶಿಸುತ್ತೇನೆ. ಇದು ಮಾಸ ಪತ್ರಿಕೆಯಾಗಿ ಬರುತ್ತಿರುವುದು ಬಹಳ ಸಂತೋಷವೆನಿಸುತ್ತಿದೆ.

'ಸಂವಾದ' ವೈಚಾರಿಕ ಬೀಜವನ್ನು ಬಿತ್ತಿ ಎಲ್ಲರಲ್ಲಿ ವೈಚಾರಿಕತೆಯನ್ನು ಬೆಳೆಸಲಿ. ಹಾಗೆಯೇ ಇದು ಒಳ್ಳೆಯ ಅರಿವನ್ನು ಮೂಡಿಸುವ ದಿಕ್ಕಿನಲ್ಲಿ ಸಾಗಲಿ. ಸಂಚಿಕೆಯ ಲೇಖನಗಳೆಲ್ಲವೂ ಚಿಂತನೆಗೆ ಹಚ್ಚುತ್ತವೆ. ವೈಚಾರಿಕತೆ ಹಾಗೂ ವಾಸ್ತವತೆಯನ್ನು ಬಿಂಬಿಸುವ ಇಂಥಹ ಬರಹಗಳು ಸಮಕಾಲೀನ ಗೊಂದಲಗಳನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸುವಲ್ಲಿ ಸಹಕಾರಿಯಾಗುತ್ತವೆ.

ಹಾಗೂ ಹಲವಾರು ಗಣ್ಯರ ಸಂದರ್ಶನ, ಸಂಪಾದಕರೊಡನೆ ಸಂವಾದ ಚೆನ್ನಾಗಿ ಮೂಡಿ ಬರುತ್ತಲಿದೆ. ಬುದ್ಧಾಯಣದ ಮೂಲಕ "ಬುದ್ಧ ಧಮ್ಮ"ದ ಬಗ್ಗೆ ಬುದ್ಧನ ಬಗ್ಗೆ ಬಹಳ ಸ್ಪಷ್ಟವಾಗಿ ವಿಷಯಗಳು ಬರುತ್ತಲಿವೆ.

'ಸಂವಾದ'ದಲ್ಲಿ ಬರುತ್ತಿರುವ ಕವನಗಳನ್ನು ಗಮನಿಸಿದರೆ, ಕನ್ನಡ ಕಾವ್ಯಲೋಕ ನಿಜವಾಗಿಯೂ ಶ್ರೀಮಂತವಾಗುತ್ತಿದೆ ಅನ್ನಿಸುತ್ತಿದೆ.

'ಸಂವಾದ' ಹೆಚ್ಚು ಅರ್ಥಪೂರ್ಣವಾದ ಲೇಖನಗಳಿಂದ ಹೊರಬರುತ್ತಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತಿದೆ. ಜನಪರ ಸಾಹಿತ್ಯ ಮತ್ತು ಚಳುವಳಿಗಳನ್ನು ಜೀವಂತವಾಗಿಡುವ ನಿಟ್ಟಿನಲ್ಲಿ ಪತ್ರಿಕೆಯ ನಿಲುವು ಶ್ಲಾಘನೀಯವಾಗಿದೆ.

ಒಟ್ಟಿನಲ್ಲಿ, ಜಡ್ಡುಗಟ್ಟುತ್ತಿರುವ ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ತಿರುವ ನೀಡಲು, 'ಸಂವಾದ'ದಂತಹ ಪತ್ರಿಕೆ ತೀರ ಅಗತ್ಯ ಹಾಗೂ ಅನಿವಾರ್ಯ.

ನಿಮಗೆ ಮತ್ತು ನಿಮ್ಮ ತಂಡದ ಎಲ್ಲರಿಗೂ ಶುಭಾಶಯಗಳು.

ವಂದನೆಗಳು,

ದೀಪಮಾಲ,
ಬೆಂಗಳೂರು



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಒ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಸಂಪಾದಕರೊಡನೆ ಸಂವಾದ

ರಾಮ ಮಂದಿರ ಚಳುವಳಿ... ಭಾರತದ ಬುದ್ಧಿಜೀವಿ...

ಕಿರಣ. ಎಂ ಗಾಜನೂರು

ಮಾನ್ಯರೇ,

1ನೇ ಡಿಸೆಂಬರ್ 2009 ರಂದು ರಾಜ್ಯದ ಪ್ರಮುಖ ದಿನ ಪತ್ರಿಕೆಯೊಂದರಲ್ಲಿ ಪ್ರಕಟವಾದ ಸುಧೀಂದ್ರ ಕುಲಕರ್ಣಿ ಅವರ ವಾಜಪೇಯಿ ಸೋಗಲಾಡಿ ಆಂದ್ರೆ ಸೌಮ್ಯವಾದಕ್ಕೆ ಏನರ್ಥ ಎಂಬ ಲೇಖನಕ್ಕೆ ಪ್ರತಿಕ್ರಿಯೆ ನೀಡಬಯಸುತ್ತೇನೆ. ಪ್ರಸ್ತುತ ಲೇಖನದ ಲೇಖಕರು ಇತ್ತೀಚೆಗೆ ಮಾಧ್ಯಮಕ್ಕೆ ಸೋರಿಕೆಯಾಗಿ, ನಂತರ ಸಂಸತ್ತಿನಲ್ಲಿ ಮಂಡಿಸಲ್ಪಟ್ಟ ಲಿಬರ್ಹಾನ್ ವರದಿಯಲ್ಲಿ ಮಾಜಿ ಪ್ರಧಾನಿ ವಾಜಪೇಯಿ ಅವರನ್ನು ಸೌಮ್ಯವಾದಿ ಸೋಗಲಾಡಿ ಎಂದು ಜರಿದಿರುವುದಕ್ಕೆ ತಮ್ಮ ಆಕ್ಷೇಪಣೆಯನ್ನು ಎತ್ತುತ್ತಾರೆ. ಜೊತೆಗೆ ನಾನು ಇಂದಿಗೂ ರಾಮ ಮಂದಿರ ಚಳುವಳಿಯನ್ನು ಬೆಂಬಲಿಸುತ್ತೇನೆ. ಎಂದು ಘೋಷಿಸುತ್ತಾರೆ. ಈ ಚರ್ಚೆಯಲ್ಲಿ ಪ್ರಮುಖವಾಗಿ ಎರಡು ಅಂಶಗಳನ್ನು ಗುರುತಿಸಬಹುದು.

ಮೊದಲನೆಯದು ವಾಜಪೇಯಿ ಅವರನ್ನು ಸೌಮ್ಯವಾದಿ ಸೋಗಲಾಡಿ ಎಂದು ಜರಿದಿರುವುದು ಕಾಂಗ್ರೆಸ್ ಸರ್ಕಾರದ ವೋಟ್ ಬ್ಯಾಂಕ್ ರಾಜಕೀಯ ಎಂಬುದು, ಇದ್ದರೂ ಇರಬಹುದು ಇದರ ಕುರಿತಂತೆ ನಾನು ಇಲ್ಲಿ ಹೆಚ್ಚು ಚರ್ಚಿಸುವುದಿಲ್ಲ.

ಎರಡನೇಯದು ಅಂದರೆ ರಾಮ ಮಂದಿರ ಚಳುವಳಿಯನ್ನು ನಾನು ಇಂದಿಗೂ ಬೆಂಬಲಿಸುತ್ತೇನೆ ಎನ್ನುವುದಕ್ಕೆ ಲೇಖಕರು ಕೊಡುವ ಕಾರಣ ಇಲ್ಲಿ ಬಹಳ ಪ್ರಮುಖವಾಗುತ್ತದೆ. ಮತ್ತು ಅದು ಇಂದಿನ ಬುದ್ಧಿಜೀವಿಗಳಿಂದ ಹಿಡಿದು ಅಡ್ವಾಣಿಯವರ ಮಾಜಿ ಆಪ್ತ ಸಲಹೆಗಾರನವರೆಗೆ ರಿಲಿಜನ್ ವಿಷಯದ ಕುರಿತಾಗಿನ ಬೌದ್ಧಿಕ ಗ್ರಹಿಕೆಯ ಪ್ರತಿ ಬಿಂಬವಾಗಿದೆ. ಅವರು ರಾಮ ಮಂದಿರ ಚಳುವಳಿ ಬೆಂಬಲಿಸಲು ನೀಡಿರುವ ಕಾರಣವನ್ನು ಅವರದೇ ಮಾತಿನಲ್ಲಿ ಹೇಳುವುದಾದರೆ,

1992ರಲ್ಲಿ ನಾನು ಬಿಜೆಪಿಗೆ ಸೇರಿರಲಿಲ್ಲ, ಆದರೂ ರಾಮ ಮಂದಿರ ಚಳುವಳಿಯನ್ನು ಬೆಂಬಲಿಸಿದೆ ಇವತ್ತು ನಾನು ಬಿಜೆಪಿಯಲ್ಲಿಲ್ಲ, ಆದರೆ ರಾಮಮಂದಿರ ನಿರ್ಮಾಣಕ್ಕೆ ನನ್ನ ಬೆಂಬಲ ಇದ್ದೇ ಇದೆ. ನನ್ನಂತಹ ಲಕ್ಷಾಂತರ ಹಿಂದೂಗಳು ಲಿಬರ್ಹಾನ್ ವರದಿಯಿಂದ ಕ್ರುದ್ಧರಾಗಿದ್ದಾರೆ. ಲಿಬರ್ಹಾನ್‌ರಂಥವರ ಪ್ರಕಾರ ಮತಾಂಧ ಮುಸ್ಲಿಂ ಆಡಳಿತಗಾರರ ದೇವಾಲಯ ಧ್ವಂಸ ನೀತಿಯನ್ನು ಒಪ್ಪಿಕೊಳ್ಳುವುದು ಜಾತ್ಯತೀತವಾಗುತ್ತದೆಯೇ? ಈ 21ನೇ ಶತಮಾನದಲ್ಲಿ ಇಸ್ಲಾಂ ಮೂಲಭೂತವಾದಿಗಳು ಬಾಮಿಯ ಬುದ್ಧನ ವಿಗ್ರಹವನ್ನು ಧ್ವಂಸಗೊಳಿಸಿರುವುದು ಕಣ್ಮುಂದೆ ಇರುವಾಗ ಮಧ್ಯಕಾಲಿನ ಭಾರತದಲ್ಲಿ ದೇವಾಲಯಗಳ ನಾಶ ಆಗಿರಲೇ ಇಲ್ಲ ಎಂದು ನಂಬಿ ಬಿಡೋಣವೇ?

ಲೇಖಕರ ಈ ಮೇಲಿನ ವಿವರಣೆಯಿಂದ ಎರಡು ಅಂಶಗಳನ್ನು ಗುರುತಿಸಬಹುದು 1) ಮುಸ್ಲಿಂ ಆಡಳಿತಗಾರರು ಮಧ್ಯಕಾಲದಲ್ಲಿ ದೇವಾಲಯಗಳನ್ನು ಧ್ವಂಸಮಾಡಿ ತಮ್ಮ ಮಸೀದಿಗಳನ್ನು ನಿರ್ಮಿಸಿದ್ದಾರೆ. 2) ಅದಕ್ಕೆ ಪರ್ಯಾಯವಾಗಿ ನಾವು ಇಂದು ರಾಮ ಮಂದಿರ ಚಳುವಳಿ ಬೆಂಬಲಿಸಬೇಕು. ಈ ಹಿನ್ನೆಲೆಯಲ್ಲಿ ನಾನು ನನ್ನ ವಾದವನ್ನು ಬೆಳೆಸುತ್ತೇನೆ.

ಸಮಾಜ ವಿಜ್ಞಾನದ ವಿದ್ಯಾರ್ಥಿಯಾದ ನನಗೆ ಲೇಖಕರ ಇಡೀ ವಾದ ರಿಲಿಜನ್‌ಗಳ ಕುರಿತಾದಂತಹ ಒಂದು ಪೂರ್ವ ಪ್ರತಿಪಾದಿತ ಜ್ಞಾನದ ಹಿನ್ನೆಲೆಯಿಂದ ರೂಪ ಪಡೆದುಕೊಂಡಿದೆ ಎನಿಸಿತು. ಅದು ಅವರ ಅನಿವಾರ್ಯವೂ ಹೌದು! ಏಕೆಂದರೆ ನನ್ನ ಜ್ಞಾನದ ಮಿತಿಯಲ್ಲಿ ಹೇಳುವುದಾದರೆ ಭಾರತ ಅದರಲ್ಲಿಯೂ ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯಗಳು ರಿಲಿಜಿಯನ್ ಕುರಿತಾದಂತಹ ಒಂದು ಆಸಕ್ತಿದಾಯಕ ಮತ್ತು ಉಪಯುಕ್ತ ಸಂಶೋಧನೆಗಳನ್ನು ನಡೆಸುತ್ತಿಲ್ಲ. ಆದರೂ ಹಿಂದೂ ಎಂದರೆ ಯಾರು? ಹಿಂದೂಯಿಸಂ ಒಂದು ರಿಲಿಜಿಯನ್ನಾ? ಸೆಮಿಟಿಕ್ ರಿಲಿಜಿಯನ್ ಎಂದರೆ ಏನು? ಅವುಗಳ ಲೋಕ ದೃಷ್ಟಿ (word view) ಹೇಗಿರುತ್ತದೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಪಾಶ್ಚಿಮಾತ್ಯರು ನೀಡಿದ ಬಹು ಸಂಪುಟಗಳ ಗ್ರಂಥಗಳೇ ನಮಗೆ ಆಧಾರವಾಗಿವೆ. ಈ ಹಿನ್ನೆಲೆಯಲ್ಲಿ ರಿಲಿಜನ್ ಕುರಿತಾದಂತೆ ಇನ್ನು ಮೂಲಭೂತವಾದ ಕೆಲವು ಅಂಶಗಳನ್ನು ಮನವರಿಕೆ ಮಾಡಿಕೊಳ್ಳುವುದು ಅವಶ್ಯಕ ಮತ್ತು ಆ ರೀತಿ ರಿಲಿಜಿಯನ್ ಅನ್ನು ಗ್ರಹಿಸುವ ದಾರಿಯೇ ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರವಾಗುತ್ತದೆ ಎಂಬ ನಂಬಿಕೆಯೊಂದಿಗೆ ರೀಲಿಜಿಯನ್ ಕುರಿತಾಗಿ ಮಾತನಾಡುತ್ತೇನೆ.



ಮೊದಲು ನಮಗೆ ರಿಲಿಜಿಯನ್ (Religion) ಮತ್ತು ನಾವು ಕನ್ನಡದಲ್ಲಿ ಕರೆಯುವ ಧರ್ಮ ಇವೆರಡು ಬೇರೆಯದೆ ಅರ್ಥವನ್ನು ನಿಡುವ ಪದಗಳು ಎಂಬುದು ತಿಳಿದಿರಬೇಕಾದ ವಿಷಯ. ಹಾಗಾದರೆ ರಿಲಿಜಿಯನ್ ಎಂದರೆ ಏನು? ಒಂದು ಗುಂಪು ರಿಲಿಜಿಯಸ್ ಗುಂಪು ಎಂದು ಕರೆದುಕೊಳ್ಳಬೇಕಾದರೆ ಅದಕ್ಕೆ ಇರಬೇಕಾದ ಮೂಲಭೂತ ಲಕ್ಷಣಗಳಾವುವು? ಎಂದು ತಿಳಿದುಕೊಳ್ಳೊಣ. ಒಂದು ಗುಂಪನ್ನು ರಿಲಿಜಿಯಸ್ ಗುಂಪು ಎಂದು ಕರೆಯಬೇಕಾದರೆ ಅದು ಈ ಕೆಳಗಿನ ಅಂಶಗಳನ್ನು ಹೊಂದಿರಲೇಬೇಕು ಅವು ಯಾವುವೆಂದರೆ:

* ಏಕದೇವ ಕಲ್ಪನೆ
* ಒಬ್ಬ ಪ್ರವಾದಿ
* ದೇವೋಪಾಸನೆಗೆ ಒಂದು ಸಂಸ್ಥೆ
* ಒಂದು ಪವಿತ್ರ ಗ್ರಂಥ

ಇವುಗಳನ್ನು ಹೊಂದಿರುವ ರಿಲಿಜಿಯನ್‌ಗಳನ್ನು ಸೆಮಿಟಿಕ್(Semitic) ರಿಲಿಜನ್‌ಗಳು ಎಂದು ಕರೆಯುತ್ತಾರೆ ಉದಾ: ಇಸ್ಲಾಂ, ಕ್ರಿಶ್ಚಿಯಾನಿಟಿ, ಜೂಡಾಯಿಸಂ. ಈ ರೀತಿಯ world view ಇಲ್ಲದ ರಿಲಿಜಿಯನ್‌ಗಳು ನಾನ್ ಸೆಮಿಟಿಕ್ ಅಥವಾ ಹಿದನ್ ರಿಲಿಜಿಯನ್ನುಗಳು ಎಂದು ಗುರುತಿಸಲ್ಪಡುತ್ತವೆ. ಉದಾ: ಹಿಂದೂಯಿಸಂ (ರಿಲಿಜಿಯನ್‌ಗಳಲ್ಲಿ Semitic religion and Heathen religion ಅಥವಾ Non Semitic religion, ಈ ಎರಡು ವಿಭಾಗಗಳು ಪಾಶ್ಚಾತ್ಯರು ಗುರುತಿಸಿರುವುದು) ಇಲ್ಲಿ ನಾವು ಪ್ರಮುಖವಾಗಿ ತಿಳಿಯಬೇಕಾದ ಅಂಶಗಳು ಎಂದರೆ ಸೆಮಿಟಿಕ್ ರಿಲಿಜಿಯನ್ನಿನ world view (ಜಗತ್ತನ್ನು ಅರ್ಥಮಾಡಿಕೊಳ್ಳುವ ರೀತಿ) ಹೇಗಿರುತ್ತದೆ ಎಂದು. ಆದರ ಪ್ರಕಾರ ಇಡೀ ಜಗತ್ತನ್ನು ವಿವರಿಸುವ ಅದನ್ನು ಅರ್ಥೈಸುವ ಒಂದು ಶಕ್ತಿ ಇರುವುದು ನನಗೆ, ಏಕೆಂದರೆ ಜಗತ್ತಿನ ಒಟ್ಟಾರೇ ಸಾರವೇ ನನ್ನ ರಿಲಿಜಿಯನ್. ನನ್ನ ರಿಲಿಜಿಯನ್ನಿನ ಹೊರತಾಗಿ ಬೇರೊಂದು ರಿಲಿಜಿಯನ್ ಇರಲು ಸಾಧ್ಯವೇ ಇಲ್ಲ, ಇದ್ದರೆ ಖಂಡಿತ ಅದು ನಾಗರೀಕತೆಯ ಆರಂಭದ ಹಂತದಲ್ಲಿರುವ ಹಿಡನ್‌ಗಳಾಗಿರುತ್ತಾರೆ.

ಅವರು ದೇವರನ್ನು ಪೂಜಿಸದೇ ದೆವ್ವಗಳನ್ನು ಪೂಜಿಸುತ್ತಿರುತ್ತಾರೆ. (Devil worshipers) ಏಕೆಂದರೆ ಅವರಿಗೆ ದೇವರು ತೋರಿರುವ ಸನ್ಮಾರ್ಗ ಅರ್ಥವಾಗಿಲ್ಲ. ಆದ್ದರಿಂದ ಅವರಿಗೆ ದೇವರ ಮಾರ್ಗವನ್ನು ತಿಳಿಸುವ, ಅವರನ್ನು ಸರಿಯಾದ ರಿಲಿಜಿಯನ್ (True religion) ನೆಡೆಗೆ ತರುವ ಹೊಣೆಗಾರಿಕೆ ನಮ್ಮ ಮೇಲಿದೆ ಅದು ದೇವರೆ ನಮಗೆ ಲೋಕ ಕಲ್ಯಾಣಕ್ಕಾಗಿ ನಮಗೆ ವಹಿಸಿರುವ ಕೆಲಸ ಎಂದು ನಂಬುತ್ತವೆ. ಮತ್ತು ಈ ನಂಬಿಕೆಯ ಭಾಗವಾಗಿಯೇ ಸೆಮಿಟಿಕ್ ರಿಲಿಜಿಯನ್‌ಗಳು ಮತಾಂತರ ಮತ್ತು ದೇವಾಲಯ ಒಡೆಯುವ ಚಟುವಟಿಕೆಯಲ್ಲಿ ತೊಡಗುತ್ತವೆ.

ಏಕೆಂದರೆ ಅವರ ಪ್ರಕಾರ ದೇವರುಗಳ ಆಲಯವನ್ನು ಒಡೆಯುವುದು, ಮತಾಂತರ ಮಾಡುವುದು ಮುಂತಾದ ಕ್ರಿಯೆಗಳು ತಪ್ಪು ರಿಲಿಜಿಯನ್ ಹೊಂದಿರುವ ವ್ಯಕ್ತಿಯನ್ನು ಸರಿಯಾದ ರೀಲಿಜಿಯನ್ನೆಡೆಗೆ ತರುವ ವಿಧಾನ. ನಿಜ ಅರ್ಥದಲ್ಲಿ ಅವರು ನಮಗೆ ದೇವರು ತೋರಿದ ಸತ್ಯಮಾರ್ಗವನ್ನು ತೋರಿಸಲು ನಮ್ಮನ್ನು ಪವಿತ್ರಗೊಳಿಸಲು ಪ್ರಯತ್ನಿಸುತ್ತಿರುತ್ತಾರೆ. ಹಾಗೆ ನೋಡುವುದಾದರೆ ಅವರ ಉದ್ದೇಶ ಒಳ್ಳೆಯದೇ, ಏಕೆಂದರೆ ಈ ರೀತಿಯ ಗ್ರಹಿಕೆ ಅವರ ರಿಲಿಜಿಯನ್‌ನಲ್ಲಿಯೇ ಇರುತ್ತದೆ. ಮತ್ತು ಅವರು ಸಿದ್ಧಾಂತದ ಪರ ಜನರಾಗಿರುತ್ತಾರೆ. ಅವರ ಪ್ರತಿಯೊಂದು ಕ್ರಿಯೆಯನ್ನು ಯಾವುದೊ ಒಂದು ಸಿದ್ಧಾಂತ ಗೈಡ್ ಮಾಡುತ್ತಿರುತ್ತದೆ. ಉದಾ: ಬೈಬಲ್, ಕುರಾನ್ ಮುಂತಾದ ಗ್ರಂಥಗಳು. ಯಾಕೆ ಈ ರೀತಿಯ ಮನೋಭಾವನೆ ಸೆಮಿಟಿಕ್ ರಿಲಿಜಿಯನ್‌ಗಳಲ್ಲಿ ಇದೆ ಎಂದರೆ ಅವರ ಪ್ರಕಾರ ರೀಲಿಜಿಯನ್ ಇಲ್ಲದ ಯಾವುದೇ ಸಮಾಜದ ಅಸ್ತಿತ್ವ ಸಾಧ್ಯವೇ ಇಲ್ಲ.

ಪ್ರತಿಯೊಂದು ಸಮಾಜವು ರಿಲಿಜಿಯನ್ ಹೊಂದಿರುತ್ತದೆ ಮತ್ತು ಹೊಂದಿರಲೇಬೇಕು ಅದ್ದರಿಂದಲೇ ಅವರು true religion ಮತ್ತು false religion ಗಳ ಬಗ್ಗೆ ಮಾತ್ರ ಮಾತನಾಡುತ್ತಾರೆ non religion (ರಿಲಿಜಿಯನ್ ರಹಿತ ಸಮಾಜ) ಎಂಬ ಒಂದು ಪರಿಕಲ್ಪನೆ ಪಾಶ್ಚಾತ್ಯರಲ್ಲಿ ಇಲ್ಲ. ಏಕೆಂದರೆ ಮೊದಲೇ ತಿಳಿಸಿದಂತೆ ಅವರು ಸಿದ್ಧಾಂತ ಪರವಾದ ಜನರು ಮತ್ತು ಅವರ ಪ್ರತಿಯೊಂದು ಕ್ರಿಯೆಯನ್ನು ಯಾವುದಾದರೊ ಒಂದು ಸಿದ್ಧಾಂತ ನಿರ್ದೇಶಿಸುತ್ತಿರುತ್ತದೆ. ಮುಸ್ಲಿಂಜನಾಂಗ ಮಾತ್ರ ಈ ರೀತಿಯ ಗುಣ ಹೊಂದಿಲ್ಲ ಯಾವವುಗಳನ್ನು ನಾವು Semitic ರಿಲಿಜಿಯನ್‌ಗಳು ಎಂದು ಕರೆಯುತ್ತೇವೊ, ಅವೆಲ್ಲವುಗಳ ಜಗತ್ತನ್ನು ನೋಡುವ, ಅರ್ಥೈಸುವ ವಿಧಾನವೇ ಇದಾಗಿದೆ ಮತ್ತು ಈ ರೀತಿಯ Religious way of understanding the world ಅವರನ್ನು, ದೇವಲಯಗಳನ್ನು ಒಡೆಯುವಂತೆ, ಮತಾಂತರದಲ್ಲಿ ತೊಡಗುವಂತೆ ಮಾಡುತ್ತದೆ. ಭಯೋತ್ಪಾದನೆಯು ಈ ನಂಬಿಕೆಯ ಒಂದು ಭಾಗವೆ! ಈ ಚಟುವಟಿಕೆ ಜಗತ್ತಿನಲ್ಲಿನ ಜಿಹಾದ್ ಮೂಲಕ ಕಾಫಿರ್(ಸುಳ್ಳು ದೇವರ ಆರಾಧಕರು – false religion worshipers) ಜನರನ್ನು ಕೊಂದು ನಮ್ಮ ಸತ್ಯ ಮತ್ತು ಏಕೈಕ ದೇವರ ಸಾಮ್ರಾಜ್ಯವನ್ನು ಸ್ಥಾಪಿಸಬೇಕು ಎಂದು ನಂಬುತ್ತದೆ.

ಈ ರೀತಿಯ ಒಂದು ರಿಲಿಜಿಯಸ್ ಸಮುದಾಯ ಅಥವಾ ಗುಂಪಿನ ಚಟುವಟಿಕೆಗೆ ನಮ್ಮ ಅಂದರೆ ಭಾರತೀಯ ವಿದ್ವಾಂಸರ ಪ್ರತಿಕ್ರಿಯೆ ಏನಿರಬೇಕಿತ್ತು ಅಂದರೆ, ನೋಡಿ ಏಷ್ಯಾ ಅದರಲ್ಲಿಯೂ ಭಾರತ ಸಂಸ್ಕೃತಿ ನಿಮಗಿಂತ ಅಂದರೆ ಪಶ್ಚಿಮಕ್ಕಿಂತ ಭಿನ್ನವಾದ ಒಂದು ಕಲಿಕಾ ವಿಧಾನವನ್ನು ಹೊಂದಿದೆ. ಉದಾ: ಇಲ್ಲಿ ಆಚರಣೆಯೇ ಪ್ರಧಾನ, ಮತ್ತು ಅಂತಹ ಆಚರಣೆಯನ್ನು ಯಾವುದೇ ರೀತಿಯ Belief ನಿರ್ದೇಶಿಸುತ್ತಿರುವುದಿಲ್ಲ. ಕ್ರಿಶ್ಚಿಯನ್ನರಿಗೆ ರಿಲಿಜಿಯನ್ ಎಷ್ಟು ಮುಖ್ಯವೋ ಭಾರತೀಯ ಸಮಾಜಕ್ಕೆ Ritual (ಸಂಪ್ರದಾಯ) ಅಷ್ಟೇ ಮುಖ್ಯವಾಗಿದೆ. ಆದ್ದರಿಂದಲೇ ಭಾರತೀಯ ಸಮಾಜ ಒಂದು ಆಚರಣೆ ಪ್ರಧಾನ ಜ್ಞಾನದ (Performative knowledge) ಸಮಾಜವೇ ಹೊರತು ಪಾಶ್ಚಾತ್ಯರು ವಿವರಿಸುವಂತೆ ಸಿದ್ಧಾಂತ ಪ್ರಧಾನವಾದ ರಿಲಿಜಿಯಸ್ ಸಮಾಜವಲ್ಲ. ಆದ್ದರಿಂದ ರಿಲಿಜಿಯನ್ ಎಂಬ ಪರಿಕಲ್ಪನೆ ಭಾರತದಂತಹ ಆಚರಣೆಯ ಪ್ರಧಾನ ಸಂಸ್ಕೃತಿಯನ್ನು ಪ್ರತಿನಿಧಿಸಲು ಸಾಧ್ಯವಿಲ್ಲ ಮತ್ತು



ಆ ಜ್ಞಾನದ ಸೈದ್ಧಾಂತಿಕ ಚೌಕಟ್ಟಿನಲ್ಲಿ(Religious) ಭಾರತದಂತಹ ಸಂಪ್ರದಾಯ ಪ್ರಧಾನ ಸಮಾಜವನ್ನು ವಿವರಿಸಲೂ ಸಾಧ್ಯವಿಲ್ಲ. ರಿಲಿಜಿಯನ್ ಎಂಬ ಒಂದು ಪರಿಕಲ್ಪನೆಯೇ ಭಾರತದ ಸಾಮಾಜಿಕ ಸಂದರ್ಭಕ್ಕೆ ಅಗತ್ಯವಿಲ್ಲದ್ದಾಗಿದೆ. ವಸಾಹತುಶಾಹಿ ಚಿಂತಕರ ಪ್ರಮುಖವಾದ ಸಮಸ್ಯೆಯೆಂದರೆ ಅವರು ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಗಳ ನಡುವಿನ ಭಿನ್ನತೆಯನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ ಎಂಬುದನ್ನು ವಿವರಿಸಬೇಕಿತ್ತು. ಹೀಗೆ ವಿವರಿಸಿದ್ದರೆ ಅವರಿಗೆ ಸರಿಯಾಗಿ ಅರ್ಥವಾಗುತ್ತಿತ್ತೇನೋ.?

ಆದರೆ ನಮ್ಮ ವಿದ್ವಾಂಸರು ವಿವರಿಸುತ್ತಿರುವ ಮಾದರಿ ಹೇಗಿದೆ ಅಂದರೆ ನೀವು ರಿಲಿಜನ್ ಹೊಂದಿದ್ದಿರಾ! ಹಾಗಾದರೆ ನಾವು (ಭಾರತಿಯರು) ರಿಲಿಜಿಯನ್ ಹೊಂದಿದ್ದೇವೆ. ಅದು ಹಿಂದೂಯಿಸಂ! ನಿಮಗೆ ಅಲ್ಲಾ, ಏಸು ಇದ್ದರೆ, ನಮಗೆ ರಾಮನಿದ್ದಾನೆ. (ಕೆಲವರು ನಿಮಗೆ ಒಬ್ಬ ದೇವರಿದ್ದರೆ ನಮಗೆ ಸಾವಿರ ದೇವರಿದ್ದಾರೆ ಎಂದು ವಾದಿಸುತ್ತಾರೆ. ಆದರೆ ಈ ಎರಡು ಗುಂಪಿನವರು ಭಾರತದಲ್ಲಿನ ಹಿಂದುಯಿಸಂ ಒಂದು ರಿಲಿಜಿಯನ್ ಎಂಬುದನ್ನು ಒಪ್ಪುತ್ತಾರೆ) ನಿಮಗೆ ಬೈಬಲ್, ಕುರಾನ್ ಇದ್ದರೆ ನಮಗೆ ಭಗವದ್ಗೀತೆ ಇದೆ. (ಕೇಲವರು ವೇದ, ಪುರಾಣಗಳನ್ನು ಉದಾಹರಣೆಯಾಗಿ ನೀಡುತ್ತಾರೆ) ನಿಮಗೆ ಮೆಕ್ಕಾ, ಜೆರುಸಲೆಂ ಇದ್ದರೆ ನಮಗೆ ಅಯೋಧ್ಯ ಇದೆ. ಇತ್ಯಾದಿಯಾಗಿ ವಿವರಿಸುತ್ತಿದ್ದಾರೆ. ಇದರ ಪರಿಣಾಮ Semitic ರಿಲಿಜಿಯನ್‌ಗಳಿಗೆ ಪ್ರತಿಕ್ರಿಯಿಸುವ ಭರದಲ್ಲಿ ನಮ್ಮ Ritual (ಸಂಪ್ರದಾಯ) ಪ್ರಧಾನ ಸಂಸ್ಕೃತಿಯನ್ನು Semitic ರಿಲಿಜನ್ ಮಾದರಿ ಚೌಕಟ್ಟಿಗೆ ಹೊಂದಿಸಿ ವಿವರಿಸುತ್ತಿದ್ದೇವೆ.

ಸಮಾಜ ವಿಜ್ಞಾನದ ವಿದ್ಯಾರ್ಥಿಯಾದ ನನಗೆ ಲೇಖಕರ ಇಡೀ ವಾದ ರಿಲಿಜನ್‌ಗಳ ಕುರಿತಾದಂತಹ ಒಂದು ಪೂರ್ವ ಪ್ರತಿಪಾದಿತ ಜ್ಞಾನದ ಹಿನ್ನೆಲೆಯಿಂದ ರೂಪಪಡೆದುಕೊಂಡಿದೆ ಎನಿಸಿತು. ಅದು ಅವರ ಅನಿವಾರ್ಯವೂ ಹೌದು! ಏಕೆಂದರೆ ನನ್ನ ಜ್ಞಾನದ ಮಿತಿಯಲ್ಲಿ ಹೇಳುವುದಾದರೆ ಭಾರತ ಅದರಲ್ಲಿಯೂ ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯಗಳು ರಿಲಿಜಿಯನ್ ಕುರಿತಾದಂತಹ ಒಂದು ಆಸಕ್ತಿದಾಯಕ ಮತ್ತು ಉಪಯುಕ್ತ ಸಂಶೋಧನೆಗಳನ್ನು ನಡೆಸುತ್ತಿಲ್ಲ. ಆದರೂ ಹಿಂದೂ ಎಂದರೆ ಯಾರು? ಹಿಂದೂಯಿಸಂ ಒಂದು ರಿಲಿಜಿಯನ್ನಾ? ಸೆಮಿಟಿಕ್ ರಿಲಿಜಿಯನ್ ಎಂದರೆ ಏನು? ಅವುಗಳ ಲೋಕ ದೃಷ್ಟಿ ಹೇಗಿರುತ್ತದೆ?

ಮೇಲೆ ತಿಳಿಸಿದ ಲೇಖನದ ಲೇಖಕರು ಇದೇ ತಪ್ಪನ್ನೇ ಮಾಡುತ್ತಿದ್ದಾರೆ. (ರಾಮ ಮಂದಿರ ಚಳುವಳಿಗೆ ಅವರ ಬೆಂಬಲದ ಹಿಂದೆ ರಿಲಿಜಿಯನ್ಗಳ ಕುರಿತ ಇದೇ (ಅ)ಜ್ಞಾನ ಕೆಲಸ ಮಾಡಿದೆ) ಇದರ ನಿಜವಾದ ಪರಿಣಾಮ ಸ್ವಂತಿಕೆಯ ನಾಶ ಮತ್ತು ಸಿದ್ಧಾಂತಗಳ ಹೆಸರಿನಲ್ಲಿ ಜಾಗತಿಕ ಶಕ್ತಿಗಳ ಪ್ರಾಬಲ್ಯ. ಇವೆರಡರಿಂದ ತಪ್ಪಿಸಿಕೊಳ್ಳಬೇಕಾದರೆ, ಪರ್ಯಾಯಗಳ ಕುರಿತು ಚಿಂತಿಸುವ, ಆ ನಿಟ್ಟಿನಲ್ಲಿ ಸಂಶೋಧನೆ ಕೈಗೊಳ್ಳುವ, ಮತ್ತು ಆ ಮೂಲಕ ನಮ್ಮ ನಾಡಿನ ಘನತೆ, ಪ್ರತಿಷ್ಠೆ, ವೈಶಿಷ್ಟ್ಯ ಮತ್ತು ನಮ್ಮ ಆಚರಣೆ ಪ್ರಧಾನ ಸಂಸ್ಕೃತಿಯನ್ನು ಜಗತ್ತಿಗೆ ತೋರಿಸಿ ವಿವರಿಸುವ ಅಗತ್ಯವಿದೆ. ಏಕೆಂದರೆ, Religionಗಳ ಹೆಸರಿನಲ್ಲಿ ಜಗತ್ತಿನ ಇತಿಹಾಸದಲ್ಲಿ ಆಗಿರುವ, ಆಗುತ್ತಿರುವ ರಕ್ತಪಾತ ಅವರಿಗೆ ಇಲ್ಲಿನ ಆಚರಣೆ ಪ್ರಧಾನ ಸಂಸ್ಕೃತಿಯಿಂದ ಬಹಳಷ್ಟು ಕಲಿಯುವಿಕೆಯ ಅನಿವಾರ್ಯತೆಯನ್ನು ಇಂದು ಹುಟ್ಟು ಹಾಕಿದೆ. ಆದರೆ ಅವರು ಇಲ್ಲಿಂದ ಕಲಿಯುವುದು ಏನು ಎಂಬುದಷ್ಟೇ ನಾವು ಜಗತ್ತಿಗೆ ತಿಳಿಸಬೇಕಿದೆ. ಅದನ್ನು ಬಿಟ್ಟು ಇಲ್ಲದ್ದನ್ನು ಇದೆ ಎಂಬಂತೆ ವಿವರಿಸಿ ಇಲ್ಲಿಯೂ ರಕ್ತಪಾತಕ್ಕೆ ನಾವು ಕಾರಣವಾಗುತ್ತಿದ್ದೇವೆ. ಇದು ನಮಗೆ ಬೇಕಾ? ಈ ನಿಟ್ಟಿನಲ್ಲಿ ನಮ್ಮ ಚಿಂತಕರು ಚಿಂತಿಸುತ್ತಾರೆಯೇ ಎಂಬುದೇ ನಮ್ಮ ಮುಂದಿರುವ ಮಿಲಿಯನ್ ಡಾಲರ್ ಪ್ರಶ್ನೆ.... □

'ಬುಲ್ಡೋಸರ್'...' ಕೆಲವು ತಕರಾರು

ಸಂಪಾದಕರೊಡನೆ ಸಂವಾದ

ಜಿ. ರಾಜಶೇಖರ

ಮಾನ್ಯರೇ,

'ಸಂವಾದ'-ಜನವರಿ ಸಂಚಿಕೆಯಲ್ಲಿ ಪ್ರಕಟಗೊಂಡಿರುವ ದೇವುಹನೆಹಳ್ಳಿಯವರ "ಬುಲ್ಡೋಸರ್ ಕುಟುಕಿದ ಮೊತ್ತಿ" ಲೇಖನದ ಕೆಲವು ಅಭಿಪ್ರಾಯಗಳ ಜೊತೆಗೆ ನನಗೆ ಭಿನ್ನ ಮತವಿದೆ.

1) ತಮ್ಮ ಲೇಖನದಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯ ಯೋಜನೆಯಿಂದ ನೆಲ-ನೆಲೆ ಎರಡನ್ನೂ ಕಳೆದುಕೊಂಡ ಕುಡುಬಿಯರ ಬಗ್ಗೆ ಹೇಳುತ್ತ ಲೇಖಕರು ಹೀಗೆ ಬರೆಯುತ್ತಾರೆ, "ಕುಡುಬಿಯರನ್ನು ಗೋವಾದಿಂದ ಓಡಿಸಿದ ಮತಾಂಧರು ಇನ್ನೊಂದೇ ರೂಪದಲ್ಲಿ ಇನ್ನೊಂದೇ ದಿಕ್ಕಿನಿಂದ ಬಂದು ಈ ಇಡೀ ಸಹ್ಯಾದ್ರಿ ತಪ್ಪಲನ್ನು ಬೋಳಿಸಿ, ಗಾಂಜಾ, ಶುಂಠಿ, ಸಿಂಟಿನೆಲ್ಲಾ ಬೆಳೆಸುತ್ತಿರುವಾಗ ನಮ್ಮ ಸರಕಾರಗಳಿಗೆ ಕಮಕ್ ಕಿಮಕ್ ಎನ್ನುವ ಧೈರ್ಯವಿಲ್ಲ."

ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಕಳೆದ ಕೆಲವು ವರ್ಷಗಳಿಂದ ಅಕ್ರಮ ಕೃಷಿ ನಡೆಯುತ್ತಿರುವುದು ನಿಜ. ಆದರೆ ಅದು "ಇಡೀ ಸಹ್ಯಾದ್ರಿ ತಪ್ಪಲನ್ನು ಬೋಳಿಸಿ....."ಎಂಬ ಅತಿಶಯೋಕ್ತಿ ಸೂಚಿಸುವ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಅಕ್ರಮ ಕೃಷಿ ನಡೆಯುತ್ತಿರುವುದು ಸಹ್ಯಾದ್ರಿ ತಪ್ಪಲಿನಲ್ಲಿ ಮಾತ್ರವೇ ಅಲ್ಲ. ಸರಕಾರೀ ಜಾಗವನ್ನು ಒತ್ತುವರಿ ಮಾಡಿಕೊಂಡು ಗಾಂಜಾ, ಶುಂಠಿ, ಸಿಂಟಿನೆಲ್ಲ ಅಷ್ಟೇ ಅಲ್ಲ ಕೋಕೋ, ಕಾಫಿ, ಅಡಿಕೆ ಬತ್ತ ಮುಂತಾದ್ದರ ಕೃಷಿ ಎಲ್ಲೆಡೆ ನಡೆಯುತ್ತಿರುವ ವಿದ್ಯಮಾನ. ಎಲ್ಲ ಜಾತಿ, ಮತಗಳವರೂ ಅದರಲ್ಲಿ ತೊಡಗಿದ್ದಾರೆ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಅಕ್ರಮ ಕೃಷಿ ಮಾಡುತ್ತಿರುವವರು ಕೇರಳದ ಶ್ರೀಮಂತ ಕ್ರೈಸ್ತರು ಮಾತ್ರ ಎಂಬ ಅಭಿಪ್ರಾಯ ಕರಾವಳಿಯಲ್ಲಿ ಚಾಲ್ತಿಯಲ್ಲಿದೆ. ಆದರೆ ಇದು ಕೇವಲ ಜಾನಪದವೇ ಹೊರತು, ಸಾಕ್ಷ್ಯಾಧಾರ ಅಂಕಿ ಅಂಶಗಳ ತಳಹದಿವುಳ್ಳ ಖಚಿತ ಹೇಳಿಕೆ ಅಲ್ಲ. ಸರಕಾರೀ ಜಮೀನು ಒತ್ತುವರಿ ಮಾಡಿಕೊಂಡು ಕೃಷಿ ಮಾಡುವುದು ಕಾನೂನು ರೀತ್ಯಾ ಅಪರಾಧ. ಗಾಂಜಾ ಮಟ್ಟಿಗೆ ಸ್ವಂತ ನೆಲದಲ್ಲಿ ಅದನ್ನು ಬೆಳೆಯುವುದು ಸಹ ಅಪರಾಧ. ಆದರೆ ಅವುಗಳಲ್ಲಿ ಯಾವುದೂ ದೇಶದ್ರೋಹದ ಕೃತ್ಯವಲ್ಲ.

ಸರಕಾರೀ ನೆಲವನ್ನು ಒತ್ತುವರಿ ಮಾಡಿಕೊಂಡು ಕೃಷಿ ಮಾಡುತ್ತಿರುವವರಲ್ಲ ಎಲ್ಲರೂ ಶ್ರೀಮಂತರಲ್ಲ, ಬಡವರವೂ ಯಥಾನು ಶಕ್ತಿ ಅದನ್ನು ನಡೆಸಿರುವುದನ್ನು ನಾವು ಕರಾವಳಿ ಮತ್ತು ಮಲೆನಾಡುಗಳಲ್ಲಿ ಕಾಣಬಹುದು. ಈ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳುವ ಬದಲು ಸರಕಾರವೇ ಈ ಅಕ್ರಮಗಳನ್ನು "ಸಕ್ರಮ"ವೆಂದು ಅಧಿಕೃತವಾಗಿ ಒಪ್ಪಿಕೊಂಡಿದೆ. ಹೀಗೆ ಮಾಡುವುದು ಸರಕಾರಕ್ಕೆ- ಯಾವುದೇ ಪಕ್ಷದ ಸರಕಾರಕ್ಕೆ- ಅನಿವಾರ್ಯ ಕೂಡ. ಕರಾವಳಿಯ ಜಿಲ್ಲೆಗಳಲ್ಲಿ ನೆಲೆಸಿರುವ ಕುಡುಬಿಯರನ್ನು, ಅವರ ಮೂಲ ನೆಲೆಯಾದ ಗೋವಾಪ್ರಾಂತ್ಯದಿಂದ ಪೋರ್ಚ್‌ಗೀಸ್ ಕ್ರೈಸ್ತ ಮತಾಂಧರು ಓಡಿಸಿದ ವಿದ್ಯಮಾನ ನಡೆದದ್ದು 16ನೆಯ ಶತಮಾನದಲ್ಲಿ. ಈಗ ಸಹ್ಯಾದ್ರಿ ತಪ್ಪಲಿನಲ್ಲಿ ಕೃಷಿ ಮಾಡುತ್ತಿರುವವರು ಅದೇ 16ನೆಯ ಶತಮಾನದ ಮತಾಂಧರ ಇನ್ನೊಂದು ರೂಪವೆಂಬ ಲೇಖಕರ ಮಾತಿಗೆ ಕೂಡ ನನ್ನ ವಿರೋಧವಿದೆ. ಸ್ವತಃ ಮತಾಂಧರಾಗಿರುವವರು ಮಾತ್ರ ಇತರರ ಬಗ್ಗೆ ಹೇಳಬಹುದಾದ ಮಾತು ಅದು.

2) ತಮ್ಮ ಲೇಖನದಲ್ಲಿ ಒಂದೆಡೆ ದೇವು ಹನೆಹಳ್ಳಿ ಬಾಂಗ್ಲಾದೇಶೀಯರ ಬಗ್ಗೆ ಪ್ರಸ್ತಾಪಿಸುತ್ತಾರೆ. ಲೇಖಕರ ಪ್ರಕಾರ ಕರಾವಳಿಯಲ್ಲಿ ಅವರು ಗಾಬರಿ ಹುಟ್ಟಿಸುವಷ್ಟು ಜಾಸ್ತಿ ಸಂಖ್ಯೆಯಲ್ಲಿದ್ದಾರೆ; ಅಷ್ಟೇ ಅಲ್ಲ, "ಅಕ್ರಮವಾಗಿ ಕದ್ದು ಬರುವ ಬಾಂಗ್ಲಾದೇಶೀಯರ ಖಾಲಿ ಕೈಯಲ್ಲಿ ಬರುವುದಿಲ್ಲ. ನಮ್ಮನ್ನು ಕೊಲ್ಲಲು ಬಾಂಬ್ ಹಿಡಿದೇ ಬರುತ್ತಾರೆ." ಮತ್ತೊಂದೆಡೆ ಬಾಂಗ್ಲಾದೇಶೀಯರ ಅಕ್ರಮ ವಸತಿ ಬಗ್ಗೆ ಬರೆಯುತ್ತ ಅವರು ಹೇಳುತ್ತಾರೆ, "ನಾವು ಜಾರ್ಖಂಡದವರು, ನಾವು ಬಿಹಾರದವರು, ಒರಿಸ್ಸದವರು ಎಂದು ಸುಳ್ಳು ಸುಳ್ಳೇ ಹೇಳಿ ಕೆರೆ ನಾಡಿನಲ್ಲಿ ವಸತಿ ಹೂಡಿದವರಲ್ಲಿ ಹೆಚ್ಚಿನವರು ಬಾಂಗ್ಲಾದ ದುರಾಕ್ರಮಿಗಳು ಎಂಬುದು ನಮಗೂ ಗೊತ್ತು; ನಮ್ಮನ್ನಾಳುವ ಪುಢಾರಿಗಳಿಗೂ ಗೊತ್ತು, ನಮ್ಮನ್ನು ಕಾಪಾಡುವ ಪೊಲೀಸರಿಗೂ ಗೊತ್ತು." ತನ್ನ ಮಾತು ಪ್ರಶ್ನಾತೀತ ಮಾತ್ರವಲ್ಲ ಜನಜನಿತ ಸತ್ಯವೂ ಹೌದು ಎಂಬ ಭ್ರಮೆಯನ್ನು ಹುಟ್ಟಿಸಲು ಲೇಖಕರು ಓದುಗರನ್ನೂ ಅದರ ತೆಕ್ಕೆಗೆ ಸೇರಿಸಿಕೊಂಡು ಬಿಡುತ್ತಾರೆ. ಆದರೆ ಲೇಖಕರು ನನ್ನನ್ನು ಕ್ಷಮಿಸಬೇಕು.

> ಬಾಂಗ್ಲಾದೇಶೀಯರನ್ನು ಮುಂಬಯಿಯಿಂದ ಮಾತ್ರವಲ್ಲ ದೇಶದಿಂದಲೇ ಹೊರಗಟ್ಟಬೇಕು ಎಂಬ ಶಿವ ಸೇನೆಯ ಬೇಡಿಕೆಗೆ ಬಿ.ಜೆ.ಪಿ ಕೂಡ ದನಿಗೂಡಿಸಿದೆ. ಆದರೆ ಬಿ.ಜೆ.ಪಿಯ ಶೃತಿಯಲ್ಲಿ ಒಂದು ಕಳ್ಳ ಧ್ವನಿಯನ್ನು ಗುರುತಿಸಬಹುದು. ಶಿವ ಸೇನೆಯ ಮಟ್ಟಿಗೆ ಬಂಗಾಳಿ ಮಾತಾಡುವವರೆಲ್ಲರೂ ಬಾಂಗ್ಲಾದೇಶೀಯರು. ಆದರೆ ಬಿ.ಜೆ.ಪಿ. ಬಂಗಾಳಿ ಮಾತಾಡುವ ಹಿಂದುಗಳು ಸ್ವದೇಶೀಯರು; ಅವರನ್ನು ಓಡಿಸತಕ್ಕದಲ್ಲ ಎಂದು ಹಠಹಿಡಿಯಿತು. ಕೆರೆ ನಾಡಿನಲ್ಲಿ ನೆಲೆಸಿರುವ "ಬಾಂಗ್ಲಾದೇಶೀಯರ" ಬಗ್ಗೆ ದೇವು ಹನೆಹಳ್ಳಿ ಅವರ ನಿಲುವು ಯಾವುದು? ಶಿವಸೇನೆಯದ್ದೋ? ಬಿ.ಜೆ.ಪಿಯದ್ದೋ?

ಈ ಮಾತಿನ ಮಟ್ಟಿಗೆ ನಾನು ಅವರ ಜೊತೆ ಇಲ್ಲ. ಕರಾವಳಿಯ ಎರಡು ಜಿಲ್ಲೆಗಳಲ್ಲಿ ಬಾಂಗ್ಲಾದೇಶೀಯರು, ದೊಡ್ಡ ಸಂಖ್ಯೆಯಲ್ಲಿ ಅಕ್ರಮವಾಗಿ ನೆಲೆಸಿದ್ದಾರೆ ಎನ್ನುವುದಕ್ಕೆ ಯಾವ ಸಾಕ್ಷ್ಯಾಧಾರವೂ ಇಲ್ಲ. ನಾನು ಹುಟ್ಟಿದಾರಭ್ಯ ಅಂದರೆ ಕಳೆದ 64 ವರ್ಷಗಳಿಂದ ಕರಾವಳಿಯ ಉಡುಪಿ ಜಿಲ್ಲೆಯಲ್ಲೇ ವಾಸಿಸಿಕೊಂಡಿದ್ದೇನೆ. ದೇವು ಹನೆಹಳ್ಳಿ ಉದ್ವೇಗದಲ್ಲಿ ಚಿತ್ರಿಸುವ ಈ ಅಕ್ರಮ ವಲಸೆ ನನ್ನ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೆ ಬಾರದ, ನಾನು ಊಹಿಸಿಯೂ ಇರದ ಅನೇಕ ಸಂಗತಿಗಳು ಜಿಲ್ಲೆಯಲ್ಲಿ ನಡೆಯುತ್ತಿರಬಹುದು ಎಂಬುದನ್ನು ನಾನು ಖಂಡಿತ ಅಲ್ಲಗೆಳೆಯುವುದಿಲ್ಲ. ಎಲ್ಲ ವಿದ್ಯಮಾನಗಳನ್ನು ಏಕಕಾಲಕ್ಕೆ ಗ್ರಹಿಸುವುದು ಸರ್ವ ಶಕ್ತನಾದ ಆ ಭಗವಂತನಿಗೆ ಮಾತ್ರ ಸಾಧ್ಯ. ನರ ಮನುಷ್ಯರಾದ ನಾವು ಸಾಕ್ಷ್ಯಧಾರಗಳನ್ನಷ್ಟೇ ನೆಚ್ಚಿಕೊಂಡಿರಬೇಕು. ದೇವು ಹನೆಹಳ್ಳಿ ತಮ್ಮ ಲೇಖನದಲ್ಲಿ ತೀರ್ಮಾನ ರೂಪದಲ್ಲಿ ಹೇಳುವ ಯಾವ ಮಾತಿಗೂ, ತಮ್ಮ ಅನ್ನಿಸಿಕೆ ಹೊರತು ಪಡಿಸಿ ಬೇರೆ ಸಾಕ್ಷ್ಯಾಧಾರವನ್ನೂ ಕೊಡುವುದಿಲ್ಲ. ತಮ್ಮ ಅನ್ನಿಸಿಕೆಯ ಮೂಲ ಯಾವುದು ಎಂಬ ಪ್ರಶ್ನೆಯನ್ನು ಸಹ ಕೇಳಿಕೊಳ್ಳುವುದಿಲ್ಲ. ಹಾಗಾಗಿ ನಾವು ಅವರನ್ನು ಆ ಬಗ್ಗೆ ಕೇಳಲೇಬೇಕಾಗಿದೆ.

ಕೂಲಿಗಾಗಿ ವಲಸೆ ಬರುವ ಇತರ ಪ್ರಾಂತ್ಯಗಳವರನ್ನು "ಹೊರಗಿನವರು" "ಆಕ್ರಮಣಕಾರರು" "ನಮ್ಮ ಉದ್ಯೋಗ ಮತ್ತು ನೆಲ ಕಸಿಯಲು ಬಂದವರು" ನಮ್ಮ ವೈರಿಗಳು" ಎಂದು ಮುಂತಾಗಿ ಚಿತ್ರಿಸುವ ಬಲಪಂಥೀಯ ರಾಜಕೀಯವೇ ದೇವು ಹನೆಹಳ್ಳಿ ಅವರ ಬಾಂಗ್ಲಾದೇಶೀಯರ ಕುರಿತ ಭಯ ಆತಂಕಗಳ ಮೂಲ. ದೇವು ಹನೆಹಳ್ಳಿ ಮಂಗಳೂರಿನಲ್ಲಿ ನೆಲೆಸಿರುವುದರಿಂದ, ಕ್ಷೇಮವಾಗಿದ್ದಾರೆ. ಅವರು ಮುಂಬಯಿಯಲ್ಲಿದ್ದಾರೆ ಈ ವೇಳೆಗೆ ಒಂದೋ ರಾಜ್‌ಠಾಕ್ರೆಗೆ ನಿಷ್ಠೆ ಬದಲಾಯಿಸಿಕೊಂಡ ಶಿವಸೈನಿಕರಾಗಿರುತ್ತಿದ್ದರು; ಅಥವಾ ರಾಜ್‌ಠಾಕ್ರೆ ಬಂಟರಿಂದ ಒದೆ ತಿನ್ನುತ್ತಿದ್ದರು. ಮುಂಬಯಿನಗರದಲ್ಲಿ ಬಂಗಾಳಿ ಮಾತನಾಡುವ ಕೂಲಿಗಳಿಗೆ(ಕೂಲಿಗಳಿಗೆ ಮಾತ್ರ) ಬಾಂಗ್ಲಾದೇಶೀಯರು ಎಂಬ ಲೇಬಲ್ಲು ಹಚ್ಚಿ, ಹಿಂಸೆಕೊಡುವ ಪರಿಪಾಠವನ್ನು ಶಿವಸೇನೆಯವರು ಪ್ರಾರಂಭಿಸಿ ಈಗ ದಶಕಗಳೇ ಕಳೆದಿವೆ. ಅದಕ್ಕಿಂತ ಮೊದಲು ಶಿವಸೇನೆಯ ಹಿಟ್ ಲಿಸ್ಟ್‌ನಲ್ಲಿದ್ದವರು ಮುಂಬಯಿಯ ಕನ್ನಡಿಗರು, ತಮಿಳರು, ತೆಲುಗರು ಮತ್ತು ಮಲೆಯಾಳಿಗಳು.

ಬಾಂಗ್ಲಾದೇಶೀಯರನ್ನು ಮುಂಬಯಿಯಿಂದ ಮಾತ್ರವಲ್ಲ ದೇಶದಿಂದಲೇ ಹೊರಗಟ್ಟಬೇಕು ಎಂಬ ಶಿವ

ಸೇನೆಯ ಬೇಡಿಕೆಗೆ ಬಿ.ಜೆ.ಪಿ ಕೂಡ ದನಿಗೂಡಿಸಿದ್ದೆ. ಆದರೆ ಬಿ.ಜೆ.ಪಿಯ ಶೃತಿಯಲ್ಲಿ ಒಂದು ಕಳ್ಳ ಧ್ವನಿಯನ್ನು ಗುರುತಿಸಬಹುದು. ಶಿವಸೇನೆಯ ಮಟ್ಟಿಗೆ ಬಂಗಾಳಿ ಮಾತಾಡುವವರೆಲ್ಲರೂ ಬಾಂಗ್ಲಾದೇಶೀಯರು. ಆದರೆ ಬಿ.ಜೆ.ಪಿ. ಬಂಗಾಳಿ ಮಾತಾಡುವ ಹಿಂದುಗಳು ಸ್ವದೇಶೀಯರು; ಅವರನ್ನು ಓಡಿಸತಕ್ಕದಲ್ಲ ಎಂದು ಹಠಹಿಡಿಯಿತು. ಕೆರೆ ನಾಡಿನಲ್ಲಿ ನೆಲೆಸಿರುವ "ಬಾಂಗ್ಲಾದೇಶೀಯರ" ಬಗ್ಗೆ ದೇವು ಹನೆಹಳ್ಳಿ ಅವರ ನಿಲುವು ಯಾವುದು? ಶಿವಸೇನೆಯದ್ದೋ? ಬಿ.ಜೆ.ಪಿಯದ್ದೋ?

3) ಮಂಗಳೂರು ವಿಶೇಷ ಆರ್ಥಿಕವಲಯ ಯೋಜನೆಯಿಂದ ನಿರಾಶ್ರಿತರಾದ ಕುಡುಬಿಯರ ಬಗ್ಗೆ ದೇವು ಹನೆಹಳ್ಳಿ ಭಾವೋದ್ವೇಗದಲ್ಲಿ ಬರೆಯುತ್ತಾರೆ. ಈ ಭಾವೋದ್ವೇಗಕ್ಕೆ ಪರ್ಯಾಯವಾಗಿ ನನಗೆ ಈ ಯೋಜನೆಯ ವಿರುದ್ಧ ಮಂಗಳೂರಿನಲ್ಲಿ ನಡೆದ ಒಂದು ಪ್ರತಿಭಟನೆಯ ಕಾರ್ಯಕ್ರಮ ನೆನಪಾಗುತ್ತಿದೆ. 2009ರ ನವೆಂಬರ್ 8ರಂದು ಮಂಗಳೂರಿನ ಬಜಪೆ ಚರ್ಚ್‌ಹಾಲ್‌ನಲ್ಲಿ ಮಂಗಳೂರು ವಿಶೇಷ ಆರ್ಥಿಕವಲಯದ ಸಂತ್ರಸ್ತರ ಅಹವಾಲುಗಳ "ಸಾರ್ವಜನಿಕ ಆಲಿಸುವಿಕೆ"ಯ ಕಾರ್ಯಕ್ರಮ ನಡೆಯಿತು. ಕಳೆದ ಹಲವು ವರ್ಷಗಳಿಂದ ಈ ಯೋಜನೆಯ ವಿರುದ್ಧ ಜನರನ್ನು ಒಗ್ಗೂಡಿಸಿ ಹೋರಾಟ ನಡೆಸುತ್ತಿರುವ ಮಂಗಳೂರಿನ ಸಾಮಾಜಿಕ ಕಾರ್ಯಕರ್ತೆ ವಿದ್ಯಾ ದಿನಕರ್, ಆಕೆಯ ಗಂಡ ನಟೇಶ್ ಉಳ್ಳಾಲ, ದಸಂಸ ಕಾರ್ಯಕರ್ತ ಕೃಷ್ಣಪ್ಪ, ಶಬೀರ್, ಸ್ವತಃ ಈ ಯೋಜನೆಯ ಒಬ್ಬ ಸಂತ್ರಸ್ತ ಗ್ರೆಗರಿಪತ್ರಾವೋ, ಬ್ಯಾಂಕ್ ನೌಕರ ಸಂಘಟನೆಯ ಟಿ.ಆರ್. ಭಟ್ ಮುಂತಾದವರು ಒಟ್ಟಾಗಿ ನಡೆಸಿದ ಕಾರ್ಯಕ್ರಮ ಅದು.

ಈ ಯೋಜನೆಯ ಸಂತ್ರಸ್ತರ ನಿರೂಪಣೆಗಳನ್ನು ಆಲಿಸಲು, ದ.ಕ.ಮತ್ತು ಉಡುಪಿ ಜಿಲ್ಲೆಗಳಿಂದ ನೂರಾರು ಜನ ಬಂದಿದ್ದರು. ಇವರ ಜೊತೆ, ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಎಕನಾಮಿಕ್ ಅಂಡ್ ಪಾಲಿಟಿಕಲ್ ವೀಕ್ಲಿಯ ಸಂಪಾದಕ ರಾಮ ಮನೋಹರ ರೆಡ್ಡಿ, ಖ್ಯಾತ ಲೇಖಕ ಆನಂದ್ ತೇಲ್‌ತುಂಬ್ಡೆ ಬೆಂಗಳೂರಿನ ಪ್ರೊ॥ ತ್ರಿಲೋಚನ ಶಾಸ್ತ್ರಿ, ಜೀವನ ಕುಮಾರ್ ಹಾಗೂ ಕೆ.ಟಿ. ರವೀಂದ್ರನ್, ಪತ್ರಕರ್ತ ನಾಗೇಶ ಹೆಗ್ಡೆ, ಕಲ್ಪನಾ ಶರ್ಮ, ಕನ್ನಡ ಲೇಖಕಿ ವೈದೇಹಿ, ನರ್ಮದಾ ಬಚಾವೋ ಆಂದೋಲನ್‌ನ ಮೇಧಾ ಪಾಟ್ಕರ್, ಮತ್ತು ಮಾನವ ಹಕ್ಕು ಹೋರಾಟಗಾರ್ತಿ ಅರುಣಾ ರಾಯ್ ಭಾಗವಹಿಸಿದ್ದರು. ಒಂದು ಹಗಲು ಇಡೀ ನಡೆದ ಈ ಕಾರ್ಯಕ್ರಮದಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯ ಯೋಜನೆಯ ವ್ಯಾಪ್ತಿಯ ಒಳಗೆ ಬರುವ ಬಜಪೆ, ಎಕ್ಕಾರು, ಕಳವಾರು, ಬಾಳ, ಪೆರ್ಮುದೆ, ಕುತ್ತೆತ್ತೂರು, ಕುಡುಬಿ ಪದವು ಮೊದಲಾದ ಗ್ರಾಮಗಳ ರೈತರು, ಸಣ್ಣ ಅಂಗಡಿ ಮುಂಗಟ್ಟಿನವರು, ಕೂಲಿನಾಲಿಯವರು, ತರಕಾರಿ ಕೃಷಿಕರು ಹಾಗೂ ಮಾರಾಟಗಾರರು ಹೀಗೆ ಬಗೆಬಗೆಯ ವೃತ್ತಿಯವರು, ಯೋಜನೆಯಿಂದ ತಾವು ತಮ್ಮ ನೆಲ, ಮನೆ, ಉದ್ಯೋಗಗಳನ್ನು ಕಳೆದುಕೊಂಡು ಅತಂತ್ರರಾಗಿರುವ ಸ್ಥಿತಿಯನ್ನು ಹೇಳಿಕೊಂಡರು.

ದೇವು ಹನೆಹಳ್ಳಿ ತಮ್ಮ ಲೇಖನದಲ್ಲಿ, ಮಂಗಳೂರು ವಿಶೇಷ ಆರ್ಥಿಕ ವಲಯ ಯೋಜನೆಯನ್ನು ಮುಗ್ಧ ಕಡುಬಿಯರ ಮೇಲೆ ನಾಗರಿಕ ಪ್ರಪಂಚ ನಡೆಸಿದ ಹಲ್ಲೆ ಎಂದು ಭಾವುಕವಾಗಿ ಚಿತ್ರಿಸಿದ್ದಾರೆ. ಆದರೆ ಈ ಯೋಜನೆಯಿಂದ, ತಮ್ಮ ಬದುಕಿನ ಸರ್ವಸ್ವವನ್ನು ಕಳೆದುಕೊಂಡಿರುವವರಲ್ಲಿ ಕುಡುಬಿಯರ ಜೊತೆಗೆ ದಲಿತರು ಹಾಗೂ ಸವರ್ಣೀಯ ಹಿಂದುಗಳ ಎಲ್ಲ ಜಾಯಿಯವರೂ ಇದ್ದಾರೆ. ಯೋಜನೆಯ ಸಂತ್ರಸ್ತರಾಗಿರುವವರಲ್ಲಿ ಕೆಲವು ಕ್ರೈಸ್ತ ಮತ್ತು ಮುಸ್ಲಿಮ್ ಕುಟುಂಬಗಳೂ ಇವೆ. ಇವರ ಸಂಕಷ್ಟಗಳ ಕಥನವನ್ನು ಇವರ ಬಾಯಿಂದಲೇ ಕೇಳಿಸಿಕೊಂಡ ವಿಶೇಷ ಅತಿಥಿಗಳಲ್ಲಿ ಒಬ್ಬರಾದ ರಾಮ ಮನೋಹರರೆಡ್ಡಿ, "ನಿಮ್ಮ ಭಾಷೆ ನನಗೆ ಅರ್ಥವಾಗದಿದ್ದರೂ, ನಿಮ್ಮ ಮಾತು ಮಾತ್ರ ನನಗೆ ತೆಲುಗಿನ ಹಾಗೇ ಕೇಳಿಸಿತು. ಯಾಕೆಂದರೆ ಆಂಧ್ರದಲ್ಲೂ ನಿಮ್ಮ ಹಾಗೇ ಕಷ್ಟ ಅನುಭವಿಸುತ್ತಿರುವವರು ಇದ್ದಾರೆ" ಎಂದು ಹೇಳಿದರು. ವಿಶೇಷ ಆರ್ಥಿಕ ವಲಯ ಯೋಜನೆ, ದೇಶಾದ್ಯಂತ ಹಲವೆಡೆ ಜಾರಿಗೆ ಬಂದಿದ್ದು ಬಂಡವಾಳ ಶಾಹಿಯ ಮಿತಿ ಮೀರಿದ ದುರಾಸೆಯ ಸಂಕೇತವಾಗಿದೆ; ಜೊತೆಗೆ ಈ ಯೋಜನೆ ದೇಶದ ವಿವಿಧ ರಾಜಕೀಯ ಪಕ್ಷಗಳ ಒಮ್ಮತದ ಬೆಂಬಲವನ್ನೂ ಪಡೆದುಕೊಂಡಿದೆ.

ಕರಾವಳಿಯಲ್ಲಿ ಈ ಯೋಜನೆಯಿಂದ ಅನಾಥರಾಗಿರುವ ಕುಡುಬಿಯರ ಬಗ್ಗೆ ಲೇಖಕರು ಹೇಳಿರುವುದು ನಿಜ. ಆದರೆ ಕುಡುಬಿಯರ ಜೊತೆಗೆ ಈ ಯೋಜನೆ, ಕರಾವಳಿಯ ಹಲವು ಊರುಗಳನ್ನೇ ನಾಮಾವಶೇಷಗೊಳಿಸಿ, ಅಲ್ಲಿ ನೆಲೆಸಿದ್ದವರನ್ನು ನಿರ್ಗತಿಕರನ್ನಾಗಿ ಮಾಡಿದೆ ಎಂಬ ಅಂಶವನ್ನು ಅವರು ಗಣನೆಗೆ ತೆಗೆದುಕೊಳ್ಳುವುದಿಲ್ಲ. ದೇವು ಹನೆಹಳ್ಳಿ ಅವರದ್ದು ರೂಪಕಗಳ ಭಾಷೆ. ವೈಯಕ್ತಿಕ ನೆನಪು, ಭಾವು ಕತೆ, ಉದ್ಗಾರ, ವ್ಯಂಗ್ಯ, ಕಟಕಿ, ವಕ್ರೋಕ್ತಿ, ಅನ್ಯೋಕ್ತಿಗಳನ್ನು ಅವರು ತಮ್ಮ ಬರಹದಲ್ಲಿ ಧಾರಳವಾಗಿ ಬಳಸುತ್ತಾರೆ. ಅವರ ಗದ್ಯಸೈಲಿ ರೋಚಕವಾಗಿದೆ. ಆದರೆ ಪ್ರಚಲಿತವಿದ್ಯಮಾನಗಳ ವಿಶ್ಲೇಷಣೆಗೆ ಮಾತ್ರ ಆ ಶೈಲಿ ಅಸಂಗತ. □

ಕರಾವಳಿಯ ಎರಡು ಜಿಲ್ಲೆಗಳಲ್ಲಿ ಬಾಂಗ್ಲಾದೇಶೀಯರು, ದೊಡ್ಡ ಸಂಖ್ಯೆಯಲ್ಲಿ ಅಕ್ರಮವಾಗಿ ನೆಲೆಸಿದ್ದಾರೆ ಎನ್ನುವುದಕ್ಕೆ ಯಾವ ಸಾಕ್ಷ್ಯಾಧಾರವೂ ಇಲ್ಲ. ನಾನು ಹುಟ್ಟಿದಾರಭ್ಯ ಅಂದರೆ ಕಳೆದ 64 ವರ್ಷಗಳಿಂದ ಕರಾವಳಿಯ ಉಡುಪಿ ಜಿಲ್ಲೆಯಲ್ಲೇ ವಾಸಿಸಿ ಕೊಂಡಿದ್ದೇನೆ. ದೇವು ಹನೆಹಳ್ಳಿ ಉದ್ವೇ ಗದಲ್ಲಿ ಚಿತ್ರಿಸುವ ಈ ಅಕ್ರಮ ವಲಸೆ ನನ್ನ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೆ ಬಾರದ, ನಾನು ಊಹಿಸಿಯೂ ಇರದ ಅನೇಕ ಸಂಗತಿಗಳು ಜಿಲ್ಲೆಯಲ್ಲಿ ನಡೆಯುತ್ತಿರಬಹುದು ಎಂಬುದನ್ನು ನಾನು ಖಂಡಿತ ಅಲ್ಲಗೆಳೆಯುವುದಿಲ್ಲ. ಎಲ್ಲ ವಿದ್ಯಮಾನಗಳನ್ನು ಏಕಕಾಲಕ್ಕೆ ಗ್ರಹಿಸುವುದು ಸರ್ವಶಕ್ತನಾದ ಆ ಭಗವಂತನಿಗೆ ಮಾತ್ರ ಸಾಧ್ಯ. ನರ ಮನುಷ್ಯರಾದ ನಾವು ಸಾಕ್ಷ್ಯಾಧಾರಗಳನ್ನಷ್ಟೇ ನೆಚ್ಚಿಕೊಂಡಿರಬೇಕು.

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಸಂಪಾದಕರೊಡನೆ ಸಂವಾದ

ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆ – ಕುವೆಂಪು ದೃಷ್ಟಿಯಲ್ಲಿ

ಡಾ. ಲತಾ ಮೈಸೂರು

> **ಗೋವುಗಳನ್ನು ಕೊಲ್ಲಬಾರದು; ಸರಿ. ಚೆನ್ನಾಗಿ ಸಾಕಲೂಬಾರದೆ? ಜನಸಂಖ್ಯೆಯನ್ನು ಬಿಟ್ಟರೆ ನಮ್ಮಲ್ಲಿ ಗೋ ಸಂಖ್ಯೆಯೇ ಅಧಿಕ.**

ಮಾನ್ಯರೇ,

ಪ್ರಸ್ತುತ 'ಗೋಹತ್ಯೆ' ಕುರಿತಂತೆ ವಾದವಿವಾದ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಡಿಸೆಂಬರ್ 10, 1966 ರಂದು ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದಲ್ಲಿ ನಡೆದ ಕವಿಗೋಷ್ಠಿಯ ಅಧ್ಯಕ್ಷ ಭಾಷಣದಲ್ಲಿ, ಕುವೆಂಪು, ಗೋಹತ್ಯಾ ನಿಷೇಧದ ಹಿಂದಿರುವ ಮತೀಯವಾದಿಗಳ ಅವಿವೇಕವನ್ನು ತೀಕ್ಷ್ಣವಾಗಿ ಹೀಗೆ ವಿಡಂಬಿಸಿದ್ದಾರೆ.

"ಲೇಖಕರ ಈ ಸಮ್ಮೇಳನದ ಅಂಗವಾಗಿ ನಡೆಯುವ ಕವಿ ಗೋಷ್ಠಿಯ ಅಧ್ಯಕ್ಷತೆ ವಹಿಸಬೇಕೆಂದು ನನ್ನನ್ನಿಲ್ಲಿಗೆ ಆಹ್ವಾನಿಸಿದರು. ಏನು ಮಾತನಾಡುವುದು ಕವಿಗೋಷ್ಠಿಯನ್ನು ಕುರಿತು?... ನಮ್ಮ ಸುತ್ತಲೂ ಉರಿದೇಳುತ್ತಿರುವ ಸಮಸ್ಯೆಗಳತ್ತ ನಿಮ್ಮ ಗಮನ ಹರಿಸುವಂತಷ್ಟೆ ಮಾಡುವ ಉದ್ದೇಶ ನನ್ನದು.

ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿ ಇವನ್ನಾಶ್ರಯಿಸಿ, ವರ್ಣಾಶ್ರಮಧರ್ಮ ಮತ್ತು ಜಾತಿ ಪದ್ಧತಿಯಂತಹ ಸಮಾಜ ವಿಚ್ಛಿದ್ರಕಾರಕವಾದ ನೀಚಭಾವನೆಗಳನ್ನು ತಿರಸ್ಕರಿಸಿ, ವೇದಾಂತದರ್ಶನದ ವಿಶಾಲ ತತ್ವಗಳ ತಳಹದಿಯ ಮೇಲೆ ನಿಲ್ಲದಿದ್ದರೆ ಹಿಂದೂ ಧರ್ಮವು ಕ್ರಮೇಣವಾಗಿಯಾದರೂ ಸಂಪೂರ್ಣವಾಗಿ ವಿನಾಶ ಹೊಂದುತ್ತದೆ.

ನಮ್ಮ ದೇಶವನ್ನು 'ಸೆಕ್ಯುಲರ್' ರಾಜ್ಯಾಂಗದ ಮೇಲೆ ಕಟ್ಟುವ ನಾವು ಅವೈಜ್ಞಾನಿಕ ಮತ್ತು ಅವೈಚಾರಿಕವಾದ ಮೌಢ್ಯಗಳಿಗೆ ಹೇಗೆ ಈಡಾಗುತ್ತಿದ್ದೇವೆಂದು ನೋಡಿದರೆ ವಿಷಾದವಾಗುತ್ತದೆ. ಈಗ ರಾಷ್ಟ್ರದಲ್ಲಿ ದಳ್ಳುರಿಯಾಗಿ ಭುಗಿಲೆದ್ದಿರುವ ಗೋಹತ್ಯಾ ಸಮಸ್ಯೆಯನ್ನೇ ತೆಗೆದುಕೊಳ್ಳಬಹುದು.

ಗೋವುಗಳನ್ನು ಕೊಲ್ಲಬಾರದು; ಸರಿ. ಚೆನ್ನಾಗಿ ಸಾಕಲೂಬಾರದೆ? ಜನಸಂಖ್ಯೆಯನ್ನು ಬಿಟ್ಟರೆ ನಮ್ಮಲ್ಲಿ ಗೋಸಂಖ್ಯೆಯೇ ಅಧಿಕ. ಆದರೆ ಫಲ? ಜನಗಳಂತೆಯೇ ದನಗಳೂ ಬಡಕಲು. ಸಾಕಲಾರದೆ ಬೀದಿಗಟ್ಟುತ್ತೇವೆ. ಬಡಕಲು ದನ ನರಳಿ ಸಾಯುತ್ತಿದ್ದರೂ ಗೋಹತ್ಯಾ ನಿಷೇಧಕ್ಕೆ ಚಳವಳಿ ಮಾಡುತ್ತೇನೆ. ಎಷ್ಟೋ ಅಂಥ ಮೂಳೆ ಚಕ್ಕಳದ ದಿಕ್ಕೆಟ್ಟ ದನಗಳಿಗೆ ಸಾವೇ ಮುಕ್ತಿಯಾಗಿರುತ್ತದೆ. ಮಹಾತ್ಮಾ ಗಾಂಧಿಯವರು ಅಹಿಂಸಾ ತತ್ವದ ಪ್ರವರ್ತಕರಾಗಿದ್ದರೂ, ಒಮ್ಮೆ ಒಂದು ಕರು ಮರಣ ಯಾತನೆ ಅನುಭವಿಸುತ್ತಿದ್ದುದನ್ನು ನೋಡಲಾರದೆ ಅದರ ಹಿತಕ್ಕಾಗಿ ಬೇಗ ಸಾವುಂಟು ಮಾಡುವ ಇಂಜೆಕ್ಷನ್ ಕೊಡಿಸುತ್ತಾರೆ ಅದಕ್ಕೆ. ಮೃತ್ಯು ಆಸನ್ನವಾಗಿ ಉಳಿಗತಿಯಿಲ್ಲದೆ ಸಂಕಟ ಪಡುತ್ತಿರುವ ಬಹುತೇಕ ನಮ್ಮ ಗೋವೃಂದಕ್ಕೆ ಗತಿಯೇನು? ಕಟುಕನ ಕತ್ತಿಯ ಕ್ರೌರ್ಯವೆ ಜಗದ್ಗುರುಗಳ ಕನಿಕರಕ್ಕಿಂತಲೂ ಅವುಗಳಿಗೆ ದಯಾಮಯವಾಗುತ್ತದೆ ಅಲ್ಲವೆ? ಹಾಲು ಕರೆದು ಬರಡಾಗಿ ಮುದಿಯಾದ ಮೇಲೆ ಹಣೆಗೆ ಕುಂಕುಮ ಹಚ್ಚಿಸಿಕೊಂಡು, ಹೊಟ್ಟೆಗಿಲ್ಲದೆ ಹೊಲದಲ್ಲಿ ಕಾಲುಗೆಟ್ಟು ಕಂಗಾಲಾಗಿ ಬಿದ್ದು, ಜೀವವಿರುವಾಗಲೆ ಕಾಗೆ ಹದ್ದುಗಳಿಂದ ಕುಕ್ಕಿಸಿಕೊಳ್ಳುತ್ತಿರುವ ಗೋಮಾತೆಯರನ್ನು ಕೇಳಿ!

ಗೋಮಾಂಸ ಭಕ್ಷಣೆ ಮಾಡುವ ರಾಷ್ಟ್ರಗಳಲ್ಲಿ ಗೋವುಗಳನ್ನು ಹೇಗೆ ಸಾಕುತ್ತಾರೆ ಎಂಬುದನ್ನು ಚಿತ್ರದಲ್ಲಿ ನೋಡಿದ್ದೇನೆ; ಎಷ್ಟು ಪುಷ್ಟ, ಎಷ್ಟು ಹೃಷ್ಟವಾಗಿರುತ್ತವೆ! ಹಸುಗಳನ್ನು ಪೂಜಿಸುವ ನಾವು ಹಾಲು ಕರೆದುಕೊಂಡ ಮೇಲೆ ಹಗ್ಗ ಕಳಚಿ ಬೀದಿಗೆ ಬಿಡುತ್ತೇವೆ..... ನಿತ್ರಾಣವಾದ, ಮುದಿಯಾದ, ರೋಗಕಾರಣದಿಂದಲೊ ಹೊಟ್ಟೆಗಿಲ್ಲದೆ ದುರ್ಬಲವಾದ ಹಸು ಕಡೆಗೆ ಯಾವುದೊ ಹೊಲದಲ್ಲಿ ಅನಾಥವಾಗಿ ಸಾಯುತ್ತದೆ. ಅದೂ ಒಂದೇ ಬಾರಿಗಲ್ಲ. ಶಕ್ತಿಯುಡುಗಿ ಕಾಲು ಮುದುರಿ ಬಿದ್ದುಕೊಂಡಿತು ಹಸು ಎಂದೊಡನೆಯೆ ಆಕಾಶದಲ್ಲಿ ಹದ್ದು, ರಣ ಹದ್ದು, ಕಾಗೆಗಳು ಎಲ್ಲ ಗಸ್ತು ಸುತ್ತುವುದಕ್ಕಾರಂಭಿಸುತ್ತವೆ. ಕಾಲಬಳಿ, ಬಾಲದ ಬುಡದಲ್ಲಿ, ಮುಖದ ಸಂದಿನಲ್ಲಿ, ಕೆಚ್ಚಲ ಹತ್ತಿರ ಕುಳಿತುಕುಕ್ಕುವುದಕ್ಕೆ ಆಗಲೇ ಆರಂಭಿಸಿ ಬಿಡುತ್ತದೆ. ಆ ನಿರ್ಗತಿಕ ನಿಶ್ಶಕ್ತ ಪ್ರಾಣಿ, ಅಲುಗಲೂ ಆಗದೆ, ಕಿವಿಯನ್ನಷ್ಟೆ ಹಾಗೆ ಹೀಗೆ ಒಂದಷ್ಟು ಬೀಸುತ್ತದೆ. ಅದರಷ್ಟರಿಂದಲೇ ಏನು ತಾನೆ ಅಂಜಿಯಾವು. ಆ ಮಾಂಸಕಾತರ ಖಗೇಂದ್ರರು! ಇದು ನಮ್ಮ ಗೋಭಕ್ತಿಯ ಪರ್ಯವಸಾನ!

ಗೋಹತ್ಯೆಯನ್ನು ಉಗ್ರವಾಗಿ ಮತೀಯವಾಗಿ ವಿರೋಧಿಸುತ್ತಿರುವವರು ತಿಳಿಯರು, ವೇದಕಾಲದಲ್ಲಿ ಗೋಹತ್ಯೆ ಮಂತ್ರವತ್ತಾಗಿಯೇ ನಡೆದಿತ್ತು ಎಂಬುದನ್ನು. ಅತಿಥಿಗೆ ಸಂಸ್ಕೃತದಲ್ಲಿ 'ಗೋಘ್ನ' ಎನ್ನುತ್ತಿದ್ದರು. ಅಂದರೆ ಅತಿಥಿಗೆ ಗೋವನ್ನೂಣ ಬಡಿಸುವುದು ಇತ್ತೆಂದಾಯಿತು. ವಸಿಷ್ಠರಂಥ ಋಷಿಗಳೂ ಗೋಮಾಂಸ ತಿನ್ನುತ್ತಿದ್ದರೆಂಬುದನ್ನು ಒಂದು ಸಂಸ್ಕೃತ ನಾಟಕದಲ್ಲಿ ('ಉತ್ತರ ರಾಮ ಚರಿತ') ಸೂಚಿಸಿದೆ.

.... ಗೋಪೂಜೆ ಮಾಡುವಾಗ ಭಾವಿಸುವುದುಂಟು. ಅದರ ಒಂದೊಂದು ಅಂಗದಲ್ಲೂ ಒಂದೊಂದು ವರ್ಗದ ದೇವತೆಗಳಿದ್ದಾರೆ ಎಂದು. ಹೊಲದಲ್ಲಿ ಬಿದ್ದು ಸಾಯುವ ಹಸುವಿನ ಮೈಯ ಯಾವ ಭಾಗದಲ್ಲೂ ಯಾವ ದೇವತೆಯೂ ಇಲ್ಲ ಎಂಬುದು ಕುಕ್ಕಿ ತಿನ್ನುವ ಆ ಕಾಗೆಗಳಿಗೆ ಗೊತ್ತು. – ನಮ್ಮ ಅವೈಜ್ಞಾನಿಕ ಮೌಢ್ಯಕ್ಕೆ ಏನೆನ್ನಬೇಕು? ಹಸುವನ್ನು ಚೆನ್ನಾಗಿ ಸಾಕಲಾಗದಿದ್ದರೂ ಪೂಜೆ ಮಾತ್ರ ಮಾಡುತ್ತೇವೆ. ಕಾರಣ, ಅದೊಂದನ್ನೆ ಪೂಜಿಸುವುದರಿಂದಲೇ ಅದರ ಮೈಯೊಳಗಿರುವ ಮೂವತ್ತು ಮೂರು ಕೋಟಿ ದೇವತೆಗಳನ್ನೆಲ್ಲ ಪೂಜಿಸಿದಂತಾಗುತ್ತದೆ ಎಂಬ ಸುಲಭ ಸಿದ್ಧಿಯ ಬಯಕೆ..

ಈ ಗೋರಕ್ಷಾ ದೀಕ್ಷೆ ಇದ್ದಕ್ಕಿದ್ದಂತೆಯೆ ಚುನಾವಣೆಗಳ ಕಾಲದಲ್ಲೆ ಉದ್ಭವಿಸುತ್ತದೆ! ಶ್ರೀಮತಿ ಇಂದಿರಾಗಾಂಧಿ ಹೇಳಿದ್ದು ಸರಿ : 'ನಮ್ಮ ಜನಕ್ಕೆ ಐದು ವರ್ಷಕ್ಕೊಮ್ಮೆ ಈ ಗೋರಕ್ಷಾ ಬುದ್ಧಿ ಪ್ರಬಲವಾಗುತ್ತದೆ'. ಮತವಳರ ಕೈಯಲ್ಲಿ ಗೋವು ಎಂಥ ಭಯಂಕರ ಅಸ್ತ್ರವಾಗುತ್ತಿದೆ?"

ಗೋಮಾಂಸ ಸೇವನೆ ಬಗ್ಗೆ ಕುವೆಂಪು ಅವರ ನಿಲುವನ್ನು ಅವರ ಮಗ ಪೂರ್ಣಚಂದ್ರ ತೇಜಸ್ವಿ, ತಮ್ಮ 'ಅಣ್ಣನ ನೆನಪು' (ಪುಟ 62) ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ.

.... ನಾಲ್ಕನೇ ಕ್ಲಾಸಿನಲ್ಲಿ ನಾನು ಓದುತ್ತಿರುವಾಗ ನಮ್ಮ ಮೇಷ್ಟ್ರುಬ್ಬರು ಕುವೆಂಪು ಬರೆದ ಕುಮಾರ ವ್ಯಾಸ ಪದ್ಯ ಪಾಠ ಮಾಡುತ್ತಾ ಅಣ್ಣ ಕಾವ್ಯ ರಚನೆ ಮಾಡುತ್ತಾ ಮಾಂಸಾಹಾರವನ್ನು ಸಂಪೂರ್ಣ ವರ್ಜಿಸಿರುತ್ತಾರೆಂದೂ, ಮಡಿ ಜೀವನ ನಡೆಸುತ್ತಾ ಅವರು ಬರೆಯುವುದೆಂದೂ ಬೊಗಳೆ ಹೊಡೆದರು.........

.... ಮನೆಗೆ ಬಂದವನು ಅಣ್ಣನ ಹತ್ತಿರ ಮೇಷ್ಟ್ರು ಹೇಳಿದ್ದನ್ನು ಹೇಳಿದೆ. ಅಣ್ಣನಿಗೆ ನನ್ನ ಮಾತು ಕೇಳಿ ಸಿಕ್ಕಾಪಟ್ಟೆ ಕೋಪ ಬಂತು.

ವೇದೋಪನಿಷತ್ತುಗಳನ್ನು ಬರೆದವರು ದನದ ಮಾಂಸ ತಿನ್ನುತ್ತಿದ್ದರೆನ್ನುವುದು, ರಾಮಾಯಣ ಬರೆದ ವಾಲ್ಮೀಕಿ ಶಿಕಾರಿ ಮಾಡುತ್ತಿದ್ದ ವ್ಯಾಧನಾಗಿದ್ದನೆನ್ನುವುದು ಆ ಮುಠ್ಠಾಳ ಮೇಷ್ಟ್ರಿಗೆ ಗೊತ್ತಿಲ್ಲ. ಈ ಮಡಿ ಹೆಂಗಸರಂಥ ಮೇಷ್ಟ್ರುಗಳು ನಿಮಗೆ ಹೇಳಿಕೊಡುವುದಾದರೂ ಏನು? ಅವರಿಂದ ನೀವು ಕಲಿಯುವುದಾದರೂ ಏನು? ಅವಿವೇಕಿಗಳು! ಪದ್ಯ ಬರೆಯವವರು ಪಥ್ಯದಲ್ಲಿರಬೇಕು ಎನ್ನುವ ಕಂದಾಚಾರಗಳನ್ನೆಲ್ಲಾ ನಂಬಿಕೊಂಡಿದ್ದಾರಲ್ಲಾ. ಹಿಂದೂ ಧರ್ಮಕ್ಕೆ ಇದಕ್ಕಿಂತ ಇನ್ನೊಂದು ದುರ್ಗತಿ ಇದೆಯ? ಹೋಗಲಿ ನೀನಾದರೂ ಇಂಥವೆಲ್ಲಾ ತಪ್ಪು ಎನ್ನುವುದನ್ನು ತಿಳುಕೋ. ನಿನ್ನ ಜೊತೆ ಹುಡುಗರಿಗೂ ಹೇಳು. ಇನ್ನೊಂದು ಸಾರಿ ಆ ಮೇಷ್ಟ್ರು ಹಾಗೇನಾ ದರೂ ಕ್ಲಾಸಿನಲ್ಲಿ ಹೇಳಿದರೆ ನೀನು ಹೇಳು 'ಹಾಗೇನೂ ಇಲ್ಲ, ನಾವು ದನದ ಮಾಂಸ ಸಹ ಸಿಕ್ಕರೆ ತಿನ್ನುತ್ತೇವೆ, ನಾವು ಹಿಂದೂಗಳೇ ಅಲ್ಲ ಅಂತ ಹೇಳಿಬಿಡು' ಎಂದು ನನಗೆ ಕೋಪೋದ್ರಿಕ್ತರಾಗಿ ಹೇಳಿದರು.

ಸ್ಕೂಲಿನಲ್ಲಿ ಮೇಷ್ಟ್ರು ಹೇಳಿದ್ದಕ್ಕೆ ಹೌದೆಂದು ತಲೆ ಯಾಡಿಸಿದ್ದ ನನಗೆ ಅಣ್ಣನ ಮಾತು ಕೇಳಿ ಮತ್ತೂ ಗಾಬರಿ ಯಾಯ್ತು. ದನದ ಮಾಂಸ ತಿನ್ನುತ್ತೇವೆಂದೂ, ನಾವು ಹಿಂದೂಗಳೇ ಅಲ್ಲವೆಂದು ಹೇಳುವುದಾದರೂ ಹೇಗೆ! ಅದೂ ನನ್ನ ಓರಗೆಯ ಹುಡುಗರೆಲ್ಲಾ ಪಕ್ಕಾ ಕಂದಾಚಾರಿ ಬ್ರಾಹ್ಮಣರಾಗಿರುವಾಗ! ನಾವು ಹಿಂದೂಗಳೇ ಅಲ್ಲ ಎಂದರೆ ಆಗ ನಾವು ಸಾಬರು ಅಂತಾಗುವುದಿಲ್ಲವೆ! ಅದೂ ಸ್ಕೂಲಿನಲ್ಲಿ ಎಲ್ಲರೂ ಸಾಬರನ್ನು ಮನುಷ್ಯರೇ ಅಲ್ಲ ವೆಂದು ತಿಳಿದಿರುವ ಸಂದರ್ಭದಲ್ಲಿ ಹೇಳಿದರೆ ಉಳಿಗಾಲ ಉಂಟೆ!

ನಾನು "ಥೂ ದನದ ಮಾಂಸ ನಾನಂತೂ ತಿನ್ನ ಲ್ಲಪ್ಪಾ" ಎಂದೆ. "ನೋಡೋ, ನಿನಗೆ ಇಷ್ಟ ಇಲ್ಲದಿದ್ದರೆ ನೀನು ತಿನ್ನಬೇಡ. ನನಗೆ ಇಷ್ಟ ಇಲ್ಲದ್ದು ನಾನೂ ತಿನ್ನಲ್ಲ. ಆದರೆ ಏನು ತಿಂತೀಯ ಅನ್ನುವುದಕ್ಕೂ ಏನು ಬರೀ ತೀಯ ಅನ್ನುವುದಕ್ಕೂ ಯಾವ ಸಂಬಂಧವೂ ಇಲ್ಲ. ಅಷ್ಟೆ ಅಲ್ಲ ಹೀಗೆಲ್ಲ ನೀತಿ ನಿಯಮ, ವ್ರತ, ಆಚಾರ ಮಾಡಿ ಕೊಂಡು ಬದುಕಿದವನಿಂದ ಎಂದಾದರೂ ಒಳ್ಳೆ ಪದ್ಯ ಬರಿಯಕ್ಕಾಗುತ್ತೇನೋ?" ಎಂದು ಇನ್ನಷ್ಟು ಬಯ್ದರು.

"ನಾವು ಹಿಂದೂಗಳೇ ಅಲ್ಲಾಂದರೆ ನಮ್ಮನ್ನು ಸಾಬರು ಅಂತಾರಲ್ಲ" ಎಂದೆ. "ಒಳ್ಳೆಯದಾಯ್ತು, ಏನೂ ತೊಂದರೆ ಇಲ್ಲ ಹಾಗಂದರೆ. ಹಿಂದೂಗಳೆಲ್ಲಾ ಇಂಥ ಶಾಸ್ತ್ರಾಚಾರದ ಕಗ್ಗಳನ್ನೆಲ್ಲಾ ನಂಬಿಕೊಂಡು ವ್ರತ ಮಾಡುತ್ತಾ ಕೂತಿದ್ದರಿಂದಲೇ ಸಾಬರು ಬಂದು ಇವರ ದೇವರು ದಿಂಡರ ಮೂತಿಗೆ ಹೊಡೆದು, ಮೂಗು ಮುರಿದು ಅನೇಕ ಶತಮಾನ ನಮ್ಮನ್ನು ಆಳಿದ್ದು, ನನ್ನ 'ಥ್ರಾಂ ಥ್ರೀಂ ಥ್ರಾಮ್' ಪದ್ಯ ಓದು" ಎಂದರು.

....ಅಣ್ಣ ಈ ಕಗ್ಗಗಳನ್ನು ಕಂದಾಚಾರಗಳನ್ನು ಎಲ್ಲೆಂದರಲ್ಲಿ ಯಾವಾಗೆಂದರೆ ಆವಾಗ ವಿರೋಧಿಸುತ್ತಾ ಬದುಕಿದರು. ಆದರೆ ಅಣ್ಣನ ಬದುಕಿನ ದುರಂತವೆಂದರೆ ಅವರ ಬದುಕಿನ ಬಹುಭಾಗವನ್ನು ಏಕಾಂಗಿಯಾಗಿ ಹೋರಾಡಬೇಕಾಗಿ ಬಂದಿದ್ದು. ಅಣ್ಣನ ಸಮಕಾಲೀನ ರಂತೂ ಎಲ್ಲರೂ ಹೆಚ್ಚು ಕಡಿಮೆ ಮೂಲಭೂತವಾದಿಗಳೇ ಎನ್ನುವಷ್ಟು ಸಂಪ್ರದಾಯವಾದಿಗಳು. ಹಾಗಾಗಿ ಅಣ್ಣನ ಬಗ್ಗೆ ಆ ತಲೆಮಾರಿನ ಪ್ರತಿಭಟನೆ ತಿರಸ್ಕಾರಗಳು ಸ್ವಾಭಾ ವಿಕವಾದದ್ದೆ".

ಮತ - 'ಮನುಜಮತ'ವಾಗಬೇಕು, ಪಥ - 'ವಿಶ್ವಪಥ' ವಾಗಬೇಕು, ಮಾನವ - 'ವಿಶ್ವಮಾನವ'ನಾಗ ಬೇಕು ಎಂಬುದು ಕುವೆಂಪುರವರ ಆಶಯ. "ಸರ್ವಜ ನಾಂಗದ ಶಾಂತಿಯ ತೋಟ... ಹಿಂದೂ, ಕ್ರೈಸ್ತ, ಮುಸ ಲ್ಮಾನ ಪಾರಸಿಕ ಜೈನರುದ್ಯಾನ...." ಎಂಬ ರಾಷ್ಟ್ರಕವಿಯ ನಾಡಗೀತೆ ಹಂಬಲ, 'ಸೆಕ್ಯುಲರ್ ಸ್ಟೇಟ್' ಭಾರತದ ಏಕತೆ- ಸೌಹಾರ್ದತೆ-ಸರ್ವೋದಯಗಳ ಉಳಿವಿಗೆ ಗೋಮಾಂಸ ಸೇವನೆಯೂ ಸೇರಿದಂತೆ, ಯಾವುದೇ ಆಹಾರದ ಬಗೆಗೂ ಮಹಾಕವಿ ಕುವೆಂಪು ಅವರು ತಳೆ ದಿರುವ ನಿಲುವು ನಮಗೆ ಕೈದೀವಿಗೆಯಾಗಿದೆ. ಈ ವಿಚಾರ ದಲ್ಲಿ ಸಹನೆ ಮತ್ತು ಸಹಬಾಳ್ವೆಯನ್ನು ನಾವು ರೂಢಿಸಿ ಕೊಳ್ಳದಿದ್ದರೆ, ಆಹಾರ ಪದ್ಧತಿಗೆ ಜಾತಿ-ಮತಗಳನ್ನು ಬೆರೆಸಿ, ದ್ವೇಷ, ಅಸೂಯೆ ಮತ್ತು ನಮ್ಮದೇ ಸರಿ ಎಂಬ ಅಹಂಕಾರಗಳನ್ನು ಬೆಳೆಸಿಕೊಂಡರೆ, ಆಗುವ ಅನಾಹುತ, ಪ್ರಾಣಿ ಹತ್ಯೆಗೆ ಬದಲಾಗಿ ನರ ಹತ್ಯೆಗಳಾಗಿ ಕೊಲೆ-ಸುಲಿಗೆ ಯಲ್ಲಿ ಅಂತ್ಯವಾಗಿ ಕೊನೆಗೆ ಮನುಷ್ಯರೇ ಹುಳು-ಹುಪ್ಪಟೆ, ಕ್ರಿಮಿ-ಕೀಟ-ಗೆದ್ದಲುಗಳಿಗೆ ಆಹಾರವಾಗಬೇಕಾಗುತ್ತದೆ. □

ಕಾವ್ಯ

ಬಿಡಿ ನನ್ನ ಊರ ಒಳಗೆ

ಬಿಡಿ ನನಗೆ
ಊರ ಒಳಗೆ
ಬಂದಿಹೆನು ವನದಿಂದ
ಹಗಲಿರುಳು ನಡೆ ನಡೆದು

ಆ ಮುದುಕಿ ಬಲ್ಲಳು ನನಗೆ
ನವ ಮಾಸದವರಗೆ
ಹೊತ್ತಿದ್ದಳು ಎನಗೆ
ನಾ ಪಶುವಲ್ಲ
ನಿಮ್ಮಂತೆಯೇ ಮನುಜ
ಬಿಡಿ ನನಗೆ ಊರ ಒಳಗೆ

ಸಹಜ ಸುಂದರವಾದ
ಮನೆ ಇತ್ತು ಇಲ್ಲಿ
ಅಂದು ಎನಗೆ
ಕೌತುಕದ ಸುಳಿಗೆ ಸಿಕ್ಕಿ
ವಿಧಿಯ ಆಟಕ್ಕೆ ಬಲಿಯಾಗಿ
ಹೋದೆ ವನಕ್ಕೆ
ಇಂದು ಬಿಡಿ ನನಗೆ
ಊರ ಒಳಗೆ



ಕೊಂದುತಿಂಬುವ ವೃತ್ತಿ ಹಿಂದಿನದ್ದು
ಪಾಪ ಕರ್ಮ ಅಂದಿನದ್ದು
ಇಂದು ನಾ ಮನುಜ ನಿಮಂತೆಯೇ
ಬಿಡಿ ನನಗೆ ಊರ ಒಳಗೆ
ಸೂರ್ಯೋದಯದ ಹೊಸ ಬಾಳಿಗೆ
ಬಿಡಿ ನನಗೆ ಊರ ಒಳಗೆ.

○ ಎನ್. ವಾಣಿ ಪಾಲ್ವೆ

ವಿಜಯನಗರವೋ? ಮುಘಲರಾಳ್ವಿಕೆಯೋ?... ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ!

ಶಿವಸುಂದರ್

ಇತ್ತೀಚೆಗೆ ತಾನೆ ಬಂದ ನೆರೆಯಿಂದ ಸಂತ್ರಸ್ತರಾಗಿ ಹಂಪಿಯ ಆಸುಪಾಸಿನಲ್ಲೇ ಜನ ಆಸರೆಗಾಗಿ ಹಾತೊರೆಯುತ್ತಿರುವಾಗ ಶ್ರೀಕೃಷ್ಣ ದೇವರಾಯನ ಪಟ್ಟಾಭಿಷೇಕದ 500ನೇ ವರ್ಷವನ್ನು ಬಿಜೆಪಿ ಸರ್ಕಾರ 30 ಕೋಟಿಗೂ ಹೆಚ್ಚು ವೆಚ್ಚದಲ್ಲಿ ವೈಭವದಿಂದ ಆಚರಿಸುವ ತಯಾರಿಯಲ್ಲಿ ತೊಡಗಿದೆ. ಇದೇ ಜನವರಿ 27,28,29ರಂದು ಹಂಪಿಯಲ್ಲಿ ಈ ವಿಜಯನಗರ ಸಾಮ್ರಾಜ್ಯದ ದೊರೆಯ ಮಹೋತ್ಸವ ವೈಭವೋಪೇತವಾಗಿ ನಡೆಯಲಿದೆ.

ಮಿಕ್ಕ ವಿಷಯಗಳಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ರೆಡ್ಡಿ ಬ್ರದರ್ಸ್‌ಗಳ ಈ ಅಜೆಂಡಾಗೆ ಮಾತ್ರ ಬಿಜೆಪಿ ಸರ್ಕಾರದ ಯೋಜಿತ ಬೆಂಬಲ ಮತ್ತು ಸಕಲ ಉತ್ತೇಜನ ಸಿಗುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ವಿಜಯನಗರ ಸಾಮ್ರಾಜ್ಯವನ್ನು "ಕರ್ನಾಟಕದ ಸುವರ್ಣಯುಗವೆಂದು" ಮೊದಲಿಂದಲೂ ಪ್ರಚಾರ ಮಾಡುತ್ತಾ ಬಂದವರೇ ಹಿಂದೂತ್ವವಾದಿ ಇತಿಹಾಸಕಾರರು. ಅವರ ಪ್ರಕಾರ ಶ್ರೀಕೃಷ್ಣ ದೇವರಾಯ "ಮುಸ್ಲಿಂ ದುರಾಕ್ರಮಣದಿಂದ ಕಂಗೆಟ್ಟಿದ್ದ ಹಿಂದೂ ಸಂಸ್ಕೃತಿಯನ್ನು ಉದ್ಧಾರ ಮಾಡಿದವರು ಮತ್ತು ಯವನರಿಗೆ ತಕ್ಕ ಪಾಠ" ಕಲಿಸಿದವರು. ಹೀಗಾಗಿ ವಿಜಯನಗರ ಸಾಮ್ರಾಜ್ಯವೆಂದರೆ ಅವರ ಪಾಲಿಗೆ ಹಿಂದೂ ಹಿರಿಮೆಯನ್ನು ಲೋಕಕ್ಕೇ ಸಾರಿದ ಹಿಂದೂ ಸಾಮ್ರಾಜ್ಯ. ಆದರೆ ಯಾವ ಇತಿಹಾಸಕಾರರೂ ನಿಜಕ್ಕೂ ಅಲ್ಲಿ ಯಾರನ್ನು ಹಿಂದೂಗಳೆಂದು ಕರೆಯಲಾಗುತ್ತಿತ್ತೋ ಆ ರೈತಾಪಿ, ವರ್ತಕ, ಕುಶಲಕರ್ಮಿ ಜನತೆಯ ಪಾಡೇನಿತ್ತು ಎಂದು ಅಧ್ಯಯನ ಮಾಡುವ ಪ್ರಯತ್ನವನ್ನೇ ಮಾಡಿಲ್ಲ. ಇಂದೂ ಕೂಡಾ ಅಷ್ಟೇ! ಹಿಂದೂಗಳೆಂದು ಕರೆಸಿಕೊಳ್ಳಲ್ಪಡುವ ರೈತರ ಪಾಡು ಏನೇ ಇದ್ದರೂ ಅವರಲ್ಲಿ ಹಿಂದೂ ಹಿರಿಮೆಯನ್ನು ಬಿತ್ತಲು ಸರ್ಕಾರ ಹಣಹೂಡುತ್ತದೆ. ಆದ್ದರಿಂದಲೇ "ನೆರೆ ಪರಿಹಾರಕ್ಕೂ ಬೊಕ್ಕಸದಲ್ಲಿ ದುಡ್ಡಿಲ್ಲ, ಹೊಸ ತೆರಿಗೆ ಹಾಕಬೇಕಾಗುತ್ತಿದೆ" ಎಂದು ಹೇಳುತಿರುವ ಇದೇ ಸರ್ಕಾರ ವಿಜಯನಗರ ಉತ್ಸವಕ್ಕೆ ಮಾತ್ರ 30 ಕೋಟಿ ರೂ. ಹಣ ಬಿಡುಗಡೆ ಮಾಡಿದೆ.



ಇತಿಹಾಸದಲ್ಲಿ ಸಾಧನೆ ಮತ್ತು ವೈಭವ ಎಂದು ಬಣ್ಣಿತವಾದದ್ದೆಲ್ಲಾ ಆ ಕಾಲದ ಆಳುವ ವರ್ಗಗಳ ವೈಭವವೇ ವಿನಃ ಸಾಮಾನ್ಯ ಜನರ ಬದುಕಿನ ವೈಭವವಲ್ಲ. ಇತಿಹಾಸದಲ್ಲಿ ಸಾಮಾನ್ಯ ಜನರ ಬದುಕೇನು ಎಂದು ಅರ್ಥ ಮಾಡಿಕೊಳ್ಳಬೇಕೆಂದರೆ ಇತಿಹಾಸವನ್ನು ನೋಡುವ ನಮ್ಮ ದೃಷ್ಟಿಕೋನವೇ ಬದಲಾಗಬೇಕು. ಆಗ ಮಾತ್ರ "ಪ್ರಭುವೆಕ್ಕಿದ ಪಲ್ಲಕಿಯನ್ನಲ್ಲದೆ" ಅದನ್ನು "ಹೊತ್ತ ಭೋವಿಗಳ ಬದುಕನ್ನು" ನೋಡಲು ಸಾಧ್ಯವಾಗುತ್ತದೆ. ತಾಜ್‌ಮಹಲ್ ನಲ್ಲದೆ "ಅದಕ್ಕೆ ಕಲ್ಲು ಹೊತ್ತ ಕೂಲಿಗಳ ಬದುಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ." ಆದ್ದರಿಂದಲೇ ಕುವೆಂಪುರವರು ಇತಿಹಾಸವನ್ನು "ರೈತ ದೃಷ್ಟಿ" ಯಿಂದ ನೋಡಿ

"ಕರಿಯರದೋ? ಬಿಳಿಯರದೊ? ಯಾರಾದರೆ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!
ವಿಜಯನಗರವೋ? ಮುಘಲರಾಳ್ವಿಕೆಯೋ? ಇಂಗ್ಲೀಷರೋ?
ಎಲರೂ ಜಿಗಣೆಗಳೇ ನನ್ನ ನೆತ್ತರಿಗೆ!"

ಎಂಬ ಸಾರ್ವಕಾಲಿಕ ಸತ್ಯವನ್ನೂ ಸಾರಿದ್ದಾರೆ.

ಹೀಗಾಗಿಯೇ ಕನ್ನಡನಾಡಿನ ಈ ತಥಾಕಥಿತ ಸುವರ್ಣ ಯುಗವನ್ನು "ರೈತ ದೃಷ್ಟಿ"ಯಿಂದ ನೋಡುವ ಅಗತ್ಯವಿದೆ.

ಮೊಟ್ಟಮೊದಲನೆಯದಾಗಿ ಶ್ರೀಕೃಷ್ಣದೇವರಾಯನಾಗಲೀ, ಅಥವಾ ವಿಜಯನಗರದ ಇನ್ನಿತರ ಸಾಮ್ರಾಟರ ಆಡಳಿತವನ್ನೇ ಆಗಲೀ ಇಂದಿನ ಅರ್ಥದಲ್ಲಿ ಹಿಂದೂಪರವೆಂದೂ ಅಥವಾ ಮುಸ್ಲಿಂ ವಿರೋಧಿಯೆಂದೂ ಹೇಳಲು ಸಾಧ್ಯವೇ ಇಲ್ಲ. ಅದೇ ರೀತಿ ವಿಜಯನಗರದ ಸಮಕಾಲೀನರಾಗಿದ್ದ ಬಿಜಾಪುರದ ಆದಿಲ್ ಶಾಹಿ ಆಡಳಿತವನ್ನು ಮುಸ್ಲಿಂ ಸಾಮ್ರಾಜ್ಯವೆಂದೂ ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ ಎರಡನೇ ದೇವರಾಯನ ಸೇನೆಯಲ್ಲಿ 10,000ಕ್ಕೂ ಹೆಚ್ಚುರಾವುತರಿದ್ದರೆಂದು A.H. ಲಾಂಗ್‌ಹರ್ಸ್ಟ್ ಎಂಬ ಇತಿಹಾಸಕಾರ ದಾಖಲಿಸಿದ್ದಾನೆ. ಅದೇ ರೀತಿ ಶ್ರೀಕೃಷ್ಣದೇವರಾಯ ನಡೆಸಿದ ಬಹುಪಾಲು ಯುದ್ಧಗಳು ಹಿಂದೂಗಳ ಮೇಲೇ ಆಗಿತ್ತು. ಅವರು ಹಿಂದೂಗಳೆಂಬ ಕಾರಣಕ್ಕೆ ಅಲ್ಲ. ಬದಲಿಗೆ ರಾಜ್ಯ ವಿಸ್ತರಣೆಯ ಕಾರಣಕ್ಕೆ. ಅದೇ ರೀತಿ ಬಿಜಾಪುರದ ಆದಿಲ್‌ಶಾಹಿಗಳು ಸ್ವಾತಂತ್ರ್ಯ ಘೋಷಿಸಿಕೊಂಡಿದ್ದು ಮುಸ್ಲೀಮ್ ಮುಘಲ್ ದೊರೆಗಳ ವಿರುದ್ಧವಾಗಿ. ಅವರ ಸೇನೆಯಲ್ಲೂ ಪ್ರಮುಖವಾಗಿ ಹಿಂದೂಗಳೆ ಇದ್ದರು. ಹೀಗಾಗಿ ಯುದ್ಧಾನಂತರ ನಡೆಯುತ್ತಿದ್ದ ಲೂಟಿ ಮತ್ತು ವಿನಾಶದಲ್ಲಿ ಮುಸ್ಲಿಂ ಸೈನಿಕರಷ್ಟೇ ಹಿಂದೂ ಸೈನಿಕರೂ ಪಾಲ್ಗೊಳ್ಳುತ್ತಿದ್ದರು. ಹಿಂದೂಗಳನ್ನು ಲೂಟಿ ಹೊಡೆಯಬೇಕು ಎನ್ನುವ ಕೋಮುವಾದಿ ಉದ್ದೇಶದಿಂದಲ್ಲ. ಬದಲಿಗೆ ಅಂದಿನ ಸೈನ್ಯವನ್ನು ಸೇರಲು ಅದು ಬಹುದೊಡ್ಡ ಆಕರ್ಷಣೆಯಾಗಿತ್ತು ಎಂಬ ಕಾರಣಕ್ಕೆ. ಇದು ಆದಿಲ್ ಶಾಹಿ ಹಾಗೂ ಬಹಮನಿ ಸೇನೆಗಳಿಗೆ ಎಷ್ಟು ಅನ್ವಯವಾಗುತ್ತದೋ ಅಷ್ಟೇ ಮಟ್ಟಿಗೆ ವಿಜಯನಗರದ ಸೇನೆಗೂ ಅನ್ವಯವಾಗುತ್ತದೆ. ಅದು ಯಾರ ಕೋಮುವಾ

> **ಮೊಟ್ಟಮೊದಲನೆಯದಾಗಿ ಶ್ರೀಕೃಷ್ಣದೇವರಾಯನಾಗಲೀ, ಅಥವಾ ವಿಜಯನಗರದ ಇನ್ನಿತರ ಸಾಮ್ರಾಟರ ಆಡಳಿತವನ್ನೇ ಆಗಲೀ ಇಂದಿನ ಅರ್ಥದಲ್ಲಿ ಹಿಂದೂಪರವೆಂದೂ ಅಥವಾ ಮುಸ್ಲಿಂ ವಿರೋಧಿಯೆಂದೂ ಹೇಳಲು ಸಾಧ್ಯವೇ ಇಲ್ಲ. ಅದೇ ರೀತಿ ವಿಜಯನಗರದ ಸಮಕಾಲೀನರಾಗಿದ್ದ ಬಿಜಾಪುರದ ಆದಿಲ್ ಶಾಹಿ ಆಡಳಿತವನ್ನು ಮುಸ್ಲಿಂ ಸಾಮ್ರಾಜ್ಯವೆಂದೂ ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ ಎರಡನೇ ದೇವರಾಯನ ಸೇನೆಯಲ್ಲಿ ೧೦,೦೦೦ಕ್ಕೂ ಹೆಚ್ಚು ರಾವುತರಿದ್ದರೆಂದು A.H. ಲಾಂಗ್‌ಹರ್ಸ್ಟ್ ಎಂಬ ಇತಿಹಾಸಕಾರ ದಾಖಲಿಸಿದ್ದಾನೆ. ಅದೇ ರೀತಿ ಶ್ರೀಕೃಷ್ಣದೇವರಾಯ ನಡೆಸಿದ ಬಹುಪಾಲು ಯುದ್ಧಗಳು ಹಿಂದೂಗಳ ಮೇಲೇ ಆಗಿತ್ತು. ಅವರು ಹಿಂದೂಗಳೆಂಬ ಕಾರಣಕ್ಕೆ ಅಲ್ಲ. ಬದಲಿಗೆ ರಾಜ್ಯ ವಿಸ್ತರಣೆಯ ಕಾರಣಕ್ಕೆ.**

ದೀಕಾರ ಸ್ಥಾನವೂ ಅಲ್ಲ. ಬದಲಿಗೆ ಆ ಕಾಲಘಟ್ಟದ ಬರ್ಬರ ಯುದ್ಧ ನೀತಿ.

ಬ್ರಹ್ಮಾದೇಯ, ದೇವಾದೇಯ ಪದ್ಧತಿಗಳನ್ನು ಪರಿಚಯಿಸಿ ಶ್ರೀಕೃಷ್ಣದೇವರಾಯ ಗ್ರಾಮೀಣ ಪದ್ಧತಿಯಲ್ಲಿ ಹಲವಾರು ಸುಧಾರಣೆಯನ್ನು ತಂದನೆಂದು ಬಣ್ಣಿಸಲಾಗುತ್ತದೆ. ಆದರೆ ಈ ಬ್ರಹ್ಮಾದೇಯ ಮತ್ತು ದೇವಾದೇಯ ಪದ್ಧತಿಗಳಿಂದಲೇ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ರೈತರನ್ನು ಸುಲಿಯುವ ಊಳಿಗಮಾನ್ಯ ಭೂಮಾಲೀಕ ಪದ್ಧತಿ ಜಾರಿಗೆ ಬಂತು. ಬ್ರಹ್ಮಾದೇಯವೆಂದರೆ ಬ್ರಾಹ್ಮಣರ ಪುರೋಹಿತ ಶಾಹಿ ಸೇವೆಯ ಬದಲಿಗೆ ರಾಜ ಅವರಿಗೆ ನೀಡುತ್ತಿದ್ದ ಹಳ್ಳಿಗಳ ಉಂಬಳಿಗಳು. ಈ ಹಳ್ಳಿಗಳಲ್ಲಿ ತೆರಿಗೆಯನ್ನು ವಸೂಲಿ ಮಾಡುವ ಪರಮಾಧಿಕಾರ ಈ ಬ್ರಾಹ್ಮಣ ಫಲಾನುಭವಿಗಳಿಗೇ ಸೇರುತ್ತಿತ್ತು. ಕೆಲವು ಬಾರಿ ಇಂತಿಷ್ಟೆಂದು ರಾಜನಿಗೆ ಕೊಟ್ಟು ಮಿಕ್ಕೆಲ್ಲವನು ಅವರೇ ಅನುಭವಿಸಬಹುದಿತ್ತು. ಅದರ ಮೇಲೆ ರಾಜನ ನಿಯಂತ್ರಣವೇನೂ ಇರಲಿಲ್ಲ. ಹೀಗೆ ಬ್ರಹ್ಮಾದೇಯವೆಂದರೆ ಒಂದು ರೀತಿಯ ಹಳೆಯ ಕಾಲದ ಎಸ್.ಇ.ಜೆಡ್.ಗಳಿದ್ದಂತೆ. ಇದರಿಂದಾಗಿ ಈ ಬ್ರಾಹ್ಮಣ ಭೂಮಾಲಿಕರ ಕೆಳಗೆ ರೈತಾಪಿ ಸಾಕಷ್ಟು ಪಾಡು ಅನುಭವಿಸಬೇಕಿತ್ತು. ಇದೇ ರೀತಿಯ ಪದ್ಧತಿಯನ್ನು ಬಿಜಾಪುರದ ಆದಿಲ್‌ಶಾಹಿ ಸಂಸ್ಥಾನದಲ್ಲೂ ಅನುಸರಿಸಿ ದೇಸಾಯಿ ಮತ್ತು ದೇಶಮುಖರೆಂಬ ಹೊಸ ಶೋಷಕ ವರ್ಗದ ಹುಟ್ಟಿಗೆ ಕಾರಣರಾದರು.

ಹಾಗೆಯೇ ದೇವಾದೇಯವೆಂದರೆ ದೇವಸ್ಥಾನಗಳಿಗೆ ರಾಜ ಕೊಡುತ್ತಿದ್ದ ಉಂಬಳಿಗಳು. ಈ ಉಂಬಳಿಗೆ ಒಳಪಟ್ಟ ಹಳ್ಳಿಗಳ ಪರಮಾಧಿಕಾರ ಆ ದೇವಸ್ಥಾನಗಳಿಗೇ ಸೇರುತ್ತಿತ್ತು. ಅದರ ಪಾರುಪತ್ತೆಗಾರರು ಬ್ರಾಹ್ಮಣರೇ ಆಗಿರುತ್ತಿದ್ದರೆಂದು ವಿಶೇಷವಾಗಿ ಹೇಳಲೇ ಬೇಕಿಲ್ಲ. ಈ ದೇವಸ್ಥಾನಗಳು ನಿಧಾನವಾಗಿ ದೊಡ್ಡ ಬಡ್ಡಿವ್ಯಾಪಾರದ ಕೇಂದ್ರವಾಗಿಯೂ ಬೆಳೆದವು. ಇತಿಹಾಸಕಾರರ ಪ್ರಕಾರ ಇಲ್ಲಿ ರೈತರಿಗೆ ಬೆಳೆ ಇನ್ನಿತ್ಯಾದಿಗಳಿಗೆ ಶೇ.20-30ರ ಬಡ್ಡಿದರದಲ್ಲಿ ಹಣವನ್ನು ನೀಡಲಾಗುತ್ತಿತ್ತು. ಇಷ್ಟು ಮಾತ್ರವಲ್ಲ. ವಿಜಯನಗರದ ಬೃಹತ್ ಸಾಮ್ರಾಜ್ಯದ ಉಸ್ತುವಾರಿ ನೋಡಿಕೊಳ್ಳಲು ಕೆಳಜಾತಿಗಳ "ನಾಯಕ"ರಿಗೆ ವಹಿಸಲಾಗುತ್ತಿತ್ತು. ಆದರೆ ಅವರ ಮೇಲೆ ಬೇಹುಗಾರಿಕೆ ಮತ್ತು ಉಸ್ತುವಾರಿ ನೋಡಿಕೊಂಡು ವಿಜಯನಗರದ ಸಾಮ್ರಾಟ ಬ್ರಾಹ್ಮಣ ರಾಜ್ಯಪಾಲರನ್ನು ನೇಮಿಸುತ್ತಿದ್ದನು.

ಹೀಗೆ ವಿಜಯನಗರದ ಕಾಲದ ವೇಳೆಗೆ ಉತ್ಪಾದನಾ ವಿಧಾನದಲ್ಲಿ -ಇತರ ದಮನಿತ ಜಾತಿಗಳಲ್ಲಿ ಬಂದ ಚಲನೆಯ ಕಾರಣದಿಂದಾಗಿ ಬ್ರಾಹ್ಮಣ ಅಗ್ರಹಾರದ ಸಂಖ್ಯೆಗಳು ಕಡಿಮೆಯಾದರೂ ಬ್ರಾಹ್ಮಣ್ಯದ ಮತ್ತು ಬ್ರಾಹ್ಮಣರ ಅಧಿಪತ್ಯವು ಮಾತ್ರ ಅಬ್ರಾಹ್ಮಣರ್ರು ಸಾಮ್ರಾಟರಾದರೂ ಅಭಾಧಿತವಾಗಿ ಹೊಸಹೊಟ್ಟು ಪಡೆದು ಮುಂದುವರೆಯಿತು. ಅದರ ಮೂಲ ಸೂತ್ರಧಾರಿ ಶ್ರೀಕೃಷ್ಣದೇವರಾಯ.

ಶ್ರೀಕೃಷ್ಣದೇವರಾಯ ಬಹಳಷ್ಟು ಜನಾನುರಾಗಿಯೆಂದೂ ಬಣ್ಣಿಸಲು ಆತನ ಕಾಲದಲ್ಲಿ ಕಟ್ಟಿದ ಕೆರೆ-ಕಾಲುವೆಗಳ ಪಟ್ಟಿಯನ್ನು ಕೊಡಲಾಗುತ್ತದೆ. ಇದರಿಂದ ಉತ್ಪತ್ತಿ ಹೆಚ್ಚಿದ್ದು ನಿಜ. ಆದರೆ ಇದರಿಂದ ರೈತಾಪಿಯ ಬದುಕಿನಲ್ಲಿ ಯಾವ ಮೂಲಭೂತ ಬದಲಾವಣೆಯೂ ಬರಲಿಲ್ಲ. ಇತಿಹಾಸಕಾರರ ಪ್ರಕಾರ ಕನ್ನಡ ನಾಡಿನಲ್ಲಿ ಆವರೆಗೆ ಇಲ್ಲದಿದ್ದ ಹೊಸ ಬಗೆಯ ಆಡಳಿತ ಪದ್ಧತಿಯನ್ನು ವಿಜಯನಗರ ಪರಿಚಯಿಸಿತು. ಇದರಿಂದಾಗಿ ರೈತ ಮತ್ತು ರಾಜನ ಮಧ್ಯೆ, ದೇವಸ್ಥಾನ, ಬ್ರಾಹ್ಮಣ ಅಗ್ರಹಾರ, ಮಠ, ನಾಯಕರೆಂಬ

ಬ್ರಹ್ಮಾದೇಯ, ದೇವಾದೇಯ ಪದ್ಧತಿಗಳನ್ನು ಪರಿಚಯಿಸಿ ಶ್ರೀಕೃಷ್ಣದೇವರಾಯ ಗ್ರಾಮೀಣ ಪದ್ಧತಿಯಲ್ಲಿ ಹಲವಾರು ಸುಧಾರಣೆಯನ್ನು ತಂದನೆಂದು ಬಣ್ಣಿಸಲಾಗುತ್ತದೆ. ಆದರೆ ಈ ಬ್ರಹ್ಮಾದೇಯ ಮತ್ತು ದೇವಾದೇಯ ಪದ್ಧತಿಗಳಿಂದಲೇ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ರೈತರನ್ನು ಸುಲಿಯುವ ಊಳಿಗಮಾನ್ಯ ಭೂಮಾಲೀಕ ಪದ್ಧತಿ ಜಾರಿಗೆ ಬಂತು. ಬ್ರಹ್ಮಾದೇಯವೆಂದರೆ ಬ್ರಾಹ್ಮಣರ ಪುರೋಹಿತ ಶಾಹಿ ಸೇವೆಯ ಬದಲಿಗೆ ರಾಜ ಅವರಿಗೆ ನೀಡುತ್ತಿದ್ದ ಹಳ್ಳಿಗಳ ಉಂಬಳಿಗಳು. ಈ ಹಳ್ಳಿಗಳಲ್ಲಿ ತೆರಿಗೆಯನ್ನು ವಸೂಲಿ ಮಾಡುವ ಪರಮಾಧಿಕಾರ ಈ ಬ್ರಾಹ್ಮಣ ಫಲಾನುಭವಿಗಳಿಗೇ ಸೇರುತ್ತಿತ್ತು. ಕೆಲವು ಬಾರಿ ಇಂತಿಷ್ಟೆಂದು ರಾಜನಿಗೆ ಕೊಟ್ಟು ಮಿಕ್ಕೆಲ್ಲವನು ಅವರೇ ಅನುಭವಿಸಬಹುದಿತ್ತು. ಅದರ ಮೇಲೆ ರಾಜನ ನಿಯಂತ್ರಣವೇನೂ ಇರಲಿಲ್ಲ. ಹೀಗೆ ಬ್ರಹ್ಮಾದೇಯವೆಂದರೆ ಒಂದು ರೀತಿಯ ಹಳೆಯ ಕಾಲದ ಎಸ್.ಇ.ಜೆಡ್. ಗಳಿದ್ದಂತೆ. ಇದರಿಂದಾಗಿ ಈ ಬ್ರಾಹ್ಮಣ ಭೂಮಾಲಿಕರ ಕೆಳಗೆ ರೈತಾಪಿ ಸಾಕಷ್ಟು ಪಾಡು ಅನುಭವಿಸಬೇಕಿತ್ತು.

ಹತ್ತು ಹಲವು ಮಧ್ಯವರ್ತಿಗಳು ಹುಟ್ಟಿಕೊಂಡರು. ಇವರೆಲ್ಲರೂ ಅತ್ಯಂತ ಐಷಾರಾಮವಾಗಿ ಬದುಕುತ್ತಿದ್ದುದೇ ರೈತಾಪಿಯ ದುಡಿಮೆಯಿಂದ. ಹೀಗಾಗಿ ಇವರೆನ್ನೆಲ್ಲಾ ಸಾಕಬೇಕಾಗಿ ಬಂದ ರೈತಾಪಿ ಕನ್ನಡನಾಡಿನ "ಸುವರ್ಣ ಯುಗದಲ್ಲಿ" ಎಷ್ಟೊಂದು ಶೋಷಣೆಗೆ ಗುರಿಯಾಗಿರಬಹುದೆಂಬುದು ಯಾರಿಗಾದರೂ ಅರ್ಥವಾಗುತ್ತದೆ.

ಇಷ್ಟು ಮಾತ್ರವಲ್ಲ. ಪೋರ್ಚುಗೀಸರು ಗೋವಾದ ಮೂಲಕ ಭಾರತಕ್ಕೆ ಕಾಲಿಟ್ಟಾಗ ಅದು ಬಿಜಾಪುರದ ಆದಿಲ್ ಶಾಹಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಪೋರ್ಚುಗೀಸರು ಸಮುದ್ರ ವ್ಯಾಪಾರದ ಮೇಲೆ ಸಂಪೂರ್ಣ ಹತೋಟಿ ಪಡೆಯಲು ಗೋವೆಯನ್ನು ವಶಪಡಿಸಿಕೊಳ್ಳಲು 1510ರಲ್ಲಿ ಆದಿಲ್ ಶಾನ ವಿರುದ್ಧ ಯುದ್ಧ ಸಾರಿದರು. ಆಗ ಅವರಿಗೆ ಗೆಲ್ಲಲು ಸಹಾಯ ಮಾಡಿದ್ದು ಶ್ರೀಕೃಷ್ಣದೇವರಾಯನ ದಂಡನಾಯಕ ತಿಮ್ಮಯ್ಯ-ಗೇರುಸೊಪ್ಪೆಯ ವಿಜಯನಗರದ ಸಾಮಂತ ಮಲ್ಲಿರಾಯ. ಇದರಿಂದಾಗಿ ತಿಮ್ಮಯ ತನಹೆ ಪೋರ್ಚುಗೀಸರು ಗೋವೆಯ ಉಸ್ತುವಾರಿ ವಹಿಸಬಹುದೆಂದು ಭಾವಿಸಿದ್ದ. ಆದರೆ ಆತನಿಗೆ ಪೋರ್ಚುಗೀಸರು ಕೇವಲ ಮಿರ್ಜಾನ ದುರ್ಗದ ಉಸ್ತುವಾರಿ ವಹಿಸಿದರು. ಈ ವರ್ಷ ಅದರ ಹಬ್ಬವೂನಡೆಯುತ್ತಿದೆ.

ಆದರೆ ಹೀಗೆ ಪೋರ್ಚಗೀಸರು ಭಾರತದಲ್ಲಿ ಭದ್ರವಾಗಿ ನೆಲೆಯೂರಿದ್ದರಿಂದ ಆದ ಪರಿಣಾಮ ಮಾತ್ರ ಘೋರವಾಗಿತ್ತು. ಸಮುದ್ರ ವ್ಯಾಪಾರದ ಸಂಪೂರ್ಣ ಸ್ವಾಮ್ಯ ಪೋರ್ಚುಗೀಸರಿಗೆ ದಕ್ಕಿದ್ದರಿಂದ ವಿಜಯನಗರದ ವರ್ತಕರ ಮತ್ತು ವಿದೇಶಿ ಮಾರುಕಟ್ಟೆಗೆ ಹತ್ತಿ ಇತ್ಯಾದಿಗಳನ್ನು ಬೆಳೆಯುತ್ತಿದ್ದ ರೈತಾಪಿಯ ಬವಣೆ ಹೆಚ್ಚಾಯಿತು. ಮತ್ತೊಂದು ಕಡೆ ಗೋವಾದ ದಕ್ಷಿಣದ ಕರಾವಳಿಯ ಕಡೆ ಆಕ್ರಮಣ ಪ್ರಾರಂಭಿಸಿದ ಪೋರ್ಚುಗೀಸರು ಮಂಗಳೂರು, ಬಸ್ರೂರು, ಉಲ್ಲಾಳಗಳ ಸತತವಾಗಿ ಹತಾರು ಬಾರಿ ದಾಳಿ ಮಾಡಿ ಮುಸ್ಲಿಮ ವರ್ತಕರನ್ನು ಮತ್ತು ಹಿಂದೂ ಸಾಮಾನ್ಯರನ್ನು ಕಗ್ಗೊಲೆಮಾಡಿದರು. ಇಷ್ಟೆಲಾ ಬರ್ಬರ ಹತ್ಯಾಕಾಂಡದ ಮೂಲಕ ಪೋರ್ಚುಗೀಸರು ಭಾರತದಲ್ಲಿ ಭದ್ರವಾಗಿ ನೆಲೆಯೂರಿದರು. ಹೀಗಾಗಿ ಈ ದೇಶದಲ್ಲಿ ವಸಾಹತುಶಾಹಿಗಳು ಬಲವಾಗಿ ಬೇರೂರುವ ನೆಲೆ ಒದಗಿಸಿದ್ದರಲ್ಲೂ ಶ್ರೀಕೃಷ್ಣದೇವರಾಯನ ಕೊಡುಗೆಯಿದೆ. ಇದರರ್ಥ ಆದಿಲ್ ಶಾಹಿ ಮಹಾ ದೇಶಭಕ್ತನೆಂದೇನೂ ಅಲ್ಲ. ವಾಸ್ತವೆಂದರೆ ಆ ಕಾಲಘಟ್ಟದಲ್ಲಿ ಇನ್ನೂ ದೇಶ, ರಾಷ್ಟ್ರ ಇನ್ನಿತ್ಯಾದಿ ಆಧುನಿಕ ಭಾವನೆಗಳು ಜನಿಸಿಯೇ ಇರಲಿಲ್ಲ. ಅದೇ ರೀತಿ ಇಂದು ಬಣ್ಣಿಸುವಂತೆ ಹಿಂದೂಸಾಮ್ರಾಜ್ಯದ ರಕ್ಷಣೆ, ಮುಸ್ಲಿಮರ ಆಕ್ರಮಣವೆಂಬ ಪರಿಕಲ್ಪನೆಗಳು ಇರಲಿಲ್ಲ.

ಹೀಗಾಗಿ ಎಲ್ಲಾ ರಾಜರಂತೆ ಶ್ರೀಕೃಷ್ಣದೇವರಾಯನೂ ಸಹ ಆ ಕಾಲದ ಶಕ್ತಿಗಳಾಗಿದ್ದ ಬ್ರಾಹ್ಮಣಶಾಹಿ ಭೂಮಾಲಿಕರ ಮತ್ತು ವರ್ತಕರ ಹಿತವನ್ನು ರಕ್ಷಿಸಲು ರಾಜ್ಯಭಾರ ಮಾಡಿದ. ಈಪ್ರಕ್ರಿಯೆಯಲ್ಲಿ ರೈತಾಪಿಯನ್ನು ಆ ಕಾಲದ ಎಲ್ಲಾ ರಾಜರಂತೆ ಅವನೂ ಸುಲಿದಿದ್ದ. ಇದರಲ್ಲಿ ಸಾಮಾನ್ಯ ಜನರು ಸಂಭ್ರಮಪಡುವ ಯಾವುದೇ ಸುವರ್ಣಯುಗವಿಲ್ಲ. ಇವ್ಯಾವುದೂ ಈ ರಾಜುರುಗಳ ವ್ಯಕ್ತಿಗತ ದುಷ್ಟತನದಿಂದ ಮಾತ್ರ ಸಂಭವಿಸಿದ್ದಲ್ಲ. ಅಥವಾ ಇದರ ಹಿಂದೆ ಯಾವುದೇ ಕೋಮುವಾದಿ ಕಾರಸ್ಥಾನವಿತ್ತೆಂದೂ ಅಲ್ಲ. ಇತಿಹಾಸದ ಯಾವುದೇ ಕಾಲಘಟ್ಟದಲ್ಲಿ ಆಳುವ ಪ್ರಭುಗಳು ಆ ಕಾಲದ ಶೋಷಕ ವರ್ಗಗಳ ಪರವಾಗಿಯೇ ರಾಜ್ಯಭಾರ ಮಾಡುತ್ತಾರೆ. ಶ್ರೀಕೃಷ್ಣದೇವರಾಯನೂ ಅಷ್ಟೆ. ಯಡಿಯೂರಪ್ಪನೂ ಅಷ್ಟೆ. ಆದಿಲ್ ಶಾನೂ ಅಷ್ಟೆ. ಅಂದಿನ ಕಾಲಘಟ್ಟದ ಶೋಷಕ ವರ್ಗಗಳ ಹಿತವನು ಕಾಯ್ದ ಶ್ರೀಕೃಷ್ಣದೇವರಾಯ ಜನರು ಸಂಭ್ರಮಿಸಬೇಕಾದ ರಾಜನೇನೂ ಅಲ್ಲ. ಅವನ ಆಳ್ವಿಕೆ ಸುವರ್ಣಯುಗವೂ ಅಲ್ಲ. ಅದು ಬ್ರಾಹ್ಮಣಶಾಹಿ ಊಳಿಗಮಾನ್ಯತೆಯ ಸುವರ್ಣ ಯುಗ.

ಶ್ರೀಕೃಷ್ಣದೇವರಾಯ ಪ್ರತಿನಿಧಿಸುತ್ತಿದ್ದದ್ದು ಈ ಶಕ್ತಿಗಳನ್ನೇ. ಹೀಗಾಗಿ ಪ್ರಜಾಸತ್ತೆಯನ್ನು ಗೌರವಿಸುವ ಯಾರೂ ಅದೇ ಸಮಯದಲ್ಲಿ ಶ್ರೀಕೃಷ್ಣದೇವರಾಯನನ್ನಾಗಲೀ, ವಿಜಯನಗರ ಸಾಮ್ರಾಜ್ಯವನಾಗಲೀ ಸಂಭ್ರಮಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರಜಾಸತ್ತೆ ಹುಟ್ಟಿದ್ದೇ ಈ ಶಕ್ತಿಗಳನ್ನು ನಾಶಮಾಡಿ. ಪ್ರಜಾಸತ್ತೆಯ ಇಂದಿನ ಕಾಲಘಟ್ಟದಲ್ಲಿ ನಾವು ಕಲಿಯಬೇಕಾದ ಪಾಠವಾದರು ಇದೇ. ಆದರೆ ಇಂದೂ ಶ್ರೀಕೃಷ್ಣದೇವರಾಯ ಮತ್ತು ಅವನ ಊಳಿಗಮಾನ್ಯ ರಾಜ್ಯಭಾರವನ್ನೇ ಸುವರ್ಣಯುಗವೆಂದು ಹೇಳುತ್ತಾ ಜನರನ್ನು ಮೋಸಮಾಡಲು ಹೊರಟಿರುವವರು ಮಾತ್ರ ಈ ಕಾಲಕ್ಕೂ ನಿಜವಾದ ವಿಲನ್‌ಗಳೇ ಆಗಿದ್ದಾರೆ. ಅಲ್ಲವೇ!. □

ಕಮ್ಯೂನಿಸ್ಟ್ ಚಳುವಳಿ ಮತ್ತು ದಲಿತ ಚಳುವಳಿಯ ನಡುವೆ

ಡಾ|| ಕಾ. ವೆಂ. ಶ್ರೀನಿವಾಸಮೂರ್ತಿ

ಕಮ್ಯೂನಿಸ್ಟ್ ಚಳುವಳಿ ಮತ್ತು ದಲಿತ ಚಳುವಳಿ; ಎರಡೂ ಓದು ಮತ್ತು ಕ್ರಿಯೆಗಳ ನೆಲೆಯಲ್ಲಿ ರಪುಗೊಂಡವುಗಳಾಗಿವೆ. ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್‌ವಾದ ಇಲ್ಲಿಯ 'ಓದು'ಗಳಾದರೆ, ಸಿದ್ಧಾಂತ ಮೂಲದ 'ಕ್ರಿಯೆ' ಚಳುವಳಿಯಾಗಿದೆ. ಇಂತಹ ಹಿನ್ನೆಲೆ ಇವತ್ತಿನ 'ಜನಪ್ರಿಯ' ರಾಜಕೀಯ ಪಕ್ಷಗಳಿಗೆ ಇಲ್ಲವಾದ್ದರಿಂದ ಇಲ್ಲಿಯ ಕಾರ್ಯಕರ್ತರಿರಲಿ ನಾಯಕರು ಕೂಡ ಒಂದೇ ರಾತ್ರಿಯಲ್ಲಿ, ಒಂದೇ ಸಿಟ್ಟಿಂಗ್‌ನಲ್ಲಿ ಬದಲಾಗುವುದು ಸಾಧ್ಯವಾಗಿದೆ. ಹಣ ಮತ್ತು ವ್ಯವಹಾರಪ್ರಜ್ಞೆ ಇಲ್ಲಿಯ ಮುಖ್ಯ ಸಿದ್ಧಾಂತವಾಗಿದೆ. ಆದರೆ ಮೇಲೆ ಪ್ರಸ್ತಾಪಿಸಿದ ಎರಡೂ ಚಳುವಳಿಗಳ ಜನ ಬುಡಮಟ್ಟದಿಂದ ಬೌದ್ಧಿಕವಾಗಿ ರೂಪುಗೊಂಡು ಕ್ರಿಯಾತ್ಮಕ ನೆಲೆಯಲ್ಲಿ ಗಟ್ಟಿಗೊಂಡಿದ್ದರಿಂದ ಅವರಲ್ಲಿ ಏರ್ಪಟ್ಟ ತತ್ವಬದ್ಧತೆ ಹೆಚ್ಚು ಗಟ್ಟಿಯಾದುದಾಗಿರುತ್ತದೆ.

ಕರ್ನಾಟಕವನ್ನು ಒಳಗೊಂಡಂತೆ ಕಮ್ಯೂನಿಸ್ಟ್ ಚಳುವಳಿ ಮತ್ತು ದಲಿತ ಚಳುವಳಿಯ ನಡುವೆ ಬಿರುಕೊಂದು ಎಂದಿನಿಂದಲೂ ಇದೆ. ಇದು ತತ್ವ ಮತ್ತು ಕಾರ್ಯವಿಧಾನಕ್ಕೆ ಸಂಬಂಧಿಸಿದುದೇ ವಿನಃ ಗುರಿಗೆ ಸಂಬಂಧಿಸಿದ್ದಲ್ಲ. ಇದನ್ನು ತಿಳಿದುಕೊಂಡ ಎರಡೂ ಚಳುವಳಿಗಳ ಜನ ಪರಸ್ಪರ ಸಹಾನುಭೂತಿ ಇಟ್ಟುಕೊಂಡು ನಡೆದಿದ್ದಾರೆ. ಪ್ರತಿಗಾಮಿ ಶಕ್ತಿಗಳು ಎದ್ದು ನಿಂತಾಗ ಇವರಿಬ್ಬರೂ ಕೂಡಿ ಹೋರಾಟವನ್ನು ಸಹ ಮಾಡಿದ್ದಾರೆ. ಇಂತಹ 'ಸಖ್ಯದ ಆಖ್ಯಾನ'ದಲ್ಲಿ ವ್ಯವಸ್ಥೆಯನ್ನು ಕುರಿತ 'ವ್ಯಾಖ್ಯಾನ' ಇಬ್ಬರಲ್ಲಿಯೂ ವಿಭಿನ್ನವಾಗಿರುವುದು ಕೆಲವು ಚರ್ಚೆಗಳಿಗೆ ಗ್ರಾಸ ನೀಡಿದೆ.

ಕಮ್ಯೂನಿಸ್ಟ್ ಚಳುವಳಿ ಮತ್ತು ದಲಿತ ಚಳುವಳಿ; ಎರಡೂ ಓದು ಮತ್ತು ಕ್ರಿಯೆಗಳ ನೆಲೆಯಲ್ಲಿ ರಪುಗೊಂಡವುಗಳಾಗಿವೆ. ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್‌ವಾದ ಇಲ್ಲಿಯ 'ಓದು'ಗಳಾದರೆ, ಸಿದ್ಧಾಂತ ಮೂಲದ 'ಕ್ರಿಯೆ' ಚಳುವಳಿಯಾಗಿದೆ. ಇಂತಹ ಹಿನ್ನೆಲೆ ಇವತ್ತಿನ 'ಜನಪ್ರಿಯ' ರಾಜಕೀಯ ಪಕ್ಷಗಳಿಗೆ ಇಲ್ಲವಾದ್ದರಿಂದ ಇಲ್ಲಿಯ ಕಾರ್ಯಕರ್ತರಿರಲಿ ನಾಯಕರು ಕೂಡ ಒಂದೇ ರಾತ್ರಿಯಲ್ಲಿ, ಒಂದೇ ಸಿಟ್ಟಿಂಗ್‌ನಲ್ಲಿ ಬದಲಾಗುವುದು ಸಾಧ್ಯವಾಗಿದೆ. ಹಣ ಮತ್ತು ವ್ಯವಹಾರಪ್ರಜ್ಞೆ ಇಲ್ಲಿಯ ಮುಖ್ಯ ಸಿದ್ಧಾಂತವಾಗಿದೆ. ಆದರೆ ಮೇಲೆ ಪ್ರಸ್ತಾಪಿಸಿದ ಎರಡೂ ಚಳುವಳಿಗಳ ಜನ ಬುಡಮಟ್ಟದಿಂದ ಬೌದ್ಧಿಕವಾಗಿ ರೂಪುಗೊಂಡು ಕ್ರಿಯಾತ್ಮಕ ನೆಲೆಯಲ್ಲಿ ಗಟ್ಟಿಗೊಂಡಿದ್ದರಿಂದ ಅವರಲ್ಲಿ ಏರ್ಪಟ್ಟ ತತ್ವಬದ್ಧತೆ ಹೆಚ್ಚು ಗಟ್ಟಿಯಾದುದಾಗಿರುತ್ತದೆ. ಆದ್ದರಿಂದಲೇ ಇವರ ಮಾತಿಗೆ ತೂಕ ಹೆಚ್ಚು ಮತ್ತು ಇಂತಹ ಮಾತುಗಳು 'ಜನಪ್ರಿಯ'ವಲ್ಲದ್ದರಿಂದ ಇವರು ಮಧ್ಯಮ ಚಿಂತನೆಗಳ ಜನರಿಗೆ ಹೆಚ್ಚು ದೂರವೂ ಹೌದು.

ಹೀಗೆ ಸಾಮಾಜಿಕ ನೆಲೆಯಲ್ಲಿ ಮಹತ್ವವನ್ನುಳಿಸಿಕೊಂಡಿರುವ ಇವರ ನಡುವೆ ಏರ್ಪಟ್ಟ ಸಣ್ಣ ಬಿರುಕಿಗೆ ಬೆಸುಗೆ ಹಾಕುವ ಮನಸ್ಸಿನವರೂ ಇದ್ದಾರೆ, ಇವರು ಹೆಚ್ಚು ಸಾಮಾಜಿಕ ಜವಾಬ್ದಾರಿಯಿಂದ ವರ್ತಿಸುವ ಜನರಾಗಿದ್ದಾರೆ. ಇದಕ್ಕೆ ವಿರುದ್ಧವಾಗಿ ಇರುವ ಮತ್ತು ಅಂತರವನ್ನೇ ದೊಡ್ಡದನ್ನಾಗಿ ಮಾಡಿ ಪ್ರತಿಗಾಮಿ ಶಕ್ತಿಗಳಿಗೆ ಸಂತೋಷವನ್ನುಂಟು ಮಾಡುವ ಮುಗ್ಧ ಮತ್ತು ಮುಗ್ಧರಲ್ಲದ ಜನರೂ ಪ್ರತ್ಯೇಕವಾಗಿ ಇದ್ದಾರೆ.

ಕಮ್ಯೂನಿಸ್ಟ್ ಚಳುವಳಿ ಮಾರ್ಕ್ಸ್‌ವಾದವನ್ನು ಅಂತಿಮ ಎಂದು ನಂಬಿದೆ. ಭಾರತದ ಬದಲಾವಣೆ ಕೂಡ ಇದರಿಂದ ಸಾಧ್ಯ ಎಂದು ಇದರ ನಂಬುಗೆ ಮತ್ತು ವಿಶ್ವಾಸ, ಮಾರ್ಕ್ಸ್‌ವಾದ ಹುಟ್ಟಿದ ದೇಶಗಳ ವರ್ಗ ಸಮಸ್ಯೆ ಇಲ್ಲಿಯೂ ಇದೆ. ಇದರೊಂದಿಗೆ ಇಲ್ಲಿ ಪ್ರತ್ಯೇಕ ಚಹರೆಯಲ್ಲಿ ಅಸ್ತಿತ್ವವನ್ನು ತೋರುವ ಜಾತಿ ಎಂಬ ಸಾಮಾಜಿಕ ಪಿಡುಗು ಸಹ ಇದೆ. ಉಳಿದಂತೆ ಜಗತ್ತಿನ ಅನೇಕ ಎಡೆಗಳಲ್ಲಿ ಕಾಣುವ ಲಿಂಗ, ಧರ್ಮದ ಪ್ರಶ್ನೆಗಳಂತೂ ಇದ್ದೇ ಇವೆ. ಹೀಗೆ ಇಲ್ಲಿ ವ್ಯಾಪಕವಾಗಿ ಅಸ್ತಿತ್ವವನ್ನು ಪಡೆದಿರುವ ಈ ಎಲ್ಲ ಸಾಮಾಜಿಕ ಪ್ರಶ್ನೆಗಳು ವರ್ಗ ಎಂಬ ಒಂದೇ ಸಾಮಾಜಿಕ ಪ್ರಶ್ನೆಯಲ್ಲಿ ಅಡಕವಾಗಿದೆ ಎಂದು ಮಾರ್ಕ್ಸ್‌ವಾದ ನಂಬಿದೆ. ಆದ್ದರಿಂದಲೇ ಭಾರತದ ಕಮ್ಯೂನಿಷ್ಟ್ ಜಗತ್ತಿನಲ್ಲಿ ಈ ಎಲ್ಲ ಪ್ರಶ್ನೆಗಳನ್ನೂ ಕುರಿತ ಪ್ರತ್ಯೇಕ ಘಟಕಗಳಾಗಲೀ ಅವುಗಳಿಂದ ರೂಪಿತಗೊಂಡ ಸಾಂದ್ರ ಕಾರ್ಯಕ್ರಮಗಳಾಗಲೀ ಇಲ್ಲ. ಈ ಸಮಸ್ಯೆಗಳು ಉದ್ಭವಿಸಿದಾಗ ಕಾರ್ಯಕ್ರಮಗಳು ನಡೆದಿವೆ. ಆದರೆ ಅವೆಲ್ಲವೂ ವರ್ಗ ವಿಶ್ಲೇಷಣೆಯ ಮೂಸೆಯದ್ದೇ ಆಗಿದೆ. ಇದು ಭಾರತದ ಕಮ್ಯೂನಿಸ್ಟ್ ಚಳುವಳಿಯ ಜಾಯಮಾನವಾಗಿ ನಡೆದು ಬಂದಿದೆ.

ಕಮ್ಯೂನಿಸ್ಟ್ ಚಳುವಳಿ ಎಂದಾಗ ಭಾರತೀಯ ಸಂದರ್ಭದಲ್ಲಿ ಅದು ಭಾರತದ ಕಮ್ಯೂನಿಸ್ಟ್ ಚಳುವಳಿ ಎಂದು ಕರೆಸಿಕೊಳ್ಳುತ್ತದೆ. ಆದರೆ ದಲಿತ ಚಳುವಳಿ ಎಂದಾಗ ಅದನ್ನು ಭಾರತದ ದಲಿತ ಚಳುವಳಿ ಎಂದು ಕರೆಯಬೇಕಾದ ಅಗತ್ಯವೇರ್ಪಡುವುದಿಲ್ಲ. ಏಕೆಂದರೆ ಜಗತ್ತಿನ ನಕ್ಷೆಯಲ್ಲಿ ಜಾತಿ ಇರುವುದು ಭಾರತ ಎಂಬ ಹೆಸರು ಕಾಣುವಲ್ಲಿ ಮಾತ್ರ, ಅದಕ್ಕಾಗಿ ಇದನ್ನು ಭಾರತ ದೇಶ ಎಂದೇನೂ? ಕರೆಯಬೇಕಾದುದಿಲ್ಲ. ಜಾತಿದೇಶ ಎಂದರೂ ಸಾಕು ಅದು ಪ್ರಪಂಚದ ಜನರಿಗೆ ತಿಳಿಯುತ್ತದೆ.

ಹೀಗೆ ಜಗತ್ತಿನಾದ್ಯಂತ ಇರುವ ಲಿಂಗ, ಧರ್ಮ ವರ್ಗದ ಪ್ರಶ್ನೆಗಳು ಭಾರತದಲ್ಲಿಯೂ ಇದ್ದು, ಇದರೊಂದಿಗೆ ಇರುವ ಜಾತಿಯನ್ನು ದಲಿತ ಚಳುವಳಿ ವಿಶೇಷ ವಾಗಿ ಲಕ್ಷಿಸುತ್ತದೆ.

ವರ್ಗ ಎಂಬುದು ಒಂದು ಬಗೆಯಲ್ಲಿ ಕಂಪ್ಯೂಟರ್ ಇದ್ದಂತೆ. ಇದು ಕೈಗೆ ಸಿಗುತ್ತದೆ. ಆದ್ದರಿಂದ ಇದನ್ನು ಮುಟ್ಟಿ ಹೇಗೆ ಬೇಕೊ

ಹಾಗೆ ಉತ್ತಮವೆನ್ನುವಂತೊ ಹಾಳು ಎನ್ನುವಂತೊ ಬೇಕಾದ ಹಾಗೆ ಸಂಯೋಜಿಸಬಹುದು. ಆದರೆ ಇದರೊಳಗೆ ಇರುವ ಸಾಫ್ಟ್‌ವೇರ್ ಇದ್ದೆಯಲ್ಲ ಇದನ್ನು ಮುಟ್ಟಲು ಬರುವುದೇ ಇಲ್ಲ. ಅದು ಕಣ್ಣಿಗೆ ಕಾಣುತ್ತದೆ. ಬದಲಾಯಿಸಬೇಕೆಂದು ಕೈಯಿಟ್ಟರೂ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಅಲ್ಲಿ ಅಸಹಾಯಕತೆ ಏರ್ಪಟ್ಟು ಬಿಡುತ್ತದೆ. ಇದು ಸಾಮಾನ್ಯ ಕಂಪ್ಯೂಟರ್ ನಿರ್ವಾಹಕನನ್ನು ಕುರಿತ ಮತ್ತು ಆ ನೆಲೆಯಲ್ಲಿ ನುಡಿದ ಮಾತು ಮಾತ್ರ. ಹಾಗಾಗಿಯೇ ಕೆಳ ವರ್ಗದ ವ್ಯಕ್ತಿ ನಾಳೆಯೇ ಕೋಟ್ಯಾಧಿಪತಿ ಆಗಬಹುದು. ಕೋಟ್ಯಾಧಿಪತಿಯಾದವನು ನಾಡಿದ್ದು ಭಿಕ್ಷಾಧಿಪತಿಯೂ ಆಗಬಹುದು. ಆದರೆ ಊರಾಚೆಯ ವ್ಯಕ್ತಿ ಉಪ ಪ್ರಧಾನಿಯಾದರೂ ಆತ ಜಗಜೀವನರಾಮ್ ಮಾತ್ರ; ಇಲ್ಲಿಯ ಸಾಮಾಜಿಕ ಕಣ್ಣಿಗೆ ಇಂಥಲ್ಲಿ ಮತಾಂತರ, ಬೌದ್ಧ ಮತ ಸ್ವೀಕಾರ ಎಂಬುವು ನೀಡುವ ಸಾಮಾಜಿಕ ಉಪಶಮನ ಆತ್ಯಂತಿಕ ಅಲ್ಲವಾದರೂ ಅತ್ಯಂತ ಗಮನಾರ್ಹವಾದುದಾಗಿದೆ. ಆದ್ದರಿಂದ ಇಷ್ಟು ಭೀಕರವಾಗಿರುವ ಜಾತಿ ಪ್ರಶ್ನೆ ವರ್ಗದಲ್ಲಿಯೇ ಅಡಕವಾಗಿದೆಯೇ? ಅಥವಾ ಈ ಪ್ರಶ್ನೆಗೆ 'ವರ್ಗ'ದಲ್ಲಿಯೇ ಉತ್ತರವಿದೆಯೇ– ಇದನ್ನು ಚಿಂತಿಸಬೇಕು.

ಅಲ್ಲಿ ಕಂಡುಕೊಳ್ಳಲಾಗುವ ಉತ್ತರಗಳು ಕೇವಲ ಮಾರ್ಕ್ಸ್‌ವಾದವಲ್ಲ; ಭಾರತೀಯ ಮಾರ್ಕ್ಸ್‌ವಾದವಾಗುತ್ತದೆ. ಈ ನಿಟ್ಟಿನಲ್ಲಿ ಸಹ ಕೆಲವೇ ಕೆಲವು ಮಾರ್ಕ್ಸ್‌ವಾದಿಗಳು ಮಾತನಾಡಿದ್ದಾರೆ. ಭಾರತದಲ್ಲಿ ವರ್ಗ ಕೇಂದ್ರಿತ ಆರ್ಥಿಕ ಸಂಘರ್ಷದೊಂದಿಗೆ ಜಾತಿ ಕೇಂದ್ರಿತ ಸಾಮಾಜಿಕ ಸಂಘರ್ಷ ಆಗಬೇಕು ಎಂಬುದು ಇವರ ಮಾತಿನ ತಿರುಳಾಗಿದೆ. ಆದರೆ ಆ ನಿಟ್ಟಿನಲ್ಲಿ ಭಾರತೀಯ ಕಮ್ಯೂನಿಸ್ಟ್ ಚಳುವಳಿಯ ರಾಜಕೀಯ ಪಕ್ಷಗಳು ರೈತ ಘಟಕಗಳನ್ನು ಮಾಡಿಕೊಂಡಂತೆ, ಕಾರ್ಮಿಕ ಘಟಕಗಳನ್ನು ಮಾಡಿಕೊಂಡಂತೆ ದಲಿತ ಸಮುದಾಯ ಅಂತೆಯೇ ಹಿಂದುಳಿದ ಜಾತಿಗಳಿಗೊಂದು ಘಟಕ ಮಾಡಿಕೊಳ್ಳದಿರುವುದು ಈ ರಾಜಕೀಯ ಪಕ್ಷಗಳ ಮಿತಿಯಾಗಿ ಕಾಣುತ್ತದೆ.

ಈ ಮಾತು ಎಲ್ಲಿ ಹುಟ್ಟಿದೆಯೆಂದರೆ, ಭಾರತದಲ್ಲಿ ವರ್ಗ ಕೇಂದ್ರಿತ ಆರ್ಥಿಕ ಸಂಘರ್ಷ–ಜಾತಿ ಕೇಂದ್ರಿತ ಸಾಮಾಜಿಕ ಸಂಘರ್ಷ ಆಗಬೇಕು ಎಂಬ ಮಾರ್ಕ್ಸ್‌ವಾದಿಗಳ ಮಾತುಗಳು ಕೇಳಿಬಂದಾಗ,. ಇವರ ಮಾತುಗಳು ಸ್ವತಃ ಈ ಪಕ್ಷಗಳಿಗೆ ಸರಿಯಾಗಿ ಮನವರಿಕೆಯಾಗಲಿಲ್ಲವೇ ಅಥವಾ ಅದಕ್ಕೆ ಬೇಕಾದ ಬೌದ್ಧಿಕ ತರಬೇತಿಯನ್ನು ಇಲ್ಲಿಯ ಥಿಂಕ್‌ಟ್ಯಾಂಕ್ ನೀಡಲಿಲ್ಲವೇ ಎಂಬ ಪ್ರಶ್ನೆಗಳು ಇಲ್ಲಿ ಮೂಡುತ್ತವೆ. ಇಲ್ಲಿ ಕೇವಲ ವರ್ಗವೊಂದೇ ಅಂತಿಮ ಸತ್ಯ ಎಂದು ಹೊರಟಾಗ ಈ ಪ್ರಶ್ನೆಗಳು ಏರ್ಪಡುವುದಿಲ್ಲ. ಆದರೆ ವರ್ಗಕ್ಕೆ ನೀಡಿದಷ್ಟೇ ಪ್ರಾಧಾನ್ಯತೆಯನ್ನು ಜಾತಿಗೆ ನೀಡಿದಾಗ ಅಥವಾ ಅದನ್ನು ಅದಕ್ಕೆ ಸಮಾನ ನೆಲೆಯಲ್ಲಿಗ್ರಹಿಸಿದಾಗ ಈ ಎಲ್ಲ ಪ್ರಶ್ನೆಗಳು ಮೂಡುವುದು.

ಮಾರ್ಕ್ಸ್ ಮತ್ತು ಏಂಗೆಲ್ಸ್ ಪ್ರಣೀತ ಮಾರ್ಕ್ಸ್‌ವಾದವು ಜಗತ್ತಿನ ವರ್ಗ ಕಲ್ಪನೆಯನ್ನು ವೈಜ್ಞಾನಿಕವಾಗಿ ಮಂಡಿಸಿದೆ. ಇದರೊಂದಿಗೆ ಇದನ್ನು ಸಾಕಾರಗೊಳಿಸುವ ವಿಧಾನವನ್ನು ಸಹ ತೋರಿದೆ. ಈ ದಾರಿಯಲ್ಲಿ ನಡೆದ ರಾಷ್ಟ್ರಗಳು ಸಹ ಆಧುನಿಕ ಚರಿತ್ರೆಯಲ್ಲಿ ಸ್ಪಷ್ಟವಾಗಿ ಕಂಡಿವೆ. ಈ ವರ್ಗ ಕಲ್ಪನೆಯೊಂದಿಗೆ ವಿವಿಧ ಜ್ಞಾನಶಾಖೆಗಳಿಗೆ ಬೇಕಾದ ಅಗತ್ಯ ಪೂರ್ವ ಪಾಠಗಳನ್ನು ಸಹ ಇದು ನಿರ್ಮಿಸಿರುವುದರಿಂದ ಇದರ ಅಂಗೀಕಾರಾರ್ಹತೆಗೆ ಎಣೆಯಿಲ್ಲದಂತಾಗಿದೆ. ಹಾಗಾಗಿ ಇದು ಭಾರತಕ್ಕೆ ಬೇಕು.

ವರ್ಗ ಎಂಬುದು ಒಂದು ಬಗೆಯಲ್ಲಿ ಕಂಪ್ಯೂಟರ್ ಇದ್ದಂತೆ. ಇದು ಕೈಗೆಸಿಗುತ್ತದೆ. ಆದ್ದರಿಂದ ಇದನ್ನು ಮುಟ್ಟಿ ಹೇಗೆ ಬೇಕೊ ಹಾಗೆ ಉತ್ತಮವೆನ್ನುವಂತೊ ಹಾಳು ಎನ್ನುವಂತೊ ಬೇಕಾದ ಹಾಗೆ ಸಂಯೋಜಿಸಬಹುದು. ಆದರೆ ಇದರೊಳಗೆ ಇರುವ ಸಾಫ್ಟ್‌ವೇರ್ ಇದೆಯಲ್ಲ ಇದನ್ನು ಮುಟ್ಟಲು ಬರುವುದೇ ಇಲ್ಲ. ಅದು ಕಣ್ಣಿಗೆ ಕಾಣುತ್ತದೆ. ಬದಲಾಯಿಸ ಬೇಕೆಂದು ಕೈಯಿಟ್ಟರೂ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಅಲ್ಲಿ ಅಸಹಾಯಕತೆ ಏರ್ಪಟ್ಟು ಬಿಡುತ್ತದೆ.

ಇದು ಸಾಮಾನ್ಯ ಕಂಪ್ಯೂಟರ್ ನಿರ್ವಾಹಕನನ್ನು ಕುರಿತ ಮತ್ತು ಆ ನೆಲೆಯಲ್ಲಿ ನುಡಿದ ಮಾತು ಮಾತ್ರ. ಹಾಗಾಗಿಯೇ ಕೆಳ ವರ್ಗದ ವ್ಯಕ್ತಿ ನಾಳೆಯೇ ಕೋಟ್ಯಾಧಿಪತಿ ಆಗಬಹುದು. ಕೋಟ್ಯಾಧಿಪತಿಯಾದವನು ನಾಡಿದ್ದು ಭಿಕ್ಷಾಧಿಪತಿಯೂ ಆಗಬಹುದು.

ಇದು ನಿರ್ಮಿಸಿರುವ ಪಾಠಗಳೊಂದಿಗೆ ಇವುಗಳ ನಿರ್ಮಾತೃಗಳಿಂದಲೇ ಭಾರತದ ಇನ್ನೊಂದು ಸಾಮಾಜಿಕ ಸಮಸ್ಯೆಯಾದ 'ಜಾತಿ'ಯನ್ನು ಕುರಿತ ವಿಶ್ಲೇಷಣೆಯಾಗಲೀ ಇದನ್ನು ಮೀರುವಿಕೆಯ ಪಾಠಗಳನ್ನಾಗಲೀ ಯಾರೇ ಆಗಲಿ ನಿರ್ಲಕ್ಷಿಸಲಾಗುವುದಿಲ್ಲ. ಹಾಗೊಮ್ಮೆ ಇವರು ಅಥವಾ ಇವರಂತೆ ಸಾಮಾಜಿಕ ಕಳಕಳಿಯುಳ್ಳ ಹೊರದೇಶದ ಯಾರೇ ಆದರೂ ಇದನ್ನು ಗ್ರಹಿಸಿ, ವಿವರಿಸಿ, ಪರಿಹಾರೋಪಾಯಗಳನ್ನು ಮಂಡಿಸಿದರೆ ಅದನ್ನು ಯಾರೂ ಬೇಡ ಎನ್ನುವುದಿಲ್ಲ. ಬದಲಿಗೆ ಅತ್ಯಂತ ಸಂತೋಷದಿಂದ ಅದನ್ನು ಸ್ವಾಗತಿಸುತ್ತಾರೆ. ಆದರೆ ಇದು ಇದುವರೆಗಿನ ಚರಿತ್ರೆಯಲ್ಲಿ ಸಾಧ್ಯವಾಗಿಲ್ಲ.

ಭಾರತದ ಈ ಸಮಾಜಿಕ ಪ್ರಶ್ನೆಯನ್ನು ಅತ್ಯಂತ ಮೊದಲಿಗೆ ವ್ಯಾಪಕ ಅಧ್ಯಯನದಿಂದ ತಿಳಿದು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಮಂಡಿಸಿದವರಲ್ಲಿ ಬಿ.ಆರ್.ಅಂಬೇಡ್ಕರ್ ಅವರು ಮೊದಲಿಗರಾಗಿ ಕಾಣುತ್ತಾರೆ. ಇದಕ್ಕೆ ಸಂಬಂಧಿಸಿದ ಸಾವಿರಾರು ಪುಟಗಳ ಅನೇಕ ಶೀರ್ಷಿಕೆಗಳಲ್ಲಿ 'ಜಾತಿ ವಿನಾಶ' ಎಂಬ ಸುಮಾರು ಒಂದು ನೂರ ಮೂವತ್ತೈದು ಪುಟಗಳ ಲೇಖನವನ್ನು ಯಾರಾದರೂ ಓದಬೇಕು. ಭಾರತದ ಬಗೆಗೆ ಪ್ರೀತಿಯನ್ನು ಇಟ್ಟುಕೊಂಡವರು ಕಮ್ಯೂನಿಸ್ಟ್ ಮಾನಿಫೆಸ್ಟೋ, ದ್ವಂದ್ವಮಾನ ಭೌತವಾದ ಮೊದಲಾದ ಕೆಲವು ಪುಸ್ತಕಗಳನ್ನು ತಪ್ಪದೇ ಓದಿದಂತೆ ಅಂಬೇಡ್ಕರ್ ಅವರ ಈ ಲೇಖನವನ್ನು ಸಹ ಓದಬೇಕು. ಇಲ್ಲವಾದಲ್ಲಿ ಅದು ಪ್ರಗತಿಪರತೆಯ ಹೆಸರಿನ ಮೂಲಭೂತವೆನ್ನಿಸಿ ಬಿಡುತ್ತದೆ.

ಬಹುಶಃ ಈ ಓದು ಸಾಧ್ಯವಾದಾಗ ಕೆಲವೇ ಮಾರ್ಕ್ಸ್‌ವಾದಿಗಳು ಕಮ್ಯೂನಿಸ್ಟ್ ಲೋಕದಲ್ಲಿ ಅರಣ್ಯರೋದನದಂತೆ ನುಡಿವ ಆರ್ಥಿಕ ಮತ್ತು ಸಾಮಾಜಿಕ ಈ ಎರಡೂ ಸಂಘರ್ಷಗಳಿಗೆ ಸಂಬಂಧಿಸಿದ ಮಾತು ಈ ಚಳುವಳಿಗೆ ಬೇರೊಂದು ಆಯಾಮವನ್ನು ಕಲ್ಪಿಸುವುದು ಸಾಧ್ಯವಾಗುತ್ತದೆ.

ಅಂಬೇಡ್ಕರ್ ಅವರು ಮಾರ್ಕ್ಸ್‌ವಾದವನ್ನು ಅರಿತುಕೊಂಡಿರುವ ಕ್ರಮ ಅವರ ಕರಡು ಸಂವಿಧಾನದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅದಕ್ಕೆ ಭೂ ರಾಷ್ಟ್ರೀಕರಣದಂತಹ ಒಂದು ಪ್ರಸ್ತಾಪವಷ್ಟೇ ಸಾಕು. ಇಂತಹ ವಿಶಾಲ ಓದು, ಮಂಥನ, ತೀರ್ಮಾನ, ಕ್ರಿಯಾಬದ್ಧತೆ ಈ ನೆಲೆಗಳಲ್ಲಿ ಕಾಣುವ ಅಂಬೇಡ್ಕರ್ ವಾದ ಮತ್ತು ಚಳುವಳಿ ಭಾರತದಲ್ಲಿ ಅತ್ಯಂತ ಪ್ರಸ್ತುತವೆನ್ನಿಸಿದೆ. ಈ ಮಾತನ್ನು ನಾನು ಒಪ್ಪಿತ ಸಂವಿಧಾನ ಅಥವಾ ನಾವು ಈಗಾಗಲೇ ಅಂಗೀಕರಿಸಿ, ಆಚರಿಸುತ್ತಿರುವ ಸಂವಿಧಾನದ ಹಿನ್ನೆಲೆಯಲ್ಲಿ ಆಡುತ್ತಿಲ್ಲ. ಇಲ್ಲಿ ಇರುವುದು ಭಾಗಶಃ ಅಂಬೇಡ್ಕರ್ ಅಷ್ಟೇ. ಆದರೆ ಕರಡು ಸಂವಿಧಾನದಲ್ಲಿ ಇರುವ ಅಂಬೇಡ್ಕರ್ ನಮ್ಮ ಹೊಸ ಸಂವಿಧಾನವಾಗಿ ಬರಬೇಕಾಗಿದೆ. ಆ ಸಂವಿಧಾನದಲ್ಲಿ ಇರುವ ಮಾರ್ಕ್ಸ್ ಮತ್ತು ಏಂಗೆಲ್ಸ್ ಯಾರಿಗೇ ಆದರೂ ಸ್ಪಷ್ಟವಾಗಿ ಕಾಣುತ್ತಾರೆ.

ಕಡೆಗೂ ಭಾರತಕ್ಕೆ ಬೇಕಾಗಿರುವುದು ಸಮತಾವಾದಿ ನಿರಂಕುಶ ಪ್ರಭುತ್ವವೋ ಅಥವಾ ಸಮಾಜವಾದಿ ಪ್ರಜಾಪ್ರಭುತ್ವವೋ ಎಂಬ ಮಾತು ಮೂಡಿ ನಿಲ್ಲುತ್ತದೆ.

ಶಾಂತಿನಾಥ ದೇಸಾಯಿಯವರು 'ಓಂ ಣಮೋ' ಕಾದಂಬರಿಯಲ್ಲಿ ಒಂದು ಸಂದರ್ಭದಲ್ಲಿ ಒಂದು ಪಾತ್ರದ ಮೂಲಕ ಆಡಿಸುವ ಮಾತು ಇಲ್ಲಿ ಪ್ರಸ್ತುತವೆನ್ನಿಸುತ್ತದೆ. ಅದು– 'ರೋಗಿ ಗುಣವಾಗುವವರೆಗೆ ತಾನು ವೈದ್ಯನ ನಿರಂಕುಶತ್ವದಲ್ಲಿರಬೇಕು. ಆನಂತರದಲ್ಲಿ ತಾನು ಸ್ವತಂತ್ರನಾಗಬಹುದು' ಎಂಬುದು. ಈ ಹಿನ್ನೆಲೆಯಲ್ಲಿ ಬಂಡವಾಳಶಾಹಿಗಳ ಪಟ್ಟಭದ್ರರ ಹಿಡಿತದಲ್ಲಿರುವ ಇಲ್ಲಿಯ ಬೂರ್ಷ್ವಾ ಪ್ರಜಾಪ್ರಭುತ್ವ ಸಾಕೆನ್ನುವವರೆಗೆ ತೊಲಗಿದರೆ ಅದಕ್ಕೆ ಯಾರೂ ಮೂಲಭೂತವಾದಿ ನೆಲೆಯಲ್ಲಿ ಚಿಂತೆ ಮಾಡಬೇಕಾದುದಿಲ್ಲವೆನ್ನಿಸುತ್ತದೆ. ಈ ಹಿನ್ನೆಲೆಯಲ್ಲಿ ಸಮಾನ ಸಾಮಾಜಿಕ ಬದ್ಧತೆಯನ್ನಿಟ್ಟುಕೊಂಡಿರುವ ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳು ಪರಸ್ಪರ ಸಂವಾದಿಸಿ, ಕೂಡು ಅಲ್ಲ; ಒಂದೇ ಹೆಜ್ಜೆಯನ್ನಿಡಬೇಕಾಗಿದೆ. □

ಬೇಡಜಂಗಮರು ಮಾದಿಗರು; ಮಾಲಜಂಗಮರು ಹೊಲೆಯರು?

ದಾಸನೂರು ಕೂಸಣ್ಣ

ದಿ:22.09.2009 ರಂದು ಡಾ॥ ಎಂ.ಚಿದಾನಂದಮೂರ್ತಿ ಮತ್ತು ಡಾ॥ ಮರುಳಸಿದ್ಧಯ್ಯ ಅವರು ಪತ್ರಿಕೆಯೊಂದರಲ್ಲಿ ನಕಲಿ ಬೇಡ ಜಂಗಮರ ಬಗ್ಗೆ ವಸ್ತುನಿಷ್ಠ ಪ್ರಾಮಾಣಿಕ ಸಾಮಾಜಿಕ ಸತ್ಯಾಂಶ ಗಳನ್ನು ಸಾದರಪಡಿಸಿದ್ದಾರೆ. ಇವರುಗಳ ಅಭಿಮತಗಳಂತೆ, "ಬೇಡ/ಬುಡ್ಗ/ಮಾಲಜಂಗಮರು" ಮೂಲ ಅಸ್ಪೃಶ್ಯರೆನ್ನುವುದು ನೂರಕ್ಕೆ ನೂರ ರಷ್ಟು ಸೂರ್ಯ ಸತ್ಯದಂತಿದೆ. ಇವರು ಪ್ರತಿಪಾದಿಸುವ ಸಾಮಾಜಿಕ ಹಿನ್ನೆಲೆಗಳು ಅರ್ಥಪೂರ್ಣವಾದವು. ಈ ಬೆನ್ನ ಹಿಂದೆಯೆ ಕೆಲವು ಜಂಗಮರು ಡಾ॥ ಚಿ.ಮೂ ವಾದಗಳನ್ನು ವಿರೋಧಿಸಿ, ಅಸಂವಿಧಾನಿಕ ನಿಲುವಗಳೊಂದಿಗೆ ಇವರೆಲ್ಲರೂ ವೀರಶೈವ ಜಂಗಮರೆಂದು ಸಮರ್ಥಸಿಕೊಂಡಿದ್ದಾರೆ. ಮೊದಲು ನಕಲಿ ಬೇಡ ಜಂಗಮರ ಪರಂಪರೆ ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿ ಹುಟ್ಟಿತ್ತು. ಇದರ ಘನಪ್ರಭಾವಳಿಗಳು ಇತರ ನೆರೆಹೊರೆ ರಾಜ್ಯಗಳಾದ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಸಾಮಾಜಿಕ ವಿಷಕಳೆಯಂತೆ ಹುಲುಸಾಗಿ ಬೆಳೆದು ಹಬ್ಬತೊಡಗಿದೆ. ಈ ಬೆಳವಣಿಗೆಗಳಿಂದ ನೈಜ ಬೇಡ ಜಂಗಮರ ಸಂವಿಧಾನಿಕ ಹಕ್ಕುಗಳೆಲ್ಲವೂ ಬಹಿರಂಗವಾಗಿ ಹರಣಗೊಳ್ಳುತ್ತಿವೆ.

ವೀರಶೈವ ಜಂಗಮರ ಪೈಕಿ ಕೆಲವರು 1935ರ ಸಂವಿಧಾನದಲ್ಲಿ ಸೇರಿಸಿರುವ ಪರಿಶಿಷ್ಟಜಾತಿ–ಉಪಜಾತಿಗಳ ಸಾಮಾಜಿಕ ಹಿನ್ನೆಲೆಗಳನ್ನು ಅಷ್ಟೊಂದು ನೈಜ ದೃಷ್ಟಿಕೋನಗಳಿಂದ ಅರಿತಂತೆ ಕಾಣುತ್ತಿಲ್ಲ. ಈ ಮೀಸಲಾತಿಗೆ ಸೇರ್ಪಡೆಯಾದವರೆಲ್ಲರೂ ಮೂಲ ಅಸ್ಪೃಶ್ಯರು, ಪಂಚಮರು, ಅಲೆಮಾರಿಗಳು ಹಾಗೂ ಬುಡಕಟ್ಟು ಆದಿವಾಸಿ ಜಾತಿಗಳಾಗಿದ್ದವು. ರಾಜ್ಯಗಳ ಪುನರ್ ವಿಂಗಡಣೆ ಸಂದರ್ಭದಲ್ಲಿ ದಕ್ಷಿಣರಾಜ್ಯ ಸರ್ಕಾರಗಳಾಗಲಿ, ಕೇಂದ್ರ ಸರ್ಕಾರವಾಗಲಿ (1956ರ ಆದೇಶದಂತೆ) ವೀರಶೈವ ಜಂಗಮರನ್ನು ಪರಿಶಿಷ್ಟ ಜಾತಿಯ ಬೇಡ/ಬುಡ್ಗ/ಮಾಲಜಂಗಮರೆಂದು ಅನುಮೋದಿಸಿಲ್ಲ. ಇವುಗಳೆಲ್ಲವೂ 1935, 1950 ಸಂವಿಧಾನಗಳಲ್ಲಿ ಸೇರ್ಪಡೆಯಾಗಿದ್ದ ಮೂಲಜಾತಿಗಳ ಉಪಜಾತಿಗಳೆಂದು 1956ರಲ್ಲಿ ಅನುಮೋದನೆಗೊಂಡಿವೆ. ಆವಾಗ, ವೀರಶೈವ ಜಂಗಮರನ್ನು ಈ ಮೀಸಲಾತಿಗೆ ಸೇರಿಸಿದ್ದರೆ ಇವರೇಕೆ ಅಂದಿನ ಕೇಂದ್ರ ಸರ್ಕಾರದ ಕಾಕ ಕಾಳೇಕರ್ ಹಿಂದುಳಿದ ವರ್ಗಗಳ ಆಯೋಗ, ರಾಜ್ಯದ ನಾಗನಗೌಡರ್ ಮತ್ತು ಹಾವನೂರು ಆಯೋಗಗಳ ವರದಿಗಳನ್ನು ವಿರೋಧಿಸಿದ್ದರು.

ಅಥವಾ ದಕ್ಷಿಣ ರಾಜ್ಯಗಳಲ್ಲಿರುವ ವೀರಶೈವ ಜಂಗಮರನ್ನು ತದ ನಂತರ ಕೇಂದ್ರ ಸರ್ಕಾರ ಮಂಡಲ ಅಯೋಗದಲ್ಲಿ OBC ಮೀಸಲಾತಿಗೆ ಸೇರಿಸುತ್ತಿತ್ತು? ಸಂವಿಧಾನದಲ್ಲಿ ಒಂದೇ ಸಾಮಾಜಿಕ ಹಿನ್ನೆಲೆಯುಳ್ಳ ಜಾತಿ–ಅದರ ಉಪಜಾತಿಗಳನ್ನು ಎರಡು ಬಗೆಯ ಮೀಸಲಾತಿಗೆ ಸೇರಿಸಲು ಅವಕಾಶವಿಲ್ಲ. ಪರಿಶಿಷ್ಟಜಾತಿ/ಪಂಗಡಗಳ ಮೀಸಲಾತಿಗೆ ಸೇರಿರುವವರ ಸಾಮಾಜಿಕ ಹಿನ್ನೆಲೆಗಳೆ ಬೇರೆ; ಹಿಂದುಳಿದ ವರ್ಗಗಳ ಸಾಮಾಜಿಕ ಹಿನ್ನೆಲೆಗಳೆಲ್ಲವೂ ವಿಭಿನ್ನ. ನಕಲಿ ಬೇಡ ಜಂಗಮರ ಬಗ್ಗೆ ವಕಾಲತ್ತು ವಹಿಸುವವರು ಮೊದಲು ಈ ಸಂವಿಧಾನಿಕ ಸತ್ಯಗಳನ್ನು ಅರಿತರೆ ಒಳಿತು.

ವಾಸ್ತವಿಕವಾಗಿ, ವೀರಶೈವ ಜಂಗಮರು ಲಿಂಗಾಯತ ಸಮುದಾಯದಲ್ಲಿ ಪೂಜ್ಯನೀಯ ಸ್ಥಾನಮಾನಗಳನ್ನು ಹೊಂದಿರುವವರು. ಇವರು ಅವರ ಧಾರ್ಮಿಕ ಮಾರ್ಗದರ್ಶಕರು ಹಾಗೂ ಪುರೋಹಿತರು. ಜಂಗಮರೊಳಗೆ ಅನೇಕ ಉಪಜಾತಿ ಗುಂಪುಗಳಿವೆ. ಮಠ ಸಂಸ್ಕೃತಿಗಳ ಮೂಲಕ ಗುರುತಿಸಿಕೊಳ್ಳುವ ಜಂಗಮರು ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಹೆಚ್ಚಿದ್ದಾರೆ. ಹಾಗೂ ಹಳೆ ಮೈಸೂರು ಪ್ರಾಂತ್ಯಗಳಲ್ಲಿ ಆರಾಧ್ಯರು ಹೆಚ್ಚಿದ್ದಾರೆ. ಇವರೆಲ್ಲರೂ ಸಾಮಾನ್ಯವಾಗಿ ತಮ್ಮ ತಮ್ಮ ಪಂಚಪೀಠಗಳಿಗೆ ನಡೆದುಕೊಳ್ಳುತ್ತಾರೆ (ಬ್ರಾಹ್ಮಣರು ತಮ್ಮ ಮಠಗಳಿಗೆ ನಡೆದುಕೊಳ್ಳುವಂತೆ). ಪ್ರತಿಯೊಂದು ಪೀಠವು ತನ್ನದೆಯಾದ ಪ್ರತ್ಯೇಕ ಸಾಮಾಜಿಕ ಹಿನ್ನೆಲೆ, ಚಿಹ್ನೆ ಹಾಗೂ ಲಾಂಛನಗಳನ್ನು ಹೊಂದಿವೆ. ಇವುಗಳೆಲ್ಲವೂ ಪ್ರತ್ಯೇಕ ಗರು, ಗೋತ್ರ, ಸೂತ್ರ, ದಂಡ, ಕಂಡಲ ಬೀಜಮಂತ್ರ, ಪ್ರವರ, ಶಾಖ, ಕಂತಾ ಹಾಗೂ ವರ್ಣಗಳನ್ನು

ವೀರಶೈವ ಜಂಗಮರ ಪೈಕಿ ಕೆಲವರು ೧೯೩೫ರ ಸಂವಿಧಾನದಲ್ಲಿ ಸೇರಿಸಿರುವ ಪರಿಶಿಷ್ಟಜಾತಿ-ಉಪ ಜಾತಿಗಳ ಸಾಮಾಜಿಕ ಹಿನ್ನೆಲೆಗಳನ್ನು ಅಷ್ಟೊಂದು ನೈಜ ದೃಷ್ಟಿಕೋನಗಳಿಂದ ಅರಿತಂತೆ ಕಾಣುತ್ತಿಲ್ಲ. ಈ ಮೀಸಲಾತಿಗೆ ಸೇರ್ಪಡೆಯಾದವರೆಲ್ಲರೂ ಮೂಲ ಅಸ್ಪೃಶ್ಯರು, ಪಂಚಮರು, ಅಲೆಮಾರಿಗಳು ಹಾಗೂ ಬುಡಕಟ್ಟು ಆದಿವಾಸಿ ಜಾತಿಗಳಾಗಿದ್ದವು. ರಾಜ್ಯಗಳ ಪುನರ್ ವಿಂಗಡಣೆ ಸಂದರ್ಭದಲ್ಲಿ ದಕ್ಷಿಣರಾಜ್ಯ ಸರ್ಕಾರಗಳಾಗಲಿ, ಕೇಂದ್ರ ಸರ್ಕಾರವಾಗಲಿ ವೀರಶೈವ ಜಂಗಮರನ್ನು ಪರಿಶಿಷ್ಟ ಜಾತಿಯ ಬೇಡ/ಬುಡ್ಗ/ಮಾಲಜಂಗ ಮರೆಂದು ಅನುಮೋದಿಸಿಲ್ಲ. ಇವುಗಳೆಲ್ಲವೂ ೧೯೩೫, ೧೯೫೦ ಸಂವಿಧಾನಗಳಲ್ಲಿ ಸೇರ್ಪಡೆಯಾಗಿದ್ದ ಮೂಲಜಾತಿಗಳ ಉಪಜಾತಿಗಳೆಂದು ೧೯೫೬ರಲ್ಲಿ ಅನು ಮೋದನೆಗೊಂಡಿವೆ.

ಹೊಂದಿವೆ. ಅದರೆ, ಅಸ್ಪೃಶ್ಯರಾದ ಬೇಡ/ಬುಡ್ಗ/ಮಾಲ ಜಂಗಮರಿಗೆ ಇಂತಹ ಐತಿಹಾಸಿಕ ಪಂಚಪೀಠಗಳಿಲ್ಲ. ವೀರಶೈವ ಜಂಗಮರೆಲ್ಲರೂ ತಮ್ಮ ಪೀಠಗಳ ನಿಲುವುಗಳಂತೆ ತಮ್ಮ ಧಾರ್ಮಿಕ ವಿಧಿ ವಿಧಾನಗಳನ್ನು ಪರಿಪಾಲಿಸುತ್ತಾರೆ. ಅಸ್ಪೃಶ್ಯ ಜಂಗಮರು 12ನೇ ಶತಮಾನದಲ್ಲಿ ಅಣ್ಣ ಬಸವಣ್ಣ ಅವರ ಪ್ರೇರಣೆಯಿಂದ ಶರಣ ಪಂಥಕ್ಕೆ ಕಾಲಿಟ್ಟದ್ದವರು. ಇಂದಿಗೂ ಇವರೆಲ್ಲರೂ ವರ್ಣ ಸಮಾಜದ ಅತ್ಯಂತ ಕೆಳಸ್ತರದಲ್ಲಿದ್ದಾರೆ. ಬೇಡ/ಬುಡ್ಗ ಜಂಗ ಮರು ಶ್ರೀವೈಷ್ಣವ ಮತ್ತು ಶೈವ ಪಂಥಗಳ ಸಮಿಶ್ರ ಧಾರ್ಮಿಕ ಅನುಯಾಯಿಗಳು. ಇವರು ಮಾದಿಗ ದಾಸುಗಳು ಹೊಂದಿರುವ ಎಲ್ಲಾ ಸಾಮಾಜಿಕ ಗುಣಲಕ್ಷಣಗಳನ್ನು ಹೊಂದಿದ್ದಾರೆ. ಮಾಲಜಂಗಮರು ನೋಟದಲ್ಲಿ ವೀರಶೈವ ಜಂಗಮರಂತೆ ಕಂಡರೂ ಅವರೆಲ್ಲರೂ ಇತರ ಮೂಲ ಜಾತಿಯ ಮಾಲ(ಹೊಲೆಯ) ಜನರಂತೆ ಜೀವಿಸುತ್ತಿದ್ದಾರೆ.

ಬೇಡ/ಬುಡ್ಗ/ಮಾಲಜಂಗಮರೆಲ್ಲರೂ ಮೂಲತಃ ಅಸ್ಪೃಶ್ಯ ಭಿಕ್ಷುಕರು. ಅಲೆಮಾರಿ ಸ್ವರೂಪದ ಜೀವನಾಧಾರಿಗಳು. ಅದರೆ ವೀರಶೈವ ಜಂಗಮರು "ಧಾರ್ಮಿಕ ಅಯ್ಯಾಚಾರ"ವನ್ನು ಶೈವ ಪರಂಪರೆಯ ಜಂಗಮ ಪರಂಪರೆಯ ಜಂಗಮ ಸಂಹಿತೆ ಪಾಲನೆಗಾಗಿ ಧಾರಣ ಮಾಡಿಕೊಂಡಿದ್ದಾರೆ. ಇಂತಹವರು ಕಾರುಣ್ಯ, ಧರ್ಮಕಾರಣ ಹಾಗೂ ಸ್ವಯಂಪಾಕದ ಭಿಕ್ಷೆಯನ್ನು ತಮ್ಮ ಭಕ್ತರಿಂದ ಯಾಚಿಸುತ್ತಾರೆ. ಸಾಮಾನ್ಯವಾಗಿ, ಇವರೆಲ್ಲರೂ ಅನ್ಯ ಮೇಲ್ವರ್ಗದವರಂತೆ ವ್ಯವಸಾಯ, ಉಳಿಮೆ, ವ್ಯಾಪಾರ, ಹೋಟೆಲ್ ಉದ್ದಿಮೆ, ಸರ್ಕಾರಿಗುತ್ತಿಗೆ ಹಾಗೂ ಇತರ ಲಾಭದಾಯಕ ವಲಯಗಳಲ್ಲಿ ದುಡಿಯುತ್ತಿದ್ದಾರೆ. ಹಾಗೆಯೇ ಕೇಂದ್ರ, ರಾಜ್ಯ ಹಾಗೂ ಅರೆಸರ್ಕಾರಿ ವಲಯಗಳಲ್ಲಿ ಹೆಚ್ಚಿನವರು ಉದ್ಯೋಗಸ್ಥರಾಗಿದ್ದಾರೆ. ಇವರಾರು ಮಲೀನ ಕಾರ್ಯಗಳನ್ನು ನಿರ್ವಹಿಸುತ್ತಿರುವವರಲ್ಲ. ಅಸ್ಪೃಶ್ಯತೆಯ ಕಳಂಕವನ್ನು ಅನುಭವಿಸದ ವರಲ್ಲ.

ರಾಜ್ಯ ಹಿಂದುಳಿದ ವರ್ಗಗಳ ಆಯೋಗಗಳು ಕಂಡಿರುವಂತೆ, ಲಿಂಗಾಯತ ಸಮಾಜದೊಳಗೆ ಇವರು ಹೆಚ್ಚಿನ ಸುಶಿಕ್ಷಿತರನ್ನು ಹೊಂದಿರುವುದನ್ನು ಸಾದರಪಡಿಸಿವೆ. ಈ ಸಮಾಜದವರು ಭಾರತದ ಶ್ರೇಷ್ಠ ನ್ಯಾಯಾಲಯದಲ್ಲಿ ನ್ಯಾಯಾಧೀಶರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಇಂತಹ ಸೌಭಾಗ್ಯ ಯಾವ ಬೇಡಜಂಗಮರಿಗೆ ದಕ್ಕಿಲ್ಲ. ಬೇಡಜಂಗಮರು ಮೂಲತಃ ಮಾಂಸಾಹಾರಿಗಳು; ವೀರಶೈವ ಜಂಗಮರು ಸಸ್ಯಹಾರಿಗಳು. ಇವರಿಬ್ಬರೂ ತಮ್ಮ ತಮ್ಮ ಕುಲ ಸಂಪ್ರದಾಯಗಳಂತೆ ವಿವಾಹಗಳನ್ನು ಆಚರಿಸುತ್ತಾರೆ. ವೀರಶೈವ ಜಂಗಮರು ಲಿಂಗಾಯತ ಸಮಾಜದ ಒಟ್ಟು ಜನಸಂಖ್ಯೆಯಲ್ಲಿ ಶೇ.2ಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದಾರೆ. ಇವರೆಲ್ಲರೂ ಸಾಮಾಜಿಕವಾಗಿ ಭಿಕ್ಷುಕರಾಗಿದ್ದಾರೆ, ದೇಶದ ಶೇಕಡ 75ಕ್ಕಿಂತ ಹೆಚ್ಚಿನ ಭಾಗದಷ್ಟು ಜನರೆಲ್ಲರೂ ಭಿಕ್ಷುಕರಾಗಿರಬೇಕಿತ್ತು. ಆದರೆ, ಸಾಮಾಜಿಕ ನೈಜತೆ ಬೇರೆಯೇ ಇದೆ. ಹೊಟ್ಟೆಪಾಡಿನ ಭಿಕ್ಷಾಟನೆಯನ್ನು ಧಾರ್ಮಿಕ ಸಂಹಿತೆಯ ಪಾಲನೆಯಲ್ಲಿ ಅಳಡಿಸಿಕೊಂಡಿರುವ ಅಯ್ಯಾಚಾರಕ್ಕೆ ಹೋಲಿಕೆ ಮಾಡಲು ಬರುವುದಿಲ್ಲ.

ಈ ಹಿಂದೆ, ಆಂಧ್ರ ಸರ್ಕಾರ ನ್ಯಾಯಮೂರ್ತಿ ರಾಮಚಂದ್ರರಾಜು ನೇತೃತ್ವದಲ್ಲಿ ಪರಿಶಿಷ್ಟಜಾತಿಗಳ ಮೀಸಲಾತಿ ವರ್ಗೀಕರಣಕ್ಕಾಗಿ ಆಯೋಗ ನೇಮಿಸಿತ್ತು. ಈ ಆಯೋಗವು ಅಲ್ಲಿನ 56 ಜಾತಿ, ಉಪಜಾತಿಗಳನ್ನು ನಾಲ್ಕು ವರ್ಗಗಳಲ್ಲಿ ವಿಂಗಡಿಸಿದೆ. ಬೇಡ/ಬುಡ್ಗಜಂಗಮರನ್ನು ಮಾದಿಗ ಗುಂಪಿಗೆ(ವರ್ಗ-ಬಿ); ಮಾಲಜಂಗಮರನ್ನು ಮಾಲ ಸಮೂಹಕ್ಕೆ(ಹೊಲೆಯ)ಗುಂಪಿಗೆ ಸೇರಿಸಿದೆ (ವರ್ಗ-ಸಿ). ಆವಾಗ ಆಂಧ್ರದ ವೀರಶೈವ ಜಂಗಮರಾರು ಈ ಬಗ್ಗೆ ಚಕಾರವೆತ್ತಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಜಾತಿಗಳೆಲ್ಲವೂ ಹೆಚ್ಚಾಗಿ ಹೈದರಾಬಾದ್ ನಿಜಾಮರ ಆಡಳಿತ ಪ್ರದೇಶಗಳಾಗಿದ್ದ ತೆಲಂಗಾಣ, ಮರಾಠವಾಡ ಹಾಗೂ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿದ್ದರು.

ಈ ಹಿಂದೆ, ಆಂಧ್ರ ಸರ್ಕಾರ ನ್ಯಾಯಮೂರ್ತಿ ರಾಮಚಂದ್ರರಾಜು ನೇತೃತ್ವದಲ್ಲಿ ಪರಿಶಿಷ್ಟಜಾತಿಗಳ ಮೀಸಲಾತಿ ವರ್ಗೀಕರಣಕ್ಕಾಗಿ ಆಯೋಗ ನೇಮಿಸಿತ್ತು. ಈ ಆಯೋಗವು ಅಲ್ಲಿನ 56 ಜಾತಿ, ಉಪಜಾತಿಗಳನ್ನು ನಾಲ್ಕು ವರ್ಗಗಳಲ್ಲಿ ವಿಂಗಡಿಸಿದೆ. ಬೇಡ/ಬುಡ್ಗಜಂಗಮರನ್ನು ಮಾದಿಗ ಗುಂಪಿಗೆ(ವರ್ಗ-ಬಿ); ಮಾಲ ಜಂಗಮರನ್ನು ಮಾಲ ಸಮೂಹಕ್ಕೆ (ಹೊಲೆಯ) ಗುಂಪಿಗೆ ಸೇರಿಸಿದೆ(ವರ್ಗ-ಸಿ). ಆವಾಗ ಆಂಧ್ರದ ವೀರಶೈವ ಜಂಗಮರಾರು ಈ ಬಗ್ಗೆ ಚಕಾರವೆತ್ತಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಜಾತಿಗಳೆಲ್ಲವೂ ಹೆಚ್ಚಾಗಿ ಹೈದರಾಬಾದ್ ನಿಜಾಮರ ಆಡಳಿತ ಪ್ರದೇಶಗಳಾಗಿದ್ದ ತೆಲಂಗಾಣ, ಮರಾಠವಾಡ ಹಾಗೂ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿದ್ದರು.

ಆಂಧ್ರದಲ್ಲಿ ಇವೆರಡೂ ಉಪಜಾತಿಗಳು ಮಾದಿಗ-ಮಾಲರೆಂದು ತೀರ್ಮಾನವಾದ ಮೇಲೆ ಕರ್ನಾಟಕ-ಮಹಾರಾಷ್ಟ್ರದಲ್ಲಿ ವೀರಶೈವ ಜಂಗಮರು, ಮ್ಯಾಸಬೇಡರು (ವೇಷಗಾರರು) ಸುಡಗಾಡಸಿದ್ಧರು ಅಥವಾ ಪಕನತಿ ಜಂಗಾಲರು(ಕೋಲಾರ) ಆಗಲು ಸಾಧ್ಯವಿಲ್ಲ. 1956ರಲ್ಲಿ ಸೇರ್ಪಡೆಯಾಗಿರುವ ಬೇಡ/ಬುಡ್ಗ/ಮಾಲಜಂಗಮರೆಲ್ಲರೂ ವೀರಶೈವ ಜಂಗಮರೆಂದು ನಕಲಿ ಜನರಿಗೆ ತಿಳಿಯಲು ಇಷ್ಟೊಂದು ಕಾಲಾವಕಾಶ ಬೇಕಿತ್ತೇ? ಒಂದು ವೇಳೆ ಈ ಜಂಗಮರನ್ನು ನಕಲಿ ಜನರು ಪ್ರಸ್ತಾಪಿಸುತ್ತಿರುವ ಹೆಸರುಗಳಡಿ ಸೇರಿಸಿದ್ದರೆ, ದಕ್ಷಿಣ ರಾಜ್ಯಸರ್ಕಾರಗಳೆಲ್ಲವೂ ಇವರನ್ನು ಹಿಂದುಳಿದ ವರ್ಗಗಳ ಗವಾಕ್ಷಿಯಿಂದ ದೂರವಿಡುತ್ತಿದ್ದವು. ಹಾಗಾದರೆ, ವೀರಶೈವ ಜಂಗಮರ ಸ್ಥಿತಿ-ಗತಿಗಳ ಬಗ್ಗೆ ನಾಗನಗೌಡರ್ ಆಯೋಗ ತಾಳಿದ ನಿಲುಗಳನ್ನೇಕೆ ಇವರು ಖಂಡಿಸಿದರು. ರಾಜ್ಯದ ಆಡಳಿತರಂಗದಲ್ಲಿದ್ದ ಜಂಗಮರ ಅಂದಿನ ಉನ್ನತಾಧಿಕಾರಿ ಶ್ರೀ.ಜೆ.ಬಿ., ಮಲ್ಲಾರಾಧ್ಯರೇಕೆ ಹಾವನೂರು ಆಯೋಗ ಧಿಕ್ಕರಿಸಲು ಈ ಸಮಾಜಕ್ಕೆ ಕರೆ ನೀಡಿದ್ದರು. ಈ ಮಾಹಿತಿಗಳನ್ನು ನೀಡುವ ಇತಿಹಾಸದ ಹಾದಿಯೇ ಸರಿ ಇಲ್ಲವೆ?

ಕರ್ನಾಟಕದಲ್ಲಿರುವ ಕೆಲವು ಸಂವಿಧಾನ ವಿರೋಧಿ ಶಕ್ತಿಗಳು ಅದರ ತೀರ್ಮಾನ ಮತ್ತು ಆದೇಶಗಳನ್ನು ತಪ್ಪಾಗಿ ಗ್ರಹಿಸಿರುವ ಮಹಾ ತಪ್ಪಿಗಾಗಿ ಮುಗ್ಧ ಬೇಡಜಂಗಮರ ಹಕ್ಕು ಬಾಧ್ಯತೆಗಳೆಲ್ಲವೂ ಹರಣಗೊಳ್ಳುತ್ತಿವೆ. ಇದರಿಂದ ಪ್ರಾಮಾಣಿಕ ವೀರಶೈವ ಜಂಗಮರು ಸಹ ಮಾನಸಿಕ ಹಿಂಸೆ ಅನುಭವಿಸುವಂತಾಗಿದೆ. ಬೇಡಜಂಗಮರು ಹಿಂದೆ ಅಣ್ಣನ ಅನುಯಾಯಿಗಳು. ತದನಂತರ ಕಾಲಕ್ರಮೇಣ ಸಾಮಾಜಿಕ ಒತ್ತಡಗಳಿಗೆ ಸಿಲುಕಿ ಶ್ರೀವೈಷ್ಣವ ಪರಂಪರೆಗಳನ್ನು ಧಾರಣ ಮಾಡಿಕೊಂಡವರು. ಈ ನಗ್ನ ಸತ್ಯಗಳನ್ನು ಶರಣ ಸಂಸ್ಕೃತಿ ಬಲ್ಲ ಪ್ರಾಜ್ಞರೆಲ್ಲರೂ ಅಭಿಮತಿಸಿದ್ದಾರೆ. ರಾಜ್ಯದ ಅನೇಕ ಮಠಾಧೀಶರುಗಳು, ಹರಗುರು-ಚರಮೂರ್ತಿಗಳೆಲ್ಲರೂ ಈ ವಿಚಾರವನ್ನು ಸಾದರಪಡಿಸಿದ್ದಾರೆ. ಆದರೂ, ಸುಳ್ಳುಮಾಹಿತಿಗಳನ್ನು ಹಿಡಿದು ಮೀಸಲಾತಿ ಇತಿಹಾಸ ಅರಿತಿಲ್ಲದ ಕೆಲವು ಮಠಾಧೀಶರು, ರಾಜಕಾರಣಿಗಳು, ಉದ್ಯಮಿಗಳು ಹಾಗೂ ಅಧಿಕಾರಿಗಳು ನಕಲಿ ಬೇಡಜಂಗಮರ ಪರ ವಕಾಲತ್ತು ಹಾಕುತ್ತಿರುವುದು ಈ ಸಮಸ್ಯೆ ಉಲ್ಬಣಕ್ಕೆ ಮೂಲ ಕಾರಣವಾಗಿದೆ. ಅಕ್ರಮ ಚಟುವಟಿಕೆಗಳನ್ನು ಸಕ್ರಮಗೊಳಿಸಿಕೊಳ್ಳಲು ಇವರೆಲ್ಲರೂ ಎಲ್ಲಿಲ್ಲದ ಹರಸಾಹಸ ಮಾಡುತ್ತಿದ್ದಾರೆ. ಈ ಸಮಸ್ಯೆ ಇಷ್ಟೊಂದು ಪ್ರಖರವಾಗಿ ಬೆಳೆಯಲು ಸರ್ಕಾರಗಳ ವೈಫಲ್ಯಗಳೆ ಪ್ರಮುಖ ಕಾರಣ. ಈ ವ್ಯವಸ್ಥೆಯೊಳಗಿರುವ ಕಳ್ಳಗಿಂಡಿಗಳ ಮೂಲಕ ತಮ್ಮ ಕಾರ್ಯ ಸಾಧಿಸಿಕೊಳ್ಳಲು ಇಂತಹ ಹುನ್ನಾರ ಹೂಡುತ್ತಿದ್ದಾರೆ.

ಇನ್ನು ಕೆಲವು ನಕಲಿ ಬೇಡಜಂಗಮರು ಅಧೀನ ವಿಚಾರಣಾ ನ್ಯಾಯಾಲಯಗಳಿಂದ ಆದೇಶಗಳನ್ನು ಪಡೆದು ಜಾತಿಪತ್ರ ಪಡೆದಿರುವ ಘಟನೆಗಳಿವೆ. ನೈಜತೆಯಲ್ಲಿ ಈ ನ್ಯಾಯಾಲಯಗಳು ಸಂವಿಧಾನದ ಆದೇಶಗಳ ಕುರಿತು ವಿಮರ್ಶಿಸುವ ಹಕ್ಕುಗಳನ್ನು ಹೊಂದಿಲ್ಲ. ಆದರೂ, ಕೆಲವು ಅಧಿಕಾರಿಗಳು ನ್ಯಾಯಾಂಗ ನಿಂದನೆಗಳಿಗೆ ಅಂಜಿ ಜಾತಿ ಪತ್ರಗಳನ್ನು ನೀಡಿರುವುದು ಬೆಳಕಿಗೆ ಬಂದಿವೆ. ನಕಲಿ ಜನರು ಇನ್ನೂ ಮುನ್ನಡೆದು ತಮ್ಮ ಶಾಲಾ ಮಕ್ಕಳ ದಾಖಲಾತಿಗಳಲ್ಲಿ "ಬೇಡಜಂಗಮ"ರೆಂದು ಅಕ್ರಮವಾಗಿ ದಾಖಲಿಸಿರುವುದು ಅಲ್ಲಲ್ಲಿ ಬೆಳಕಿಗೆ ಬಂದಿವೆ. ಈ ನಡವಳಿಕೆಗಳನ್ನು ಯಾವ ಪರಮಾತ್ಮನೂ ಒಪ್ಪುವುದಿಲ್ಲ.

1980ರಿಂದಲೂ ಈ ನಕಲಿ ಬೇಡಜಂಗಮರ ಹಾವಳಿಗಳಿಂದ ರಾಜ್ಯದ ಸ್ಥಾಪಿತ ಸಾಮಾಜಿಕ ನೆಮ್ಮದಿಗೆ ಧಕ್ಕೆ ಬರತೊಡಗಿದೆ. ಬಹುಶಃ ಈ ಸಮಸ್ಯೆಯನ್ನು ಹಾಗೆಯೇ ಬಿಟ್ಟರೆ ಇದು ಮುಂದಿನ ತಲೆಮಾರಿಗೂ ವರ್ಗಾಯಿಸಲ್ಪಡುತ್ತದೆ. ಆದ್ದರಿಂದ, ಈ ಸಮಸ್ಯೆಯನ್ನು ಬಹಿರಂಗ ಚರ್ಚೆ ಮೂಲಕ ಬಗೆಹರಿಸಿಕೊಳ್ಳುವುದೇ ಸೂಕ್ತ. ಇಂತಹ ವೇದಿಕೆಗಳಲ್ಲಿ ವೀರಶೈವ ಜಂಗಮರನ್ನು, "ಬೇಡ/ಬುಡ್ಗ/ಮಾಲಜಂಗಮರೆಂದು" ಸಾರಿರುವ ಸಂವಿಧಾನದ ನಿರ್ಣಯಗಳನ್ನು ಜನತೆ ಮುಂದೆ ಇವರು ಮಂಡಿಸಲಿ. ಒಂದು ವೇಳೆ, ಈ ಸತ್ಯಗಳು ನೈಜವಾಗಿದ್ದಲ್ಲಿ ರಾಜ್ಯದಲ್ಲೂ ಸಮಸ್ತ ಪರಿಶಿಷ್ಟಜಾತಿಯ ಜನರು ವೀರಶೈವ ಜಂಗಮರು ಹಕ್ಕು ಭಾದ್ಯತೆಗಳನ್ನು ಸಂರಕ್ಷಿಸಿಕೊಡಲು ಸರ್ಕಾರಕ್ಕೆ ಆಗ್ರಹಿಸುತ್ತಾರೆ. ದಯಮಾಡಿ ನಕಲಿ/ಅಸಲಿ ಜಂಗಮರು ಬೀದಿ ಚರ್ಚೆಗೆ ಮುಂದಾಗಲಿ, ಆ ಮಲಕ ಉತ್ತಮ ಮಾನವೀಯ ಸಂಬಂಧಗಳನ್ನು ರಾಜ್ಯದಲ್ಲಿ ನಿರ್ಮಿಸಬಹುದು. ಅಣ್ಣನ ಕನಸಿಗೊಂದು ಚೆಂಗುಲಾಬಿ ಇಡಬಹುದು. ಇಲ್ಲದ ಹೋದಲ್ಲಿ ಬಲಿಷ್ಠ ನಕಲಿ ಬೇಡ ಜಂಗಮರ ಬಲಾಢ್ಯರ ಹಣ-ಅಧಿಕಾರ ಬಲ ಹೋರಾಟಗಳಲ್ಲಿ ಮುಗ್ಧ ಬೇಡಜಂಗಮರ ಹಕ್ಕು ಬಾಧ್ಯತೆಗಳೆಲ್ಲವೂ ಮಾರಣಹೋಮವಾಗುತ್ತವೆ. ☐

ತೆಲಂಗಾಣ ಎಂಬ ಎಚ್ಚರಿಕೆ ಗಂಟೆ

ನಾ ದಿವಾಕರ

1969ರಲ್ಲಿ ಭುಗಿಲೆದ್ದು ತಣ್ಣಗಾಗಿದ್ದ ತೆಲಂಗಾಣ ಹೋರಾಟಕ್ಕೆ ಮರುಜೀವ ಬಂದಿದೆ. ಸನ್ನಿವೇಶಗಳು ಬದಲಾಗಿದ್ದರೂ ತೆಲಂಗಾಣ ಪ್ರದೇಶದ ಜನತೆಯ ಆಶೋತ್ತರಗಳು, ಆಕಾಂಕ್ಷೆಗಳು, ರಾಜಕೀಯ ಸ್ಥಿತ್ಯಂತರಗಳಲ್ಲಿ ಬದಲಾವಣೆಯೇನೂ ಕಂಡುಬರುವುದಿಲ್ಲ. ಪ್ರತ್ಯೇಕ ರಾಜ್ಯದ ಸ್ಥಾಪನೆಗಾಗಿ ಹೋರಾಟ ನಡೆಸುತ್ತಿರುವ ತೆಲಂಗಾಣ ಜನತೆಯ ಮೂಲ ಅಭಿಲಾಷೆ ಯಥಾಸ್ಥಿತಿಯಲ್ಲಿದ್ದರೂ, ನಾಯಕತ್ವದಲ್ಲಿನ ಧೋರಣೆಗಳು ಬದಲಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಕೇಂದ್ರ ಯುಪಿಎ ಸರ್ಕಾರದ ಬೇಜವಾಬ್ದಾರಿ ನಿರ್ಣಯವೂ ಪರಿಸ್ಥಿತಿಯನ್ನು ಗೊಂದಲಮಯವಾಗಿಸಿದೆ. ತೆಲಂಗಾಣ ರಾಷ್ಟ್ರೀಯ ಸಮಿತಿ (ಟಿಆರ್‌ಎಸ್)ನ ನಾಯಕ ಚಂದ್ರಶೇಖರ ರಾವ್ ಉಪವಾಸ ಸತ್ಯಾಗ್ರಹ ಆರಂಭಿಸಿದ ಸಂದರ್ಭದಲ್ಲಿ ಆರು ದಶಕಗಳ ಕಾಲ ಸುಪ್ತವಾಗಿದ್ದ ತೆಲಂಗಾಣ ರಾಷ್ಟ್ರೀಯತೆಯ ಪ್ರಶ್ನೆ ಮರುಜನ್ಮ ಗಳಸಿದ್ದೇ ಅಲ್ಲದೆ ಇಡೀ ಪ್ರಾಂತ್ಯದ ಜನತೆಯ ಭಾವನೆಗಳನ್ನು ಕೆರಳಿಸಿತ್ತು. ಈ ಸನ್ನಿವೇಶವನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾದ ಕೇಂದ್ರ ಗೃಹಮಂತ್ರಿ ಪಿ. ಚಿದಂಬರಂ ಏಕಾಏಕಿ ಪ್ರತ್ಯೇಕ ತೆಲಂಗಾಣ ರಾಜ್ಯ ಸ್ಥಾಪನೆಗೆ ತಾತ್ವಿಕ ಸಮ್ಮತಿ ಸೂಚಿಸಿದ್ದು ದೇಶದ ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸಿತ್ತು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಕೋರ್ ಸಮಿತಿಯ ನಿರ್ಣಯವನ್ನು ವಿರೋಧಿಸಿ ಆಂಧ್ರ ಪ್ರದೇಶದ 80ಕ್ಕೂ ಹೆಚ್ಚು ಶಾಸಕರು ರಾಜಿನಾಮೆ ಸಲ್ಲಿಸಿದರು. ತೆಲುಗುದೇಶಂ ಮತ್ತು ಪ್ರಜಾರಾಜ್ಯಂ ಪಕ್ಷಗಳ ಸದಸ್ಯರು ತಮ್ಮ ನಾಯಕತ್ವದ ನಿರ್ಣಯವನ್ನು ಧಿಕ್ಕರಿಸಿ ರಾಜಿನಾಮೆ ಸಲ್ಲಿಸಿದರು. ಎರಡು ದಿನಗಳ ಪ್ರಕ್ಷುಬ್ಧ ವಾತಾವರಣದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ 76, ತೆಲುಗುದೇಶಂನ 40, ಪ್ರಜಾರಾಜ್ಯಂನ 14 ಶಾಸಕರು ಕೇಂದ್ರದ ನಿರ್ಣಯವನ್ನು ವಿರೋಧಿಸಿ ರಾಜೀನಾಮೆ ಸಲ್ಲಿಸಿದ್ದು ಆಂಧ್ರಪ್ರದೇಶದ ರಾಜಕಾರಣವನ್ನು ಕಂಗೆಡಿಸಿತ್ತು. ಅಖಂಡ ಆಂಧ್ರಕ್ಕಾಗಿ ಆಗ್ರಹಿಸಿದ ಈ ಶಾಸಕರ ರಾಜೀನಾಮೆ ಪ್ರಕರಣ ರಾಜಕೀಯ ಪಕ್ಷಗಳ ಅಧಿಕೃತ ನಿಲುವನ್ನು ಬದಲಾಯಿಸುವ ಮಟ್ಟಿಗೆ ಪ್ರಭಾವ ಬೀರಿತ್ತು. ರಾಜ್ಯ ವಿಧಾನಸಭೆಯ ನಿರ್ಣಯದ ನಂತರವೇ ಪ್ರತ್ಯೇಕ ತೆಲಂಗಾಣ ಸ್ಥಾಪಿಸಲಾಗುವುದು ಎಂಬ ಕೇಂದ್ರದ ನಿಲುವು ತೆಲಂಗಾಣ ಪರ-ವಿರೋಧದ ನೆಲೆಯನ್ನು ಗಟ್ಟಿಗೊಳಿಸಿತೇ ಹೊರತು ಸಮಸ್ಯೆಯ ಪರಿಹಾರವಾಗಲಿಲ್ಲ. ಕೇಂದ್ರದ ನಿರ್ಣಯವನ್ನು ಸ್ವಾಗತಿಸಿ ತೆಲಂಗಾಣ ಪರ ಜನತೆ ಮುಷ್ಕರವನ್ನು ಹಿಂಪಡೆದ ಕೂಡಲೇ ಅಖಂಡ ಆಂಧ್ರಕ್ಕಾಗಿ ಆಗ್ರಹಿಸುವ ಜನತೆ ಹೋರಾಟದಲ್ಲಿ ತೊಡಗಿರುವುದು ಸಮಸ್ಯೆಯನ್ನು ಮತ್ತಷ್ಟು ಕ್ಲಿಷ್ಟಕರವಾಗಿಸಿದೆ.

ಇತಿಹಾಸದ ಪುಟಗಳಿಂದ

ಬ್ರಿಟೀಷ್ ಆಡಳಿತಾವಧಿಯಲ್ಲಿ ನಿಜಾಮರ ಆಳ್ವಿಕೆಯಲ್ಲಿದ್ದ ತೆಲುಗು ಭಾಷಿಕ ಪ್ರದೇಶಗಳಲ್ಲಿ ತೆಲಂಗಾಣ ಪ್ರಮುಖ ಪ್ರಾಂತ್ಯವಾಗಿತ್ತು. 1946-51ರ ಅವಧಿಯಲ್ಲಿ ಈ ಪ್ರದೇಶದ ಭೂಮಾಲಿಕರ ವಿರುದ್ಧ ದಂಗೆ ಎದ್ದಿದ್ದ ರೈತಾಪಿ ಸಮುದಾಯಕ್ಕೆ ಕಮ್ಯುನಿಸ್ಟ್ ಪಕ್ಷ ಪರಿಣಾಮಕಾರಿ ನಾಯಕತ್ವ ವಹಿಸಿತ್ತು. ಭೂಮಾಲಿಕರ ವಿರುದ್ಧ ನಡೆದ ಕಮ್ಯುನಿಸ್ಟ್ ನೇತೃತ್ವದ ಹೋರಾಟ ಕ್ರಮೇಣವಾಗಿ ನಿಜಾಮ ಆಳ್ವಿಕೆಯ ವಿರುದ್ಧ ತಿರುಗಿತ್ತು. ಇದೇ ಅವಧಿಯಲ್ಲಿ ದೇಶ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ತೆಲಂಗಾಣದ ಹೋರಾಟಗಾರರು ಪ್ರತ್ಯೇಕ ರಾಜ್ಯಕ್ಕಾಗಿ ಆಗ್ರಹಿಸತೊಡಗಿದ್ದರು. 1948ರಲ್ಲಿ ಪ್ರತ್ಯೇಕತಾವಾದಿಗಳು ಮತ್ತು ರಾಷ್ಟ್ರೀಯತಾವಾದಿಗಳ ನಡುವೆ ನಡೆದ ಸಂಘರ್ಷ ಪರಾಕಾಷ್ಠೆ ತಲುಪಿದ್ದು ಸ್ವತಂತ್ರ ಭಾರತ ಸರ್ಕಾರ ತನ್ನ ಸೇನೆಯನ್ನು ಬಳಸುವ ಮೂಲಕ ತೆಲಂಗಾಣ ಪ್ರಾಂತ್ಯವನ್ನು ವಶಪಡಿಸಿಕೊಂಡಿತ್ತು.

ಕೆಲವೇ ವರ್ಷಗಳ ನಂತರ ತೆಲುಗು ಭಾಷಿಕ ಪ್ರಾಂತ್ಯಗಳನ್ನು ಒಂದುಗೂಡಿಸಿ ವಿಶಾಲಾಂಧ್ರ ಸ್ಥಾಪಿಸಲು ಆಗ್ರಹಿಸಿ ಹೋರಾಟಗಳು ರೂಪುಗೊಂಡವು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಭಾಷಾವಾರು ರಾಜ್ಯ

ಬ್ರಿಟೀಷ್ ಆಡಳಿತಾವಧಿಯಲ್ಲಿ ನಿಜಾಮರ ಆಳ್ವಿಕೆಯಲ್ಲಿದ್ದ ತೆಲುಗು ಭಾಷಿಕ ಪ್ರದೇಶಗಳಲ್ಲಿ ತೆಲಂಗಾಣ ಪ್ರಮುಖ ಪ್ರಾಂತ್ಯವಾಗಿತ್ತು. ೧೯೪೬-೫೧ರ ಅವಧಿಯಲ್ಲಿ ಈ ಪ್ರದೇಶದ ಭೂಮಾಲಿಕರ ವಿರುದ್ಧ ದಂಗೆ ಎದ್ದಿದ್ದ ರೈತಾಪಿ ಸಮುದಾಯಕ್ಕೆ ಕಮ್ಯುನಿಸ್ಟ್ ಪಕ್ಷ ಪರಿಣಾಮಕಾರಿ ನಾಯಕತ್ವ ವಹಿಸಿತ್ತು. ಭೂಮಾಲಿಕರ ವಿರುದ್ಧ ನಡೆದ ಕಮ್ಯುನಿಸ್ಟ್ ನೇತೃತ್ವದ ಹೋರಾಟ ಕ್ರಮೇಣವಾಗಿ ನಿಜಾಮ ಆಳ್ವಿಕೆಯ ವಿರುದ್ಧ ತಿರುಗಿತ್ತು. ಇದೇ ಅವಧಿಯಲ್ಲಿ ದೇಶ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ತೆಲಂಗಾಣದ ಹೋರಾಟಗಾರರು ಪ್ರತ್ಯೇಕ ರಾಜ್ಯಕ್ಕಾಗಿ ಆಗ್ರಹಿಸತೊಡಗಿದ್ದರು.

ಗಳ ಸ್ಥಾಪನೆಯ ಪ್ರಸ್ತಾವನೆಗಳು ಮುಂದಾದಾಗ, ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಆಂಧ್ರದ ತೆಲುಗು ಭಾಷಿಕ ಪ್ರದೇಶಗಳು ಮುಂಚೂಣಿಯಲ್ಲಿದ್ದವು. ತೆಲುಗು ಭಾಷಿಕ ಪ್ರಾಂತ್ಯಗಳನ್ನು ಒಗ್ಗೂಡಿಸಿ ವಿಶಾಲ ಆಂಧ್ರ ಸ್ಥಾಪಿಸಲು ಆಗ್ರಹಿಸಿ ಉಪವಾಸ ಸತ್ಯಾಗ್ರಹ ಹೂಡಿದ ಪೊಟ್ಟಿ ಶ್ರೀರಾಮುಲು 1952ರಲ್ಲಿ ನಿಧನರಾದ ಹಿನ್ನೆಲೆಯಲ್ಲಿ ಪ್ರಪ್ರಥಮ ಭಾಷಾವಾರು ರಾಜ್ಯವಾಗಿ ಆಂಧ್ರಪ್ರದೇಶ ಸ್ಥಾಪನೆಯಾಗುವುದು ಅನಿವಾರ್ಯವಾಗಿತ್ತು. ಆದರೆ ಕೇಂದ್ರ ಸರ್ಕಾರದ ಈ ತೀರ್ಮಾನದಿಂದ ವಿಶಾಲಾಂಧ್ರವನ್ನೂ ಒಳಗೊಂಡಂತೆ ದೇಶದ ವಿವಿಧೆಡೆ ಭಾಷಾವಾರು ರಾಜ್ಯಗಳ ಸ್ಥಾಪನೆಗೆ ಆಗ್ರಹ ತೀವ್ರಗೊಂಡಿತು. 1948ರಲ್ಲಿ ಭಾರತ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದ್ದ ತೆಲಂಗಾಣ ಪ್ರಾಂತ್ಯವನ್ನು ವಿಶಾಲಾಂಧ್ರಕ್ಕೆ ಸೇರ್ಪಡಿಸುವ ಆಗ್ರಹವನ್ನು ಎರಡನೆ ರಾಜ್ಯ ಪುನರ್ವಿಂಗಡನಾ ಸಮಿತಿ ಪುಷ್ಟೀಕರಿಸಲಿಲ್ಲ.

ಉದ್ದೇಶಿತ ವಿಶಾಲಾಂಧ್ರ ರಾಜ್ಯದಲ್ಲಿ ತೆಲಂಗಾಣದ ಆರ್ಥಿಕತೆ ಅಭಿವೃದ್ಧಿಯಲ್ಲಿ ಹಿಂದುಳಿದಿದ್ದರೂ ಹೆಚ್ಚಿನ ಆದಾಯ ಗಳಿಸುವ ಪ್ರಾಂತ್ಯವಾಗಿತ್ತು. ಕೃಷ್ಣ ಮತ್ತು ಗೋದಾವರಿ ನದಿಗಳ ಅಣೆಕಟ್ಟುಗಳ ನಿರ್ಮಾಣದಿಂದ ತೆಲಂಗಾಣದ ಜನತೆ ತೊಂದರೆಗೀಡಾಗುವ ಸಂಭವ ಹೆಚ್ಚಾಗಿತ್ತು. ಹೆಚ್ಚು ಶಿಕ್ಷಣ ಸೌಲಭ್ಯಗಳನ್ನು ಹೊಂದಿ ಸುಶಿಕ್ಷಿತರಾಗಿದ್ದ ಆಂಧ್ರದ ಜನತೆ ವಿಶಾಲಾಂಧ್ರ ರಾಜ್ಯದಲ್ಲಿ ಉದ್ಯೋಗಾವಕಾಶಗಳನ್ನು ಕಬಳಿಸುವ ಸಾಧ್ಯತೆಗಳೂ ಹೆಚ್ಚಾಗಿತ್ತು. ಈ ಕಾರಣಗಳಿಗಾಗಿ ವಿಶಾಲಾಂಧ್ರ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿತ್ತು. ಆದರೆ 1961ರ ಚುನಾವಣೆಗಳ ನಂತರದಲ್ಲಿ ಎರಡೂ ರಾಜ್ಯಗಳ ವಿಧಾನಸಭೆಗಳು ಒಮ್ಮತದ ನಿರ್ಣಯ ಕೈಗೊಂಡ ಪಕ್ಷದಲ್ಲಿ ಎರಡೂ ರಾಜ್ಯಗಳನ್ನು ವಿಲೀನಗೊಳಿಸಬಹುದು ಎಂದೂ ಶಿಫಾರಸು ಮಾಡಿತ್ತು. ಆದರೆ ಸಮಿತಿಯ ಶಿಫಾರಸುಗಳನ್ನು ನಿರ್ಲಕ್ಷಿಸಿ ತೆಲಂಗಾಣ ಮತ್ತು ಆಂಧ್ರ ರಾಜ್ಯಗಳನ್ನು ವಿಲೀನಗೊಳಿಸಿ ಆಂಧ್ರ ಪ್ರದೇಶ ಸ್ಥಾಪಿಸಲಾಯಿತು.

ಈ ಸಂದರ್ಭದಲ್ಲಿ ತೆಲಂಗಾಣದ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಒಂದು ಒಪ್ಪಂದಕ್ಕೂ ಬರಲಾಗಿತ್ತು. ರಾಜ್ಯ ವಿಧಾನಸಭೆಯಲ್ಲಿ ಮಂತ್ರಿಗಳನ್ನೊಳಗೊಂಡ ಪ್ರಾದೇಶಿಕ ಸಮಿತಿ ಸ್ಥಾಪಿಸುವುದು. ಪ್ರದೇಶದ ಅಭಿವೃದ್ಧಿಯ ಪ್ರಸ್ತಾವನೆಗಳನ್ನು ಸಮಿತಿಯ ಮೂಲಕ ರೂಪಿಸಿ, ಪರಾಮರ್ಶಿಸಿಸುವುದು. ತೆಲಂಗಾಣ ಪ್ರಾಂತ್ಯದ ಶಾಸಕರೊಬ್ಬರು ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿಗಳಾಗುವುದು. ಆಂಧ್ರ ವಿಧಾನ ಸಭೆಯ ಶೇ. 40ರಷ್ಟು ಶಾಸಕರು ತೆಲಂಗಾಣದವರಾಗಿರುವುದು. ಇವೇ ಮುಂತಾದ ಅಂಶಗಳು ಈ ಒಪ್ಪಂದದಲ್ಲಿ ಅಡಕವಾಗಿದ್ದವು.

ಆದರೆ ಆಂಧ್ರಪ್ರದೇಶದ ಸ್ಥಾಪನೆಯ ನಂತರ ತೆಲಂಗಾಣದ ಪ್ರಮುಖ ಕೇಂದ್ರವಾಗಿದ್ದ ಹೈದರಾಬಾದ್ ರಾಜಧಾನಿಯಾಗಿದ್ದರಿಂದ ಕರಾವಳಿ ಆಂಧ್ರ ಹಾಗು ರಾಯಲ್‌ಸೀಮ ಪ್ರದೇಶದಿಂದ ವಲಸೆ ಬಂದವರೆಲ್ಲ ಹೈದರಾಬಾದ್‌ನಲ್ಲಿ ನೆಲೆಸಲಾರಂಭಿಸಿದರು. ಈ ಫಲವತ್ತಾದ ಪ್ರದೇಶಗಳ ಶ್ರೀಮಂತ ಉದ್ಯಮಿಗಳಿಗೆ ಹೈದರಾಬಾದ್‌ನಲ್ಲಿ ಬಂಡವಾಳ ಹೂಡುವುದು ಸುಲಭವಾದಂತೆಯೇ ಸ್ಥಿರಾಸ್ತಿಗಳನ್ನು ಖರೀದಿಸುವುದೂ ಅಪ್ಯಾಯಮಾನವಾಗಿತ್ತು. ನಿಜಾಮರ ಆಳ್ವಿಕೆಯ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಅಷ್ಟೇನೂ ಅಭಿವೃದ್ಧಿಯನ್ನು ಕಾಣದೆ ಹೋಗಿದ್ದ ತೆಲಂಗಾಣ ಪ್ರದೇಶದಲ್ಲಿ ಸ್ಥಿರಾಸ್ತಿಗಳನ್ನು ಖರೀದಿಸಿ, ಬಂಡವಾಳ ಹೂಡಿ, ಉದ್ಯಮಗಳನ್ನು ಸ್ಥಾಪಿಸುವುದು ಕರಾವಳಿ-ರಾಯಲ್‌ಸೀಮ ಪ್ರದೇಶದ ಶ್ರೀಮಂತ ಉದ್ಯಮಿಗಳಿಗೆ ಕಷ್ಟವಾಗಲಿಲ್ಲ. ಆದರೆ ಸ್ಥಳೀಯರಲ್ಲದ ಉದ್ಯಮಿಗಳು ತಮ್ಮ ಪ್ರಾಂತ್ಯದಲ್ಲಿ ಬಂಡವಾಳ ಹೂಡಿ, ಆರ್ಥಿಕ ಹಾಗೂ ರಾಜಕೀಯ ಪ್ರಾಧಾನ್ಯತೆ ಗಳಿಸುತ್ತಿದ್ದುದು ವಿದ್ಯಾರ್ಥಿ ಯುವಜನತೆಯಲ್ಲಿ ಅಭದ್ರತಾ ಮನೋಭಾವವನ್ನು ಸೃಷ್ಟಿಸಿತ್ತು. ತಮ್ಮ ನೌಕರಿಯ ಅವಕಾಶಗಳನ್ನು ಕಸಿದುಕೊಳ್ಳುವುದೇ ಅಲ್ಲದೆ ಅಮೂಲ್ಯ ಭೂಮಿಯನ್ನೂ ಹೊರಗಿನವರು ಖರೀದಿಸುತ್ತಿದ್ದುದು ತೆಲಂಗಾಣದ ಯುವ ಜನತೆಗೆ ಮಾರಕವಾಗಿ ಕಂಡಿತ್ತು.

ಆಂಧ್ರಪ್ರದೇಶದ ಸ್ಥಾಪನೆಯ ನಂತರ ತೆಲಂಗಾಣದ ಪ್ರಮುಖ ಕೇಂದ್ರವಾಗಿದ್ದ ಹೈದರಾಬಾದ್ ರಾಜಧಾನಿಯಾಗಿದ್ದರಿಂದ ಕರಾವಳಿ ಆಂಧ್ರ ಹಾಗು ರಾಯಲ್‌ಸೀಮ ಪ್ರದೇಶದಿಂದ ವಲಸೆ ಬಂದವರೆಲ್ಲ ಹೈದರಾಬಾದ್‌ನಲ್ಲಿ ನೆಲೆಸಲಾರಂಭಿಸಿದರು. ಈ ಫಲವತ್ತಾದ ಪ್ರದೇಶಗಳ ಶ್ರೀಮಂತ ಉದ್ಯಮಿಗಳಿಗೆ ಹೈದರಾಬಾದ್‌ನಲ್ಲಿ ಬಂಡವಾಳ ಹೂಡುವುದು ಸುಲಭವಾದಂತೆಯೇ ಸ್ಥಿರಾಸ್ತಿಗಳನ್ನು ಖರೀದಿಸುವುದೂ ಅಪ್ಯಾಯಮಾನವಾಗಿತ್ತು. ನಿಜಾಮರ ಆಳ್ವಿಕೆಯ ಊಳಿಗ ಮಾನ್ಯ ವ್ಯವಸ್ಥೆಯಲ್ಲಿ ಅಷ್ಟೇನೂ ಅಭಿವೃದ್ಧಿಯನ್ನು ಕಾಣದೆ ಹೋಗಿದ್ದ ತೆಲಂಗಾಣ ಪ್ರದೇಶದಲ್ಲಿ ಸ್ಥಿರಾಸ್ತಿಗಳನ್ನು ಖರೀದಿಸಿ, ಬಂಡವಾಳ ಹೂಡಿ, ಉದ್ಯಮಗಳನ್ನು ಸ್ಥಾಪಿಸುವುದು ಕರಾವಳಿ-ರಾಯಲ್‌ಸೀಮ ಪ್ರದೇಶದ ಶ್ರೀಮಂತ ಉದ್ಯಮಿಗಳಿಗೆ ಕಷ್ಟವಾಗಲಿಲ್ಲ.

ಏತನ್ಮಧ್ಯೆ ವಿಶಾಲಾಂಧ್ರ ಸ್ಥಾಪನೆಯ ಸಂದರ್ಭದಲ್ಲಿ ಏರ್ಪಟ್ಟಿದ್ದ ಒಡಂಬಡಿಕೆಗಳು ಪರಿಣಾಮಕಾರಿಯಾಗಿ ಜಾರಿಯಾಗಿರಲಿಲ್ಲ. 1968ರಲ್ಲಿ ಈ ಒಪ್ಪಂದದ ನವೀಕರಣವಾಗಬೇಕಿತ್ತು. ಈ ಸಂದರ್ಭದಲ್ಲಿ ಒಪ್ಪಂದವನ್ನು ಯಥಾವತ್ ಅನುಷ್ಠಾನಗೊಳಿಸಬೇಕೆಂಬ ವಿದ್ಯಾರ್ಥಿಗಳ ಬೇಡಿಕೆ ತೆಲಂಗಾಣ ಪ್ರಾಂತ್ಯದಾದ್ಯಂತ ಮೊಳಗಿತ್ತು. ಸೂಕ್ತ ಕ್ರಮ ಕೈಗೊಳ್ಳಲು ಕೇಂದ್ರ-ರಾಜ್ಯ ಸರ್ಕಾರಗಳನ್ನು ಆಗ್ರಹಿಸಲು ಮುಂದಾದ ವಿದ್ಯಾರ್ಥಿಗಳ ಹೋರಾಟ ಪ್ರತ್ಯೇಕ ರಾಜ್ಯದ ಬೇಡಿಕೆಯಲ್ಲಿ ಪರ್ಯವಸಾನ ಹೊಂದಿತ್ತು. ಈ ಬೇಡಿಕೆ ಮತ್ತು ತೆಲಂಗಾಣ ಜನತೆಯ ಆಶೋತ್ತರಗಳು ತಾತ್ವಿಕವಾಗಿಯಾದರೂ ಸ್ವೀಕಾರಾರ್ಹವಾಗಿದ್ದವು. ಜನಸಂಖ್ಯೆ ಮತ್ತು ವಿಸ್ತೀರ್ಣ ಎರಡರಲ್ಲೂ ದೇಶದಲ್ಲಿ ಐದನೆಯ ಸ್ಥಾನ ಪಡೆದಿರುವ ಆಂಧ್ರಪ್ರದೇಶದ ಒಟ್ಟು 23 ಜಿಲ್ಲೆಗಳಲ್ಲಿ 10 ಜಿಲ್ಲೆಗಳು ತೆಲಂಗಾಣ ಪ್ರದೇಶದಲ್ಲಿವೆ. 9 ಜಿಲ್ಲೆಗಳು ಸಾವಿರ ಕಿಲೋಮೀಟರ್ ವಿಸ್ತೀರ್ಣದ ಕರಾವಳಿ ಪ್ರದೇಶದಲ್ಲಿದ್ದರೆ, 4 ಜಿಲ್ಲೆಗಳು ರಾಯಲ್‌ಸೀಮ ಪ್ರದೇಶದಲ್ಲಿವೆ.

ಹೈದರಾಬಾದ್ ಪ್ರಾಂತ್ಯವನ್ನು ಆಳುತ್ತಿದ್ದ ನಿರಂಕುಶ ಪ್ರಭು ನಿಜಾಮನ ಆಳ್ವಿಕೆಯ ಊಳಿಗಮಾನ್ಯ ವ್ಯವಸ್ಥೆಗೆ ಒಳಪಟ್ಟಿದ್ದ ತೆಲಂಗಾಣ ಒಣ ಪ್ರದೇಶವಾಗಿದ್ದು ಮಳೆಯಾಧಾರಿತ ಕೃಷಿಯನ್ನೇ ಅವಲಂಬಿಸಿತ್ತು. ಆದರೆ ಗೋದಾವರಿ-ಕೃಷ್ಣಾ ನದಿಗಳಿಂದ ಫಲವತ್ತಾದ ಭೂಮಿಯನ್ನು ಪಡೆದಿದ್ದ ಕರಾವಳಿ ಪ್ರದೇಶ ಬ್ರಿಟೀಷ್ ಇಂಜಿನಿಯರ್ ಆರ್ಥರ್ ಕಾಟನ್ ಪರಿಶ್ರಮದಿಂದ ನೀರಾವರಿ ಸೌಲಭ್ಯವನ್ನೂ ಹೊಂದಿತ್ತು. ಯಾವುದೇ ರೀತಿಯ ನೀರಾವರಿ ಸೌಲಭ್ಯದಿಂದ ವಂಚಿತರಾಗಿದ್ದ ತೆಲಂಗಾಣ ಜನತೆ ಮಳೆಯಾಧಾರಿತ ಕೃಷಿಯನ್ನೇ ಅವಲಂಬಿಸಬೇಕಿತ್ತು. ಹಾಗಾಗಿ ತೆಲಂಗಾಣ ಪ್ರದೇಶ ಮತ್ತು ಇದೇ ಕಾರಣಗಳಿಗಾಗಿ ರಾಯಲ್‌ಸೀಮ ಪ್ರದೇಶ ಹಿಂದುಳಿಯಬೇಕಾಯಿತು. ಇತರ ಎರಡು ಪ್ರಾಂತ್ಯಗಳಿಗೆ ಹೋಲಿಸಿದರೆ ತೆಲಂಗಾಣದ ವೈಶಿಷ್ಟ್ಯತೆಯೇ ಅಲ್ಲಿನ ಸಮಸ್ಯೆಗಳಿಗೂ ಕಾರಣವಾಗಿದೆ. ಸ್ವಾತಂತ್ರ್ಯಪೂರ್ವದಿಂದಲೂ ಆರ್ಥಿಕ-ಸಾಮಾಜಿಕ ಅಭಿವೃದ್ಧಿಯಿಂದ ವಂಚಿತವಾಗಿರುವ ಈ ಪ್ರದೇಶದ ಪ್ರಗತಿಗಾಗಿ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸಿದರೂ, ಎಲ್ಲವೂ ಹಾಳೆಗಳಲ್ಲೇ ಉಳಿದಿರುವುದು ವಿಪರ್ಯಾಸ.

ಈ ಹಿನ್ನೆಲೆಯಲ್ಲೇ 1969ರ ತೆಲಂಗಾಣ ಹೋರಾಟವನ್ನೂ ನೋಡಬೇಕಾಗುತ್ತದೆ. ವಿದ್ಯಾರ್ಥಿಗಳ ಚಳುವಳಿಯ ಮೂಲಕ ಗಂಭೀರ ಸ್ವರೂಪ ಪಡೆದ ತೆಲಂಗಾಣ ವಿಮೋಚನಾ ಹೋರಾಟಕ್ಕೆ ರಾಜಕೀಯವಾಗಿ ಬೆಂಬಲ ನೀಡಿದ್ದು ಮರಿ ಚನ್ನಾರೆಡ್ಡಿ ಎಂಬ ಕಾಂಗ್ರೆಸ್ ನಾಯಕ ಮತ್ತು ಅವರ ಸಹಚರರು. ತೆಲಂಗಾಣ ಪ್ರಾಂತ್ಯದ ಹಿಂದುಳಿಯುವಿಕೆ, ನಿರುದ್ಯೋಗ ಸಮಸ್ಯೆ ಮತ್ತು ಅಭಿವೃದ್ಧಿ ಹೀನತೆಯನ್ನು ಕೇಂದ್ರೀಕರಿಸಿ ಮರಿ ಚನ್ನಾರೆಡ್ಡಿ ಭಾರಿ ಆಂದೋಲನವನ್ನೇ ಹಮ್ಮಿಕೊಂಡಿದ್ದರು. ತೆಲಂಗಾಣ ಪ್ರಜಾಸಮಿತಿಯ ನೇತೃತ್ವದಲ್ಲಿ ನಡೆದ ಈ ಹೋರಾಟ ಕ್ರಮೇಣ ತನ್ನ ಕಾವು ಕಳೆದುಕೊಳ್ಳಲಾರಂಭಿಸಿತ್ತು. 1971ರ ಚುನಾವಣೆಗಳಲ್ಲಿ ತೆಲಂಗಾಣ ಪ್ರಜಾಸಮಿತಿ ಈ ಪ್ರಾಂತ್ಯದ ಎಲ್ಲಾ 16 ಲೋಕಸಭೆ ಮತ್ತು ಬಹುಪಾಲು ವಿಧಾನಸಭಾ ಕ್ಷೇತ್ರಗಳಲ್ಲಿ ಜಯ ಸಾಧಿಸಿತ್ತು. ಆದರೆ ಪ್ರಜಾಸಮಿತಿಯ ನಾಯಕತ್ವ ವಹಿಸಿದ್ದ ಮರಿ ಚನ್ನಾರೆಡ್ಡಿ ಸಮಿತಿಯನ್ನು ಕಾಂಗ್ರೆಸ್ ಪಕ್ಷದೊಡನೆ ವಿಲೀನಗೊಳಿಸುವ ಮೂಲಕ ತೆಲಂಗಾಣ ಹೋರಾಟಕ್ಕೆ ಇತಿಶ್ರೀ ಹಾಡಿದ್ದರು. ವಿದ್ಯಾರ್ಥಿ-ಯುವಜನತೆಯ ನೇತೃತ್ವದಲ್ಲಿ ಗಂಭೀರ ಸ್ವರೂಪ ಪಡೆಯುತ್ತಿದ್ದ ತೆಲಂಗಾಣ ಹೋರಾಟವನ್ನು ಕೊನೆಗಳಿಸುವ ದುರುದ್ದೇಶದಿಂದಲೇ ಚನ್ನಾರೆಡ್ಡಿ ಸಮಿತಿಯನ್ನು ಸ್ಥಾಪಿಸಿ, ಕಾಂಗ್ರೆಸ್ ಪಕ್ಷದೊಡನೆ ಸೇರಿಕೊಂಡು, ಚಳುವಳಿಯ ಮುಂಚೂಣಿಯಲ್ಲಿದ್ದ ಮಹಿಳಾ ಸಮಿತಿ ಮತ್ತು ವಿದ್ಯಾರ್ಥಿ ಸಮಿತಿಗಳನ್ನು ನಿಷ್ಕ್ರಿಯಗೊಳಿಸಿದರೆಂಬ ಮಾತೂ ಕೇಳಿಬಂದಿತ್ತು.

ಆದರೆ 1971ರ ನಂತರ ತೆಲಂಗಾಣ ಹೋರಾಟ ಅಂತ್ಯಗೊಂಡರೂ ಪ್ರಮುಖ ಸಮಸ್ಯೆಗಳು ಬಗೆಹರಿಯಲಿಲ್ಲ. 1919ರಲ್ಲಿ ನಿಜಾಮರ ಆಳ್ವಿಕೆಯಲ್ಲಿ ಜಾರಿಗೊಳಿಸಿದ್ದ ಫರ್ಮಾನ್ ಶಾಸನದ ಅನ್ವಯ ತೆಲಂಗಾಣ ಪ್ರಾಂತ್ಯದಲ್ಲಿ ಮುಲ್ಕಿಗಳಿಗೆ ಮಾತ್ರ ನೌಕರಿ ನೀಡಬೇಕೆಂದು ಆದೇಶಿಸಲಾಗಿತ್ತು. ಈ ಶಾಸನದ ಪ್ರಕಾರ ತೆಲಂಗಾಣ ಪ್ರಾಂತ್ಯದಲ್ಲಿ ಜನಿಸಿದವರು ಅಥವಾ ಹದಿನೈದು ವರ್ಷಗಳಿಗೂ ಹೆಚ್ಚು ಕಾಲ ಅಲ್ಲಿ ನೆಲೆಸಿ ತಮ್ಮ ಸ್ವಕ್ಷೇತ್ರಕ್ಕೆ ಮರಳುವುದಿಲ್ಲವೆಂದು ಪ್ರಮಾಣ ಪತ್ರ ಸಲ್ಲಿಸಿದವರನ್ನು ಮಾತ್ರ ಮುಲ್ಕಿಗಳೆಂದು ಪರಿಗಣಿಸಲಾಗುತ್ತಿತ್ತು. ಈ ಶಾಸನವನ್ನು ಆಧರಿಸಿ 1969ರಲ್ಲಿ ಆಂಧ್ರ ಸರ್ಕಾರ 25000 ಸ್ಥಳೀಯರಲ್ಲದ ನೌಕರ

ಚಂದ್ರಶೇಖರ ರಾವ್

ರನ್ನು ಅವರ ಸ್ವಕ್ಷೇತ್ರಗಳಿಗೆ ಹಿಂದಿರುಗುವಂತೆ ಆದೇಶಿಸಿತ್ತು. ಆದರೆ ಆಂಧ್ರ ಪ್ರದೇಶದ ಉಚ್ಚ ನ್ಯಾಯಾಲಯವು ಈ ಆದೇಶವನ್ನು ಅಸಿಂಧು ಎಂದು ಪರಿಗಣಿಸಿ, ಆಂಧ್ರ ಪ್ರದೇಶವನ್ನು ಒಂದು ರಾಜ್ಯ ಎಂದು ಪರಿಗಣಿಸಿದ ಮೇಲೆ ಸಂವಿಧಾನಿಕವಾಗಿ ಮುಲ್ಕಿ ಕಾನೂನು ಅನ್ವಯಿಸುವುದಿಲ್ಲ ಎಂದು ತೀರ್ಪು ನೀಡಿತ್ತು. 1972ರಲ್ಲಿ ಸರ್ವೋಚ್ಚ ನ್ಯಾಯಾಲಯ ಸರ್ಕಾರದ ಮೇಲ್ ಮನವಿಯನ್ನು ಪರಿಶೀಲಿಸಿ ಮುಲ್ಕಿ ಶಾಸನವನ್ನು ಅಂಗೀಕರಿಸಿತ್ತು. ಈ ತೀರ್ಪಿನ ಪರಿಣಾಮವಾಗಿ ಮುಲ್ಕಿಗಳಲ್ಲದವರಿಗೆ, ಅಂದರೆ ತೆಲಂಗಾಣೇತರರಿಗೆ ರಾಜಧಾನಿ ಹೈದರಾಬಾದನ್ನೂ ಸೇರಿದಂತೆ ತೆಲಂಗಾಣ ಪ್ರಾಂತ್ಯದಲ್ಲಿ ನೌಕರಿ ಅಲಭ್ಯವಾಯಿತು. ಈ ಹಿನ್ನೆಲೆಯಲ್ಲೇ ಅಖಂಡ ಆಂಧ್ರ ಪ್ರದೇಶಕ್ಕಾಗಿ ಜೈ ಆಂಧ್ರ ಚಳುವಳಿ ಹುಟ್ಟಿಕೊಂಡು, ತೆಲಂಗಾಣದಿಂದ ಪ್ರತ್ಯೇಕವಾಗುವ ಆಗ್ರಹಗಳೂ ಕೇಳಿಬಂದವು.

ಜೈ ಆಂಧ್ರ ಚಳುವಳಿಯ ಹಿನ್ನೆಲೆಯಲ್ಲೇ 1973ರಲ್ಲಿ ಹನ್ನೊಂದು ತಿಂಗಳ ಕಾಲ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಗಿತ್ತು. 1973ರ ಚುನಾವಣೆಗಳಲ್ಲಿ ಜಲಗಂ ವೆಂಗಲರಾವ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಈ ಅವಧಿಯಲ್ಲಿ ಮುಲ್ಕಿ ಶಾಸನದ ಬಗ್ಗೆ ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅಸಿಂಧುಗೊಳಿಸಲಾಯಿತು. ತೆಲಂಗಾಣ ಹೋರಾಟ ಮರುಕಳಿಸದಂತೆ ಎಚ್ಚರ ವಹಿಸಲು ಆರು ಅಂಶಗಳ ಸೂತ್ರವನ್ನು ಸಿದ್ಧಪಡಿಸಲಾಯಿತು. ಶೈಕ್ಷಣಿಕ ಸಂಸ್ಥೆಗಳಲ್ಲಿ, ನೇರ ನೇಮಕಾತಿಯಲ್ಲಿ ತೆಲಂಗಾಣದವರಿಗೆ ಪ್ರಾಮುಖ್ಯತೆ ನೀಡುವುದು ಈ ಅಂಶಗಳಲ್ಲಿ ಪ್ರಮುಖವಾಗಿದ್ದವು ಆದರೆ 1980ರ ದಶಕದಲ್ಲಿ ಎನ್.ಟಿ.ರಾಮರಾವ್ ತೆಲುಗು ದೇಶಂ ಸ್ಥಾಪಿಸಿದ ನಂತರ ತೆಲುಗು ಐಕ್ಯತೆ ಹೆಚ್ಚಿನ ಪ್ರಾಮುಖ್ಯತೆ ಗಳಿಸಿ ತೆಲಂಗಾಣ ಹೋರಾಟ ನೇಪಥ್ಯಕ್ಕೆ ಸರಿದಿತ್ತು.

ರಾಜಕೀಯ ಲೇಪನ

ಎನ್.ಟಿ.ರಾಮರಾವ್ ಅವರ ವರ್ಚಸ್ಸಿನ ಹಿನ್ನೆಲೆಯಲ್ಲಿ ತೆಲಂಗಾಣ ವಿವಾದ ನೇಪಥ್ಯಕ್ಕೆ ಸರಿದರೂ ತೆಲಂಗಾಣದ ಜನತೆಯಲ್ಲಿನ ಭಾವನೆಗಳು ಬದಲಾಗಿರಲಿಲ್ಲ. 1996ರ ತೆಲಂಗಾಣ ಪ್ರಜಾ ಸಮಿತಿಯ ಸಮಾವೇಶದಲ್ಲಿ ಈ ಭಾವನೆಗಳು ಸ್ಪಷ್ಟವಾಗಿ ವ್ಯಕ್ತವಾಗಿದ್ದವು. ಪ್ರಜಾ ಸಮಿತಿಯ ಸಂಖ್ಯಾ ಬಲ ಕ್ಷೀಣಿಸಿದ್ದರೂ ರಾಷ್ಟ್ರೀಯತೆಯ ಭಾವನೆಗಳು ಮತ್ತು ಅಸ್ಮಿತೆಗಳು ದೃಢವಾಗಿದ್ದುದು ಇಲ್ಲಿ ವ್ಯಕ್ತವಾಗಿತ್ತು. "ವಸಾಹತೀಕರಣ", "ಶೋಷಣೆ" ಮುಂತಾದ ಘೋಷಣೆಗಳನ್ನು ಈ ಸಮಾವೇಶದಲ್ಲಿ ಕೇಳಬಹುದಾಗಿತ್ತು. ಕೃಷ್ಣಾ ಗೋದಾವರಿ ನದಿಗಳ ಹೆಚ್ಚಿನ ಜಲಾನಯನ ಪ್ರದೇಶವನ್ನು ಹೊಂದಿದ್ದರೂ ಕನಿಷ್ಠ ಪ್ರಮಾಣದ ನೀರನ್ನು ಪಡೆಯುವ ತೆಲಂಗಾಣದ ಜನತೆಯ ಆಕ್ರೋಶವೂ ಸಹಜವಾದದ್ದಾಗಿದೆ.

ಈ ಪ್ರಾಂತ್ಯದಲ್ಲಿ ಶೇ.70ರಷ್ಟು ನೀರಾವರಿ ಕೊಳವೆ ಬಾವಿಗಳನ್ನು ಅವಲಂಬಿಸಿರುವುದು ಕೃಷಿ ಉದ್ಯಮವೇ ದುಸ್ತರವಾಗಿದೆ. ಇಲ್ಲಿನ ಮಳೆಯಾಧಾರಿತ ಪ್ರದೇಶಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಪರಾಕಾಷ್ಠೆ ತಲುಪಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ತೆಲಂಗಾಣ ಪ್ರಾಂತ್ಯದ ಜನತೆಯ ಅಸ್ಮಿತೆಯನ್ನು ಪ್ರಬಲ ಸಮುದಾಯಗಳು ನುಂಗಿಹಾಕುತ್ತಿರುವುದು ಇಲ್ಲಿನ ಜನ ತೆಯ ಆಕ್ರೋಶಕ್ಕೆ ಕಾರಣವಾಗಿದೆ. ಮತ್ತೊಂದೆಡೆ ತೆಲಂಗಾಣದ ಸಂಸ್ಕೃತಿಯನ್ನು ಲೇವಡಿ ಮಾಡಲಾಗುತ್ತಿದೆ ಎಂಬ ಭಾವನೆ ಇಲ್ಲಿನ ಜನರಲ್ಲಿ ದಟ್ಟವಾಗಿ ನೆಲೆ ಮಾಡಿದೆ. ತೆಲುಗು ಸಿನಿಮಾಗಳಲ್ಲೂ ಸಹ ಆಂಧ್ರದ ಅಥವಾ ರಾಯಲ್‌ಸೀಮೆಯ ಹೀರೋ ತೆಲಂಗಾಣದ ವಿಲನ್ ಪಾತ್ರಗಳು ರಾರಾಜಿಸುತ್ತಿದ್ದು, ತೆಲಂಗಾಣದ ಭಾಷೆಯನ್ನು ಪರಿಹಾಸ್ಯ ಮಾಡಲಾಗುತ್ತಿದೆ ಎಂಬ ಭಾವನೆಯೂ ದಟ್ಟವಾಗುತ್ತಿದೆ.

ಇಂತಹ ಸಂದರ್ಭದಲ್ಲೇ 2001ರಲ್ಲಿ ತೆಲುಗು ದೇಶಂ ಪಕ್ಷದಲ್ಲಿದ್ದ ಚಂದ್ರಶೇಖರ ರಾವ್ ಮಂತ್ರಿ ಮಂಡಲದಲ್ಲಿ ತಮಗೆ ಸೂಕ್ತ ಸ್ಥಾನ ದೊರೆಯಲಿಲ್ಲ ಎಂದು ಆರೋಪಿಸಿ ತಮ್ಮ ವಿಧಾನಸಭಾ ಉಪಾಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿ ತೆಲಂಗಾಣರಾಷ್ಟ್ರ ಸಮಿತಿ(ಟಿಆರ್‌ಎಸ್) ಎಂಬ ಸಂಘಟನೆಯನ್ನು ಹುಟ್ಟುಹಾಕಿದ್ದರು. ತಮ್ಮ ರಾಜಕೀಯ ಭವಿಷ್ಯವನ್ನು ರೂಪಿಸಿಕೊಳ್ಳಲು ಚಂದ್ರಶೇಖರ ರಾವ್‌ಗೆ ತೆಲಂಗಾಣ ಜನತೆಯ ಆಕ್ರೋಶಗಳು ದಾಳಗಳಾಗಿ ಪರಿಣಮಿಸಿದ್ದವು. ತತ್ಪರಿಣಾಮವಾಗಿ 2002ರಲ್ಲಿ ಟಿಆರ್‌ಎಸ್ ಒಂದು ರಾಜಕೀಯ ಪಕ್ಷವಾಗಿ ರೂಪುಗೊಂಡಿತ್ತು. 1969ರ ಮರಿ ಚನ್ನಾರೆಡ್ಡಿಯಂತೆ ತಾನೂ ಪ್ರತ್ಯೇಕ ತೆಲಂಗಾಣಕ್ಕಾಗಿ ಹೋರಾಡಿ ರಾಜಕೀಯ ಪ್ರಾಶಸ್ತ್ಯ ಗಳಿಸಬಹುದು ಎಂಬ ಆಕಾಂಕ್ಷೆ ಚಂದ್ರಶೇಖರ ರಾವ್ ಅವರಲ್ಲಿ ಇದ್ದಿರಬಹುದು. ಕಾಂಗ್ರೆಸ್ ಪಾಳಯದಲ್ಲೇ ಪಳಗಿ ತೆಲುಗುದೇಶಂ ಪಕ್ಷದಲ್ಲಿ ತಮ್ಮ ರಾಜಕೀಯ ಅಸ್ತಿತ್ವವನ್ನು ಕಂಡುಕೊಂಡ ರಾವ್ 2004ರ ಚುನಾವಣೆಗಳಲ್ಲಿ ಕಾಂಗ್ರೆಸ್‌ನೊಡನೆ ಕೈಜೋಡಿಸುವ ಮೂಲಕ ಕೇಂದ್ರದಲ್ಲಿ ಯುಪಿಎ ಸರ್ಕಾರದಲ್ಲಿ ಭಾಗಿಯಾಗಿದ್ದರು.

> **ಎನ್.ಟಿ.ರಾಮರಾವ್ ಅವರ ವರ್ಚಸ್ಸಿನ ಹಿನ್ನೆಲೆಯಲ್ಲಿ ತೆಲಂಗಾಣ ವಿವಾದ ನೇಪಥ್ಯಕ್ಕೆ ಸರಿದರೂ ತೆಲಂಗಾಣದ ಜನತೆಯಲ್ಲಿನ ಭಾವನೆಗಳು ಬದಲಾಗಿರಲಿಲ್ಲ. 1996ರ ತೆಲಂಗಾಣ ಪ್ರಜಾ ಸಮಿತಿಯ ಸಮಾವೇಶದಲ್ಲಿ ಈ ಭಾವನೆಗಳು ಸ್ಪಷ್ಟವಾಗಿ ವ್ಯಕ್ತವಾಗಿದ್ದವು. ಪ್ರಜಾ ಸಮಿತಿಯ ಸಂಖ್ಯಾ ಬಲ ಕ್ಷೀಣಿಸಿದ್ದರೂ ರಾಷ್ಟ್ರೀಯತೆಯ ಭಾವನೆಗಳು–ಅಸ್ಮಿತೆಗಳು ದೃಢವಾಗಿದ್ದುದು ಇಲ್ಲಿ ವ್ಯಕ್ತವಾಗಿತ್ತು. "ವಸಾಹತೀಕರಣ", "ಶೋಷಣೆ" ಮುಂತಾದ ಘೋಷಣೆಗಳನ್ನು ಈ ಸಮಾವೇಶದಲ್ಲಿ ಕೇಳಬಹುದಾಗಿತ್ತು. ಕೃಷ್ಣಾ ಗೋದಾವರಿ ನದಿಗಳ ಹೆಚ್ಚಿನ ಜಲಾನಯನ ಪ್ರದೇಶವನ್ನು ಹೊಂದಿದ್ದರೂ ಕನಿಷ್ಠ ಪ್ರಮಾಣದ ನೀರನ್ನು ಪಡೆಯುವ ತೆಲಂಗಾಣದ ಜನತೆಯ ಆಕ್ರೋಶವೂ ಸಹಜವಾದದ್ದಾಗಿದೆ.**

ಚುನಾವಣಾ ಸಂದರ್ಭದಲ್ಲಿ ಪ್ರತ್ಯೇಕ ತೆಲಂಗಾಣ ಬೆಂಬಲಿಸುವ ಆಶ್ವಾಸನೆ ನೀಡಿದ ಕಾಂಗ್ರೆಸ್ ಉತ್ತಮ ಫಲಿತಾಂಶವನ್ನೂ ಗಳಿಸಿತ್ತು. ಆದರೆ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ನಂತರ ಕಾಂಗ್ರೆಸ್ ಸರ್ಕಾರ ಪ್ರತ್ಯೇಕ ತೆಲಂಗಾಣ ಬೇಡಿಕೆಯನ್ನು ಪರಿಶೀಲಿಸಲು ಉಪಸಮಿತಿಯನ್ನು ರಚಿಸಿದ್ದನ್ನು ಹೊರತುಪಡಿಸಿ ಯಾವುದೇ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಿಲ್ಲ. ತಮ್ಮ ಬೇಡಿಕೆಗಳನ್ನು ಈಡೇರಿಸದ ಕಾಂಗ್ರೆಸ್ ನಾಯಕತ್ವದೊಡನೆ ಮುನಿಸಿಕೊಂಡು ಚಂದ್ರಶೇಖರ್ ರಾವ್ 2009ರಲ್ಲಿ ಪುನಃ ತೆಲುಗುದೇಶಂ ಪಕ್ಷದೊಡನೆ ಸೇರಿ, 2009ರ ಚುನಾವಣೆಗಳಲ್ಲಿ ಭಾರಿ ಹಿನ್ನಡೆ ಅನುಭವಿಸಿದ್ದರು. ಅಲ್ಲಿಯವರೆಗೂ ತೆಲುಗು ಭಾಷಿಕರ ಮತ್ತು ಅಖಂಡ ಆಂಧ್ರದ ಪ್ರತಿನಿಧಿಯಂತೆ ವರ್ತಿಸುತ್ತಿದ್ದ–ಪ್ರತ್ಯೇಕ ತೆಲಂಗಾಣಕ್ಕೆ ವಿರೋಧಿಸುತ್ತಿದ್ದ ಚಂದ್ರಬಾಬು ನಾಯ್ಡು ವೈಎಸ್‌ಆರ್ ನೇತೃತ್ವದ ಕಾಂಗ್ರೆಸ್ಸನ್ನು ಸೋಲಿಸಲು ಸೈದ್ಧಾಂತಿಕ ಶೀರ್ಷಾಸನವನ್ನೇ ಮಾಡಿ ಟಿಆರ್‌ಎಸ್‌ನೊಡನೆ ಮೈತ್ರಿ ಸಾಧಿಸಿದ್ದರು. ಆದರೆ ಆಂಧ್ರದ ಜನತೆಯಷ್ಟೇ ಅಲ್ಲ ತೆಲಂಗಾಣ ಪ್ರಾಂತ್ಯದ ಜನತೆಯೂ ಈ ಮೈತ್ರಿಕೂಟವನ್ನು ತಿರಸ್ಕರಿಸಿತ್ತು.

ಆದರೆ ರಾಜಶೇಖರ ರೆಡ್ಡಿಯವರ ಅಕಾಲಿಕ ಮರಣ ಮತ್ತು ತದನಂತರದಲ್ಲಿ ರಾಜ್ಯ ಕಾಂಗ್ರೆಸ್ ಪಕ್ಷದಲ್ಲುಂಟಾದ ವ್ಯತ್ಯಯಗಳು ಚಂದ್ರಶೇಖರ್ ರಾವ್ ಅವರ ರಾಜಕೀಯ ಆಕಾಂಕ್ಷೆಗಳು ಗರಿಗೆದರಲು ಪೂರಕವಾಗಿದ್ದವು. ಇದೇ ಸಂದರ್ಭದಲ್ಲಿ ವಿಶಾಲಾಂಧ್ರ, ಅಖಂಡ ಆಂಧ್ರದ ಪರವಾಗಿದ್ದ ತೆಲುಗುದೇಶಂ ಮತ್ತು ಸಿಪಿಐ ಪಕ್ಷಗಳು ಪ್ರತ್ಯೇಕ ತೆಲಂಗಾಣಕ್ಕೆ ಬೆಂಬಲ ವ್ಯಕ್ತಪಡಿಸಿದ್ದು, ಮತ್ತು ಚಿರಂಜೀವಿಯ ಪ್ರಜಾರಾಜ್ಯಂ ಸಹ ತನ್ನ ಬೆಂಬಲ ಸೂಚಿಸಿದ್ದು ಟಿಆರ್‌ಎಸ್ ಹೋರಾಟಕ್ಕೆ ಪುಷ್ಟಿ ನೀಡಿತ್ತು. ತೆಲಂಗಾಣ ಪ್ರಾಂತ್ಯದ ಕಾಂಗ್ರೆಸ್ ಶಾಸಕರೂ ಟಿಆರ್‌ಎಸ್‌ಗೆ ಪರೋಕ್ಷ ಬೆಂಬಲ ವ್ಯಕ್ತಪಡಿಸಿದ್ದರು. ಈ ಸಂದರ್ಭದಲ್ಲೇ ನವಂಬರ್ 29ರಿಂದ ಪ್ರತ್ಯೇಕ ತೆಲಂಗಾಣಕ್ಕಾಗಿ ಆಗ್ರಹಿಸಿ ಚಂದ್ರಶೇಖರ್ ರಾವ್ ಆಮರಣಾಂತ ಉಪವಾಸ ಸತ್ಯಾಗ್ರಹ ಹೂಡಿದ್ದು ಹೋರಾಟದ ಕಾವನ್ನು ಹೆಚ್ಚಿಸಿತ್ತು. ರಾವ್ ಅವರ ಆರೋಗ್ಯ ಬಿಗಡಾಯಿಸುತ್ತಿರುವಂತೆಲ್ಲಾ ತೆಲಂಗಾಣ ಪ್ರಾಂತ್ಯದಾದ್ಯಂತ ಪ್ರತಿಭಟನೆ ತೀವ್ರಗೊಂಡು, ಹಿಂಸಾತ್ಮಕ ಸ್ವರೂಪ ತಾಳಿತ್ತು.

ಕೇಂದ್ರ ಸರ್ಕಾರಕ್ಕೆ ತೆಲಂಗಾಣ ಸಮಸ್ಯೆಗಿಂತಲೂ, ಜಾಗತಿಕ ಬಂಡವಾಳದ ಸ್ವರ್ಗ ಎನಿಸಿದ್ದ ಹೈದರಾಬಾದ್ ನಗರದಲ್ಲಿ ಪ್ರತ್ಯೇಕತೆಯ ಕೂಗು ಮುಗಿಲು ಮುಟ್ಟಿದ್ದು ಹೆಚ್ಚಿನ ಸಮಸ್ಯೆಯಾಗಿತ್ತು. ಹಾಗಾಗಿಯೇ ಕಾಂಗ್ರೆಸ್ ಕೇಂದ್ರ ಸಮಿತಿ ರಾತ್ರೋರಾತ್ರಿ ಪ್ರತ್ಯೇಕ ತೆಲಂಗಾಣವನ್ನು

ಪರಿಗಣಿಸುವ ಘೋಷಣೆ ಮಾಡಿದ್ದನ್ನು ಗಮನಿಸಬೇಕು. ಪ್ರತ್ಯೇಕ ತೆಲಂಗಾಣ ಸೃಷ್ಟಿಸುವ ಮೂಲಕ ರಾಜಕೀಯ ಲಾಭ ಗಳಿಸುವ ಕಾಂಗ್ರೆಸ್‌ನ ಹುನ್ನಾರ ಪಕ್ಷಕ್ಕೆ ತಿರುಗು ಬಾಣವಾಗಲು ಹೆಚ್ಚಿನ ಸಮಯ ಬೇಕಾಗಲಿಲ್ಲ. ಪ್ರತ್ಯೇಕ ತೆಲಂಗಾಣದ ಕೂಗಿನ ಹಿನ್ನೆಲೆಯಲ್ಲೇ ಅಖಂಡ ಆಂಧ್ರದ ಕೂಗು ಸಹ ಮುಗಿಲು ಮುಟ್ಟಿತ್ತು. ಕಾಂಗ್ರೆಸ್ ನಾಯಕತ್ವದ ನಿರ್ಣಯವನ್ನು ವಿರೋಧಿಸಿ 79 ಶಾಸಕರು, 4 ಸಂಸದರು ರಾಜೀನಾಮೆ ನೀಡುವ ಮೂಲಕ ಸಂವಿಧಾನಿಕ ಬಿಕ್ಕಟ್ಟು ಸೃಷ್ಟಿಸಲಾಯಿತು. ಇದರಿಂದ ಕರಾವಳಿ ಆಂಧ್ರ ಮತ್ತು ರಾಯಲ್‌ಸೀಮ ಪ್ರದೇಶದಲ್ಲೂ ಪ್ರಕ್ಷುಬ್ಧ ವಾತಾವರಣ ಉಂಟಾಗಿತ್ತು. ಹೈದರಾಬಾದ್ ನಗರಕ್ಕೆ ಭೇಟಿ ನೀಡದಂತೆ ಅಮೆರಿಕದ ಸರ್ಕಾರ ಉದ್ಯಮಿಗಳಿಗೆ ಸೂಚನೆ ನೀಡಿದ್ದು ಕೇಂದ್ರ ಸರ್ಕಾರವನ್ನು ಕಂಗೆಡಿಸಿತ್ತು.

ಏತನ್ಮಧ್ಯೆ 1969ರಲ್ಲಿ ಆದಂತೆಯೇ ಈ ಬಾರಿಯೂ ವಿದ್ಯಾರ್ಥಿ ಯುವ ಸಮುದಾಯ ತೆಲಂಗಾಣ ಹೋರಾಟದಲ್ಲಿ ಸಕ್ರಿಯವಾಗಿದ್ದುದು ವಿಶಿಷ್ಟ ಸಂಗತಿ. ಒಸ್ಮಾನಿಯಾ ವಿಶ್ವವಿದ್ಯಾಲಯದಿಂದ ಪ್ರಾರಂಭವಾದ ವಿದ್ಯಾರ್ಥಿ ಚಳುವಳಿ ಶೀಘ್ರವಾಗಿ ಇಡೀ ತೆಲಂಗಾಣ ಪ್ರಾಂತ್ಯವನ್ನು ವ್ಯಾಪಿಸಿತ್ತು. ಪ್ರಥಮ ಅಥವಾ ಎರಡನೆ ಪೀಳಿಗೆಯವರಾದ ಪ್ರಸ್ತುತ ವಿದ್ಯಾರ್ಥಿ ಸಮುದಾಯಕ್ಕೆ ಪ್ರತ್ಯೇಕ ತೆಲಂಗಾಣ ರಾಜ್ಯದಲ್ಲಿ ಉತ್ತಮ ಉದ್ಯೋಗಾವಕಾಶಗಳು ದೊರೆಯುವ ಆಶಾಭಾವನೆ ಮೂಡಿದ್ದರೂ ಅಚ್ಚರಿಯೇನಿಲ್ಲ. ಹಾಗಾಗಿಯೇ ಈ ಹೋರಾಟದಲ್ಲಿ ತೆಲಂಗಾಣ ವಿದ್ಯಾರ್ಥಿ ಸಂಘಟನೆ, ಲಂಬಾಡ ಹಕ್ಕುಗಳ ಹೋರಾಟ ಸಮಿತಿ, ನಯಿ ಬ್ರಾಹ್ಮಿಣ್ ಸಂಘಟನೆ, ರಯ್ತಾಕ ಸಂಘಂ, ತೆಲಂಗಾಣ ಬುದ್ಧಿಜೀವಿಗಳ ವೇದಿಕೆ ಇನ್ನೂ ಹಲವಾರು ಸಂಘಟನೆಗಳು ಬೆಂಬಲ ಸೂಚಿಸಿ ಹೋರಾಟದಲ್ಲಿ ತೊಡಗಿದ್ದನ್ನು ಕಾಣಬಹುದು.

ಆದರೆ ತೆಲಂಗಾಣದ ಜನತೆಗೆ ಹಿಂಸಾತ್ಮಕ ಚಳುವಳಿ ಬೇಕಿಲ್ಲವೆಂಬ ಅಂಶವೂ ಪ್ರಸ್ತುತ ಸಂದರ್ಭದಲ್ಲಿ ಸಾಬೀತಾಗಿದೆ. ಪ್ರತ್ಯೇಕ ತೆಲಂಗಾಣ ಬೇಡಿಕೆಯನ್ನು ಸಮರ್ಥಿಸುವ ಅನೇಕ ಬುದ್ಧಿಜೀವಿಗಳು, ಸಂಘಸಂಸ್ಥೆಗಳು ಮತ್ತು ಸಮಾಜಸೇವಾ ಸಂಸ್ಥೆಗಳು ಅಹಿಂಸಾತ್ಮಕ-ಪ್ರಜಾತಾಂತ್ರಿಕ ಹೋರಾಟಕ್ಕಾಗಿ ಆಗ್ರಹಿಸಿವೆ. ಇತ್ತೀಚಿನ ಗಲಭೆಗಳಲ್ಲಿ ಮಾವೋವಾದಿಗಳು ನುಸುಳಿದ್ದಾರೆ ಎಂಬ ಪೊಲೀಸರ ಗುಮಾನಿಯಿಂದ ಅನೇಕ ಸ್ಥಳಗಳಲ್ಲಿ ಅನವಶ್ಯಕವ ಬಂಧನಗಳು ಜರುಗಿದ್ದು ಜನತೆಯಲ್ಲಿ ಆತಂಕ ಹುಟ್ಟಿಸಿದೆ. ಚಳುವಳಿಯ ಸಂದರ್ಭದಲ್ಲಿ ಉಪಯೋಗಿಸಿದ ಘೋಷಣೆಗಳು ಉಗ್ರ ಹೋರಾಟವನ್ನು ಸೂಚಿಸಿದರೂ ತೆಲಂಗಾಣ ಚಳುವಳಿ ಶಾಂತಿಯುತವಾದದ್ದೆಂದೇ ಹೇಳಬಹುದು. 1948ರಲ್ಲಿನ ಕಮ್ಯುನಿಸ್ಟ್ ಪಕ್ಷದ ಹೋರಾಟ, 70ರ ದಶಕದ ನಕ್ಸಲೀಯರ ಹೋರಾಟಗಳ ವೈಫಲ್ಯದ ಹಿನ್ನೆಲೆಯಲ್ಲಿ ತೆಲಂಗಾಣದ ಜನತೆಗೆ ಹಿಂಸಾತ್ಮಕ ಹೋರಾಟದಲ್ಲಿ ನಂಬಿಕೆ ಕುಂದಿರುವುದೂ ಸ್ಪಷ್ಟವಾಗಿ ಗೋಚರಿಸುತ್ತದೆ. ಹಾಗಾಗಿಯೇ ಮಾವೋವಾದಿ ಪಕ್ಷವು ಪ್ರಸಕ್ತ ಹೋರಾಟಕ್ಕೆ ನೇತೃತ್ವ ನೀಡಲು ಹಿಂಜರಿದಿರುವುದನ್ನು ಕಾಣಬಹುದು. ಆದರೆ ಜನರ ಈ ಶಾಂತಿ ಪ್ರಿಯತೆಗೆ ಸೂಕ್ತವಾಗಿ ಸ್ಪಂದಿಸಿ ಸಮಸ್ಯೆಯನ್ನು ಪರಿಹರಿಸಲು ಆಳ್ವಿಕರು ವಿಫಲರಾಗಿರುವುದು ಸ್ಪಷ್ಟವಾಗಿದೆ.

ತೆಲಂಗಾಣದ ಜನತೆಗೆ ಹಿಂಸಾತ್ಮಕ ಚಳುವಳಿ ಬೇಕಿಲ್ಲವೆಂಬ ಅಂಶವೂ ಪ್ರಸ್ತುತ ಸಂದರ್ಭದಲ್ಲಿ ಸಾಬೀತಾಗಿದೆ. ಪ್ರತ್ಯೇಕ ತೆಲಂಗಾಣ ಬೇಡಿಕೆಯನ್ನು ಸಮರ್ಥಿಸುವ ಅನೇಕ ಬುದ್ಧಿಜೀವಿಗಳು, ಸಂಘಸಂಸ್ಥೆಗಳು ಮತ್ತು ಸಮಾಜಸೇವಾ ಸಂಸ್ಥೆಗಳು ಅಹಿಂಸಾತ್ಮಕ-ಪ್ರಜಾತಾಂತ್ರಿಕ ಹೋರಾಟಕ್ಕಾಗಿ ಆಗ್ರಹಿಸಿವೆ. ಇತ್ತೀಚಿನ ಗಲಭೆಗಳಲ್ಲಿ ಮಾವೋವಾದಿಗಳು ನುಸುಳಿದ್ದಾರೆ ಎಂಬ ಪೊಲೀಸರ ಗುಮಾನಿಯಿಂದ ಅನೇಕ ಸ್ಥಳಗಳಲ್ಲಿ ಅನವಶ್ಯಕವ ಬಂಧನಗಳು ಜರುಗಿದ್ದು ಜನತೆಯಲ್ಲಿ ಆತಂಕ ಹುಟ್ಟಿಸಿದೆ. ಚಳುವಳಿಯ ಸಂದರ್ಭದಲ್ಲಿ ಉಪಯೋಗಿಸಿದ ಘೋಷಣೆಗಳು ಉಗ್ರ ಹೋರಾಟವನ್ನು ಸೂಚಿಸಿದರೂ ತೆಲಂಗಾಣ ಚಳುವಳಿ ಶಾಂತಿಯುತವಾದದ್ದೆಂದೇ ಹೇಳಬಹುದು.

ಪ್ರತ್ಯೇಕತೆಯ ಗೊಂದಲಗಳು

ಒಂದು ವೇಳೆ ತೆಲಂಗಾಣವನ್ನು ಪ್ರತ್ಯೇಕ ರಾಜ್ಯವನ್ನಾಗಿ ರೂಪಿಸಿದ್ದೇ ಆದಲ್ಲಿ ದೇಶಾದ್ಯಂತ ಪ್ರತ್ಯೇಕತೆಯ ಕೂಗು ಪರಾಕಾಷ್ಠೆ ತಲುಪುತ್ತದೆ ಎಂಬ ಸತ್ಯಾಂಶವನ್ನು ಕೇಂದ್ರ ಸರ್ಕಾರ ಗ್ರಹಿಸಬೇಕಾಗಿದೆ. ತೆಲಂಗಾಣ ಸ್ಥಾಪನೆಯ ಬಗ್ಗೆ ಆಂಧ್ರ ವಿಧಾನಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದು ಕಾಂಗ್ರೆಸ್ ನಾಯಕತ್ವದ ಕೇಂದ್ರ ಯುಪಿಎ ಸರ್ಕಾರ ಘೋಷಿಸಿದ ಕೂಡಲೇ ಗೋರ್ಖಾ ಜನಮುಕ್ತಿ ಮೋರ್ಚ ಗೋರ್ಖಾಲ್ಯಾಂಡ್‌ಗಾಗಿ ಹೋರಾಟಕ್ಕೆ ಅಣಿಯಾಗಿತ್ತು. ಮೋರ್ಚಾದ ನಾಯಕರು ಉಪವಾಸ ಸತ್ಯಾಗ್ರಹಕ್ಕೆ ಅಣಿಯಾಗಿದ್ದರು. ಮೂರು ದಿನಗಳ ಕಾಲ ಡಾರ್ಜಿಲಿಂಗ್ ಪ್ರದೇಶ ಬಂದ್ ಆಚರಿಸಿತು. ಕಣಿವೆ ಪ್ರದೇಶಗಳಲ್ಲಿ ಬಾಂಗ್ಲಾ ಭಾಷಾ ಬಚಾವೋ ಆಂದೋಲನ ಮತ್ತು ಇತರ ಬಂಗಾಲಿ ಸಂಘಟನೆಗಳೊಡನೆ ಗೋರ್ಖ ಜನಮುಕ್ತಿ ಮೋರ್ಚ ಸಂಘರ್ಷಕ್ಕಿಳಿದಿತ್ತು. ಮತ್ತೊಂದೆಡೆ ಕಾಮಾಟ್‌ಪುರ ಪ್ರಗತಿಪರ ಪಕ್ಷವು ಕಾಮಾಟಪುರವನ್ನು ಪ್ರತ್ಯೇಕ ರಾಜ್ಯವನ್ನಾಗಿ ಘೋಷಿಸಲು ಆಗ್ರಹಿಸಲಾರಂಭಿಸಿತು. ಉತ್ತರ ಬಂಗಾಲದಲ್ಲಿ ಕೂಚ್ ಬಿಹಾರ್ ಪ್ರಾಂತ್ಯವನ್ನು ಪ್ರತ್ಯೇಕಗೊಳಿಸುವ ಆಗ್ರಹವೂ ಬಲವಾಗತೊಡಗಿತು.

ಮಹಾರಾಷ್ಟ್ರದಲ್ಲಿ ಹಲವಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ವಿದರ್ಭ ರಾಜ್ಯ ಸ್ಥಾಪನೆಗೂ ಭಾಜಪವನ್ನೂ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಆಗ್ರಹಿಸಲಾರಂಭಿಸಿವೆ. ಪ್ರತ್ಯೇಕ ವಿದರ್ಭ ಹೋರಾಟ ಇನ್ನೂ ತೀವ್ರತೆಯನ್ನು ಪಡೆದುಕೊಂಡಿಲ್ಲವಾದರೂ, ತೆಲಂಗಾಣವನ್ನು ಪ್ರತ್ಯೇಕ ರಾಜ್ಯ ಮಾಡುವುದಾದಲ್ಲಿ ವಿದರ್ಭವನ್ನು ಏಕೆ ಮಾಡಬಾರದು ಎಂಬ ಪ್ರಶ್ನೆ ಕೇಳಿಬರುತ್ತಿದೆ. ಮಹಾರಾಷ್ಟ್ರದ 11 ಜಿಲ್ಲೆಗಳನ್ನೊಳಗೊಂಡ ವಿದರ್ಭ ಪ್ರದೇಶ ಮಳೆಯಾಧಾರಿತ ಕ್ಷೇತ್ರವಾಗಿದ್ದು ಹತ್ತಿ ಬೆಳೆಗೆ ಪ್ರಸಿದ್ಧವಾಗಿದೆ. ಹಾಗೆಯೇ ರೈತರ ಆತ್ಮಹತ್ಯೆ ಪ್ರಕರಣಗಳಿಗೂ ಪ್ರಸಿದ್ಧಿಯಾಗಿದೆ. ಆದರೆ ಭಾಜಪವನ್ನು ಹೊರತು ಪಡಿಸಿ ಇತರ ರಾಜಕೀಯ ಪಕ್ಷಗಳು ಆಸಕ್ತಿ ವಹಿಸದಿರುವುದರಿಂದ ಪ್ರತ್ಯೇಕತೆಯ ಕೂಗು ಇನ್ನೂ ತೀವ್ರವಾಗಿಲ್ಲ.

ಅಸ್ಸಾಂನಲ್ಲಿ ಬೋಡೋ ಲ್ಯಾಂಡ್‌ಗಾಗಿ ಕಳೆದ ಎರಡು ದಶಕಗಳಿಂದ ನಡೆಯುತ್ತಿರುವ ಹಿಂಸಾತ್ಮಕ ಚಳುವಳಿಗಳು ಈ ಸಂದರ್ಭದಲ್ಲಿ ಚುರುಕಾಗಿವೆ. ಮತ್ತೊಂದೆಡೆ ಕರ್ಬಿ ಸಮುದಾಯಗಳು ತಮ್ಮದೇ ಆದ ಪ್ರತ್ಯೇಕ ಕರ್ಬಿ ರಾಜ್ಯಕ್ಕಾಗಿ ಆಗ್ರಹಿಸುತ್ತಿವೆ. ಕಮಟಾಪುರದ ಆದಿವಾಸಿಗಳು ಪ್ರತ್ಯೇಕತೆಯನ್ನು ಬಯಸುತ್ತಿದ್ದಾರೆ. ಕರ್ನಾಟಕದಲ್ಲಿ ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಹಲವು ವರ್ಷಗಳಿಂದ ಕೇಳಿ ಬರುತ್ತಿದೆ. ಉತ್ತರ ಪ್ರದೇಶದಲ್ಲಿ ಸಹರಾನ್ ಪುರ, ಆಗ್ರ, ಮೀರತ್, ಮೊರಾದಾಬಾದ್, ಬರೇಲಿ ಜಿಲ್ಲೆಗಳನ್ನೊಳಗೊಂಡ ಹರಿತ್ ಪ್ರದೇಶ, ಉತ್ತರ ಪ್ರದೇಶದ ಏಳು ಮತ್ತು ಮಧ್ಯಪ್ರದೇಶದ ಆರು ಜಿಲ್ಲೆಗಳನ್ನೊಳಗೊಂಡ ಬುಂದೇಲ್‌ಖಂಡ್ ಪ್ರದೇಶ ಇನ್ನೂ ಮುಂತಾದ ಪ್ರತ್ಯೇಕತೆಯ ಚಳುವಳಿಗಳು ಈ ಸಂದರ್ಭದಲ್ಲಿ ತೀವ್ರವಾಗುವ ಸಂಭವಗಳನ್ನು ತಳ್ಳಿಹಾಕಲಾಗುವುದಿಲ್ಲ. ತೆಲಂಗಾಣ ಸ್ಥಾಪಿಸುವುದೇ ಆದಲ್ಲಿ ಅದೇ ರೀತಿಯಲ್ಲಿ ಅಭಿವೃದ್ಧಿ ವಂಚಿತರಾಗಿರುವ ಉತ್ತರ ಕರ್ನಾಟಕದ ಹೈದರಾಬಾದ್ ಕರ್ನಾಟಕದ ಜನತೆಯೂ ಪ್ರತ್ಯೇಕ ರಾಜ್ಯಕ್ಕಾಗಿ ಆಗ್ರಹಿಸುವ ಸಂಭವವಿರುತ್ತದೆ. ಪ್ರಾದೇಶಿಕ ಅಸ್ಮಿತೆಗಳೇ ಅಲ್ಲದೆ ಅಸಮತೋಲನ ಅಭಿವೃದ್ಧಿಯ ಪರಿಣಾಮವಾಗಿ ಅಧಿಕಾರ ವಿಕೇಂದ್ರೀಕರಣ ಕೇವಲ ಘೋಷಣೆಗಳಿಗೆ ಸೀಮಿತವಾಗಿದ್ದು ಪ್ರಬಲ ವರ್ಗಗಳು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಆಧಿಪತ್ಯವನ್ನು ಸಾಧಿಸಿರುವುದು ಪ್ರತ್ಯೇಕತಾ ಭಾವನೆಗಳನ್ನು ದೃಢಗೊಳಿಸಿವೆ.

ಹಾಗಾಗಿಯೇ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯಬೇಕಾಗಿದೆ. ಸ್ವತಂತ್ರ ಭಾರತದ ಆರು ದಶಕಗಳಲ್ಲಿ ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲೂ ಪ್ರಾದೇಶಿಕ ಅಸ್ಮಿತೆಗಳ ದನಿ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗಿದ್ದು ತಮ್ಮ ಪ್ರಾದೇಶಿಕ ಅನನ್ಯತೆ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯತೆಗಳಿಗಾಗಿ ಸ್ವಾಯತ್ತತೆಯನ್ನು ಬಯಸುವ ಜನಸಮುದಾಯಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಭಾಷಾವಾರು ರಾಜ್ಯಗಳ ವಿಂಗಡನೆಯಿಂದ ಒಂದೇ ಭಾಷೆಯ ಜನತೆ ಒಗ್ಗಟ್ಟಿನಿಂದ ತಮ್ಮ ಸಾಂಸ್ಕೃತಿಕ ನೆಲೆಗಟ್ಟನ್ನು ಕಂಡುಕೊಳ್ಳುವರು ಎಂಬ ಭ್ರಮೆ ಹುಸಿಯಾಗಿದೆ. ಬಹುಸಂಖ್ಯಾ ಭಾಷಿಕರ ಅಧೀನಕ್ಕೆ ಒಳಪಟ್ಟಿರುವ ಭಾವನೆಗಳು ಅನೇಕ ರಾಜ್ಯ



ವೈ. ಎಸ್. ರಾಜಶೇಖರ ರೆಡ್ಡಿ

...ಗಳ ಭಾಷಾ ಅಲ್ಪಸಂಖ್ಯಾತರಲ್ಲಿ ವ್ಯಕ್ತವಾಗುತ್ತಿದೆ. ಕರ್ನಾಟಕ... ಕರಾವಳಿ. ಕೊಡಗು ಮತ್ತು ಉತ್ತರ ಕರ್ನಾಟಕ...ದಲ್ಲಿ ಈ ವಿದ್ಯಮಾನವನ್ನು ಗುರುತಿಸಬಹುದಾಗಿದೆ. ...ಗಾಗಿ ಕಾಂಗ್ರೆಸ್ ಪಕ್ಷ ಮತ್ತು ಯುಪಿಎ ಸರ್ಕಾರ ತೆಲಂಗಾಣವನ್ನು ಪ್ರತ್ಯೇಕ ರಾಜ್ಯವನ್ನಾಗಿ ಘೋಷಿಸುವ ಮುನ್ನ ಸಮಕಾಲೀನ ಭಾರತದಲ್ಲಿ ಸಣ್ಣ ರಾಜ್ಯಗಳನ್ನು ಸ್ಥಾಪಿಸುವ ಮೂಲಕ ಸಂಯುಕ್ತ ಸ್ವರೂಪವನ್ನು ಉಳಿಸಿಕೊಳ್ಳುವ ಮಾರ್ಗಗಳನ್ನು ಗ್ರಹಿಸಬೇಕಾಗಿದೆ. ಈ ಸಂದರ್ಭದಲ್ಲಿ ರಾಜ್ಯಗಳ ಮರುವಿಂಗಡನೆಯ ಇತಿಹಾಸವನ್ನು ಗ್ರಹಿಸುವುದೂ ಅಗತ್ಯವಾಗುತ್ತದೆ.

1953ರಲ್ಲಿ ಪ್ರಧಾನಿ ನೆಹರೂ ಅವರಿಂದ ಸ್ಥಾಪಿಸಲ್ಪಟ್ಟ ರಾಜ್ಯ ಪುನರ್ವಿಂಗಡನಾ ಸಮಿತಿ ತೆಲಂಗಾಣ ಮತ್ತು ಆಂಧ್ರ ಪ್ರದೇಶದ ವಿಲೀನವನ್ನು ತಾತ್ವಿಕವಾಗಿ ಒಪ್ಪಿರಲಿಲ್ಲ. "ಶೈಕ್ಷಣಿಕವಾಗಿ ಹಿಂದುಳಿದ ತೆಲಂಗಾಣದ ನಿರುದ್ಯೋಗಿ ಯುವಕರಿಗೆ ಏಕೀಕೃತ ವಿಶಾಲಾಂಧ್ರದಲ್ಲಿ ಸೂಕ್ತ ಪ್ರಮಾಣದ ಉದ್ಯೋಗಾವಕಾಶಗಳು ದೊರೆಯುವುದಿಲ್ಲ, ಕರಾವಳಿ ಆಂಧ್ರ ಮತ್ತಿತರ ಪ್ರದೇಶದ ಮುಂದುವರೆದ ಜನ ತೆಲಂಗಾಣದ ಜನತೆಯ ಮೇಲೆ ಅಧಿಪತ್ಯ ಸಾಧಿಸುತ್ತಾರೆ, ಕ್ರಮೇಣ ತೆಲಂಗಾಣ ಆಂಧ್ರದ ಒಂದು ವಸಾಹುತುವಿನಂತಾಗುತ್ತದೆ ಎಂಬ ಭಾವನೆ ಇಲ್ಲಿನ ಜನತೆಯಲ್ಲಿ ಗಾಢವಾಗಿ ಬೇರೂರಿದೆ" ಎಂದು ಸಮಿತಿಯ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿತ್ತು. ನೆಹರೂ ಅವರೂ ಸಮಿತಿಯ ಅಭಿಪ್ರಾಯವನ್ನು ಅನುಮೋದಿಸಿದ್ದರು. ಆದರೆ ಕೆಲವು ವರ್ಷಗಳ ನಂತರ ತಮ್ಮ ನಿಲುವು ಬದಲಿಸಿದ ನೆಹರೂ ವಿಲೀನಕ್ಕೆ ಒಪ್ಪಿಗೆ ನೀಡಿದ್ದರು. ಅಂದಿನಿಂದಲೂ ತೆಲಂಗಾಣದಲ್ಲಿ ಪ್ರತ್ಯೇಕತೆಯ ಕೂಗು ವಿವಿಧ ಸಂದರ್ಭಗಳಲ್ಲಿ ಕೇಳಿಬರುತ್ತಲೇ ಇದೆ.

ಆದರೆ ತೆಲಂಗಾಣ ಜನತೆಯ ಪ್ರತ್ಯೇಕತೆಯ ಆಗ್ರಹ ಕೇವಲ ಪ್ರಾದೇಶಿಕತೆ ಅಥವಾ ಭಾಷಾ ಸಮಸ್ಯೆಯಿಂದ ಉದ್ಭವಿಸಿದಲ್ಲ. ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿಯುವಿಕೆ, ಕೈಗಾರಿಕಾ ಅಧೋರಚನೆಗಳ ಕೊರತೆ, ಶೈಕ್ಷಣಿಕ ಮತ್ತು ಔದ್ಯೋಗಿಕ ಅವಕಾಶಗಳು ಇಲ್ಲದಿರುವುದು, ತೆಲಂಗಾಣದ ಜಲ ಮತ್ತು ನೈಸರ್ಗಿಕ ಸಂಪನ್ಮೂಲಗಳು ಅನ್ಯ ಪ್ರದೇಶದ ಪಾಲಾಗುತ್ತಿರುವುದು, ತೆಲಂಗಾಣ ಪ್ರಾಂತ್ಯದ ಮೇಲೆ ಕರಾವಳಿ ಆಂಧ್ರದ ಬಂಡವಾಳಿಗರ ಅಧಿಪತ್ಯ, ಪ್ರಮುಖ ರಾಜಕೀಯ ಪಕ್ಷಗಳ ಮೂಲಕ ಮೇಲ್ಜಾತಿ ಮತ್ತು ಮೇಲ್ವರ್ಗಗಳ ಪ್ರಾಬಲ್ಯ ಮತ್ತು ತೆಲಂಗಾಣ ಪ್ರಾಂತ್ಯದ ವಿಶಿಷ್ಟ ಐತಿಹಾಸಿಕ ಹಾಗು ಸಾಂಸ್ಕೃತಿಕ ಅನನ್ಯತೆಗಳು ಇವೇ ಮುಂತಾದ ಅಂಶಗಳು ಪ್ರತ್ಯೇಕತೆಯ ಆಗ್ರಹಕ್ಕೆ ಕಾರಣವಾಗಿವೆ.

ಭಾಷಾವಾರು ರಾಜ್ಯಗಳ ವಿಂಗಡನೆಗೆ ತೆಲಂಗಾಣ-ಆಂಧ್ರದ ವಿಲೀನ ನಾಂದಿಯಾಗಿತ್ತು. ಈ ಸಂದರ್ಭದಲ್ಲೂ ಪ್ರಭುತ್ವದ ಅಧಿಕಾರ ಸ್ಥಾಪನೆಗಾಗಿ ಸಾಮಾಜಿಕ-ಸಾಂಸ್ಕೃತಿಕ, ಪ್ರಾದೇಶಿಕ ಹಾಗೂ ಭಾಷಿಕ ವೈವಿಧ್ಯತೆಗಳನ್ನು ಸಂಘಟಿಸುವ ಮಹತ್ತರ ಹೊಣೆಗಾರಿಕೆ ಕೇಂದ್ರ ಸರ್ಕಾರದ ಮೇಲಿತ್ತು. ಗಾಢವಾಗಿ ಬೇರೂರಿದ್ದ ಭಾಷಿಕ-ಸಾಂಸ್ಕೃತಿಕ ವೈವಿಧ್ಯತೆ ಮತ್ತು ವಿಭಿನ್ನ ರಾಜ್ಯಗಳಲ್ಲಿಯೇ ಕಂಡು ಬರುವ ಭಿನ್ನತೆಗಳನ್ನು ಗ್ರಹಿಸಿ ಭಾಷಾವಾರು ರಾಜ್ಯಗಳನ್ನು ಸ್ಥಾಪಿಸಲಾಗಿತ್ತು. ರಾಜಕೀಯ ಭೌಗೋಳಿಕತೆ ಮತ್ತು ಸಾಂಸ್ಕೃತಿಕ ರಾಜಕೀಯದ ಅಂತರ್‌ಕ್ರಿಯೆಯ ಪರಿಣಾಮವಾಗಿ ಪ್ರತಿಯೊಂದು ರಾಜ್ಯದಲ್ಲೂ ವರ್ಗ ಮತ್ತು ಜಾತಿ ಹಿತಾಸಕ್ತಿಗಳು ಪ್ರಬಲವಾಗಿ ಬೇರೂರಿದ್ದವು. ಇದರಿಂದ ರಾಷ್ಟ್ರ ಪ್ರಭುತ್ವವನ್ನು ಗಟ್ಟಿಗೊಳಿಸಲೂ ಸಾಧ್ಯವಾಗಿತ್ತು. ಮತ್ತೊಂದೆಡೆ ಇದೇ ಪ್ರಕ್ರಿಯೆಯ ಪರಿಣಾಮವಾಗಿ ವಸಾಹತು ಪ್ರಭುತ್ವವೂ ಶಿಥಿಲವಾಗಿತ್ತು. ಭಾರತದಲ್ಲಿ ರಾಜ್ಯಗಳ ಏಕೀಕರಣ ಪ್ರಕ್ರಿಯೆಯು ಒಂದು ರೀತಿಯಲ್ಲಿ ವಿವಿಧ ರಾಜ್ಯ-ಪ್ರಾಂತ್ಯಗಳ ವಿಘಟನೆ ಮತ್ತು ಪುನರ್ ಸಂಘಟನೆಯ ಪ್ರಕ್ರಿಯೆಯೇ ಆಗಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಆಂಧ್ರ ಪ್ರದೇಶದ ಸ್ಥಾಪನೆ ಈ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯಾಗಿತ್ತು. ರಾಜ್ಯಗಳ ವಿಂಗಡನೆಯ ಹಂತದಲ್ಲಿ ಪುನರ್ವಿಂಗಡನಾ ಸಮಿತಿಯು ಆರ್ಥಿಕ ಸದೃಢತೆ, ಸಾಮರ್ಥ್ಯ, ಆರ್ಥಿಕ ಯೋಜನೆ, ಭಾಷಿಕ ಸಮಸ್ಯೆಗಳು ಮುಂತಾದ ಗಂಭೀರ ಸಮಸ್ಯೆಗಳನ್ನು ಪರಿಶೀಲಿಸಿದ್ದರೂ ಪ್ರಮುಖವಾಗಿ ಭಾಷಾವಾರು ಆಧಾರದ ಮೇಲೆ ರಾಜ್ಯಗಳನ್ನು ವಿಂಗಡಿಸಿದ್ದನ್ನು ಕಾಣಬಹುದು. ಆದರೆ 1956ರ ಭಾಷಾವಾರು ಸ್ಥಾಪನೆಯ ನಂತರದಲ್ಲಿ ವಿವಿಧ ರಾಜ್ಯಗಳ ನಡುವೆ ಸಂಘರ್ಷಗಳು ಉಂಟಾದದ್ದನ್ನೂ ನಿರ್ಲಕ್ಷಿಸುವಂತಿಲ್ಲ. ಹಾಗಾಗಿಯೇ ನಂತರ ದಶಕಗಳಲ್ಲಿ ಮತ್ತಷ್ಟು ರಾಜ್ಯಗಳನ್ನು ಸೃಷ್ಟಿಸಲಾಯಿತು. 1960ರಲ್ಲಿ ಮಹಾರಾಷ್ಟ್ರ-ಗುಜರಾತ್, 1971ರಲ್ಲಿ ಹರ್ಯಾಣ, ಚಂದೀಘಡ್, ಪಂಜಾಬ್, 1960 ಮತ್ತು 80ರಲ್ಲಿ ಈಶಾನ್ಯ ರಾಜ್ಯಗಳು, 1987ರಲ್ಲಿ ಗೋವಾ, ಛತ್ತೀಸ್‌ಘಡ್, ಉತ್ತರಖಂಡ್, ಝಾರ್ಖಂಡ್ ಮುಂತಾದ ರಾಜ್ಯಗಳ ಸ್ಥಾಪನೆ ಅನಿವಾರ್ಯವಾಯಿತು.

ಭಾಷಾವಾರು ರಾಜ್ಯಗಳ ವಿಂಗಡನೆಗೆ ತೆಲಂಗಾಣ-ಆಂಧ್ರದ ವಿಲೀನ ನಾಂದಿಯಾಗಿತ್ತು. ಈ ಸಂದರ್ಭದಲ್ಲೂ ಪ್ರಭುತ್ವದ ಅಧಿಕಾರ ಸ್ಥಾಪನೆಗಾಗಿ ಸಾಮಾಜಿಕ-ಸಾಂಸ್ಕೃತಿಕ, ಪ್ರಾದೇಶಿಕ ಹಾಗೂ ಭಾಷಿಕ ವೈವಿಧ್ಯತೆಗಳನ್ನು ಸಂಘಟಿಸುವ ಮಹತ್ತರ ಹೊಣೆಗಾರಿಕೆ ಕೇಂದ್ರ ಸರ್ಕಾರದ ಮೇಲಿತ್ತು.

ಈ ಹಿನ್ನೆಲೆಯಲ್ಲೇ ಭಾರತದ ರಾಜಕಾರಣದಲ್ಲಿ ದೊಡ್ಡ ಮತ್ತು ಸಣ್ಣ ರಾಜ್ಯಗಳ ಸ್ವೀಕಾರಾರ್ಹತೆಯ ಬಗ್ಗೆ ವಾದ ವಿವಾದಗಳೂ ನಡೆದಿವೆ. ಕೇಂದ್ರ ಯೋಜನಾ ನೀತಿಯಡಿಯಲ್ಲಿ ವಿಭಿನ್ನ ರಾಜ್ಯಗಳ ವಿವಿಧ ಪ್ರದೇಶಗಳಲ್ಲಿ ಸಮತೋಲನ ಅಭಿವೃದ್ಧಿಯನ್ನು ಸಾಧಿಸುವ ಮೂಲಕ ದೊಡ್ಡ ಪ್ರಮಾಣದ ರಾಜ್ಯಗಳ ನಿರ್ವಹಣೆ ಸುಲಭ ಎಂದು ಒಂದು ಬಣ ವಾದಿಸಿದರೆ, ಮತ್ತೊಂದೆಡೆ ದೊಡ್ಡ ರಾಜ್ಯಗಳ ಅಧಿಪತ್ಯದಲ್ಲಿ ಸಣ್ಣ ರಾಜ್ಯಗಳು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡು ಹಿನ್ನಡೆ ಅನುಭವಿಸಬೇಕಾಗುತ್ತದೆ ಎಂದು ಸಣ್ಣ ರಾಜ್ಯಗಳ ಪ್ರತಿಪಾದಕರು ಆತಂಕ ವ್ಯಕ್ತಪಡಿಸಿದ್ದುಂಟು. ಈ ಸಂದರ್ಭದಲ್ಲಿ ರಾಜ್ಯ ಪುನರ್ ವಿಂಗಡನೆಯನ್ನು ಕೈಗೊಂಡ ಭಾರತದ ಪ್ರಭುತ್ವ ಭಾಷಿಕ-ಸಾಂಸ್ಕೃತಿಕ ಬಹುತ್ವ ಮತ್ತು ಕೇಂದ್ರೀಕೃತ ರಾಜಕೀಯ ನೀತಿಯನ್ನು ಸಮೀಕರಿಸಿ ರಾಜ್ಯಗಳನ್ನು ಸ್ಥಾಪಿಸಿತ್ತು.

ಆದರೆ ಪುನರ್ ವಿಂಗಡನೆಯ ಒಂದು ದಶಕದೊಳಗಾಗಿ ಭಾಷಾವಾರು ವಿಂಗಡನೆಯ ನೀತಿಯ ಔಚಿತ್ಯವನ್ನೇ ಪ್ರಶ್ನಿಸುವಂತಹ ಸಂದರ್ಭ ಎದುರಾಗಿತ್ತು. ಈ ನೀತಿಯಿಂದ ಸಮಗ್ರತೆಯನ್ನಾಗಲೀ, ಅಂತರಕ್ರಿಯೆಯನ್ನಾಗಲೀ ಸಾಧಿಸುವುದು ಸುಲಭವಲ್ಲ ಎಂಬ ಅಂಶವನ್ನು ಅನೇಕ ಸಮಾಜ ಶಾಸ್ತ್ರಜ್ಞರು, ರಾಜಕೀಯ ವಿಶ್ಲೇಷಕರು ವ್ಯಕ್ತಪಡಿಸಲಾರಂಭಿಸಿದರು. ಭಾರತೀಯ ರಾಷ್ಟ್ರೀಯತೆಗೆ ಪ್ರಾದೇಶಿಕ ಭಾಷಾಭಿಮಾನ ಸವಾಲಾಗಿ ನಿಲ್ಲುವ ಸಂಭವಗಳು ಹೆಚ್ಚಾದವು. ರಾಷ್ಟ್ರೀಯ ಸಮಗ್ರತೆಯನ್ನು ಸಾಧಿಸುವ ಪ್ರಕ್ರಿಯೆ ಕೇವಲ ಭೌಗೋಳಿಕ ಕ್ರಿಯೆಯಾಗಿರದೆ, ರಾಷ್ಟ್ರೀಯ ಅಸ್ಮಿತೆಯನ್ನು ದೃಢಗೊಳಿಸುವ ನಿಟ್ಟಿನಲ್ಲಿ ಸಾರ್ವಜನಿಕ ಸುಭದ್ರತೆ, ಸಾರ್ವಜನಿಕ ಉತ್ತರದಾಯಿತ್ವ ಮತ್ತು ಆಳ್ವಿಕರ-ಪ್ರಜೆಗಳ ನಡುವಿನ ಸಾಮರಸ್ಯ ಎಲ್ಲವನ್ನು ಸರಿದೂಗಿಸುವ ಅಗತ್ಯತೆಯನ್ನು ಅನೇಕ ಸಮಾಜಶಾಸ್ತ್ರಜ್ಞರು ಪ್ರತಿಪಾದಿಸಿದ್ದರು. ದೊಡ್ಡ ರಾಜ್ಯಗಳಲ್ಲಿ ಭಾಷಿಕ-ಸಾಂಸ್ಕೃತಿಕ ಅಲ್ಪಸಂಖ್ಯಾತ ಸಮುದಾಯಗಳು ತಮ್ಮ ಭಾಷೆ ಮತ್ತು ಸಾಂಸ್ಕೃತಿಕ ಅಸ್ಮಿತೆಗಳಿಗೆ ಸೂಕ್ತ ಸ್ಥಾನಮಾನಗಳನ್ನು ಪಡೆಯಲು ಆಗ್ರಹಿಸತೊಡಗಿದ್ದನ್ನು ಈ ಹಿನ್ನೆಲೆ

ಯಲ್ಲೇ ಗ್ರಹಿಸಬೇಕಾಗುತ್ತದೆ.

ರಾಜ್ಯ ಪುನರ್ವಿಂಗಡನೆಯ ಮತ್ತೊಂದು ಗಂಭೀರ ಪರಿಣಾಮವೆಂದರೆ ವಿವಿಧ ರಾಜ್ಯಗಳ ನಡುವಿನ ಗಡಿ ವಿವಾದಗಳು. ಕರ್ನಾಟಕ-ಮಹಾರಾಷ್ಟ್ರ, ಕರ್ನಾಟಕ-ಕೇರಳ, ಮಹಾರಾಷ್ಟ್ರ-ಗುಜರಾತ್, ಹರ್ಯಾಣ-ಪಂಜಾಬ್, ಒರಿಸ್ಸಾ-ಪಶ್ಚಿಮ ಬಂಗಾಲ, ಆಂಧ್ರ ಪ್ರದೇಶ-ಮದ್ರಾಸ್ ಪ್ರೆಸಿಡೆನ್ಸಿಯ ಪ್ರದೇಶಗಳು ಹೀಗೆ ಹಲವಾರು ಗಡಿ ವಿವಾದಗಳು ತಲೆದೋರಿದ್ದು ಇಂದಿಗೂ ವಿವಾದಾಸ್ಪದವಾಗಿಯೇ ಇವೆ. ಅಲ್ಲದೆ ನೈಸರ್ಗಿಕ ಸಂಪನ್ಮೂಲಗಳಾದ ನದಿ ನೀರು ಮತ್ತು ಅರಣ್ಯ ಸಂಪತ್ತುಗಳಿಗಾಗಿಯೂ ಸಂಘರ್ಷಗಳು ನಡೆಯುತ್ತಿವೆ. ಆಂತರಿಕವಾಗಿ ಎಲ್ಲಾ ಭಾಷಾವಾರು ರಾಜ್ಯಗಳಲ್ಲೂ ಪ್ರಬಲ ಬಹುಭಾಷಿಕ ಸಮುದಾಯಗಳು ಇತರ ಜನಸಮುದಾಯಗಳ ಮೇಲೆ ತಮ್ಮ ಸಾಂಸ್ಕೃತಿಕ-ಪ್ರಾದೇಶಿಕ ಅಧಿಪತ್ಯ ಸಾಧಿಸಿರುವುದನ್ನು ಕಾಣಬಹುದು.

ಭಾಷಿಕ-ಸಾಂಸ್ಕೃತಿಕ ಸಮರಸತೆಯ ಜೊತೆಗೆ ಆರ್ಥಿಕ ಸಾಮರ್ಥ್ಯ, ಆಡಳಿತ ದಕ್ಷತೆ ಮತ್ತು ಭೌಗೋಳಿಕ ನಿಕಟತೆಯನ್ನು ಸಮೀಕರಿಸುವ ಭಾರತೀಯ ಪ್ರಭುತ್ವದ ಪ್ರಯತ್ನಗಳು ಸಾಂಸ್ಕೃತಿಕ-ಭಾಷಿಕ ಭಿನ್ನತೆಗಳನ್ನಾಗಲೀ, ಸಾಂಸ್ಕೃತಿಕ ಸ್ವಾಯತ್ತತೆಯ ಆಕಾಂಕ್ಷೆಗಳನ್ನಾಗಲೀ ತಡೆಗಟ್ಟಲು ಸಾಧ್ಯವಾಗಲಿಲ್ಲ. ಈ ಹಿನ್ನಲೆಯಲ್ಲಿ 35 ಇತರ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರ್ಪಡಿಸಲು ಆಗ್ರಹಿಸುತ್ತಿರುವುದನ್ನು ಗಮನದಲ್ಲಿರಿಸಬೇಕಾಗಿದೆ. ಹಾಗೆಯೇ ಕಳೆದ ಹಲವು ದಶಕಗಳಲ್ಲಿ ಕಂಡು ಬಂದಿರುವ ಉಪರಾಷ್ಟ್ರೀಯತೆಯ ಮತ್ತು ಮಣ್ಣಿನ ಮಕ್ಕಳ ಸ್ವಾಯತ್ತತಾ ಆಂದೋಲನಗಳು ಹಾಗೂ ಅವುಗಳಿಂದ ಉದ್ಭವಿಸಿದ ರಾಜ್ಯಗಳ ಸ್ಥಿತ್ಯಂತರಗಳನ್ನೂ ಸೂಕ್ಷ್ಮವಾಗಿ ಗಮನಿಸಬೇಕಾಗಿದೆ.

ಬಹುಸಾಂಸ್ಕೃತಿಕತೆಯ ಸಾಂಸ್ಥೀಕರಣ ಪ್ರಕ್ರಿಯೆಯ ಪರಿಣಾಮವಾಗಿ ಸಾಂಸ್ಕೃತಿಕ ಅಧಿಪತ್ಯಗಳು ಹೆಚ್ಚಾಗಿ ದೇಶಾದ್ಯಂತ ಎರಡು ರೀತಿಯ ಸಾಂಸ್ಕೃತಿಕ ರಾಜಕಾರಣ ಉದ್ಭವಿಸಿದ್ದನ್ನು ಕಾಣಬಹುದು. ಪ್ರಬಲ ವರ್ಗಗಳ ರಾಜಕೀಯ ಸಂಸ್ಕೃತಿ ಒಂದೆಡೆಯಾದರೆ ಮತ್ತೊಂದೆಡೆ ಈ ವರ್ಗದ ಅಧಿಪತ್ಯಕ್ಕೆ ಒಳಗಾಗುವ ಸಮೂಹ ರಾಜಕೀಯ ಸಂಸ್ಕೃತಿ ಉದ್ಭವಿಸಿದೆ. ರಾಜಕೀಯ ಅಧಿಕಾರದ ಸಮರ್ಥನೆ ಮತ್ತು ಸಾಂಸ್ಕೃತಿಕ-ಸಾಮಾಜಿಕ ವಿಭಿನ್ನತೆಗಳ ಪ್ರತಿನಿಧಿತ್ವದ ನಡುವೆ ಸಂಭವಿಸುವ ಸಂಘರ್ಷವೇ ಹೊಸ ರಾಜ್ಯಗಳ ಆಗ್ರಹಕ್ಕೆ ವೇದಿಕೆ ಒದಗಿಸುತ್ತವೆ. ಈ ಎರಡೂ ವಿದ್ಯಮಾನಗಳ ನಡುವೆ ಹೊಂದಾಣಿಕೆಯಾಗದಿರುವುದೇ ಹೆಚ್ಚಿನ ರಾಜ್ಯಗಳ ಸ್ಥಾಪನೆಗೂ ಕಾರಣವಾಗುತ್ತವೆ.

ಈ ಗೊಂದಲವನ್ನು ನಿವಾರಿಸುವಲ್ಲಿ ಭಾರತೀಯ ಪ್ರಭುತ್ವ ಪೂರ್ಣ ಯಶಸ್ಸು ಕಾಣದಿರುವುದರಿಂದಲೇ ವಿವಿಧ ರಾಜ್ಯಗಳ ಸ್ಥಾಪನೆಯ ಹಿನ್ನೆಲೆಯಲ್ಲಿ ಭೌಗೋಳಿಕ ಗಡಿಗಳನ್ನು ನಿರ್ಧರಿಸಿ ಪ್ರಾದೇಶಿಕ ಮತ್ತು ಸಾಮುದಾಯಿಕ ಅಸ್ಮಿತೆಗಳನ್ನು ರೂಪಿಸಲಾಗುತ್ತಿದೆ. ಖ್ಯಾತ ಚಿಂತಕ ವಿ.ಪಿ. ಮೆನನ್ ಹೇಳುವಂತೆ ಈ ರೀತಿಯ ರಾಜ್ಯಗಳ ವಿಂಗಡನೆಯಿಂದ ಒಂದೆಡೆ ರಾಜ್ಯಗಳ ಸಂಘಟನೆಯೊಂದಿಗೇ ವಿಘಟನಾ ಪ್ರಕ್ರಿಯೆಯೂ ಜಾರಿಯಲ್ಲಿರುತ್ತದೆ. ಈ ಪ್ರಕ್ರಿಯೆಯಲ್ಲಿ ರೂಪುಗೊಳ್ಳುವ ಪ್ರಾದೇಶಿಕತೆಯ ಪ್ರಜ್ಞೆ ಮತ್ತು ಪ್ರಾದೇಶಿಕ ಅಸ್ಮಿತೆಯ ಆಂದೋಲನಗಳ ಪರಿಣಾಮವಾಗಿಯೇ ಪ್ರಾದೇಶಿಕ ಪಕ್ಷಗಳೂ ಹುಟ್ಟಿಕೊಳ್ಳುತ್ತವೆ. ಇತ್ತೀಚಿನ ದಶಕಗಳಲ್ಲಿ ಈ ಪ್ರಾದೇಶಿಕ ಪಕ್ಷಗಳೇ ಕೇಂದ್ರೀಕೃತ ಆಡಳಿತ ರಚನೆಗೆ ಸವಾಲಾಗಿರುವುದನ್ನೂ ಗಮನಿಸಬೇಕಾಗಿದೆ.

> **ಸಮ್ಮಿಶ್ರ ಸರ್ಕಾರಗಳಿಂದ ಉಂಟಾಗುವ ರಾಜಕೀಯ ಅಸ್ಥಿರತೆ, ವೋಟ್ ಬ್ಯಾಂಕ್ ರಾಜಕಾರಣದ ಪ್ರಭಾವ, ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ, ಆರ್ಥಿಕತೆ ಮತ್ತು ದುಡಿಮೆಯ ಕ್ಷೇತ್ರದಲ್ಲಿ ನವ ಉದಾರವಾದದ ಪ್ರಭಾವ, ಹಿಂದುಳಿದ ಮತ್ತು ನಿಮ್ನ ವರ್ಗಗಳ ಹಕ್ಕೊತ್ತಾಯಗಳು ಮುಂತಾದ ಗಂಭೀರ ಸವಾಲುಗಳು ಭಾರತೀಯ ಪ್ರಭುತ್ವದ ಮುಂದಿವೆ. ಈ ಸವಾಲುಗಳನ್ನು ಪರಾಮರ್ಶಿಸದೆ ರಾಜ್ಯಗಳ ಪುನರ್ ವಿಂಗಡನೆಯಾಗಲೀ, ವಿಘಟನೆಯಾಗಲೀ ಸಾಧ್ಯವಾಗುವುದಿಲ್ಲ. ರಾಜ್ಯಗಳ ಭೌಗೋಳಿಕ ಗಡಿಗಳನ್ನು ಪುನರ್ ಪರಿಶೀಲಿಸಿ ಸಣ್ಣ ರಾಜ್ಯಗಳನ್ನು ಸ್ಥಾಪಿಸುವ ಮುನ್ನ ಆಯಾ ರಾಜ್ಯಗಳಲ್ಲಿನ ಸಾಂಸ್ಕೃತಿಕ-ಸಾಮಾಜಿಕ ಮತ್ತು ಪ್ರಾದೇಶಿಕ ಅಸ್ಮಿತೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.**

ಕಳೆದ ಐದು ದಶಕಗಳಲ್ಲಿ ಭಾರತ ಕಂಡಿರುವ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲನಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ತತ್ಪರಿಣಾಮವಾಗಿ ವಿಭಿನ್ನ ರಾಜ್ಯಗಳ ನಡುವೆ, ಪ್ರದೇಶಗಳ ನಡುವೆ ಸಂಘರ್ಷವೂ ತೀಕ್ಷ್ಣವಾಗಿದೆ. ಜಾಗತೀಕರಣ ಮತ್ತು ನವ ಉದಾರೀಕರಣದ ಪರಿಣಮವಾಗಿ ಸೃಷ್ಟಿಯಾಗಿರುವ ರಾಷ್ಟ್ರ ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯಲ್ಲಿ ವಿವಿಧ ರಾಜ್ಯಗಳು ಖಾಸಗಿ-ವಿದೇಶಿ ಬಂಡವಾಳ ಹೂಡಿಕೆಗಾಗಿ ಪೈಪೋಟಿ ನಡೆಸುತ್ತಿರುವುದರಿಂದ ಹಿಂದುಳಿದ ರಾಜ್ಯಗಳು ತೀವ್ರ ನಷ್ಟ ಅನುಭವಿಸುತ್ತಿವೆ. ಹಾಗಾಗಿ ಈ ಹಿಂದುಳಿದ ರಾಜ್ಯಗಳ ಸಮತೋಲನ ಅಭಿವೃದ್ಧಿಗಾಗಿ ಮತ್ತು ರಾಷ್ಟ್ರೀಯ ಉತ್ಪನ್ನದಲ್ಲಿ, ನೈಸರ್ಗಿಕ ಸಂಪನ್ಮೂಲಗಳ ಬಳಕೆಯಲ್ಲಿ ಸಮತೋಲನವನ್ನು ಕಾಪಾಡುವ ನಿಟ್ಟಿನಲ್ಲಿ ಆಳ್ವಿಕರು ಚಿಂತಿಸಬೇಕಾಗಿದೆ.

ಸಮ್ಮಿಶ್ರ ಸರ್ಕಾರಗಳಿಂದ ಉಂಟಾಗುವ ರಾಜಕೀಯ ಅಸ್ಥಿರತೆ, ವೋಟ್ ಬ್ಯಾಂಕ್ ರಾಜಕಾರಣದ ಪ್ರಭಾವ, ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ, ಆರ್ಥಿಕತೆ ಮತ್ತು ದುಡಿಮೆಯ ಕ್ಷೇತ್ರದಲ್ಲಿ ನವ ಉದಾರವಾದದ ಪ್ರಭಾವ, ಹಿಂದುಳಿದ ಮತ್ತು ನಿಮ್ನ ವರ್ಗಗಳ ಹಕ್ಕೊತ್ತಾಯಗಳು ಮುಂತಾದ ಗಂಭೀರ ಸವಾಲುಗಳು ಭಾರತೀಯ ಪ್ರಭುತ್ವದ ಮುಂದಿವೆ. ಈ ಸವಾಲುಗಳನ್ನು ಪರಾಮರ್ಶಿಸದೆ ರಾಜ್ಯಗಳ ಪುನರ್ ವಿಂಗಡನೆಯಾಗಲೀ, ವಿಘಟನೆಯಾಗಲೀ ಸಾಧ್ಯವಾಗುವುದಿಲ್ಲ. ರಾಜ್ಯಗಳ ಭೌಗೋಳಿಕ ಗಡಿಗಳನ್ನು ಪುನರ್ ಪರಿಶೀಲಿಸಿ ಸಣ್ಣ ರಾಜ್ಯಗಳನ್ನು ಸ್ಥಾಪಿಸುವ ಮುನ್ನ ಆಯಾ ರಾಜ್ಯಗಳಲ್ಲಿನ ಸಾಂಸ್ಕೃತಿಕ-ಸಾಮಾಜಿಕ ಮತ್ತು ಪ್ರಾದೇಶಿಕ ಅಸ್ಮಿತೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈವರೆಗೆ ಪ್ರಾದೇಶಿಕತೆ ಮತ್ತು ಸಾಂಸ್ಕೃತಿಕ ಅಸ್ಮಿತೆಗಳನ್ನಾಧರಿಸಿ ಸ್ಥಾಪಿತವಾಗಿರುವ ಅನೇಕ ರಾಜ್ಯಗಳ ಇತಿಹಾಸವನ್ನು ನೋಡಿದಾಗ ನಿರಾಸೆಯೇ ಹೆಚ್ಚಾಗುತ್ತದೆ.

ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಮರ್ಥ ವಿತರಣೆಯನ್ನು ಗಮನದಲ್ಲಿಟ್ಟುಕೊಂಡು ರಚಿಸಲಾದ ಝಾರ್ಖಂಡ್, ಛತ್ತಿಸ್‌ಘಡ್ ರಾಜ್ಯಗಳಲ್ಲಿ ಭ್ರಷ್ಟಾಚಾರ, ಹಿಂಸೆ ಹೆಚ್ಚಾಗಿರುವುದೇ ಹೊರತು ನಿರೀಕ್ಷಿತ ಅಭಿವೃದ್ಧಿ ಕಂಡುಬಂದಿಲ್ಲ. ಈ ರಾಜ್ಯಗಳ ಸ್ಥಾಪನೆಯ ನಂತರ ನೈಸರ್ಗಿಕ ಸಂಪನ್ಮೂಲಗಳ ಲೂಟಿ ವಿಕೇಂದ್ರೀಕರಣಗೊಂಡಿರುವುದೇ ಹೊರತು ಅಧಿಕಾರ ವಿಕೇಂದ್ರೀಕರಣವಾಗಿಲ್ಲ. ಬದಲಾಗಿ ಜಾಗತಿಕ ಬಂಡವಾಳಿಗರ ವಿರುದ್ಧ, ಕಾರ್ಪೋರೇಟ್ ಉದ್ಯಮಿಗಳ ಲಾಭಕೋರತನದ ವಿರುದ್ಧ, ನವ ಉದಾರವಾದದ ವಿರುದ್ಧ ಒಮ್ಮತದಿಂದ ಹೋರಾಡುತ್ತಿದ್ದ ಶ್ರಮಿಕ ವರ್ಗಗಳು ವಿಭಜಿತಗೊಂಡು ಶಿಥಿಲವಾಗಿವೆ. ಹೆಚ್ಚು ರಾಜ್ಯಗಳ ಸ್ಥಾಪನೆಯಾಗಲೀ, ಇರುವ ರಾಜ್ಯಗಳ ವಿಭಜನೆ, ಪುನರ್ ವಿಂಗಡನೆಯಾಗಲೀ ದೇಶದ ಶ್ರಮಿಕ ವರ್ಗಗಳನ್ನು, ಕಾರ್ಮಿಕರನ್ನು, ರೈತಾಪಿ ಸಮುದಾಯವನ್ನು ವಿಘಟನೆಯ ಹಾದಿಯತ್ತ ಕೊಂಡೊಯ್ಯುವ ಸಾಧ್ಯತೆಗಳೇ ಹೆಚ್ಚು.

ಈಗಾಗಲೇ ನವ ಉದಾರವಾದ ಪ್ರಬಲ ಪ್ರಹಾರಕ್ಕೆ ಬಲಿಯಾಗಿರುವ ಭಾರತದ ದುಡಿಯುವ ವರ್ಗಗಳು ಮತ್ತಷ್ಟು ವಿಭಜನೆಯನ್ನು ಬಯಸುವುದಿಲ್ಲ. ಹಾಗೊಮ್ಮೆ ಪ್ರಾದೇಶಿಕ ಅಸ್ಮಿತೆಗಳನ್ನಾಧರಿಸಿ ರಾಜ್ಯಗಳ ಪುನರ್ ವಿಂಗಡನೆ ಮಾಡುವುದೇ ಆದಲ್ಲಿ, ಈ ರಾಜ್ಯಗಳ ಅಧಿಕಾರವನ್ನು ಯಾರು ವಹಿಸುತ್ತಾರೆ ಎಂಬ ಪ್ರಶ್ನೆಯೂ ಎದುರಾಗುತ್ತದೆ. ರಾಷ್ಟ್ರಮಟ್ಟದ ಬಂಡವಳಿಗರ ಸ್ಥಾನವನ್ನು ಪ್ರಾದೇಶಿಕ ಬಂಡವಳಿಗರು, ಕಾರ್ಪೋರೇಟ್ ಉದ್ಯಮಿಗಳು ಆಕ್ರಮಿಸಿಕೊಂಡು, ನೈಸರ್ಗಿಕ ಸಂಪತ್ತಿನ ಲೂಟಿಯನ್ನು ವಿಕೇಂದ್ರೀಕರಣಗೊಳಿಸುವುದಾದರೆ ರಾಜ್ಯಗಳ ಗಾತ್ರ ನಗಣ್ಯವಾಗುತ್ತದೆ. ಭೋಜ್‌ಪುರ, ಬೋಡೋಲ್ಯಾಂಡ್, ಬುಂದೇಲ್ ಖಂಡ್, ಕೊಡಗು, ಗೋರ್ಖಲ್ಯಾಂಡ್, ಹರಿತ್ ಪ್ರದೇಶ, ಮರಾಠವಾಡ, ಮಹಾಕೌಶಲ್, ಮಿಥಿಲಾಂಚಲ್, ಮುರು ಪ್ರದೇಶ, ಪೂರ್ವಾಂಚಲ, ಸೌರಾಷ್ಟ್ರ, ವಿದರ್ಭ, ತೆಲಂಗಾಣ ಹೀಗೆ ಹಲವಾರು ಸಣ್ಣ ರಾಜ್ಯಗಳು ಕೇಂದ್ರ ಅನುಮತಿಗಾಗಿ ಸಾಲುಗಟ್ಟಿ ನಿಂತಿವೆ.

ಈ ರಾಜ್ಯಗಳ ಸ್ಥಾಪನೆಗಾಗಿ ಹೋರಾಡುತ್ತಿರುವ ಹಿತಾಸಕ್ತಿಗಳು ಪ್ರಸ್ತುತ ಬಂಡವಾಳಶಾಹಿ ವ್ಯವಸ್ಥೆ ಮತ್ತು ನವ ಉದಾರವಾದಿ ನೀತಿಗಳ ಸಮರ್ಥಕರೇ ಆಗಿದ್ದು, ಈ ಶಕ್ತಿಗಳ ಆಳ್ವಿಕೆಯಲ್ಲಿ ಈ ಪ್ರದೇಶಗಳ ದುಡಿಯುವ ವರ್ಗಗಳ, ಸಾಮಾನ್ಯ ಜನತೆಯ ಪ್ರಜಾಸತ್ತಾತ್ಮಕ ಆಶಯಗಳು ಸಾಕಾರಗೊಳ್ಳುವ ಯಾವುದೇ ಸಾಧ್ಯತೆಗಳಿಲ್ಲ. ಈ ಪ್ರದೇಶಗಳ ಪ್ರಾದೇಶಿಕ ಸ್ವಾಯತ್ತತೆ ಮತ್ತು ರಾಜಕೀಯ ಸಾಮರ್ಥ್ಯಗಳ ನಡುವಿನ ಸಂಕೀರ್ಣ ಸಂಬಂಧಗಳನ್ನು ಪರಾಮರ್ಶಿಸಿ, ಈ ಪ್ರದೇಶಗಳ ಸಾಂಸ್ಕೃತಿಕ-ರಾಜಕೀಯ ಧ್ರುವೀಕರಣವನ್ನು ಸಾಧಿಸಿ, ಒಂದು ಬಹುಸಂಸ್ಕೃತಿಯ ಸೆಕ್ಯುಲರ್ ಭಾರತವನ್ನು ನಿರ್ಮಿಸುವುದಾದಲ್ಲಿ ರಾಜ್ಯಗಳ ಮರುವಿಂಗಡನೆಯ ಪ್ರಕ್ರಿಯೆ ಸಾರ್ಥಕವಾಗುತ್ತದೆ. ಈ ಸಂದರ್ಭದಲ್ಲಿ ರಾಜ್ಯಗಳ ಮರುವಿಂಗಡನೆಗೆ ಮತ್ತೊಂದು ಸಮಿತಿಯನ್ನು ರಚಿಸಿ ಸೂಕ್ತ ದೀರ್ಘಕಾಲಿಕ ನಿರ್ಣಯ ಕೈಗೊಳ್ಳುವುದೇ ಪ್ರಸ್ತುತ ಸಂದರ್ಭದಲ್ಲಿ ಉತ್ತಮ ಮಾರ್ಗವೆಂದು ಹೇಳಬಹುದು.

(ಈ ಲೇಖನದ ಕೆಲವು ಅಭಿಪ್ರಾಯಗಳಿಗೆ ಆಶಾ ಸಾರಂಗಿ, ಜೆ.ಎನ್.ಯು. ದೆಹಲಿ ಅವರ ಲೇಖನ ಆಧಾರವಾಗಿದೆ ಫ್ರಂಟ್ ಲೈನ್ ಜನವರಿ 1 2010). □

ಭಾರತದ ರಾಜಕಾರಣ ಮತ್ತು ಮುಸ್ಲಿಮರ ತುಷ್ಟೀಕರಣ

ಖಾಸಿಂ ಸಾಬ್. ಎ

ಭಾರತೀಯ ಸಮಾಜದ ಪ್ರತಿಯೊಂದು ಸಮುದಾಯವೂ ಪ್ರಜಾಪ್ರಭುತ್ವದ ಆಧಾರ ಸ್ತಂಭ. ಆದ್ದರಿಂದ ಪ್ರತಿಯೊಂದು ಸಮುದಾಯಕ್ಕೂ ಅದರ ಜನಸಂಖ್ಯಾ ಪ್ರಮಾಣದಷ್ಟು ಪ್ರಾತಿನಿಧ್ಯ ದೊರಕಬೇಕು.

ಮುಸ್ಲಿಂ ಸಮುದಾಯಗಳು ಶೈಕ್ಷಣಿಕ, ಉದ್ಯೋಗ, ಭೂ ಒಡೆತನದ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳಿಂದ ವಂಚಿಸಲ್ಪಟ್ಟಿದೆ. ಜನಸಂಖ್ಯೆ ಪ್ರಮಾಣದಷ್ಟು ಪ್ರಾತಿನಿಧ್ಯ ಪಡೆದಿಲ್ಲ ಎಂಬ ಸತ್ಯ ಸ್ವತಂತ್ರ್ಯ ಭಾರತದ ಆರು ದಶಕಗಳ ರಾಷ್ಟ್ರ ರಾಜಕಾರಣದ ಕರಿ ನೆರಳೇ ಆಗಿದೆ.

ಮುಸ್ಲಿಂರ ಬದುಕು ಶೋಚನೀಯವಾಗಿದೆ ಎಂಬ ವಾಸ್ತವವನ್ನು ಮನಗಂಡ ವಿಚಾರವಂತರು ಮುಸ್ಲಿಮರ ಸ್ಥಿತಿಗತಿ ಬಗ್ಗೆ ಎಂದಿನಿಂದಲೂ ಕಳವಳ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸರ್ಕಾರಗಳು ಕೆಲವು ಅಧ್ಯಯನಗಳನ್ನು ಕೈಗೊಂಡಿವೆ. 19ನೇ ಶತಮಾನದಲ್ಲಿ ಸುಪ್ರಸಿದ್ಧ ಬ್ರಿಟಿಷ್ ಆಡಳಿತಗಾರ ಮಾನ್‌ಸ್ಟುವರ್ಟ್ ಎಲ್ಫಿನ್‌ಸ್ಟನ್ ಎಂಬವರು 'ಮುಸ್ಲಿಮರಲ್ಲಿ ಹಿಂದುಳಿದವರ ಅಭಿವೃದ್ಧಿಗಾಗಿ ವಿಶೇಷ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ' ಎಂದು ಅಭಿಪ್ರಾಯಪಟ್ಟಿದ್ದರು. 1935ರ ಭಾರತ ಸರ್ಕಾರ 'ಹಿಂದು' ದಲಿತರಿಗೆ ನೀಡುವ ಮೀಸಲಾತಿಯನ್ನು ಮುಸ್ಲಿಂ ದಲಿತರಿಗೂ ನೀಡಲು ಕಾಯ್ದೆ ಮಾಡಿತು. ಆದರೆ ಮುಂದಿನ ದಿನಗಳಲ್ಲಿ ಇದನ್ನು ತಡೆಯಲಾಯಿತು.

ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿಯವರು ಡಾ: ಗೋಪಾಲ್‌ಸಿಂಗ್ ನೇತೃತ್ವದಲ್ಲಿ 10 ಜನ ಸದಸ್ಯರ ಸಮಿತಿಯನ್ನು ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಪಂಗಡದವರ ಸ್ಥಿತಿಗತಿಯನ್ನು ಅಧ್ಯಯನ ಮಾಡಲು ರಚಿಸಿದರು. 1983 ಜೂನ್ 14 ರಂದು ಈ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿ 'ತಮ್ಮನ್ನು ತಾರತಮ್ಯಕ್ಕೆ ಗುರಿಪಡಿಸಲಾಗಿದೆ ಎಂಬ ಭಾವನೆ ಈ ಸಮುದಾಯಗಳಲ್ಲಿ ಬೇರೂರಿದ್ದು, ದೇಶದ ಮುಖ್ಯ ಪ್ರವಾಹದಲ್ಲಿ ಇವರು ಪರಿಣಾಮಕಾರಿ ಭಾಗವಾಗಬೇಕೆಂಬುದು ನಮ್ಮ ಉದ್ದೇಶವಾಗಿದ್ದಲ್ಲಿ ಇವರಲ್ಲಿನ ಈ ಭಾವನೆಯನ್ನು ಅಮೂಲಾಗ್ರವಾಗಿ ಕಿತ್ತು ಹಾಕಬೇಕು' ಎಂದು ಸಲಹೆ ಮಾಡಿತು.

1989ರಲ್ಲಿ ಜಾರಿಗೊಂಡ ಮಂಡಲ್ ವರದಿಯು ಮುಸ್ಲಿಂರ ಸ್ಥಿತಿಗತಿಗಳನ್ನು ತಕ್ಕಮಟ್ಟಿಗಾದರೂ ಉತ್ತಮಪಡಿಸಿದೆ ಒಪ್ಪಬೇಕು. ಯುಪಿಎ ಸರ್ಕಾರದ ಪ್ರಧಾನಿ ಮನಮೋಹನ್ ಸಿಂಗ್‌ರವರು ಮುಸ್ಲಿಮರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಶಿಫಾರಸ್ಸುಗಳನ್ನು ನೀಡಲೆಂದು ಜಸ್ಟಿಸ್ ರಾಜೇಂದ್ರ ಸಾಚಾರ್ ಅಧ್ಯಕ್ಷತೆಯಲ್ಲಿ ಏಳು ಜನ ಸದಸ್ಯರ ಸಮಿತಿಯನ್ನು ರಚಿಸಿದರು. ಈ ಸಮಿತಿಯು ತನ್ನ ಅಂತಿಮ ವರದಿಯನ್ನು 17 ನವೆಂಬರ್ 2006ರಂದು ಪ್ರಧಾನಿಗೆ ಸಲ್ಲಿಸಿತು. ಪ್ರಧಾನಿಯವರು ಈ ವರದಿಯನ್ನು ನವೆಂಬರ್ 30 ರಂದು ಸಂಸತ್ತಿನಲ್ಲಿ ಮಂಡಿಸಿದರು. 12 ಅಧ್ಯಾಯಗಳಿರುವ ಈ ವರದಿಯು ಒಟ್ಟು 478 ಪುಟಗಳನ್ನು ಹೊಂದಿದ್ದು, ದೇಶದ ಗರಿಷ್ಠ ಜನಸಂಖ್ಯೆಯನ್ನು ಹೊಂದಿರುವ 13 ರಾಜ್ಯಗಳಿಗೆ ಭೇಟಿ ನೀಡಿ ಮುಸ್ಲಿಮರು ಮುಖ್ಯವಾಹಿನಿಯಲ್ಲಿ ಪಾಲ್ಗೊಳ್ಳುವಿಕೆಯ ಅವಕಾಶಗಳನ್ನು ಮುಸ್ಲಿಂರಿಂದ ಕಿತ್ತುಕೊಳ್ಳಲಾಗಿದೆ, ಎಂಬ ಅಭಿಪ್ರಾಯ ಮುಸ್ಲಿಂರಿಂದ ವ್ಯಕ್ತವಾಗಿರುವುದನ್ನು ದಾಖಲಿಸಿದೆ.

ಸಾಕ್ಷರತಾ ಪ್ರಮಾಣವು ರಾಷ್ಟ್ರದ ಸರಾಸರಿಗಿಂತ ಮುಸ್ಲಿಂರಲ್ಲಿ ಕಡಿಮೆ ಇದೆ. ನಗರವಾಸಿ ಮುಸ್ಲಿಮೇತರರು ಮತ್ತು ಮುಸ್ಲಿಮರ ಸಾಕ್ಷರತಾ ಮಟ್ಟದಲ್ಲಿನ ಅಂತರ ಜಾಸ್ತಿ ಇದೆ. ಮುಸ್ಲಿಂ ಪುರುಷ ಮಹಿಳೆಯರ ನಡುವೆಯ ಸಾಕ್ಷರತೆಯಲ್ಲಿ ಅಂತರ ಹೆಚ್ಚು. ಮುಸ್ಲಿಮೇತರ ಮಹಿಳೆಯರಿಗಿಂತ ಮುಸ್ಲಿಂ ಮಹಿಳೆಯರಲ್ಲಿ ಸಾಕ್ಷರತೆ ಕಡಿಮೆ ಇದೆ. ಸಾಕ್ಷರತೆಯ ರಾಷ್ಟ್ರ ಸರಾಸರಿ ಪ್ರಮಾಣ ಶೇ.65% ಇರುವಾಗ ಮುಸ್ಲಿಮರಲ್ಲಿ 49% ಇದೆ. 6-14 ವಯೋಮಿತಿಯಲ್ಲಿನ ಮುಸ್ಲಿಂ ಮಕ್ಕಳಲ್ಲಿ ಶೇ.2.5ರಷ್ಟು ಮಕ್ಕಳು ಶಾಲೆಗೆ ದಾಖಲಾಗಿಲ್ಲ. 7ನೇ ತರಗತಿವರೆಗಿನ ಹಂತ ತಲುಪುವುದರಲ್ಲಿ ಮುಸ್ಲಿಂ ಮಕ್ಕಳು ಶಾಲೆ ಬಿಡುವ ಪ್ರಮಾಣವು ಮುಸ್ಲಿಮೇತರರಲ್ಲಿ ಇರುವುದಕ್ಕಿಂತ ಹೆಚ್ಚಾಗಿದೆ. ಉರ್ದು ಶಾಲೆಗಳಲ್ಲಿ

ಸಾಕ್ಷರತಾ ಪ್ರಮಾಣವು ರಾಷ್ಟ್ರದ ಸರಾಸರಿಗಿಂತ ಮುಸ್ಲಿಂರಲ್ಲಿ ಕಡಿಮೆ ಇದೆ. ನಗರವಾಸಿ ಮುಸ್ಲಿಮೇತರರು ಮತ್ತು ಮುಸ್ಲಿಮರ ಸಾಕ್ಷರತಾ ಮಟ್ಟದಲ್ಲಿನ ಅಂತರ ಜಾಸ್ತಿ ಇದೆ. ಮುಸ್ಲಿಂ ಪುರುಷ ಮಹಿಳೆಯರ ನಡುವೆಯ ಸಾಕ್ಷರತೆಯಲ್ಲಿ ಅಂತರ ಹೆಚ್ಚು. ಮುಸ್ಲಿಮೇತರ ಮಹಿಳೆಯರಿಗಿಂತ ಮುಸ್ಲಿಂ ಮಹಿಳೆಯರಲ್ಲಿ ಸಾಕ್ಷರತೆ ಕಡಿಮೆ ಇದೆ. ಸಾಕ್ಷರತೆಯ ರಾಷ್ಟ್ರ ಸರಾಸರಿ ಪ್ರಮಾಣ ಶೇ.೬೫% ಇರುವಾಗ ಮುಸ್ಲಿಮರಲ್ಲಿ ೪೯% ಇದೆ. ೬-೧೪ ವಯೋಮಿತಿಯಲ್ಲಿನ ಮುಸ್ಲಿಂ ಮಕ್ಕಳಲ್ಲಿ ಶೇ.೨.೫ರಷ್ಟು ಮಕ್ಕಳು ಶಾಲೆಗೆ ದಾಖಲಾಗಿಲ್ಲ. ೭ನೇ ತರಗತಿವರೆಗಿನ ಹಂತ ತಲುಪುವುದರಲ್ಲಿ ಮುಸ್ಲಿಂ ಮಕ್ಕಳು ಶಾಲೆ ಬಿಡುವ ಪ್ರಮಾಣವು ಮುಸ್ಲಿಮೇತರರಲ್ಲಿ ಇರುವುದಕ್ಕಿಂತ ಹೆಚ್ಚಾಗಿದೆ. ಉರ್ದು ಶಾಲೆಗಳಲ್ಲಿ ಶಿಕ್ಷಕ/ಶಿಕ್ಷಕಿಯರ ಕೊರತೆ ಎದ್ದು ಕಾಣುತ್ತಿದ್ದು. ಅಲ್ಲಿನ ಸೌಲಭ್ಯಗಳು ಸಹ ಅತಿ ಕಡಿಮೆ.

ಶಿಕ್ಷಕ/ಶಿಕ್ಷಕಿಯರ ಕೊರತೆ ಎದ್ದು ಕಾಣುತ್ತಿದ್ದು, ಅಲ್ಲಿನ ಸೌಲಭ್ಯಗಳು ಸಹ ಅತಿ ಕಡಿಮೆ. ಶಿಕ್ಷಕರ ಮತ್ತು ಹಾಸ್ಟೆಲ್‌ಗಳ ಕೊರತೆಯಿಂದಾಗಿ ಮುಸ್ಲಿಂ ಬಾಲಕಿಯರು ಶಿಕ್ಷಣದಲ್ಲಿ ಹಿಂದುಳಿಯುತ್ತಿದ್ದಾರೆ. ಉನ್ನತ ಶಿಕ್ಷಣವಂತೂ ಇವರಿಗೆ ಗಗನ ಕುಸುಮವಾಗಿದೆ. ಮುಸ್ಲಿಂರಲ್ಲಿ ಪದವೀಧರರ ಪ್ರಮಾಣ 3.4% ಮಾತ್ರವಿದೆ. ಈ ಪ್ರಮಾಣ ಎಸ್.ಸಿ/ಎಸ್‌ಟಿ ವರ್ಗಗಳಲ್ಲಿ 36% ಎಸ್‌ಸಿ/ಹೊಂದಿದೆ, ಹಿಂದೂಗಳಲ್ಲಿ ಶೇ.15.3 ರಷ್ಟು ಇದೆ. ನಗರಗಳಲ್ಲಿ 54.6 ರಷ್ಟು ಗ್ರಾಮೀಣ ಪ್ರದೇಶಗಳಲ್ಲಿ ಶೇ.60% ರಷ್ಟು ಮುಸ್ಲಿಮರು ಶಿಕ್ಷಣದಿಂದ ವಂಚಿತರಾಗಿದ್ದಾರೆ. 2001ರ ಜನಗಣತಿಯವರೆಗೆ ಮುಸ್ಲಿಮರ ಸಾಕ್ಷರತಾ ಮಟ್ಟ ವಿವಿಧ ಕ್ಷೇತ್ರಗಳಲ್ಲಿ ಅವರಿಗೆ ದೊರಕಿದ ಪ್ರಾತಿನಿಧ್ಯದ ಪ್ರಮಾಣವನ್ನು ದಾಖಲು ಮಾಡಿರಲಿಲ್ಲ. ಮುಸ್ಲಿಮರ ವಾಸ್ತವ ಪ್ರಗತಿ, ಹಿಂದುಳಿದಿರುವಿಕೆಯನ್ನು ದೇಶದ ಮುಂದಿಡುವ ಪ್ರಯತ್ನಗಳೇ ನಡೆಯಲಿಲ್ಲ ತಯಾರಿಸುವ ಮುಸ್ಲಿಮರು 94.9ರಷ್ಟು ಬಡತನದ ರೇಖೆಗಿಂತ ಕೆಳಗಿದ್ದು ಶೇ.60ರಷ್ಟು ಭೂರಹಿತರಾಗಿದ್ದಾರೆ.

ಮುಸ್ಲಿಮರಲ್ಲಿ ಬಹಳಷ್ಟು ಜನರು ಸ್ವಂತ ಉದ್ಯೋಗದ ಕಡೆ ಆಕರ್ಷಿತರಾಗುತ್ತಿದ್ದಾರೆ. ಆದರೆ ಅವರಿಗೆ ತಾಂತ್ರಿಕ ಕೌಶಲ್ಯ ತರಬೇತಿಯನ್ನು ಒದಗಿಸುವ ವ್ಯವಸ್ಥೆ ಆಗಿಲ್ಲ ಬೀಡಿ, ಅಗರಬತ್ತಿ ಕಟ್ಟುವ, ಬಟ್ಟೆ ಹೊಲಿಯುವ ಮತ್ತು ಮೆಕ್ಯಾನಿಕ್ ವೃತ್ತಿಗಳಲ್ಲಿ ಇರುವ ಮುಸ್ಲಿಮರಿಗೆ ಸಾಮಾಜಿಕ ಸೌಲಭ್ಯ ಭದ್ರತೆಗಳಿಲ್ಲ.

ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ತುಂಬಾ ಕಡಿಮೆ ಇದೆ. ಪೋಲೀಸ್ ಪೇದೆಗಳಲ್ಲಿ ಶೇ.6ರಷ್ಟು ಆರೋಗ್ಯ ಇಲಾಖೆಯಲ್ಲಿ ಮುಸ್ಲಿಮರು ಶೇ.6.4 ರಷ್ಟು ಸಾರಿಗೆ ಇಲಾಖೆಯಲ್ಲಿ ಶೇ.6.5 ಪ್ರಾತಿನಿಧ್ಯ ಇವರಿಗೆ ಸಿಕ್ಕಿದೆ. ರೈಲ್ವೆ ಇಲಾಖೆಯಲ್ಲಿ ಮುಸ್ಲಿಮರು ಶೇ.4.5 ರಷ್ಟು ಹುದ್ದೆಗಳಲ್ಲಿ ಇದ್ದರೂ ಈ ಪೈಕಿ ಶೇ.98.7 ರಷ್ಟು ಕೇವಲ ಮೂರನೇ ಅಥವಾ ನಾಲ್ಕನೆಯ ದರ್ಜೆಯ ಹುದ್ದೆಗಳನ್ನು ನಡೆದಿದ್ದಾರೆ. ಅವರು ಐಪಿಎಸ್(IPS)ನಲ್ಲಿ ಶೇ.4ರಷ್ಟು, ಐಎಎಸ್‌ನಲ್ಲಿ ಶೇ.3ರಷ್ಟು ಮತ್ತು ಐಎಫ್‌ಎಸ್ (IFS) ನಲ್ಲಿ ಶೇ.1.8ರಷ್ಟು ಪ್ರಾತಿನಿಧ್ಯವನ್ನು ಮಾತ್ರ ಪಡೆದಿದ್ದಾರೆ. ಕರ್ನಾಟಕದ ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳಲ್ಲಿ ಮುಸ್ಲಿಮರ ಪ್ರಮಾಣ ಶೇ.6.71 ರಷ್ಟಿದೆ.

ರಾಷ್ಟ್ರ ಮಟ್ಟದಲ್ಲಿ 2001ರ ಜನಗಣತಿಯ ಪ್ರಕಾರ ಶೇ.13.4 ರಷ್ಟು ಜನಸಂಖ್ಯೆ ಪ್ರಮಾಣ ಇರುವ ಮುಸ್ಲಿಂರಿಗೆ ಸರ್ಕಾರಿ ಹುದ್ದೆಗಳಲ್ಲಿ ಹಾಗೂ ಆಡಳಿತದಲ್ಲಿ ಸಿಕ್ಕಿರುವುದು ಕೇವಲ ಶೇ.4.9ರಷ್ಟು ಪ್ರಾತಿನಿಧ್ಯ ಮಾತ್ರ.ಶಿಕ್ಷಣ ಮತ್ತು ಉದ್ಯೋಗದಿಂದ ವಂಚಿತವಾಗಿರುವ ಸಮುದಾಯ ಬಡತನಕ್ಕೆ ಸಿಲುಕುವುದು ಸಹಜ. ಮುಸ್ಲಿಮರು ಕೆಲವು ರಾಜ್ಯಗಳಲ್ಲಿ ದಲಿತರಿಗಿಂತ (ಪರಿಶಿಷ್ಟ ಜಾತಿ,SC) ಅತಿ ಹಿಂದುಳಿದಿದ್ದಾರೆ.

2001ರ ಜನಗಣತಿಯ ಪ್ರಕಾರ ರಾಜ್ಯದ ಮುಸ್ಲಿಂರ ಒಟ್ಟು ಜನಸಂಖ್ಯೆ 64,63,127(ಶೇ.12.23) ಇದುವರೆಗೂ ರಾಜ್ಯದಲ್ಲಿ 26,900 ಶೈಕ್ಷಣಿಕ ಸಂಸ್ಥೆಗಳು 10,000 ಮಸೀದಿ ಸಮಿತಿಗಳು ವಕ್ಫ್‌ಬೋರ್ಡ್‌ನಿಂದ ನೋಂದಾಯಿಸಲ್ಪಟ್ಟಿವೆ. 1986ರಿಂದ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, 1999ರಿಂದ ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ, ಅಲ್ಪಸಂಖ್ಯಾತರ ಆಯೋಗ, ಕರ್ನಾಟಕ ವಕ್ಫ್ ಮಂಡಳಿ, ಕರ್ನಾಟಕ ಹಜ್ ಕಮಿಟಿ, ಕರ್ನಾಟಕ ಅಲ್ಪಸಂಖ್ಯಾತರ ನಿರ್ದೇಶನಾಲಯದಂತಹ ಸರ್ಕಾರಿ ಸ್ವಾಮ್ಯದ ನಿಗಮ/ಮಂಡಳಿಗಳು ಮುಸ್ಲಿಮರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ.



ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ 2007-08 ರಲ್ಲಿ 97ಕೋಟಿ ರೂ. ಅನುದಾನ ಒದಗಿಸಿತ್ತು. ಈ ವರ್ಷ ಅಂದರೆ 2008-09 ರ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು 143 ಕೋಟಿ ರೂ. ಒದಗಿಸಿದೆ. ಶಾದಿ ಮಹಲ್‌ಗಳ ನಿರ್ಮಾಣಕ್ಕಾಗಿ 2007-08ರಲ್ಲಿ 6.50 ಕೋಟಿ ರೂ.ಗಳನ್ನು ನೀಡಲಾಗಿತ್ತು. ಈ ಅನುದಾನವನ್ನು 2008-09 ರಲ್ಲಿ 15 ಕೋಟಿ ರೂ. ನೀಡಲಾಗಿದೆ. ಆದರೆ ಈ ಎಲ್ಲಾ ಯೋಜನೆಗಳು ಫಲಕಾರಿಯಾಗದೆ ಒಂದು ಕಡೆ ಕೆಲವೇ ವ್ಯಕ್ತಿಗಳ ಕಪಿಮುಷ್ಟಿಯಲ್ಲಿ ಕೆಲವು ಯೋಜನೆಗಳು ನರಳುತ್ತಿದ್ದರೆ, ಮತ್ತೊಂದು ಕಡೆ ವರ್ಷಾಂತ್ಯದಲ್ಲಿ ಕೋಟಿಗಟ್ಟಲೆ ಹಣ ಸರ್ಕಾರದ ಬೊಕ್ಕಸಕ್ಕೆ ಹಿಂದಿರುಗುತ್ತಿದೆ.

ನಮ್ಮ ಸಂವಿಧಾನವು ಧರ್ಮಾಧಾರಿತ ಮೀಸಲಾತಿಯನ್ನು ಒಪ್ಪಿಲ್ಲ. ಆದರೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿರುವ ಭಾರತೀಯ ಸಂವಿಧಾನದ ಪ್ರಕಾರವೇ, ಜನರು ತಮಗೆ ಇಷ್ಟ ಬಂದ ಧರ್ಮದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಬಹುದು ಧರ್ಮಾಚರಣೆಯಲ್ಲಿ ತೊಡಗಬಹುದು. ಆ ಧರ್ಮವನ್ನು ಬೋಧಿಸಬಹುದು ಮತ್ತು ಪ್ರಚಾರ ಮಾಡಬಹುದು. ಹೀಗಿರುವಾಗ ನಾವು ಧರ್ಮದ ಆಧಾರದಲ್ಲಿ ಚರ್ಚೆಯನ್ನೇಕೆ ಮಾಡಬಾರದು? ಮುಸ್ಲಿಮರು ಏಕಕಾಲದಲ್ಲಿ ಧಾರ್ಮಿಕ ಹಾಗೂ ಜಾತಿ ಆಧಾರದ ಮೇಲೆ ಶೋಷಿತರಾಗಿದ್ದಾರೆ.

ಮುಸ್ಲಿಮರಲ್ಲಿನ ಮೇಲ್ವರ್ಗ ಎನಿಸಿರುವುದು ಅಲ್ಲಿ ಮೇಲ್ಜಾತಿಯೂ ಆಗಿರುವುದರಿಂದ ಕೆಳಜಾತಿಯವರುಂದು ಪರಿಗಣಿಸಲ್ಪಟ್ಟಿರುವ ಶೋಷಿತ ಮುಸ್ಲಿಮರ ಅಭಿವೃದ್ಧಿಯ ಬಗ್ಗೆ ಈ ಮೇಲ್ವರ್ಗ ಕಾಳಜಿ ವಹಿಸಲಿ. ಇದರಿಂದ 'ಅವಮಾನಿತ ಅಶುದ್ಧ' ಎಂದು ಗುರುತಿಸಲ್ಪಟ್ಟರು. ಬಹು ಸಂಖ್ಯಾತ ಮುಸ್ಲಿಮರು ಕಳೆದ ಆರು ದಶಕಗಳಿಂದ ಅಧಿಕಾರದಲ್ಲಿ ಪಾಲು ಪಡೆದಿರುವ ಮುಸ್ಲಿಮರು ಜನಸಾಮಾನ್ಯ ಮುಸ್ಲಿಮರನ್ನು ಕೇವಲ ಮತ ಬ್ಯಾಂಕ್‌ಗಳನ್ನಾಗಿ ಪರಿಗಣಿಸುತ್ತಾ ನಿರ್ಲಕ್ಷಿಸುತ್ತಾ ಬಂದರು. ಕೋಮುಗಲಭೆಗಳಲ್ಲಿ ಉರುಳಿದ ಶೋಷಿತ ಮುಸ್ಲಿಮರ ಹೆಣಗಳು ರಾಜಕೀಯಕ್ಕೆ ಬಳಕೆಯಾದವು.

ಇತರ ಪಕ್ಷಗಳ ಜಾತ್ಯಾತೀತತೆಯು ನಕಲಿ(psudeo) ಎಂದು, ಮುಸ್ಲಿಮರ ಓಲೈಕೆ/ಪ್ರಕಾರದಲ್ಲಿ ಇವು ತುಷ್ಟೀಕರಣ ನೀತಿ ಅನುಸರಿಸುತ್ತಿವೆ ಎಂದು, ಮುಸ್ಲಿಮರು ರಾಷ್ಟ್ರ ವಿರೋಧಿಗಳು ಎಂದು ಹಿಂದುತ್ವವಾದಿ ಶಕ್ತಿಗಳು ಹಾಗೂ ಬಿಜೆಪಿ ಆಪಾದಿಸುತ್ತಾ ಬರುತ್ತಿವೆ. ಈ ರೀತಿಯ ನಿರಾಧಾರದ ಪ್ರಚಾರ 1980 ರಿಂದ ವ್ಯವಸ್ಥಿತವಾಗಿ ನಡೆದಿದೆ.

ಸ್ವತಂತ್ರ ಭಾರತದಲ್ಲಿ ಕೆಲವು ಮುಸ್ಲಿಂ ಮುಂದಾಳುಗಳಿಗೆ ಮಣೆ ಹಾಕಲಾಯಿತಾದರೂ, ಆಳುವ ವರ್ಗವು ಜನಸಾಮಾನ್ಯ ಮುಸ್ಲಿಮರನ್ನು ಕೇವಲ ಮತ ಬ್ಯಾಂಕ್‌ಗಳನ್ನಾಗಿ ಪರಿಗಣಿಸುತ್ತಾ, ಬಂತು. ಕೋಮುಗಲಭೆಗಳಲ್ಲಿ ಉರುಳಿದ ಮುಸ್ಲಿಮರ ಹೆಣಗಳೂ ರಾಜಕೀಯದಾಟಕ್ಕೆ ಬಳಕೆಯಾದವು. ಮತಗಳನ್ನು ಬಾಚಿಕೊಳ್ಳುವಾಗ ನೀಡಿದ ಭರವಸೆಗಳು ಗಾಳಿ ಪಾಲಾದವು. ಸಮುದಾಯ ಹಿತದ ಬಗ್ಗೆ ಪ್ರಾಮಾಣಿಕ ಮತ್ತು ಅಚಲ ನಿಷ್ಠೆ ಹೊಂದಿದ ಮನಸುಗಳು ಅಪರೂಪವಾದವು.

ಬಹು ಭಾಷೆ, ಸಂಸ್ಕೃತಿ ಬಹುಪಂಗಡಗಳ ಭಾರತೀಯರು ಅನೇಕರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು. ನಂತರವೂ ದಲಿತ, ಹಿಂದುಳಿದ, ಪರಿಶಿಷ್ಟ ಪಂಗಡಗಳ ಸಂಪ್ರದಾಯಗಳ ಜೊತೆಗೆ ಸಾಮಾಜಿಕ ಸ್ಥಿತಿಗತಿಯೂ ಮುಂದುವರೆಯಿತು. ಅರ್ಜಲ್ ಮುಸ್ಲಿಮರು ಅಸ್ಪೃಶ್ಯ ಮೂಲದವರಿದ್ದು, ಅಸ್ಪೃಶ್ಯರು ಅವಲಂಬಿಸಿರುವ ವೃತ್ತಿಗಳನ್ನೇ ಇವರು ಅವಲಂಬಿಸಿದ್ದಾರೆ. ಮುಸ್ಲಿಂ ಸಮುದಾಯದೊಳಗೂ ಹಿಂದೂ ಸಮಾಜದಂತೆಯೇ ಸಾಮಾಜಿಕ, ಆರ್ಥಿಕ, ರಾಜಕೀಯ ತಾರತಮ್ಯ ಮತ್ತು ಅವಕಾಶ ಹೀನತೆಗೆ ಬಲಿಯಾಗಿದ್ದಾರೆ. ಹಿನ್ನೆಲೆಯಲ್ಲಿ ಇವರನ್ನು ಎಸ್.ಸಿ.ಪಟ್ಟಿಯಲ್ಲಿ ಸೇರಿಸುವುದು ಸೂಕ್ತ ಎಂದು ಸಾಚಾರ್ ಸಮಿತಿ ವರದಿ ಹೇಳಿದೆ.

ಮುಸ್ಲಿಮರಲ್ಲಿನ ಮೇಲ್ವರ್ಗ ಎನಿಸಿರುವುದು ಅಲ್ಲಿ ಮೇಲ್ಜಾತಿಯೂ ಆಗಿರುವುದರಿಂದ ಕೆಳಜಾತಿಯವರುಂದು ಪರಿಗಣಿಸಲ್ಪಟ್ಟಿರುವ ಶೋಷಿತ ಮುಸ್ಲಿಮರ ಅಭಿವೃದ್ಧಿಯ ಬಗ್ಗೆ ಈ ಮೇಲ್ವರ್ಗ ಕಾಳಜಿ ವಹಿಸಲಿ. ಇದರಿಂದ 'ಅವಮಾನಿತ ಅಶುದ್ಧ' ಎಂದು ಗುರುತಿಸಲ್ಪಟ್ಟರು. ಬಹು ಸಂಖ್ಯಾತ ಮುಸ್ಲಿಮರು ಕಳೆದ ಆರು ದಶಕಗಳಿಂದ ಅಧಿಕಾರದಲ್ಲಿ ಪಾಲು ಪಡೆದಿರುವ ಮುಸ್ಲಿಮರು ಜನಸಾಮಾನ್ಯ ಮುಸ್ಲಿಮರನ್ನು ಕೇವಲ ಮತ ಬ್ಯಾಂಕ್‌ಗಳನ್ನಾಗಿ ಪರಿಗಣಿಸುತ್ತಾ ನಿರ್ಲಕ್ಷಿಸುತ್ತಾ ಬಂದರು. ಕೋಮುಗಲಭೆಗಳಲ್ಲಿ ಉರುಳಿದ ಶೋಷಿತ ಮುಸ್ಲಿಮರ ಹೆಣಗಳು ರಾಜಕೀಯಕ್ಕೆ ಬಳಕೆಯಾದವು.

ಉತ್ತರಭಾರತದಲ್ಲಿ ಗಢೇಡ್, ಪಸ್ಮಂದಾ, ಝುಲ್ಹಾಂ, ಕುಂಜ್ರಾ, ಹಲಾಲ್, ಖೋರ್, ಜೋಲಾರಾ, ನುಟ್, ಬಕ್ಕೊ, ದಫಲಿ, ಧೋಬಿ, ಭಂಗಿ, ಲಾಲ್ಬೇಗಿ ಗೋರ್ಕನ್, ವೀರ್‌ಶಿಕಾರ್, ಅನ್ಸಾರಿಯಂತ ಮುಸ್ಲಿಂ ಅಸ್ಪೃಶ್ಯ ಸಮುದಾಯಗಳು ಜಾತಿ ಆಧಾರದಲ್ಲಿ ಶೋಷಿತ ಸಮುದಾಯಗಳಾಗಿವೆ. ಇವರು ದಲಿತ ಮುಸ್ಲಿಮರಾಗಿದ್ದು, ಇತರ ಮುಸ್ಲಿಮರು ಇವರನ್ನು ಅಸ್ಪೃಶ್ಯರೆಂದು ಪರಿಗಣಿಸುತ್ತಿವೆ. ಇವರಿಗೆ

... ಗಡೆ ಪ್ರತ್ಯೇಕ ಮಸೀದಿಗಳಿವೆ. ಪ್ರತ್ಯೇಕ ಸ್ಮಶಾನಗ ... ಹಾಗೆಯೇ ದಕ್ಷಿಣ ಭಾರತದಲ್ಲಿ ನದಾಫ್, ...ಲಂದರ್, ಪಿಂಜಾರ, ದರ್ವೇಸು ಮುಂತಾದ ಸಮುದಾ... ಮೂಲತಃ ದಲಿತ ಸಮುದಾಯಿಗಳಾಗಿವೆ.

2001 ರ ಜನಗಣತಿಯಲ್ಲಿ ಹಿಂದುಳಿದ ಜಾತಿಗಳೆಂದು ತಮ್ಮನ್ನು ಗುರುತಿಸಿಕೊಂಡವರ ಪ್ರಮಾಣ ಹಿಂದೂ ಸಮುದಾಯದಲ್ಲಿ ಶೇ.43ರಷ್ಟಿದ್ದರೆ. ಇದು ಮುಸ್ಲಿಂ ಸಮುದಾಯಗಳಲ್ಲಿ ಶೇ.41 ರಷ್ಟಿದೆ. ಶೇ.0.8 ಮುಸ್ಲಿಮರು ತಮ್ಮನ್ನು ಪ.ಜಾತಿಯವರೆಂದು, ಇದಕ್ಕಿಂತ ಕಡಿಮೆ ಪ್ರಮಾಣದ ಜನರು ತಮ್ಮನ್ನು ಪ.ಪಂಗಡದವರೆಂದು ಗುರುತಿಸಿಕೊಂಡಿದ್ದಾರೆ. ಎಲ್ಲಾ ಮುಸ್ಲಿಮರೂ ಇಸ್ಲಾಂನ ಅನುಯಾಯಿಗಳಾಗಿದ್ದರೂ, ಅವರಲ್ಲಿ ತಾರತಮ್ಯರಹಿತ ಸಾಮಾಜಿಕ ಜೀವನ ಇಲ್ಲ. ಅವರಲ್ಲೂ ಪ.ಜಾತಿ, ಹಿಂದುಳಿದ ಜಾತಿ ಮತ್ತು ಮೇಲ್ಜಾತಿಗಳ ಕಲ್ಪನೆ ಕ್ರಿಯಾಶೀಲವಾಗಿದೆ.

ಅಫಘಾನಿಸ್ತಾನ, ಅರಬ್ ಮೊದಲಾದ ವಿದೇಶಗಳಿಂದ ಭಾರತಕ್ಕೆ ವಲಸೆ ಬಂದು ನೆಲೆಸಿದ ಮುಸ್ಲಿಮರು ಇಲ್ಲಿ ಮೇಲ್ಜಾತಿಗಳಾಗಿದ್ದಾರೆ, ಮಧ್ಯಮ ಜಾತಿಗಳಾದ ಓಬಿಸಿ ಸಮುದಾಯಗಳ ವೃತ್ತಿಗಳನ್ನು ಮಾಡುತ್ತಿರುವ ಮುಸ್ಲಿಮರು 'ಅಜ್ಲಫ್ಸ್' ಎಂದು ಗುರುತಿಸಲಾಗುತ್ತದೆ. ಮುಸ್ಲಿಮರಲ್ಲಿ ಈ ಗುಂಪುಗಳು ಪ್ರತ್ಯೇಕವಾಗಿವೆ. ಇವುಗಳ ನಡುವೆ ಊಟ-ವಿವಾಹ ನಡೆಯುವುದಿಲ್ಲ. ಅಂದರೆ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಚತುರ್ವರ್ಣ ಪದ್ಧತಿ ಇದ್ದರೆ, ಮುಸ್ಲಿಮರಲ್ಲಿ ತ್ರಿವರ್ಣ ಪದ್ಧತಿ ಇದೆ. ಅಲ್ಲದೆ ಮುಸ್ಲಿಮರಲ್ಲಿ ಬೃಹತ್ ಸಂಖ್ಯೆಯಲ್ಲಿ ಶ್ರಮಜೀವಿ ವರ್ಗ ಮತ್ತು ಚಿಕ್ಕದಾದ ಜಮೀನುದಾರ ಕೈಗಾರಿಕೋದ್ಯಮಿ ವರ್ಗ ಇವೆ. ಅಂದರೆ ಇಲ್ಲೂ ಜಾತಿ-ವರ್ಗ ಹಿತಾಸಕ್ತಿ ಕ್ರಿಯಾಶೀಲವಾಗಿರುವುದು ಸ್ಪಷ್ಟ. ಬಿಹಾರ ರಾಜ್ಯದಲ್ಲಿ ಮುಸ್ಲಿಮರಿಗಾಗಿ ಹಿಂದುಳಿದ ವರ್ಗಗಳಲ್ಲಿ 'ಅತಿ ಹಿಂದುಳಿದ ವರ್ಗಗಳು' (Most Backword Clas) ಎಂಬ ಹೊಸ ಪಟ್ಟಿಯನ್ನು ಮಾಡಲಾಗಿದ್ದು, ಡಬಲ್ ಶೋಷಿತ ಮುಸ್ಲಿಮರಿಗೆ ಇದರಿಂದ ವಿಶೇಷ ಸಹಾಯವಾಗುತ್ತಿದೆ.

ಕರ್ನಾಟಕದಲ್ಲಿ ಪ್ರವರ್ಗ-1ರಲ್ಲಿ ನದಾಫ್, ಪಿಂಜಾರ, ನಳಬಂದ್, ಚಪ್ಪರ್‌ಬಂದ್ ಮತ್ತು ದರ್ವೇಸು ಸಮುದಾಯಗಳು. ಪ್ರವರ್ಗ-2ಬಿ ಅಡಿಯಲ್ಲಿ ಇತರೆ ಎಲ್ಲಾ ಮುಸ್ಲಿಂ ಸಮುದಾಯಗಳನ್ನು ಪರಿಗಣಿಸಲಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಕೇಂದ್ರ ಸರ್ಕಾರ ಮೀಸಲಾತಿ ಕೊಡಲು ಸಂವಿಧಾನದ ತಿದ್ದುಪಡಿಯಾಗಿರುವ ಹಿನ್ನೆಲೆಯಲ್ಲಿ ಬಿಟ್ಟು ಎಲ್ಲಾ ಮುಸ್ಲಿಂ ಸಮುದಾಯಗಳು (1993 ರಲ್ಲಿ ಸರ್ಕಾರಿ ಸೇವೆಗಾಗಿ ಪ್ರಕಟಿಸಲಾದದ್ದು) ಈ ಮೀಸಲಾತಿಯನ್ನು ಪಡೆಯುವವು. (ಕಚ್ಚಿ ಮೆನನ್ ನವಾಯತ್/ ಭೋರ್ರ/ ಬೋರ, ಸಯ್ಯದ್ ಶೇಖ್, ಪಠಾಣ್, ಮೊಘಲ್, ಮದ್ದೀಮಿಯ/ಮದ್ದಾವಿ, ಕೊಂಕಣಿ/ಜಮಾಯತಿ ಮುಸ್ಲಿಮರು) ಈ ಸಮುದಾಯಗಳು ದಕ್ಷಿಣ ಭಾರತದಲ್ಲಿ ಸವರ್ಣೀಯ ಮೇಲ್ಜಾತಿ ಸಮುದಾಯಗಳಾಗಿವೆ.

ಅತ್ಯಂತ ಹೆಚ್ಚಿನ ಮುಸಲ್ಮಾನರು ಕೆಳಜಾತಿಗೆ ಸೇರಿದವರೆಂದು 1881 ಬಿಜಾಪುರದ ಗೆಝೆಟಿಯರ್ ದಾಖಲಿಸಿದೆ. ಕರ್ನಾಟಕದಲ್ಲಿ ಕೋತಿ, ಹಾವು ಮತ್ತು ಕರಡಿಗಳನ್ನು ಪಳಗಿಸಿ ಆಡಿಸುವವರು ಸಾಮಾನ್ಯವಾಗಿ ಮುಸ್ಲಮರು. ಕರಡಿ ಆಡಿಸುವ ಸಮುದಾಯದ ಜನರನ್ನು ಖಲಂದರೆಂದು ಕರೆಯಲಾಗುತ್ತದೆ. ವಿಶೇಷವೆಂದರೆ ಈ 'ಖಲಂದರ' ಎಂಬ ಹೆಸರು ಒಂದು ಸೂಫಿ ಪಂಥದ ಹೆಸರು ಸಹ ಆಗಿದೆ.

ಭಾರತವು ಬಹುಭಾಷಿಕ, ಜಾತೀಯ, ಧರ್ಮೀಯ ಹಾಗೂ ಪ್ರಾದೇಶಿಕ ವೈವಿಧ್ಯತೆಯುಳ್ಳ ದೇಶ. ರಾಷ್ಟ್ರದ ಎಲ್ಲಾ ಕ್ಷೇತ್ರಗಳಲ್ಲಿನ ಅವಕಾಶಗಳು ಎಲ್ಲಾ ಸಾಮಾಜಿಕ ಗುಂಪುಗಳಿಗೆ ಅವರವರ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಕಡ್ಡಾಯ ಹಂಚಿಕೆ ಆಗಬೇಕು. ಈ ಕಲ್ಪನೆಯೇ ಸಾಮಾಜಿಕ ನ್ಯಾಯದ ಮೂಲಾಧಾರ. ಇದನ್ನು ಮೊದಲಿಗೆ ರಾಜಕೀಯ ಕ್ಷೇತ್ರದಲ್ಲಿ ಕಡ್ಡಾಯಗೊಳಿಸಬೇಕಾಗಿದೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಮುಸ್ಲಿಮರ ರಾಜಕೀಯ ಪಾಲುದಾರಿಕೆ ಅತಿ ಕಡಿಮೆ ಇದೆ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಸಮುದಾ ಯವೂ ನಿರ್ಣಾಯಕ. ರಾಜಕೀಯವಾಗಿ ಮುಸ್ಲಿಂ ಸಮುದಾಯ ಮುಖ್ಯವಾಹಿನಿಯಿಂದ ಹೊರಗಿಟ್ಟ ದ್ವೀಪಗಳಾಗಿದೆ. ಗೋಚರಿಸುತ್ತಿವೆ.

ಭಾರತವು ಬಹುಭಾಷಿಕ, ಜಾತೀಯ, ಧರ್ಮೀಯ ಹಾಗೂ ಪ್ರಾದೇಶಿಕ ವೈವಿಧ್ಯತೆಯುಳ್ಳ ದೇಶ. ರಾಷ್ಟ್ರದ ಎಲ್ಲಾ ಕ್ಷೇತ್ರಗಳಲ್ಲಿನ ಅವಕಾಶಗಳು ಎಲ್ಲಾ ಸಾಮಾಜಿಕ ಗುಂಪುಗಳಿಗೆ ಅವರವರ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಕಡ್ಡಾಯ ಹಂಚಿಕೆ ಆಗಬೇಕು. ಈ ಕಲ್ಪನೆಯೇ ಸಾಮಾಜಿಕ ನ್ಯಾಯದ ಮೂಲಾಧಾರ. ಇದನ್ನು ಮೊದಲಿಗೆ ರಾಜಕೀಯ ಕ್ಷೇತ್ರದಲ್ಲಿ ಕಡ್ಡಾಯಗೊಳಿಸಬೇಕಾಗಿದೆ.

ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಮುಸ್ಲಿಮರ ರಾಜಕೀಯ ಪಾಲುದಾರಿಕೆ ಅತಿ ಕಡಿಮೆ ಇದೆ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಸಮುದಾಯವೂ ನಿರ್ಣಾಯಕ. ರಾಜಕೀಯವಾಗಿ ಮುಸ್ಲಿಂ ಸಮುದಾಯ ಮುಖ್ಯವಾಹಿನಿಯಿಂದ ಹೊರಗಿಟ್ಟ ದ್ವೀಪಗಳಾಗಿದೆ. ಗೋಚರಿಸುತ್ತಿವೆ. ಜಾತಿ ಆಧಾರಿತ ಭಾರತೀಯ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಜಾತಿಯೇ ನಿರ್ಧಾರಾತ್ಮಕ ಮಾನದಂಡವಾಗಿದ್ದು ಇದರಿಂದ ರಾಜಕಾರಣ ಹೊರತಾಗಿಲ್ಲ. ಇದುವರೆಗಿನ ಕರ್ನಾಟಕದ ರಾಜಕೀಯ ಬ್ರಾಹ್ಮಣ, ಲಿಂಗಾಯತ ಜಾತಿಗಳಿಂದ ನಂತರ ಒಕ್ಕಲಿಗ ಜಾತಿಗಳಿಂದ ನಿರ್ದೇಶಿಸಲ್ಪಟ್ಟಿತು. ಈಗ ಕುರುಬ ಹಾಗೂ ಹೊಲೆಯ ಜಾತಿಗಳ ನಡುವೆ ಮುಖ್ಯಮಂತ್ರಿ ಪದವಿಗಾಗಿ ಪೈಪೋಟಿ ನಡೆಯುತ್ತಿದೆ.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.3.46 ರಷ್ಟಿರುವ (2001ರ ಜನಗಣತಿಯಂತೆ) ಬ್ರಾಹ್ಮಣರು 3 ಬಾರಿ ಶೇ.15.34 ರಷ್ಟಿರುವ ಲಿಂಗಾಯತರು 8 ಬಾರಿ ಹಾಗೂ ಶೇ.10.81 ರಷ್ಟಿರುವ ಒಕ್ಕಲಿಗರು 6 ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ಶೇ.12.23 ರಷ್ಟಿರುವ ಮುಸ್ಲಿಂ ಸಮುದಾಯದಿಂದ ಇದುವರೆಗೂ ಒಬ್ಬರೂ ಮುಖ್ಯಮಂತಿ ಆಗಲಿಲ್ಲ.

ಮುಸ್ಲಿಮರಿಗೆ ರಾಜಕೀಯದಲ್ಲಿ ಅವರ ಜನಸಂಖ್ಯಾ ಪ್ರಮಾಣದಷ್ಟು ಕಡ್ಡಾಯ ಪ್ರಾತಿನಿಧ್ಯ ದೊರೆಯಬೇಕು. ಹಲವಾರು ಮುಸ್ಲಿಂ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈ ಬಿಡಲಾಗಿದೆ. ಮುಸ್ಲಿಮರು ಹೆಚ್ಚಿರುವ ಮತ ಕ್ಷೇತ್ರಗಳನ್ನು ಪರಿಶಿಷ್ಟ ಜಾತಿಯವರಿಗಾಗಿ ಮೀಸಲಿಡಲಾಗಿದೆ. ಪ.ಜಾತಿಯವರು ಹೆಚ್ಚಿರುವ ಮತ ಕ್ಷೇತ್ರಗಳನ್ನು ಸಾಮಾನ್ಯ ಕ್ಷೇತ್ರಗಳೆಂದು ನಿರ್ಧರಿಸಲಾಗಿದೆ. ಹೀಗೆ ರಾಜಕೀಯ ಪಾಲ್ಗೊಳ್ಳುವಿಕೆಯ ಅವಕಾಶವನ್ನು ಮುಸ್ಲಿಮರಿಂದ ಕಿತ್ತುಕೊಳ್ಳಲಾಗಿದೆ ಮುಂತಾದ ಅಭಿಪ್ರಾಯಗಳು ಮುಸ್ಲಿಮರಿಂದ ವ್ಯಕ್ತವಾಗಿರುವುದನ್ನು ಜಸ್ಟೀಸ್ ರಾಜೇಂದ್ರ ಸಾಚಾರ್ ವರದಿ ದಾಖಲಿಸಿದೆ.

2004ರ ಲೋಕಸಭಾ ಚುನಾವಣೆಯ ಒಟ್ಟು 543 ಲೋಕಸಭಾ ಸದಸ್ಯರಲ್ಲಿ ಮುಸ್ಲಿಂ ಸದಸ್ಯರ ಸಂಖ್ಯೆ ಕೇವಲ 31. ರಾಜ್ಯಸಭಾ ಸದಸ್ಯರ ಸಂಖ್ಯೆ 25. ಒಟ್ಟು 56 ಲೋಕಸಭಾ ಸದಸ್ಯರೇ ಒಟ್ಟು 59 ಜನ ಇರಬೇಕಿತ್ತು. ರಾಜಕಾರಣದಲ್ಲಿ ಕಡಿಮೆ ಪ್ರಾತಿನಿಧ್ಯ ಇರುವ ಈ ಕಾರಣಕ್ಕಾಗಿ ದೇಶದ ನೀತಿಯನ್ನು ಪ್ರಭಾವಿಸುವುದು, ತಮ್ಮ ಅವಕಾಶ ವಂಚಿತ ಸ್ಥಿತಿಯನ್ನು ಬದಲಾಯಿಸಿಕೊಳ್ಳುವುದು ಮುಸ್ಲಿಮರಿಗೆ ಅಸಾಧ್ಯವಾಗಿದೆ.

ಅವಕಾಶಗಳನ್ನು ಪಡೆಯುವಲ್ಲಿ ಸಮಾನತೆ, ನಂಬಿಕೆಯನ್ನು ಹೊಂದುವ ಸ್ವಾತಂತ್ರ್ಯ, ಧರ್ಮ ಜಾತಿ ಮತ್ತಿತರ ಆಧಾರದಲ್ಲಿ ನಡೆಯುವ ತಾರತಮ್ಯದಿಂದ ನಾಗರಿಕರ ರಕ್ಷಣೆಯನ್ನು ಖಾತ್ರಿಪಡಿಸುವ ಸಂವಿಧಾನದ ಪರಿಚ್ಛೇದಗಳಾದ 14, 15, 16 ಮತ್ತು 25 ರ ಆಶಯಗಳನ್ನು ಈಡೇರಿಸಬೇಕಾಗಿದೆ. ಎಲ್ಲಾ ಪಕ್ಷಗಳು ಮುಸ್ಲಿಮರ ಪರವಾಗಿ ಮೊಸಳೆ ಕಣ್ಣೀರು ಸುರಿಸುತ್ತಿವೆ. ಸಾಮಾಜಿಕ ನ್ಯಾಯಪರ ಯೋಜನೆಗಳನ್ನು ರೂಪಿಸಿ ಜಾರಿಗೆ ತರುವಂತೆ ಮಾಡುವುದು ವಿಚಾರವಂತ ಮುಸ್ಲಿಮರ ಸಾಮಾಜಿಕ ನ್ಯಾಯಪರರ ಜವಾಬ್ದಾರಿಯಾಗಿದೆ.

ನಮ್ಮ ಸಂವಿಧಾನದ ನಿರ್ದೇಶಕತತ್ವ 46 ರಲ್ಲಿ 'ಸರ್ಕಾರವು ವಿಶೇಷ ಕಾಳಜಿಯನ್ನು ವಹಿಸಿ ದುರ್ಬಲ ವರ್ಗಗಳ ಶೈಕ್ಷಣಿಕ, ಆರ್ಥಿಕ, ಹಿತಾಸಕ್ತಿಯನ್ನು ಕಾಪಾಡಲು ಅಗತ್ಯವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು, ಅವರನ್ನು ಸಾಮಾಜಿಕ ಅನ್ಯಾಯದಿಂದ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ಸಂರಕ್ಷಿಸತಕ್ಕದ್ದು' ಎಂದು ಹೇಳಿದೆ.

ಎಲ್ಲಾ ಮುಸ್ಲಿಮರ ಸಮಾನತೆ ದೊರಕಬೇಕು, ಅವಕಾಶಗಳ ಹಂಚಿಕೆಯಾಗಬೇಕು ಎಂಬುದನ್ನು ಮುಸ್ಲಿಂ ಸಮುದಾಯಗಳಲ್ಲಿನ ಪ್ರಜ್ಞಾವಂತರು ಖಾತ್ರಿಪಡಿಸಲು ಮುಂದಾಗಬೇಕು. ಈ ನೈತಿಕ ಜವಾಬ್ದಾರಿ ಅವರ ಮೇಲಿದೆ.

ತಾರತಮ್ಯವನ್ನು ಕೇವಲ ಮುಸ್ಲಿಮರ ಸಮಸ್ಯೆಯಾಗಿ ಮಾತ್ರ ನೋಡದೆ ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿ ನೋಡಬೇಕಿದೆ. ಯಾವುದೇ ಸಮುದಾಯ ಅನ್ಯಾಯ. ಅವಕಾಶಹೀನತೆಗೆ ಗುರಿಯಾಗುವುದು ಅಮಾನುಷ. ಲಭ್ಯವಿರುವ ಅವಕಾಶಗಳು ಮತ್ತು ಸಂಪನ್ಮೂಲಗಳು ಎಲ್ಲಾ ಸಮುದಾಯಗಳಿಗೆ ಅವುಗಳ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಹಂಚಿಕೆಯಾಗುವುದು ಅತ್ಯಗತ್ಯ. ಪ್ರತಿಯೊಂದು ಸಮುದಾಯಕ್ಕೆ ಜನಸಂಖ್ಯಾ ಪ್ರಮಾಣದಲ್ಲಿ ಪ್ರಾತಿನಿಧ್ಯವು ಎಲ್ಲಾ ಕ್ಷೇತ್ರಗಳಲ್ಲಿ ದೊರಕದಿದ್ದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಯೇ ಆಗುವುದಿಲ್ಲ. □

61ನೇ
ಗಣರಾಜ್ಯೋತ್ಸವ
26ನೇ ಜನವರಿ 2010

ಭಾರತೀಯರು ನಾವು ಎಂದೆಂದೂ ಒಂದೇ ಭಾವೈಕ್ಯದಲ್ಲಿ ನಾವು ಸದಾ ಮುಂದೆ







ಈ ಸಂವಿಧಾನವು, ಕಾರ್ಯಸಾಧುವು ಮತ್ತು ಹೊಂದಿಕೊಳ್ಳುವಂತಹುದು ಹಾಗೂ ಶಾಂತಿ ಮತ್ತು ಯುದ್ಧದ ಸಂದರ್ಭಗಳಲ್ಲಿ ದೇಶದ ಐಕ್ಯತೆಯನ್ನು ಕಾಯುವಂತಹುದು.

ಡಾ. ಬಿ. ಆರ್. ಅಂಬೇಡ್ಕರ್

ಅರವತ್ತು ವರ್ಷಗಳ ಹಿಂದೆ ಡಾ: ಬಿ. ಆರ್. ಅಂಬೇಡ್ಕರ್‌ರವರ ಅಧ್ಯಕ್ಷತೆಯಲ್ಲಿ ಶ್ರೀಯುತರಾದ ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಸಯ್ಯದ್ ಮಹಮದ್ ಸಾದುಲ್ಲಾ, ಕೆ.ಎಂ. ಮುನ್ಶಿ, ಮಾಧವರಾವ್ ಮತ್ತು ಟಿ.ಟಿ. ಕೃಷ್ಣಮಾಚಾರ್‌ರಂತಹ ಧೀಮಂತರನ್ನೊಳಗೊಂಡ ಸಂವಿಧಾನ ರಚನಾ ಸಮಿತಿಯು, ರಚಿಸಿದ ಸಂವಿಧಾನವನ್ನು ಅಂಗೀಕರಿಸಿ ಸ್ವತಂತ್ರ ಭಾರತವನ್ನು ಸಾರ್ವಭೌಮ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವೆಂದು ಘೋಷಿಸಿದ ಸುದಿನ, ಈ ದಿನ.



ಹಲವಾರು ಭಾಷೆ, ಸಂಸ್ಕೃತಿ ಹಾಗೂ ಕಲಾವೈವಿಧ್ಯತೆಗಳ ನೆಲೆವೀಡಾದ ಭವ್ಯ ಭಾರತ ದೇಶದ ನಾಗರಿಕರೆಂಬ ಹೆಮ್ಮೆ ನಮ್ಮದು. ನಾವೆಲ್ಲರೂ ಸಂವಿಧಾನದ ಮೂಲ ಆಶಯಗಳನ್ನು ಪಾಲಿಸುತ್ತಾ ಸಮಗ್ರ ಅಭಿವೃದ್ಧಿ ಸಾಧಿಸೋಣ.

ಬಿ. ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಕರ್ನಾಟಕ ವಾರ್ತೆ

ಮನದ ಮೊನೆಯ ಕೊನೆ

ಕಥೆ

○ ಎಸ್. ಬಿ. ಜೋಗುರ



ಅವ್ರೆಲ್ಲಾ ಮುಖ ಕಿವುಚಿದ್ದರು...

ಬಾಯಿಗೆ ಬಂದಂಗ್ ಮಾತಾಡೊ ತ್ರಾಣ ಅವರ ಕಣ್ಣಾಗ ಎದ್ದು ಕಾಣತಿತ್ತು...

ಮನಸು ತೊಯ್ದಂಗ ಆಗಿ, ಒಳಗೊಳಗ ಹೇಸಿಕೊಂಡಂಗ ಆಗಿತ್ತು... ಒಬ್ಬ ಹಿರಿ ಮನುಷ್ಯಾನ ಬಾಯಾಗ ಮಾತು ಮೂಡಿತ್ತು.. ಮತ್ತೊಬ್ಬ .. ಮಗದೊಬ್ಬ.. ಗೂಳಿ ಬಿದ್ದಾಗ ಆಳಿಗೊಂದು ಕಲ್ಲು ಅನ್ನೋವಂಗ..

'ಯಾರ ಹೊಟ್ಟೀ ಮ್ಯಾಲ ಹೊಡಿಬೇಕಂತ ಮಾಡೀರಿ..?'

'ನೋಡಲಿಕ್ಕ ಎಜ್ಯುಕೇಟೇಡ್ ಕಂಡಂಗ್ ಕಾಣ್ತೀರಿ ಹ್ಯಾಂಗ ಗೊತ್ತಾಗಲ್ಲ..?'

' ಟಾರ್ಚ್ ಹಾಕಿದ್ದ ಶರ್ಟ್, ಕಾಲಾಗ ಶೂಜ್ ಹಾಕಲಿಕ್ಕ ಗೊತ್ತಾಗತೈತಿ ಇದ್ಯಾಂಗ ಗೊತ್ತಾಗಲಿಲ್ಲ..?'

'ಎಲ್ಲಾ ಗೊತ್ತಾಗತ್ತೈತಿ ಇವರೆಲ್ಲಾ ಮುದ್ದಾಂ ಮಾಡವರು'

' ಇಂಥವರಿಗಿ ಮುಲಾಜಿಲ್ಲದೇ ದಂಡಾ ಹಾಕಬೇಕು ಅಂದರ ಗೊತ್ತಾಗತೈತಿ'

'ಪಾಪ ಅವನಿಗೆ ಸಿಗೂದೇ ದಿನಕ್ಕ ಐವತ್ತು ರೂಪಾಯಿ ಅದಕ್ಕೂ ಕಲ್ಲ ಹಾಕತೀರೆಲ್ಲರೀ'

ಹೀಗೆ ಬಾಯಿಗೊಂದು ಮಾತು. ಅಶೋಕಗೆ ಮಾತಾಡಲಿಕ್ಕೇ ಕೊಡದೇ ಎಲ್ಲರೂ ತಮ್ಮ ತಮ್ಮ ಹಿಕಮತ್ತಿನ ಡೈಲಾಗ್ ಒಗದು ಬಾಯಿ ಚಪಲ ತೀರಿಸಿಕೊಂಡಿದ್ದರು. ಈ ಅಶೋಕ ಕಳಿಂಗ ಯುದ್ದದಲ್ಲಿ ಹೈರಾಣಾಗಿ ನಿಂತ ಆ ಅಶೋಕನಿಗಿಂತಲೂ ತರಗಾ ಬುರಗಾ ಆದಂತಿದ್ದ. ಆ ಗಳಿಗೆಯೊಳಗ ಅವರೆಲ್ಲರೂ ತಪ್ಪು ಮಾಡದ ಮಾದರಿ ತುಂಡುಗಳ ಹಾಗೆ ಎಗರಾಡುತ್ತಿದ್ದರು.

****

ಬೆಳಗಾಂವ ಜಿಲ್ಲೆಯ ಖಾಸಗಿ ಕಾಲೇಜು ಒಂದರಲ್ಲಿ ಸಮಾಜಶಾಸ್ತ್ರದ ಉಪನ್ಯಾಸಕನಾಗಿದ್ದ ಅಶೋಕನಿಗೆ ಕಳೆದ ಹದಿನೈದು ವರ್ಷಗಳಿಂದ ಪರೀಕ್ಷಾ ಮೌಲ್ಯಮಾಪನ ಕಾರ್ಯಕ್ಕೆ ಕರೆ ಬಂದಿರಲಿಲ್ಲ. ಹಾಗೆಂದು ಅವನು ತಲೆ

ಕೆಡಿಸಿಕೊಂಡಿರಲೂ ಇಲ್ಲ. ವಿಶ್ವವಿದ್ಯಾಲಯದಿಂದ ಪ್ರತಿವರ್ಷ ಕೇಳಲಾಗುವ ಮಾಹಿತಿಯಲ್ಲಿ ತನ್ನ ಅರೆಕಾಲಿಕ ಮತ್ತು ಪೂರ್ಣಕಾಲಿಕ ಸೇವಾ ವಿವರಗಳನ್ನು ಕೂಡಿಸಿ-ಕಳೆದು ಮಾಡಿ, ಸರಿಯಾಗಿ ತುಂಬಿದ ಮೇಲಯೂ ಅವನಿಗೆ ಮೌಲ್ಯಮಾಪನಕ್ಕೆ ಕರೆ ಬರಲಿಲ್ಲ. ಇವನಿಗಿಂತಲೂ ಐದಾರು ವರ್ಷ ಜ್ಯೂನಿಯರ್ ಗಳಾಗಿದ್ದವರು ಅದಾಗಲೇ ಮೌಲ್ಯಮಾಪನ ಕಾರ್ಯಕ್ಕೆ ತೆರಳಿ, ಮುಗಿಸಿ ಬಂದು 'ಸರ್ ನೀವು ಮೌಲ್ಯಮಾಪನಕ್ಕೆ ಹೋಗಲಿಲ್ಲವೇ..?' ಎಂದು ಕೇಳಿದಾಗ ಅತ್ಯಂತ ಯತಾರ್ಥವಾಗಿಯೇ ಅಶೋಕ 'ಇಲ್ಲ' ಎಂದು ಉತ್ತರಿಸುತ್ತಿದ್ದ. ಹಾಗೆ ಮೌಲ್ಯಮಾಪನಕ್ಕೆ ಹೋಗಿ ಬಂದವರು ಒಂದಷ್ಟು ರೋಚಕ ಕಥೆಗಳನ್ನು ಹೇಳುವವರು. 'ಸರ್ ಅದೊಂಥರಾ ಮಜಾ ಇರತ್ತೈತಿ, ನಾವು ನಾಕು ಜನ ಕೂಡಿ ಧಾರವಾಡದಲ್ಲಿ ಒಂದು ರೂಮ್ ಹಿಡದಿದ್ವಿ. ಹಾಗೆ ಮಾಡಿದರೆ ಖರ್ಚು ಕಡಿಮೆ. ಬೆಳಿಗ್ಗೆ ಗಡದ್ದಾಗಿ ಟಿಫಿನ್ ಮಾಡಿದರೆ ಮುಗೀತು... ಮಧ್ಯಾಹ್ನ ಊಟದ ಅವಶ್ಯಕತೆಯೂ ಇಲ್ಲ. ದಿನಕ್ಕೆ ನಾಕು ನೂರಾ ಐವತ್ತು ರೂಪಾಯಿ. ಹದಿನೈದು ದಿನ ನಡದರೆ ಏಳು ಎಂಟು ಸಾವಿರಕ್ಕೇನೂ ಕಡಿಮೆಯಿಲ್ಲ' ಎಂದು ಹೇಳುವ ಇವರ ಲೆಕ್ಕಾಚಾರಗಳು ಯಾವ ಮಾರವಾಡಿಗೂ ಕಡಿಮೆಯಿರಲಿಲ್ಲ ಎನಿಸುತ್ತಿತ್ತು. ಅಶೋಕನಿಗೆ ಹೀಗೆ ಒಂದೇ ಕೋಣೆಯಲ್ಲಿ ನಾಕೈದು ಜನ ಇರುವದು..ಗೂಡಂಗಡಿಯಲ್ಲಿಯ ತಿಂಡಿ ತಿಂದು ಮಧ್ಯಾಹ್ನದ ಊಟಕ್ಕೆ ವಿದಾಯ ಹೇಳುವದು, ಕಟಾಕಟಿ ಖರ್ಚು ಮಾಡಿ ಇಷ್ಟು ಕಮಾಯಿ ಆಯಿತು ಎಂದು ಬೀಗುವದು ಸಾಧ್ಯವೇ ಇರಲಿಲ್ಲ. 450 ರೂಪಾಯಿ ಅವರು ಕೊಟ್ಟರೆ ಅದಕ್ಕೆ ಇನ್ನೂ ಐವತ್ತು ಸೇರಿಸಿ ಒಂದು ದಿನಕ್ಕೆ ಐದುನೂರಕ್ಕಿಂತಲೂ ಹೆಚ್ಚು ಖರ್ಚು ಮಾಡುವ ಅವನಿಗೆ ಹೀಗೆ ಮೌಲ್ಯಮಾಪನ ಕಾರ್ಯಕ್ಕೆ ಕರೆ ಬಾರದಿರುವದೇ ಒಂದು ವರವಾಗಿತ್ತು.

ಕಳೆದ ಬಾರಿ ಮಾತ್ರ ಅಶೋಕನಿಗೆ ಧಾರವಾಡದ ಕಾಲೆಜೊಂದರಲ್ಲಿ ನಡೆವ ಮೌಲ್ಯ ಮಾಪನ ಕಾರ್ಯಕ್ಕೆ ಕರೆ ಬಂದು, ಲೇಟ್ ಈಜ್ ಬೆಟರ್ ದೆನ್ ನೆವರ್ ಎನ್ನುವಂತಾಗಿತ್ತು. ಅಂತೂ ಇಂತೂ ಅಶೋಕ ಮೌಲ್ಯಮಾಪನ ಕಾರ್ಯಕ್ಕೆ ಧಾರವಾಡಕ್ಕೆ ತೆರಳಬೇಕಾಯಿತು. ಒಂದು ದಿನ ಮುಂಚಿತವಾಗಿಯೇ ಆಗಮಿಸಿ ಹುಬ್ಬಳ್ಳಿಯ ಅಜಂತಾ ಲಾಜಿಂಗ್‌ಲ್ಲಿ ಒಂದು ರೂಮನ್ನು ಬುಕ್ ಮಾಡಿದ. ಸ್ನೇಹಿತರು 'ಧಾರವಾಡದಲ್ಲಿಯೇ ಉಳಿಯಬಹುದಿತ್ತಲ್ಲ..?' ಎಂದಾಗ ಅಶೋಕ ನಿರ್ಭಿಡೆಯಿಂದ 'ನನ್ನ ಕೆಲವು ಶೋಕಿಗಳಿವೆ ಅವುಗಳಿಗೆ ಹುಬ್ಬಳ್ಳಿಯೇ ಸರಿಯಾದ ಜಾಗ' ಎಂದು ಹೇಳುತ್ತಿದ್ದ. ಪ್ರತಿನಿತ್ಯ ಹುಬ್ಬಳ್ಳಿಯಿಂದ ಧಾರವಾಡದ. ಕಾಲೇಜಿಗೆ ಮೌಲ್ಯಮಾಪನ ಕಾರ್ಯಕ್ಕೆ ತೆರಳುತ್ತಿದ್ದ. ಅಜಂತಾ ಹೋಟೆಲ್‌ನಿಂದ ನಾಕು ಹೆಜ್ಜೆ ಶರೀರವನ್ನು ನೂಕಿದರೆ ಸಾಕು ಎದುರಲ್ಲಿಯೇ ಧಾರವಾಡಕ್ಕೆ ತೆರಳುವ ಬಸ್ಸುಗಳು. ಮೋಹಕ ಮೈಮಾಟದ ಜೋಡಿ ನಗರ ಸಾರಿಗೆಯ ಬಸ್ಸುಗಳಂತೂ ಗಳಿಗೆಗೊಮ್ಮೆ ಧಾರವಾಡಕ್ಕೆ ರೆಡಿಯಾಗುತ್ತಿದ್ದವು. ಅರ್ಧ ಘಂಟೆಯಲ್ಲಿ ಧಾರವಾಡ ಹಾಜರ್. ಅಲ್ಲಿ ಇಳಿದು ಹಿಂಬದಿ ಹೊರಳಿ ನೋಡಿದರೆ ಸಾಕು ಒಂದು ಫುಡ್ ಕೋರ್ಟ್, ಅಲ್ಲಿ ಅಶೋಕ ರೆಗ್ಯುಲರ್ ಗಿರಾಕಿಯಾಗಿದ್ದ. ಇವನು ಹೊಟೆಲ್‌ಲ್ಲಿ ಬರುತ್ತಿರುವಂತೆ ಸಪ್ಲಾಯರ್ ಈತ ಹೇಳೊ ಮೊದಲೇ 'ಮೂರು ಪೀಸ್ ಇಡ್ಲಿ ಸಾಂಬರ್ ಮಾತ್ರ, ಚಟ್ನಿ ಬೇಡ' ಎಂದು ಆರ್ಡರ್ ಮಾಡಿಬಿಡುತ್ತಿದ್ದ. ಬೆಳಿಗ್ಗೆ ತಿಂಡಿ ಮಧ್ಯಾಹ್ನದ ಊಟ ಈ ಹೊಟೆಲಲ್ಲಿಯೇ ಫಿಕ್ಸ್ ಆಗಿರುತ್ತಿತ್ತು. ಬಾಯಿ ಕೆಟ್ಟ ಅನುಭವವಾದಾಗ ಹೊಟೆಲ್ ಬದಲಾಗುತ್ತಿತ್ತು. ರಾತ್ರಿ ಮಾತ್ರ ಹುಬ್ಬಳ್ಳಿಯ ಡಿಮ್ ಲೈಟ್ ಹೊಟೆಲುಗಳಲ್ಲಿ ತಿಂಡಿ ತೀರ್ಥದ ಸಮಾರಾಧನೆ.

****

ಆ ದಿನ ಮೌಲ್ಯಮಾಪನಕ್ಕೆಂದು ಮಧ್ಯಾಹ್ನ ಕಡಿಮೆ ಪೇಪರ್‌ಗಳನ್ನು ಕೊಡಲಾಗಿತ್ತು. ಮೌಲ್ಯಮಾಪನ ಕಾರ್ಯ ಶುರುವಾಗಿ ಅದಾಗಲೇ ಮೂರು ದಿನವಾಗಿತ್ತಾದ್ದರಿಂದ ಕೈ ಕುಂತಾಗಿತ್ತು. ಹೀಗೇ ಒಂದು ಸಾರಿ ಕಣ್ಣಾಡಿಸಿದರೆ ಸಾಕು ಆ ಪೇಪರಿನ ಗುಣಮಟ್ಟ ಮತ್ತು ದರ್ಜೆಯನ್ನು ಕರಾರುವಕ್ಕಾಗಿ ಹೇಳುವಷ್ಟು ಅವನೀಗ ಪರಫೆಕ್ಟ್ ಆಗಿದ್ದ. ಹೀಗಾಗಿ ಅವನಿಗೀಗ ಮೌಲ್ಯಮಾಪನ ಇನ್ನೂ ಸಲೀಸಾಗುತ್ತಿತ್ತು. ಆದರೆ ಹಾಲ್‌ಲ್ಲಿ ಮಾರುಕಟ್ಟೆಯ ಪ್ರತಿರೂಪವೇ ನಿರ್ಮಾಣವಾಗಿ ತುಸು ತೊಂದರೆಯಾಗುತ್ತಿತ್ತು. ಇಡೀ ಹಾಲ್‌ಲ್ಲಿ ಗಟ್ಟಿಯಾಗಿ ಕುಳಿತು ಮೌಲ್ಯಮಾಪನ ಮಾಡುವವರು ಹತ್ತು ಪ್ರತಿಶತ ಮಾತ್ರ, ಮಿಕ್ಕಂತೆ ಬಹುತೇಕವಾಗಿ ಎಲ್ಲರೂ ಗಳಿಗೆಗೊಮ್ಮೆ ಚಹಾ.. ಸಿಗರೇಟು..ಪಾನ್.. ಇವೆಲ್ಲವುಗಳಿಗಿಂತಲೂ ಮಿಗಿಲಾಗಿ ಒಂದಷ್ಟು ಚಪಲ ಚನ್ನಿಗರಾಯನ ಗುಣ. ಮೌಲ್ಯಮಾಪನ ಕಾರ್ಯದಲ್ಲಿ ಇಂತಿಷ್ಟು ವರ್ಷ ಬೋಧನಾ ಅನುಭವ ಒಂದು ಕನಿಷ್ಟ ಅರ್ಹತೆಯಾಗಿದ್ದರೆ ಹೀಗೆ ಗಳಿಗೆಗೊಮ್ಮೆ ಎದ್ದೆದ್ದು.. ಸುತ್ತಿ ಸುಳಿದು ಬರುವ ಗುಣ ಅವಶ್ಯಕವಾದ ಅರ್ಹತೆಯಾದಂತಿತ್ತು. ಕೊಟ್ಟ ಹದಿನೈದು ಪೇಪರ್‌ಗಳನ್ನು ನಿಗದಿತ ಸಮಯಕ್ಕಿಂತ ಕೊಂಚ ಮುಂಚೆಯೇ ಮುಗಿಸಿ, ಅಶೋಕ ಧಾರವಾಡದ ಮೌಲ್ಯಮಾಪನ ನಡೆಯುವ ಕಾಲೇಜು ಎದುರಲ್ಲಿ ಸಿಟಿ ಬಸ್‌ಗಾಗಿ ಕಾಯುತ್ತಾ ನಿಂತ. ಎಲ್ಲ ಬಸ್ಸುಗಳು

ಆ ದಿನ ಮೌಲ್ಯಮಾಪನಕ್ಕೆಂದು ಮಧ್ಯಾಹ್ನ ಕಡಿಮೆ ಪೇಪರ್‌ಗಳನ್ನು ಕೊಡಲಾಗಿತ್ತು. ಮೌಲ್ಯಮಾಪನ ಕಾರ್ಯ ಶುರುವಾಗಿ ಅದಾಗಲೇ ಮೂರು ದಿನವಾಗಿತ್ತಾದ್ದರಿಂದ ಕೈ ಕುಂತಾಗಿತ್ತು. ಹೀಗೇ ಒಂದು ಸಾರಿ ಕಣ್ಣಾಡಿಸಿದರೆ ಸಾಕು ಆ ಪೇಪರಿನ ಗುಣಮಟ್ಟ ಮತ್ತು ದರ್ಜೆಯನ್ನು ಕರಾರುವಕ್ಕಾಗಿ ಹೇಳುವಷ್ಟು ಅವನೀಗ ಪರಫೆಕ್ಟ್ ಆಗಿದ್ದ. ಹೀಗಾಗಿ ಅವನಿಗೀಗ ಮೌಲ್ಯಮಾಪನ ಇನ್ನೂ ಸಲೀಸಾಗುತ್ತಿತ್ತು. ಆದರೆ ಹಾಲ್‌ಲ್ಲಿ ಮಾರುಕಟ್ಟೆಯ ಪ್ರತಿರೂಪವೇ ನಿರ್ಮಾಣವಾಗಿ ತುಸು ತೊಂದರೆಯಾಗುತ್ತಿತ್ತು. ಇಡೀ ಹಾಲ್‌ಲ್ಲಿ ಗಟ್ಟಿಯಾಗಿ ಕುಳಿತು ಮೌಲ್ಯಮಾಪನ ಮಾಡುವವರು ಹತ್ತು ಪ್ರತಿಶತ ಮಾತ್ರ, ಮಿಕ್ಕಂತೆ ಬಹುತೇಕವಾಗಿ ಎಲ್ಲರೂ ಗಳಿಗೆಗೊಮ್ಮೆ ಚಹಾ.. ಸಿಗರೇಟು..ಪಾನ್.. ಇವೆಲ್ಲವುಗಳಿಗಿಂತಲೂ ಮಿಗಿಲಾಗಿ ಒಂದಷ್ಟು ಚಪಲ ಚನ್ನಿಗರಾಯನ ಗುಣ. ಮೌಲ್ಯಮಾಪನ ಕಾರ್ಯದಲ್ಲಿ ಇಂತಿಷ್ಟು ವರ್ಷ ಬೋಧನಾ ಅನುಭವ ಒಂದು ಕನಿಷ್ಟ ಅರ್ಹತೆಯಾಗಿದ್ದರೆ ಹೀಗೆ ಗಳಿಗೆಗೊಮ್ಮೆ ಎದ್ದೆದ್ದು.. ಸುತ್ತಿ ಸುಳಿದು ಬರುವ ಗುಣ ಅವಶ್ಯಕವಾದ ಅರ್ಹತೆಯಾದಂತಿತ್ತು.

ದಿನ ತುಂಬಿದ ಬಸುರಿಯಂತೆಯೇ ಎದುಸಿರು ಬಿಡುತ್ತಾ ಸಾಗುತ್ತಿದ್ದವು. ಈ ನಡುವೆಯೇ ಹೆಂಡತಿ ಉಷಾಗೆ ಒಂದು ಫೋನ್ ಮಾಡಿದರಾಯಿತೆಂದು ಮೊಬೈಲ್ ಗುಂಡಿಗಳ ಮೇಲೆ ಟಕಟಕನೇ ಕೈಯಾಡಿಸಿದ. ಫೋನ್ ರಿಂಗಾಯಿತು. ಅತ್ತ ಕಡೆಯಿಂದ ಹೆಂಡತಿಯ ಪ್ರತಿಕ್ರಿಯೆ..

'ಹಲೋ ಏನು ವಿಶೇಷ..!'

'ಏನಿಲ್ಲಾ.. ಇವತ್ತು ಪೇಪರ್ ಕಡಿಮೆ ಕೊಟ್ಟಿದ್ದರು, ಹೀಗಾಗಿ ಬೇಗ ಮುಗೀತು. ಬಸ್‌ಗಾಗಿ ಕಾಯುತ್ತಿದ್ದೇನೆ. ಎಲ್ಲ ಬಸ್ಸುಗಳೂ ಹೌಸ್ ಫುಲ್'...!

' ಊಟ ಆಯಿತಾ..?'

' ಇನ್ನೂ ಇಲ್ಲ ಈಗ ಒಂದು ಘಂಟೆ ಹುಬ್ಬಳ್ಳಿ ತಲುಪಿ ಮೂನ್ ಲೈಟ್ ಹೊಟೇಲಲ್ಲಿ ಊಟ ಮಾಡುವ ಯೋಚನೆ'

' ಎಣ್ಣೆ ಐಟಂ ಬಹಳ ತಿನಬೇಡಿ'

'ಏನು ಮಾಡತಾ ಇದ್ದಿ..?'

'ನಾನೂ ಊಟಕ್ಕೆ ತಯಾರಿ ಮಾಡುತ್ತಿದ್ದೆ'

' ಏನಂತಾನೆ ನಿನ್ನ ಸುಪುತ್ರ'

' ಇಲ್ಲೇ ಇದಾನೆ ಆಟಾ ಆಡ್ತಾ ಇದ್ದಾನೆ'

'ಅವನಿಗೆ ಫೋನ್ ಕೊಡು'

' ಹಲೋ ಪಪ್ಪಾ ನಾವು ಬಿಗ್ ಸಿನೇಮಾ ನೋಡಲಿಕ್ಕೆ ಬಂದಿದ್ದೀವಿ'

'ಮತ್ತ್ಯಾರಿದ್ದಾರೆ?'

' ನಾನು .ಅಜ್ಜಿ..ಅಮ್ಮ' ಅಂದ.

' ಫೋನ್ ಮಮ್ಮಿ ಕೈಗೆ ಕೊಡು'

' ಫಿಲ್ಮ್ ನೋಡಲಿಕ್ಕೆ ಬಂದೀಯಂತಲ್ಲೇ.. ನನಗ್ಯಾಕೆ ಸುಳ್ಳು ಹೇಳದಿ..?' ಆ ಕಡೆಯಿಂದ ಮಾತು ಮೂಡಲಿಲ್ಲ ಅಶೋಕ ತುಸು ಏರು ದನಿಯಿಂದ 'ನಿನ್ನನ್ನೇ ಕೇಳೋದು.. ಸುಳ್ಳು ಯಾಕೆ ಹೇಳದೆ.?' ಉಷಾ ಮೆಲ್ಲಗೆ

'ಅಮ್ಮ ಸಿನೇಮಾಗೆ ಹೋಗೋಣ ಅಂದ್ರು ಹೀಗಾಗಿ..' ಅನ್ನುವದರೊಳಗೆ ಅಶೋಕ ಸಿಟ್ಟಿನಿಂದ.

'ಅದು ಸರಿ ಆದರೆ ನನಗ್ಯಾಕೆ ನೀನು ಸುಳ್ಳು ಹೇಳಿದೆ..? ನಾನೇನು ನಿಮಗೆ ಸಿನೇಮಾಗೆ ಹೋಗಲು ಬೇಡ ಅಂದಿದ್ದೆನೆ..? ನಾನೇ ನಿಮಗೆ ಸಿನೇಮಾಗೆ ಹೋಗಿ ಎಂದು ದುಡ್ಡು ಕೊಟ್ಟು ಬಂದಿದ್ದೆ. ಆದರೂ ನೀನು ಸುಳ್ಳು ಹೇಳಿದೆ. ಯಾಕೆ..?' ಮತ್ತೆ

(41ನೇ ಪುಟಕ್ಕೆ)

ಯಾರು ಸಮಸ್ಯೆ, ಮಾವೋವಾದಿಗಳೋ?
ಭಾರತದ ಪ್ರಭುತ್ವವೋ?

ಮೂಲ : ಹಿಮಾಂಶುಕುಮಾರ್
ಅನು : ಚೇತನ್

ನಿಜವಾದ ಭಾರತ ಹಳ್ಳಿಗಳಲ್ಲಿವೆ. ಅಲ್ಲಿನ ಜನರನ್ನು ಚೈತನ್ಯವಂತರನ್ನಾಗಿ ಮಾಡಲು ಯುವ ಜನಾಂಗ ಹಳ್ಳಿಗಳಿಗೆ ತೆರಳಬೇಕೆಂಬ ಗಾಂಧೀಜಿಯವರ ನಂಬಿಕೆಯನ್ನು ಪಾಲಿಸಲು ಹದಿನೇಳು ವರ್ಷಗಳ ಹಿಂದೆ ನಾನು ದಂತೆವಾಡಕ್ಕೆ ಬಂದೆ. ಹಳ್ಳಿಗರು ನನಗೆ ಆಶ್ರಮವನ್ನು ನಿರ್ಮಿಸಲು ಭೂಮಿ ನೀಡಿದರು. 5ನೇ ಪಟ್ಟಿಯಡಿ ಗ್ರಾಮ ಪಂಚಾಯಿತಿಗಳಿಗೆ ಆ ರೀತಿ ನಿರ್ಣಯ ತೆಗೆದುಕೊಳ್ಳಲು ಅಧಿಕಾರ ನೀಡಲಾಗಿದೆ. ಆದರೆ ಸರ್ಕಾರ ಈ ವರ್ಷ 1000 ಪೋಲೀಸರು, ಸ್ಫೋಟ ನಿರೋಧಕ ವಾಹನ ಇತ್ಯಾದಿಗಳನ್ನು ಕಳುಹಿಸಿ ಆಶ್ರಮವನ್ನು ನೆಲಸಮ ಮಾಡಿದೆ. ನಾನು ಕೂಡ ಅವರಂತೆಯೇ! ನನ್ನ ಮನೆಯನ್ನು ಕೂಡ ನೆಲಸಮ ಮಾಡಲಾಗುತ್ತದೆ ಎಂದು ಆದಿವಾಸಿಗಳಿಗೆ ಆಗಲೇ ಅಂತಿಮವಾಗಿ ಗೊತ್ತಾಗಿದ್ದು.

ಬಲಾತ್ಕಾರವಾಗಿ ಹಳ್ಳಿಗಳನ್ನು ಖಾಲಿಗೊಳಿಸುವುದು.

2005ರಲ್ಲಿ ಚತ್ತೀಸ್‌ಗಡ ಸರ್ಕಾರ ದಂತೆವಾಡದಲ್ಲಿ ಮಾವೋವಾದಿಗಳಿರುವುದು ಅಪಾಯಕಾರಿ ಎಂದು ಭಾವಿಸಿತು. ಅದು ಸಾಮೂಹಿಕ ಶಾಂತಿ ಆಂದೋಲನ ಎಂಬರ್ಥದ ಸೆಲ್ವ ಜುಡುಂ ಪ್ರಾರಂಭಿಸಿತು. ಆದಿವಾಸಿಗಳ ಮಧ್ಯೆ ಮಾವೋವಾದಿಗಳಿಗೆ ಬೆಂಬಲ ಇರುವುದು ಅವರಿಗೆ ಗೊತ್ತಿದೆ. ಅದಕ್ಕಾಗಿ ಅವರು ಹಳ್ಳಿಗಳನ್ನೇ ಖಾಲಿಮಾಡಲು ತೀರ್ಮಾನಿಸಿದರು. ಅವರು ಜನರನ್ನು ಅವರ ಹಳ್ಳಿಗಳಿಂದ ಹೊರಹಾಕಲು ಬಲಾತ್ಕರಿಸಿದರು ಮತ್ತು ಅವರನ್ನೆಲ್ಲಾ ಪೋಲೀಸ್ ಠಾಣೆಗಳ ಬಳಿಯ ಹಳ್ಳಿರಸ್ತೆಯ ಕೊನೆಯಲ್ಲಿರುವ ಕ್ಯಾಂಪುಗಳಿಗೆ ಸ್ಥಳಾಂತರಿಸಲು ಯತ್ನಿಸಿದರು. ಅವರು ಗೂಂಡಾಗಳು ಹಾಗೂ ಪೋಲೀಸರೊಂದಿಗೆ ಹಳ್ಳಿಗರ ಮೇಲೆರಗಿ ಅವರನ್ನು ಶಿಬಿರಗಳಿಗೆ ತಳ್ಳುತ್ತಿದ್ದಾರೆ.

ಆದರೆ ಆದಿವಾಸಿಗಳು ಪ್ರಕೃತಿಯ ಮಧ್ಯೆ, ತೊರೆಯ ಮಧ್ಯೆ, ಪರ್ವತಗಳ ತುದಿಗಳಲ್ಲಿ ಬಾಳುತ್ತಾ ಬಂದವರು. ಪ್ರತಿಯೊಂದು ಆದಿವಾಸಿ ಮನೆಯೂ ಪರಸ್ಪರ ದೂರವಿರುತ್ತದೆ. ಸರ್ಕಾರ ಇಲ್ಲಿ ಹೊರಗೆ ಕಾಲಿಟ್ಟರೆ ಮತ್ತೊಬ್ಬರ ಮುಖ ಕಾಣುವ, ಹಿಂದೆ ಇನ್ನೊಂದು ಮುಖವಿರುವ ರೀತಿಯ ಶೆಡ್‌ಗಳನ್ನು ನಿರ್ಮಿಸಿದೆ. ಆದಿವಾಸಿಗಳು ಈ ಶಿಬಿರಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಈ 'ದೇಶಪ್ರೇಮಿ' ಶಕ್ತಿಗಳು ಅವರ ಮೇಲೆ ಗುಂಡು ಹಾರಿಸುತ್ತವೆ, ಹಿಡಿಯುತ್ತವೆ, ಜೈಲಿಗೆ ತಳ್ಳುತ್ತವೆ, ಅತ್ಯಾಚಾರ ಮಾಡುತ್ತವೆ.

ಒಂದು ಹಂತದಲ್ಲಿ 1000 ಹಳ್ಳಿಗಳ 54000 ಜನರು ಇಂತಹ ಶಿಬಿರಗಳಲ್ಲಿ ಇದ್ದರು. ಸರ್ಕಾರ 644 ಹಳ್ಳಿಗಳನ್ನು "ಶುದ್ಧೀಕರಿಸಲಾಗಿದೆ" ಎಂದು ಹೇಳಿಕೊಂಡಿತ್ತು. 50.000 ಆದಿವಾಸಿಗಳು ಕಾಡಿಗೆ ಓಡಿಹೋಗಿದ್ದಾರೆ. ಶಿಬಿರಗಳಿಗೆ ಬಂದವರು ನಮ್ಮ ಜೊತೆ ಇದ್ದಾರೆ, ಯಾರು ಓಡಿಹೋಗಿದ್ದಾರೊ ಅವರೆಲ್ಲಾ ನಕ್ಸಲೈಟರು ಎಂದು ಮುಖ್ಯಮಂತ್ರಿ ರಮಣಸಿಂಗ್ ಘೋಷಿಸಿದ್ದರು.

ನಾನು ಮುಖ್ಯಮಂತ್ರಿಗಳಿಗೆ ಒಂದು ಬಹಿರಂಗ ಪತ್ರ ಬರೆದು ರಾಜ್ಯದ ಮುಖ್ಯಸ್ಥರಾಗಿ ನೀವು ಹೇಳುತ್ತಿದ್ದೀರಿ, ಯಾವ ಪ್ರಜೆಗಳು ಅವರವರ ಮನೆಗಳಲ್ಲಿ ವಾಸ ಮಾಡಲು ಆಯ್ದುಕೊಳ್ಳುತ್ತಾರೊ ಅವರು ನಕ್ಸಲೈಟರೆಂದು! ಅವರನ್ನು ಗುಂಡಿಕ್ಕಿ ಕೊಲ್ಲಲು ಆಜ್ಞಾಪಿಸುತ್ತೀರಾ? ಎಂದು ಕೇಳಿದೆ. ನಿಜವಾಗಿಯೂ ಅವರು ಅದನ್ನೇ ಮಾಡಿದರು. ಒಂದೇ ಹಳ್ಳಿಯ ಮೇಲೆ ಪದೇಪದೇ ಧಾಳಿಗಳಾಗುತ್ತಿದ್ದವು. ಆದಿವಾಸಿಗಳು ಅವರ ಹಳ್ಳಿಗಳಿಗೆ ವಾಪಾಸಾಗಿ ಭೂಮಿಗಳನ್ನು ಕೃಷಿ ಮಾಡಲು ಪ್ರಯತ್ನಿಸುತ್ತಿದ್ದರು, ಪ್ರತಿಬಾರಿಯೂ ಅವರನ್ನು ಹಿಡಿಯುವುದು, ಭಯಾನಕವಾಗಿ ದೌರ್ಜನ್ಯಗಳನ್ನು ಅವರ ಮೇಲೆ ಮಾಡಲಾಗುತ್ತಿತ್ತು. ಅವರ ಬೆಳೆಗಳನ್ನು ಸುಟ್ಟು ಹಾಕಲಾಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ನಕ್ಸಲೈಟರು ಆದಿವಾಸಿಗಳನ್ನು ಬೆಂಬಲಿಸಿದರು. ಹಾಗಾಗಿ ನಕ್ಸಲೈಟರನ್ನು

> **ಆದಿವಾಸಿಗಳು ಪ್ರಕೃತಿಯ ಮಧ್ಯೆ, ತೊರೆಯ ಮಧ್ಯೆ, ಪರ್ವತಗಳ ತುದಿಗಳಲ್ಲಿ ಬಾಳುತ್ತಾ ಬಂದವರು. ಪ್ರತಿಯೊಂದು ಆದಿವಾಸಿ ಮನೆಯೂ ಪರಸ್ಪರ ದೂರವಿರುತ್ತದೆ. ಸರ್ಕಾರ ಇಲ್ಲಿ ಹೊರಗೆ ಕಾಲಿಟ್ಟರೆ ಮತ್ತೊಬ್ಬರ ಮುಖ ಕಾಣುವ, ಹಿಂದೆ ಇನ್ನೊಂದು ಮುಖವಿರುವ ರೀತಿಯ ಶೆಡ್‌ಗಳನ್ನು ನಿರ್ಮಿಸಿದೆ. ಆದಿವಾಸಿಗಳು ಈ ಶಿಬಿರಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಈ 'ದೇಶಪ್ರೇಮಿ' ಶಕ್ತಿಗಳು ಅವರ ಮೇಲೆ ಗುಂಡು ಹಾರಿಸುತ್ತವೆ, ಹಿಡಿಯುತ್ತವೆ, ಜೈಲಿಗೆ ತಳ್ಳು ತ್ತವೆ, ಅತ್ಯಾಚಾರ ಮಾಡುತ್ತವೆ. ಒಂದು ಹಂತದಲ್ಲಿ ೧೦೦೦ ಹಳ್ಳಿಗಳ ೫೪೦೦೦ ಜನರು ಇಂತಹ ಶಿಬಿರಗಳಲ್ಲಿ ಇದ್ದರು. ಸರ್ಕಾರ ೬೪೪ ಹಳ್ಳಿಗಳನ್ನು "ಶುದ್ಧೀಕರಿಸಲಾಗಿದೆ" ಎಂದು ಹೇಳಿಕೊಂಡಿತ್ತು. ೫೦.೦೦೦ ಆದಿವಾಸಿಗಳು ಕಾಡಿಗೆ ಓಡಿಹೋಗಿದ್ದಾರೆ.**



ಗಾಂಧಿವಾದಿ ಕಾರ್ಯಕರ್ತ ಹಿಮಾಂಶುಕುಮಾರ್

ಅವರು ತಮ್ಮ ಮಿತ್ರರನ್ನಾಗಿ ಪರಿಗಣಿಸುತ್ತಾರೆ.

ಸಲ್ವಜುಡುಂ ಪಡೆಗಳಿಗೆ ಮಧ್ಯ, ಕೋಳಿಮಾಂಸ, ಮಾಂಸ, ಮಹಿಳೆಯರು ಪ್ರತಿದಿನವೂ ಬೇಕು. ಅವರು ಇದನ್ನೆಲ್ಲಾ ಆದಿವಾಸಿಗಳಿಂದ ಕಸಿಯುತ್ತಾರೆ. ಇದಕ್ಕೆಲ್ಲಾ ನಾವು ಕುರುಡಾಗಿರುತ್ತೇವೆ. ಯಾವಾಗ ಪೋಲೀಸರನ್ನು ವಿರೋಧಿಸಲು ಆದಿವಾಸಿಗಳು ಲಾಠಿ ಹಿಡಿಯುತ್ತಾರೋ ಆಗ ಬೊಬ್ಬಿಡುತ್ತೇವೆ.

ಪ್ರಭುತ್ವ ಮಾವೋವಾದಿಗಳ ಹಿಂಸೆಯ ಬಗ್ಗೆ ಮಾತನಾಡುತ್ತದೆ. ಆದರೆ ಪ್ರಭುತ್ವವೇ ಹಿಂಸಾತ್ಮಕವಾಗಿದೆ. ಗೃಹಮಂತ್ರಿ ಶಾಂತಿಯ ಬಗ್ಗೆ ಮಾತನಾಡುತ್ತಾ ಇರುತ್ತಾರೆ. ಆದರೆ ನೀವು ಯಾವಾಗಲೂ ಆದಿವಾಸಿಗಳ ಮೇಲೆ ಧಾಳಿ ಮಾಡುತ್ತಿರುವಾಗ ಶಾಂತಿಯಾದರೂ ಹೇಗೆ ನೆಲೆಸಲು ಸಾಧ್ಯ? ನಾನು ಮಾವೋವಾದಿಗಳಿಗೆ ಹಿಂಸೆ ನಿಲ್ಲಿಸಲು ಹೇಳಬೇಕೆಂದು ನೀವು ಬಯಸುತ್ತೀರಿ. ಈಗ ಪರಿಸ್ಥಿತಿ ಯಾವ ಹಂತಕ್ಕೆ ತಲುಪಿದೆ ಎಂದರೆ ಆದಿವಾಸಿಗಳಿಗೆ ಹೊರಗಿನ ಪ್ರತಿಯೊಬ್ಬರೂ ಶತೃಗಳಾಗಿ ಕಾಣತೊಡಗಿದ್ದಾರೆ. ಪ್ರಭುತ್ವ ಯಾವ ಪರಿಸ್ಥಿತಿಯನ್ನು ತಂದಿದೆ ಎಂದರೆ ಆದಿವಾಸಿಗಳು ತಮ್ಮದೇ ಸಹದೇಶವಾಸಿಗಳನ್ನು ಶತೃವಿನ ರೀತಿ ನೋಡುವ ಮಟ್ಟಕ್ಕೆ.

ಪುನರ್ವಸತಿಗೆ ಪ್ರಭುತ್ವದ ವಿರೋಧ

ಸರ್ವೋಚ್ಚ ನ್ಯಾಯಾಲಯ ಹಳ್ಳಿಗರಿಗೆ ಪುನರ್ವಸತಿ ಕಲ್ಪಿಸಿ ಪರಿಹಾರ ನೀಡಬೇಕೆಂದು ಆದೇಶಿಸಿದೆ. ಒಂದು ಹಳ್ಳಿಯನ್ನೂ ಕೂಡ ಪುನರ್ವಸತಿ ಮಾಡಿಲ್ಲ. ಯಾವೊಬ್ಬ ಆದಿವಾಸಿಗೂ ಪರಿಹಾರ ನೀಡಿಲ್ಲ. ಜೂನ್ 10, 2008 ರಂದು ಸರ್ವೋಚ್ಚ ನ್ಯಾಯಾಲಯ ಸಲ್ವಜುಡುಂ ಹಿನ್ನೆಲೆಯಲ್ಲಿ ದಂತೇವಾಡದಲ್ಲಿ ತನಿಖೆ ನಡೆಸಬೇಕೆಂದು ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ನಿರ್ದೇಶಿಸಿತು. ನಮ್ಮ ಕಾರ್ಯಕರ್ತರು ದಂತೇವಾಡದ ಮತ್ತು ಆಂಧ್ರಪ್ರದೇಶಕ್ಕೆ ಓಡಿಹೋಗಿದ್ದ ಆದಿವಾಸಿಗಳನ್ನು ರಾಷ್ಟ್ರೀಯ ಮಾನವ ಹಕ್ಕು ಆಯೋಗದ ತಂಡದೊಂದಿಗೆ ಭೇಟಿ ಮಾಡಿಸಲು ಕರೆತಂದರು. ಜೂನ್ 11ರಂದು ನೇಂದ್ರ ಹಳ್ಳಿಯ ಆದಿವಾಸಿಗಳು ವಾಪಾಸಾಗುತ್ತಿದ್ದಾಗ ಕೆಲವು ಸಲ್ವ

ಸಲ್ವಜುಡುಂ ಪಡೆಗಳಿಗೆ ಮಧ್ಯ, ಕೋಳಿ ಮಾಂಸ, ಮಾಂಸ, ಮಹಿಳೆಯರು ಪ್ರತಿ ದಿನವೂ ಬೇಕು. ಅವರು ಇದನ್ನೆಲ್ಲಾ ಆದಿ ವಾಸಿಗಳಿಂದ ಕಸಿಯುತ್ತಾರೆ. ಇದಕ್ಕೆಲ್ಲಾ ನಾವು ಕುರುಡಾಗಿರುತ್ತೇವೆ. ಯಾವಾಗ ಪೋಲೀಸರನ್ನು ವಿರೋಧಿಸಲು ಆದಿವಾಸಿಗಳು ಲಾಠಿ ಹಿಡಿಯುತ್ತಾರೋ ಆಗ ಬೊಬ್ಬಿಡುತ್ತೇವೆ. ಪ್ರಭುತ್ವ ಮಾವೋವಾದಿಗಳ ಹಿಂಸೆಯ ಬಗ್ಗೆ ಮಾತನಾಡುತ್ತದೆ. ಆದರೆ ಪ್ರಭುತ್ವವೇ ಹಿಂಸಾತ್ಮಕವಾಗಿದೆ. ಗೃಹಮಂತ್ರಿ ಶಾಂತಿಯ ಬಗ್ಗೆ ಮಾತನಾಡುತ್ತಾ ಇರುತ್ತಾರೆ. ಆದರೆ ನೀವು ಯಾವಾಗಲೂ ಆದಿವಾಸಿಗಳ ಮೇಲೆ ಧಾಳಿ ಮಾಡುತ್ತಿರುವಾಗ ಶಾಂತಿಯಾದರೂ ಹೇಗೆ ನೆಲೆಸಲು ಸಾಧ್ಯ.? ನಾನು ಮಾವೋವಾದಿಗಳಿಗೆ ಹಿಂಸೆ ನಿಲ್ಲಿಸಲು ಹೇಳಬೇಕೆಂದು ನೀವು ಬಯಸುತ್ತೀರಿ. ಈಗ ಪರಿಸ್ಥಿತಿ ಯಾವ ಹಂತಕ್ಕೆ ತಲುಪಿದೆ ಎಂದರೆ ಆದಿವಾಸಿಗಳಿಗೆ ಹೊರಗಿನ ಪ್ರತಿಯೊಬ್ಬರೂ ಶತ್ರುಗಳಾಗಿ ಕಾಣತೊಡಗಿದ್ದಾರೆ.

ಜುಡುಂ ಪೈಕಿಗಳು ಅವರ ಜೀಪನ್ನು ನಿಲ್ಲಿಸಿ ಹಲ್ಲೆ ನಡೆಸಿದರು. ನಾವು ಡಿ.ಐ.ಜಿ.ಗೆ ದೂರವಾಣಿ ಮಾಡಿ ರಾಷ್ಟ್ರೀಯ ಮಾನವ ಹಕ್ಕು ಆಯೋಗವನ್ನು ಭೇಟಿ ಮಾಡುವುದು ಅಪರಾಧವೇ? ಎಂದು ಪ್ರಶ್ನಿಸಿದೆವು. ಏನೂ ಪ್ರಯೋಜನವಾಗಲಿಲ್ಲ. ಬಲವಂತದಿಂದ ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಹೇಳಿಕೆ ನೀಡಿದೆವು ಎಂಬಂತೆ ಬರೆದ ಹಾಳೆಯ ಮೇಲೆ ಸಹಿ ಮಾಡುವಂತೆ ಆ ಆದಿವಾಸಿಗಳನ್ನು ಮಾಡಲಾಯಿತು.

ಗಾಂಧಿವಾದಿಯಾದ ನಾನು ಆಘಾತಗೊಂಡೆ. ಅಧಿಕೃತ ಸತ್ಯ ಶೋಧನಾ ತಂಡದೊಂದಿಗೆ ಕೇವಲ ಮಾತ ನಾಡಿದ್ದಕ್ಕೆ ಜನರನ್ನು ನನ್ನ ಎದುರಿನಲ್ಲೇ ಹೊಡೆಯಲಾಯಿತು......ನಾವು ಆ ಹಳ್ಳಿಯನ್ನು ಬಿಡಬಾರದೆಂದು ನಿರ್ಧರಿಸಿದೆವು. ಅವರು ಹಳ್ಳಿಯನ್ನು ಸುಡಲು ಬಯಸಿದರೆ ಮೊದಲು ನನ್ನನ್ನು ಸುಡಲಿ. ನಾವು ಹಳ್ಳಿಗರನ್ನು ಮನವೊಲಿಸಿ ವಾಪಾಸು ಬರುವಂತೆ ಮಾಡಿದೆವು. ಜುಲೈ 1 ರಂದು ನಾವು ಹಳ್ಳಿ ಸುತ್ತ ಮಾನವ ಸರಪಳಿ ನಿರ್ಮಿಸಿದೆವು. ನೇಂದ್ರದಲ್ಲಿ 6 ತಿಂಗಳುಗಳ ಕಾಲ ನಾವು ಇದ್ದೆವು. ಆಂಧ್ರ ಪ್ರದೇಶದಿಂದ ಹಳ್ಳಿಗರನ್ನು ವಾಪಾಸು ಕರೆತರಲು ನಮ್ಮ ಕಾರ್ಯಕರ್ತರನ್ನು ಕಳುಹಿಸಿ ಕೊಟ್ಟೆವು. ಅವರು ವಾಪಾಸು ಬಂದು ಹಳ್ಳಿಯಲ್ಲಿ ಉಳಿದರು. ಮೂರು ವರ್ಷಗಳಿಂದ ಅವರುಗಳು ತಮ್ಮ ಜಮೀನುಗಳನ್ನು ಬೇಸಾಯ ಮಾಡಲು ಸಾಧ್ಯವಾಗಿರಲಿಲ್ಲ. ಅವರಿಗೆ ಬಿತ್ತನೆ ಬೀಜಗಳಿರಲಿಲ್ಲ; ಎತ್ತುಗಳು ಓಡಿಹೋಗಿದ್ದವು; ಅವರ ಹಳ್ಳಿಯನ್ನು ಮತ್ತೆ ಮತ್ತೆ ಸುಟ್ಟು ಹಾಕಲಾಗಿತು. ನಾವು ಅವರ ಪುನರ್ವಸತಿಗೆ ವ್ಯವಸ್ಥೆ ಮಾಡಿದೆವು. ಹಾಗೆ ಮೊದಲ ಹಳ್ಳಿ ಪುನರ್ವಸಿತವಾಯಿತು. ಪಕ್ಕದ ಹಳ್ಳಿಗರು ಸೇರಿದರು ಧೈರ್ಯದಿಂದ ನಮ್ಮನ್ನ ಸಂಪರ್ಕಿಸಿದರು. ನಮ್ಮ ಕಾರ್ಯಕರ್ತರು ಅದೇ ಪ್ರಯೋಗವನ್ನು ಅಲ್ಲಿ ಪುನರಾವರ್ತಿಸಲು ಪ್ರಾರಂಭಿಸಿದರು.

ಲಿಂಗಗಿರಿಗೆ ತೆರಳುತ್ತಿರುವ ಆದಿವಾಸಿಗಳಿಗೆ ಬೆಂಗಾವಲಾಗಿ ನಮ್ಮ ಕಾರ್ಯಕರ್ತರು ಜೊತೆಗೂಡಿದ್ದಾರೆಂಬುದನ್ನು ತಿಳಿದುಕೊಂಡ ಜಿಲ್ಲಾಧಿಕಾರಿಗಳು ನನಗೆ ದೂರವಾಣಿ ಕರೆ ಮಾಡಿದರು. ಅದು ಶನಿವಾರ ಸಂಜೆ 4-30 ಆಗಿತ್ತು. ಮರುದಿನ ಭಾನುವಾರ, ಸರ್ಕಾರಿ ಕಛೇರಿಗಳಿಗೆ ರಜಾದಿನ ಎಂಬುದು ಅವರಿಗೆ ಗೊತ್ತಿತ್ತು. ಎಲ್ಲಾ ಪಡೆಗಳು ಚುನಾವಣಾ ತಯಾರಿಯಲ್ಲಿ ಬಿಝಿಯಾಗಿದ್ದಾರೆ, ಹಾಗಾಗಿ ಯಾವುದೇ ರೀತಿಯ ರಕ್ಷಣೆ ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದು ಅವರು ನನಗೆ ತಿಳಿಸಿದರು. ನಾನು ಹೇಳಿದೆ. "ನಾನು ಯಾವಾಗ ನಿಮ್ಮ ರಕ್ಷಣೆ ಕೇಳಿದ್ದೆ?. ಸಂವಿಧಾನದ ಪ್ರಕಾರ ತಮ್ಮ ಮನೆಗಳಿಗೆ ಹೋಗುವ ಯಾರನ್ನೂ ನೀವು ತಡೆಯಲು ಸಾಧ್ಯವಿಲ್ಲ" ಎಂದು ಆದರೆ ಸೇತುವೆ ಬಳಿಗೆ ಬಂದ ಒಡನೆಯೇ ಪೋಲೀಸರು ಜನರನ್ನು ತಡೆದರು. ಪೋಲೀಸರು ಮೂರು ವರ್ಷಗಳಿಂದಲೂ ಆ ಸೇತುವೆ ದಾಟಿ ಬರಲು ಸಾಧ್ಯವಾಗಿರಲಿಲ್ಲ. ನಾನು ಜಿಲ್ಲಾಧಿಕಾರಿಗಳಿಗೆ ದೂರವಾಣಿಯಲ್ಲಿ ಮಾತನಾಡಿ ನೀವು ಜನರು ತಮ್ಮ ಊರುಗಳಿಗೆ ತೆರಳಲು ಬಿಡುತ್ತೀರೋ ಇಲ್ಲವೋ? ಇಲ್ಲದಿದ್ದಲ್ಲಿ ನಾವು ಸರ್ವೋಚ್ಚ ನ್ಯಾಯಾಲಯಕ್ಕೆ ನೀವು ಅದರ ಆದೇಶಗಳನ್ನು ಜಾರಿಯಾಗಲು ಬಿಡುತ್ತಿಲ್ಲ ಎಂಬುದನ್ನು ತಿಳಿಸಬೇಕಾಗುತ್ತದೆ ಎಂದೆ. ಆ ದಿನ ಎಲ್ಲರೂ ಆ ಸೇತುವೆಯನ್ನು ದಾಟಿದರು.

ಆದರೆ ಆಡಳಿತ ಅಲ್ಲಿಗೆ ನಿಲ್ಲಿಸಲಿಲ್ಲ. ಅವರು ನನ್ನ ವಾಹನವನ್ನು ವಶಪಡಿಸಿಕೊಂಡರು. ನಾವು ಅದನ್ನು ಬಿಡಿ

ಸಿಕೊಳ್ಳಲು ನ್ಯಾಯಾಲಯಕ್ಕೆ ಹೋಗಬೇಕಾಯಿತು. ಪೊಲೀಸರು ಹಳ್ಳಿಗರಿಗಾಗಿ ಇದ್ದ ಪಡಿತರವನ್ನು ತೆಗೆದುಕೊಂಡು ಹೋಗಿದ್ದಾರೆ ಎಂಬುದು ನಮಗೆ ತಿಳಿದು ಬಂತು. ಈ ರೀತಿ ವರ್ತಿಸುವ ಪೊಲೀಸ್ ಪಡೆಗಳನ್ನು ಯಾರು ತಾನೆ ರಕ್ಷಿಸಲು ಸಾಧ್ಯ!

ಆದಿವಾಸಿಗಳು ತಮ್ಮ ಭೂಮಿಯನ್ನು ಬೇಸಾಯ ಮಾಡಲು ತೊಡಗಿದರು. ಆದರೆ ಪೊಲೀಸರು ಮತ್ತೊಮ್ಮೆ ಪುನರ್ವಸಿತ ಹಳ್ಳಿಗಳ ಮೇಲೆ ಧಾಳಿ ಮಾಡಲು ಪ್ರಾರಂಭಿಸಿದರು. ಆಗಲೂ ನಾವು ನಮ್ಮ ಪ್ರಯತ್ನ ಮುಂದುವರೆಸಿದೆವು. 30 ಹಳ್ಳಿಗಳಲ್ಲಿ ಶಾಂತಿ ಅಸ್ತಿತ್ವಕ್ಕೆ ಬಂತು. ಯಾರು ಬೇಕಾದರೂ ಅವರನ್ನು ಭೇಟಿ ಮಾಡಬಹುದಿತ್ತು. ನಾವು ಸರ್ಕಾರಕ್ಕೆ ಇದನ್ನು ಮಾದರಿಯಾಗಿ ತೆಗೆದುಕೊಂಡು ಬಳಸಿಕೊಳ್ಳಲು ಹೇಳಿದ್ದೆವು. ಜನರು ಆರಾಮತನವನ್ನು ಹೊಂದಿದ್ದರು, ಹಾಗಾಗಿ ಅವರಿಗೆ ಹೋರಾಟದಲ್ಲಿ ಆಸಕ್ತಿ ಇರಲಿಲ್ಲ. ಆದರೆ ಕೈಗಾರಿಕೋದ್ಯಮಿಗಳಿಗೆ ಗಣಿಗಾರಿಕೆಯನ್ನು ನಡೆಸಲು ಜನರನ್ನು ಓಡಿಸಿ ಜಮೀನುಗಳನ್ನು ವಹಿಸಿಕೊಡುವ ಏಕೈಕ ಉದ್ದೇಶದಿಂದ ಧಾಳಿ ನಡೆಸುವುದನ್ನು ಸರ್ಕಾರ ಮುಂದುವರೆಸಿತು.

ಆಗ ಆದಿವಾಸಿಗಳು ತಮ್ಮ ಹಳ್ಳಿಯನ್ನು ಸಲ್ವ ಜುಡುಂ ಪಡೆಗಳಿಂದ ರಕ್ಷಿಸಿಕೊಳ್ಳಲು ಯುವಕರನ್ನು ತೊಡಗಿಸುವ ನಿರ್ಣಯ ತೆಗೆದುಕೊಂಡರು. ಅವರು ತಮ್ಮಲ್ಲಿರುವ ಲಾಠಿಗಳು, ಕೃಷಿ ಉಪಕರಣಗಳೊಂದಿಗೆ ಹಳ್ಳಿಗಳನ್ನು ಪಹರೆ ನಡೆಸಲು ಆರಂಭಿಸಿದರು. ತಮ್ಮ ಧಾನ್ಯಗಳನ್ನು ಬೆಟ್ಟಗಳಲ್ಲಿ ಬಚ್ಚಿಡಲು ಪ್ರಾರಂಭಿಸಿದರು. ಗೃಹಮಂತ್ರಿ ಈ ಎಲ್ಲಾ ಯುವಕರನ್ನು ನಕ್ಸಲೈಟರೆಂದು, ಅವರು ಸರ್ಕಾರದ ವಿರುದ್ಧ ಶಸ್ತ್ರ ಹಿಡಿದಿದ್ದಾರೆಂದು ವರ್ಣಿಸತೊಡಗಿದರು. ಸರ್ಕಾರಕ್ಕೆ ಶಾಂತಿ ಬೇಕಾಗಿಲ್ಲ; ಅದಕ್ಕೆ ಭೂಮಿ ಬೇಕಾಗಿದೆ. ಹಾಗಾಗಿ ಅದು ಸೊಕ್ಕಿನಿಂದ ವರ್ತಿಸುತ್ತಿದೆ. ಅದು ತಾನು ಮಾಡಿದ ಅಪರಾಧಗಳನ್ನು ಒಪ್ಪಿಕೊಳ್ಳಲು ಬಯಸುತ್ತಿಲ್ಲ. ರೇಪು, ಅಪಹರಣ, ಮನೆಗಳಿಗೆ ಬೆಂಕಿ ಇಡುವುದು ಸೇರಿದಂತೆ ಗಂಭೀರ ಅಪರಾಧಗಳ 1000 ಪ್ರಥಮ ಮಾಹಿತಿ ವರದಿ (F.I.R.)ಗಳನ್ನು ಸಲ್ಲಿಸಲು ನಾವು ಪ್ರಯತ್ನ ನಡೆಸಿದ್ದೆವು. ಆದರೆ ಅವುಗಳಲ್ಲಿ ಯಾವುದನ್ನೂ ದಾಖಲು ಮಾಡಿಕೊಳ್ಳಲಿಲ್ಲ. ಪೋಲೀಸರು ಅವುಗಳನ್ನು ದಾಖಲಿಸಿಕೊಳ್ಳಲು ಸಾಧ್ಯವಿಲ್ಲ ಯಾಕೆಂದರೆ ಅವೆಲ್ಲಾ ಸುಳ್ಳು ವರದಿಗಳು ಎಂದು ಸೂಪರಿಂಡೆಂಟ್ ಆಫ್ ಪೋಲೀಸ್ (ಎಸ್. ಪಿ) ಹೇಳಿದರು. ಪೋಲಿಸರು ಯಾವ ದೂರನ್ನೂ ಅದು ಸರಿ ಅಥವಾ ತಪ್ಪು ಎಂದು ತೀರ್ಮಾನಿಸಲು, ಅದರಲ್ಲೂ ವಿಶೇಷವಾಗಿ ಪೋಲೀಸರ ವಿರುದ್ಧವೇ ಇರುವ ದೂರುಗಳಿದ್ದಲ್ಲಿ, ಆಗುವುದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ.

ಆಡಳಿತಾತ್ಮಕ ಮತ್ತು ನ್ಯಾಯಾಂಗದ ತಾರತಮ್ಯಗಳು.

ಎರಡು ದಿನಗಳ ಕಾಲ ಪೋಲೀಸ್ ಠಾಣೆಯಲ್ಲಿಟ್ಟು ತನ್ನನ್ನು ರೇಪು ಮಾಡಲಾಗಿದೆ ಎಂದು ಒಂದು ಹುಡುಗಿ ಬಂದು ಹೇಳಿದಳು. ಎಸ್. ಪಿ. ನಮ್ಮ ಪ್ರಥಮ ಮಾಹಿತಿ ವರದಿಯನ್ನು ದಾಖಲು ಮಾಡಿಕೊಳ್ಳಲಿಲ್ಲ. ನಾವು ಸರ್ವೋಚ್ಚ ನ್ಯಾಯಾಲಯಕ್ಕೆ ದೂರನ್ನು ಕೊಂಡೊಯ್ದೆವು. ಅದು ಸರ್ಕಾರವನ್ನು ಉತ್ತರಿಸಲು ಕೇಳಿತು. "ನಾವು ಈ ಹುಡುಗಿಯನ್ನು ರೇಪು ಮಾಡಿದ್ದೀರಾ? ಎಂದು ಆಪಾದಿತರನ್ನು ಕೇಳಿದೆವು. (ಆಪಾದಿತರು ಸಲ್ವ ಜುಡುಂ ಸದಸ್ಯರಾಗಿದ್ದರು) ಇಲ್ಲ, ಆಕೆ ನಮ್ಮ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾಳೆ." ಎಂದು ಅವರು ಹೇಳಿದ್ದಾರೆ" ಎಂಬ ಉತ್ತರವನ್ನು ಎಸ್.ಪಿ ನೀಡಿದರು. ಹಾಗೆ, ರೇಪು ದೂರುಗಳನ್ನು ಈ ರೀತಿ ನಮ್ಮ ಪೋಲೀಸರು ತನಿಖೆ ನಡೆಸುತ್ತಾರೆ. ರೇಪು ಮಾಡಿದವರನ್ನೇ ರೇಪು ಮಾಡಿದ್ದೀರಾ ಎಂದು ಕೇಳಿ ಅವರು ಕೊಡುವ ಉತ್ತರದ ಆದಾರದ ಮೇಲೆ ತೀರ್ಮಾನ ಮಾಡುತ್ತಾರೆ.

ನಾವು ಬಿನಾಯಕ ಸೇನ್‌ರ ಬಿಡುಗಡೆಗಾಗಿ ಪ್ರಚಾರಾಂದೋಲನ ಕೈಗೊಂಡಾಗ ಸಲ್ವ ಜುಡುಂ ಅನ್ನು ಕೊನೆಗೊಳಿಸಿ, ಚತ್ತೀಸ್‌ಗಡ ವಿಶೇಷ ನಾಗರಿಕ ಸುರಕ್ಷಾ ಮಸೂದೆಯನ್ನು ರದ್ದು ಮಾಡಿ ಅದರಡಿ ಬಂದಿಸಲ್ಪಟ್ಟವರನ್ನು ಬಿಡುಗಡೆ ಮಾಡಿ ಎಂದು ಒತ್ತಾಯಿಸಿದ್ದೆವು. ಏನೂ ಆಗಲಿಲ್ಲ. ಈಗ ವಾಸ್ತವವಾಗಿ ಈ ಕಾಯಿದೆಯನ್ನು ಎಲ್ಲಾ ಹಳ್ಳಿಗರ ಮೇಲೆ ಬಳಸುತ್ತಿದ್ದಾರೆ. "ನೀವು ಮಾವೋವಾದಿಗಳಿಗೆ ನೀರು ಕೊಟ್ಟಿರಿ, ನೀವು ಅವರಿಗೆ ದಾರಿ ತೋರಿಸಿದಿರಿ– ನೀವೂ ಕೂಡ ಆರೋಪಿಗಳು" ಎಂದು ಅಧಿಕಾರಿಗಳು ದೂರುತ್ತಾರೆ. ನಿಮ್ಮ ನ್ಯಾಯಾಂಗ, ನಿಮ್ಮ ಆಡಳಿತಾಂಗ, ನಿಮ್ಮ ಪ್ರಜಾತಂತ್ರ, ಸ್ವತಃ ನೀವೇ ಅವರನ್ನೆಲ್ಲಾ ನಾಶ ಮಾಡುತ್ತಿದ್ದೀರಿ. ನಕ್ಸಲೈಟರಿಗೆ ನಂತರ ಮಾಡಲು ಹೆಚ್ಚು ಏನೂ ಉಳಿಯಲ್ಲ!. ಒಂದೊಮ್ಮೆ ಬರೆಯುವುದು ಮತ್ತು ಮಾತನಾಡುವುದು ಅಪರಾದಗಳಾಗಿದ್ದವು.– ಬಿನಾಯಕ ಸೇನ್ ಬರೆಯುತ್ತಿದ್ದರು, ನಾನು ಕೇವಲ ಮಾತನಾಡುತ್ತಿದ್ದೆ. ನೀವೇನು ಮಾಡಿದಿರಿ? ಆದಿವಾಸಿಗಳು ಅಸಹಾಯಕತೆಯಿಂದ ಬಂದೂಕು ತೆಗೆದುಕೊಂಡರೆ ಅವರನ್ನು ನೀವು ದೂರಲು ಸಾಧ್ಯವೆ? ಜನವರಿಯಲ್ಲಿ 19 ಜನ ಆದಿವಾಸಿಗಳನ್ನು ಕೊಲೆ ಮಾಡಲಾಯಿತು. ನಾಲ್ಕು ಹುಡುಗಿಯರನ್ನು ರೇಪು ಮಾಡಲಾಯಿತು. ನಾವು ನ್ಯಾಯಾಲಯಕ್ಕೆ ಹೋದೆವು.

ನಾವು ಬಿನಾಯಕ ಸೇನ್‌ರ ಬಿಡುಗಡೆಗಾಗಿ ಪ್ರಚಾರಾಂದೋಲನ ಕೈಗೊಂಡಾಗ ಸಲ್ವ ಜುಡುಂ ಅನ್ನು ಕೊನೆಗೊಳಿಸಿ, ಚತ್ತೀಸ್‌ಗಡ ವಿಶೇಷ ನಾಗರಿಕ ಸುರಕ್ಷಾ ಮಸೂದೆಯನ್ನು ರದ್ದು ಮಾಡಿ ಅದರಡಿ ಬಂದಿಸಲ್ಪಟ್ಟವರನ್ನು ಬಿಡುಗಡೆ ಮಾಡಿ ಎಂದು ಒತ್ತಾಯಿಸಿದ್ದೆವು. ಏನೂ ಆಗಲಿಲ್ಲ. ಈಗ ವಾಸ್ತವವಾಗಿ ಈ ಕಾಯಿದೆಯನ್ನು ಎಲ್ಲಾ ಹಳ್ಳಿಗರ ಮೇಲೆ ಬಳಸುತ್ತಿದ್ದಾರೆ. "ನೀವು ಮಾವೋವಾದಿಗಳಿಗೆ ನೀರು ಕೊಟ್ಟಿರಿ, ನೀವು ಅವರಿಗೆ ದಾರಿ ತೋರಿಸಿದಿರಿ– ನೀವೂ ಕೂಡ ಆರೋಪಿಗಳು" ಎಂದು ಅಧಿಕಾರಿಗಳು ದೂರುತ್ತಾರೆ. ನಿಮ್ಮ ನ್ಯಾಯಾಂಗ, ನಿಮ್ಮ ಆಡಳಿತಾಂಗ, ನಿಮ್ಮ ಪ್ರಜಾತಂತ್ರ, ಸ್ವತಃ ನೀವೇ ಅವರನ್ನೆಲ್ಲಾ ನಾಶ ಮಾಡುತ್ತಿದ್ದೀರಿ. ನಕ್ಸಲೈಟರಿಗೆ ನಂತರ ಮಾಡಲು ಹೆಚ್ಚು ಏನೂ ಉಳಿಯಲ್ಲ!. ಒಂದೊಮ್ಮೆ ಬರೆಯುವುದು ಮತ್ತು ಮಾತನಾಡುವುದು ಅಪರಾದಗಳಾಗಿದ್ದವು.

ಸರ್ಕಾರಿ ವಕೀಲರು ವಿಚಾರಣೆಯನ್ನು ಮುಂದೂಡುವುದನ್ನೇ ಮಾಡುತ್ತಾ ಬಂದರು. ನ್ಯಾಯಾಧೀಶರುಗಳನ್ನು ನಿರಂತರ ಬದಲಾಯಿಸುತ್ತಾ ಬರಲಾಯಿತು. ವಿಶೇಷ ಪೋಲೀಸ್ ಅಧಿಕಾರಿಗಳು (ಎಸ್.ಪಿ.ಒ) ಮೂವರು ಆದಿವಾಸಿಗಳನ್ನು ಕೊಂದರು. ಅವರ ವಿದವಾ ಪತ್ನಿಯರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದರು. ಪೋಲೀಸರ ಮೇಲೆ ರಿಟ್ ಅರ್ಜಿ ದಾಖಲಿಸಲಿಕ್ಕಾಗಿ ನಕ್ಸಲೈಟರೇ ಆ ಕೊಲೆಗಳನ್ನು ಮಾಡಿದ್ದು ಎಂದು ಸರ್ಕಾರ ಉತ್ತರಿಸಿತು. ನ್ಯಾಯಾಧೀಶರು ಇದನ್ನು ನುಂಗಿದರು.

ಸಾಮಾನ್ಯ ಹಳ್ಳಿ ಜನರನ್ನು ಕೊಂದು ಅವರುಗಳನ್ನು ನಕ್ಸಲೈಟ್ ಕಮಾಂಡರ್‌ಗಳು ಎಂದು ಹೇಳಲಾಯಿತು. ನಾವು ಒತ್ತಾಯಿಸಿದ್ದು ಕೇಂದ್ರೀಯ ತನಿಖಾ ಮಂಡಳಿ (ಸಿ.ಬಿ ಐ.) ಯಿಂದ ತನಿಖೆ ನಡೆಸಿ ಸೂಕ್ತ ಪರಿಹಾರ ನೀಡಬೇಕೆಂದು. ಆದರೆ ನ್ಯಾಯಾಧೀಶರು ಹಳ್ಳಿಜನರಿಗೆ ಹೇಳಿದ್ದು "ನೀವು ಯಾವ ಕ್ಯಾಂಪಿನಲ್ಲಿ ಇರುತ್ತೀರೆಂಬುದನ್ನು ತೀರ್ಮಾನ ಮಾಡಿಕೊಳ್ಳಿ ಸರ್ಕಾರ ನಿಮ್ಮನ್ನು ನೋಡಿಕೊಳ್ಳುತ್ತದೆ"ಎಂದು.

ಆದಿವಾಸಿಗಳ ಬೇಟೆಗಾಗಿ 'ಆಪರೇಷನ್'

ಸೆಪ್ಟಂಬರಿನಲ್ಲಿ ನಡೆದ ಆಪರೇಷನ್ ಗ್ರೀನ್ ಹಂಟ್‌ನ ಮೊದಲ ಹಂತದಲ್ಲಿ ಸರ್ಕಾರಿ ಪಡೆಗಳು ಇಡೀ ಒಂದು ಕುಟುಂಬವನ್ನು ದಾಳಿಗೊಳಪಡಿಸಿದವು. ಮೊದಲು ಅವರು ತಂದೆಯನ್ನು ಇರಿದರು, ನಂತರ ತಾಯಿ, ಆಮೇಲೆ ಅವರ ಮಗಳನ್ನು ಇರಿದರು. ರೈಫಲ್‌ಗಳ ಬಟ್ಟಿನಿಂದ ಅವರು ಆಕೆಯ ಎರಡು ವರ್ಷದ ಮಗನ ಹಲ್ಲುಗಳನ್ನು ಮುರಿದರು. ನಂತರ ಅವನ ನಾಲಿಗೆಯ ಭಾಗವನ್ನು ಕತ್ತರಿಸಿದರು. ನಾನು ಇವರ ಕತೆಗಳನ್ನು ಮಾಧ್ಯಮದವರಿಗೆ ಕೇಳಿಸಲು ಬಯಸಿ ಅವರನ್ನು ರಾಯ್‌ಪುರಕ್ಕೆ ಕರದುಕೊಂಡು ಹೋಗಲು ತೀರ್ಮಾನಿಸಿದೆ. ರಾಯ್‌ಪುರ ಪ್ರೆಸ್ ಕ್ಲಬ್‌ನವರು ಅವರುಗಳು ನಕ್ಸಲೈಟರಲ್ಲ ಎಂಬುದಕ್ಕೆ ಪುರಾವೆ ತೋರಿಸಲು ಹೇಳಿದರು. ಅವರನ್ನು ನಕ್ಸಲೈಟರೆಂದು ಪ್ರಭುತ್ವವೇ ಹೇಳುತ್ತಿಲ್ಲ ಎಂದು ನಾನು ಹೇಳಿದೆ. ನಾನು ಆ ಆವರಣವನ್ನು ಬಳಸಿಕೊಳ್ಳಲು ಅವಕಾಶ ನೀಡಬಾರದೆಂದು ಅವರು ತೀರ್ಮಾನಿಸಿದರು. ಹಾಗೆ ಆದಿವಾಸಿಗಳು ಮಾಧ್ಯಮಗಳ ಬಳಿಯೂ ಹೋಗಲು ಸಾಧ್ಯವಿಲ್ಲ. ಇನ್ನು ಅವರು ಹೋಗುವುದಾದರೂ ಬೇರೆ ಯಾರ ಬಳಿ?

ಅವರಿಗೆ ಎಲ್ಲಾ ರಸ್ತೆಗಳು ಮುಚ್ಚಿವೆ. ಪೋಲೀಸರು ಅವರನ್ನು ಹೊಡೆಯುತ್ತಾರೆ. ರಾಜಕೀಯ ಪಕ್ಷಗಳ ನಾಯಕರು– ಕಾಂಗ್ರೆಸ್ ಪಕ್ಷದವರಾಗಿರಲಿ ಬಾರತೀಯ ಜನತಾ ಪಕ್ಷದವರಾಗಿರಲಿ– ಸಲ್ವ ಜುಡುಂ ಜೊತೆ ಇರುತ್ತಾರೆ. ನ್ಯಾಯಾಲಯಗಳು ಅವರ ಅಹವಾಲು ಕೇಳುವುದಿಲ್ಲ. ಮಾಧ್ಯಮ ಅವರನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಅವರು ಮಾವೋವಾದಿಗಳೆಡೆಗೆ ಬಿಟ್ಟು ಬೇರೆಲ್ಲಿಗೆ ಹೋಗಲು ಸಾಧ್ಯ? ಪೋಲೀಸರು ಅವರ ಮೇಲೆ ಧಾಳಿ ಮಾಡುವಾಗ ಅವರನ್ನು ಉಳಿಸುವವರು ನಕ್ಸಲೈಟರೆ. ನಿಮಗೆ ಶಾಂತಿ ಬೇಕಿದ್ದರೆ ನಕ್ಸಲೈಟರ ಜನಪ್ರಿಯತೆಗೆ ಇರುವ ಮೂಲ ಕಾರಣಗಳಿಗೆ ಅಂತ್ಯ ಹಾಡಿರಿ. ನಾವು ಹಿಂಸೆಗೆ ಇರುವ ಕಾರಣಗಳು ಕೊನೆಗೊಳ್ಳುವ ಪರಿಸ್ಥಿತಿ ನಿರ್ಮಿಸಲು ಪ್ರಯತ್ನಿಸಿದೆವು. ಆದರೆ ಪೋಲೀಸರೇ

> **ರಾಜಕೀಯ ನಾಯಕರು ನಕ್ಸಲೈಟರು ಯಾಕೆ ಜನಪ್ರಿಯರು, ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರ್ಕಾರ ಗಳು ಯಾಕೆ ಜನಪ್ರಿಯವಾಗಿಲ್ಲ ಎಂಬ ಪ್ರಶ್ನೆಗಳನ್ನು ಕೇಳಿ ಕೊಳ್ಳಬೇಕು. ಒಬ್ಬ ಆದಿವಾಸಿ ಪೋಲೀಸ್ ಠಾಣೆಗೆ ಹೋಗಿ ಪಟವಾರಿ ನನ್ನ ಹಣ ಕಸಿದುಕೊಂಡಿದ್ದಾನೆ ಎಂದು ದೂರಿದರೆ ಪೋಲೀಸರು ಹೋಗಿ ತನಿಖೆ ನಡೆಸುವರೆ.? ನಿಮ್ಮ ಪೋಲೀಸರ ಬಂದೂಕುಗಳನ್ನು ಬಡ ಜನರ ಹಕ್ಕುಗಳ ರಕ್ಷಣೆಗಾಗಿ ಎಂದು ಎತ್ತಲಾಗುವುದೋ ಅಂದು ನಕ್ಸಲಿಸಂ ಕೊನೆಗೊಳ್ಳುತ್ತದೆ. ಒಂದು ವೇಳೆ ನನ್ನ ಮಗು ಅಸ್ತವ್ಯಸ್ತಗೊಳಿಸುತ್ತಾ ರಚ್ಚೆ ಹಿಡಿದು ಗಲಾಟೆ ಮಾಡುತ್ತಿದ್ದರೆ ನಾನು ಆ ಮಗು ಯಾಕೆ ಆ ರೀತಿ ಆಡುತ್ತಿದೆ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸುವುದಿಲ್ಲವೆ? ಯಾಕೆ ಅಲ್ಲಿ ಅಷ್ಟೊಂದು ಹಿಂಸೆ ಇದೆ ಎಂದು ಪ್ರಧಾನ ಮಂತ್ರಿಗಳು ಮಾವೋವಾದಿಗಳಲ್ಲಿ ಕೇಳಲು ಆಗುವುದಿಲ್ಲವೆ.?**

ವೃದ್ಧ ಮಹಿಳೆಯ ಸ್ತನಗಳನ್ನು ಕತ್ತರಿಸಿ ಹಾಕುವ, ವೃದ್ಧನಿಗೆ ಇರಿಯುವ, ರೇಪ್ ಮಾಡುವ... ವಾತಾವರಣ ಇರುವಾಗ ಹಳ್ಳಿಗರ ಕೈಗೆ ಸಿಕ್ಕುವ ಪೋಲೀಸ್ ಪೇದೆಗಳ ವಿಧಿ ಏನಾಗಿರಲು ಸಾಧ್ಯ, ನೀವೇ ಊಹಿಸಿ. ಪ್ರಭುತ್ವ ಅಂತಹ ಪರಿಸ್ಥಿತಿಯನ್ನು ನಿರ್ಮಿಸಕೂಡದು.

ರಾಜಕೀಯ ನಾಯಕರು ನಕ್ಸಲೈಟರು ಯಾಕೆ ಜನಪ್ರಿಯರು, ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರ್ಕಾರಗಳು ಯಾಕೆ ಜನಪ್ರಿಯವಾಗಿಲ್ಲ ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಒಬ್ಬ ಆದಿವಾಸಿ ಪೋಲೀಸ್ ಠಾಣೆಗೆ ಹೋಗಿ ಪಟವಾರಿ ನನ್ನ ಹಣ ಕಸಿದುಕೊಂಡಿದ್ದಾನೆ ಎಂದು ದೂರಿದರೆ ಪೋಲೀಸರು ಹೋಗಿ ತನಿಖೆ ನಡೆಸುವರೆ.? ನಿಮ್ಮ ಪೋಲೀಸರ ಬಂದೂಕುಗಳನ್ನು ಬಡ ಜನರ ಹಕ್ಕುಗಳ ರಕ್ಷಣೆಗಾಗಿ ಎಂದು ಎತ್ತಲಾಗುವುದೋ ಅಂದು ನಕ್ಸಲಿಸಂ ಕೊನೆಗೊಳ್ಳುತ್ತದೆ. ಒಂದು ವೇಳೆ ನನ್ನ ಮಗು ಅಸ್ತವ್ಯಸ್ತಗೊಳಿಸುತ್ತಾ ರಚ್ಚೆ ಹಿಡಿದು ಗಲಾಟೆ ಮಾಡುತ್ತಿದ್ದರೆ ನಾನು ಆ ಮಗು ಯಾಕೆ ಆ ರೀತಿ ಆಡುತ್ತಿದೆ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸುವುದಿಲ್ಲವೆ? ಯಾಕೆ ಅಲ್ಲಿ ಅಷ್ಟೊಂದು ಹಿಂಸೆ ಇದೆ ಎಂದು ಪ್ರದಾನ ಮಂತ್ರಿಗಳು ಮಾವೋವಾದಿಗಳಲ್ಲಿ ಕೇಳಲು ಆಗುವುದಿಲ್ಲವೆ.? ನಕ್ಸಲೈಟರು ಮುಂದೊಂದು ದಿನ ದೊಡ್ಡ ಯುದ್ಧ ನಡೆಯಲಿದೆ ಎಂದು ಹೇಳುತ್ತಾ ಆದಿವಾಸಿಗಳನ್ನು ದಶಕಗಳಿಂದ ತಯಾರು ಮಾಡುತಾ ಬಂದಿದ್ದಾರೆ.

ಮತ್ತೊಂದು ದಿನ ನಾನು ನಡಿಗೆ ಮಾಡುತ್ತಿರುವಾಗ ಮರದ ಕೆಳಗೆ ಮಲಗಿದ್ದ ವೃದ್ಧನೊಬ್ಬ ಯುದ್ಧ ನಡೆಯಿತ? ಎಂದು ನನ್ನನ್ನು ಕೇಳಿದ. ಹಾಗಾಗೆ ನಾನು ಮುಖ್ಯ ವಾಹಿನಿಯಲ್ಲಿರುವ ರಾಜಕೀಯ ಪಕ್ಷಗಳ ನಾಯಕರುಗಳಿಗೆ ಹೇಳುವುದು, ಇಲ್ಲಿಗೆ ಪ್ರವೇಶಿಸ ಬೇಡಿ. ಆದಿವಾಸಿಗಳು ನಿಮಗಾಗಿ ಕಾಯುತ್ತಿದ್ದಾರೆ; ನೀವು ಸಿಕ್ಕಿಹಾಕಿಕೊಳ್ಳಬಹುದು. ಈ ಆದಿವಾಸಿಗಳು ಉತ್ತರಪ್ರದೇಶದ ಜನರ ತರಹ ಅಲ್ಲ. ಅವರು ನಿಮ್ಮ ಮೇಲೆ ಹಾರಿ ನಿಮ್ಮ ಅಂಗ ರಕ್ಷಕರ ಎ.ಕೆ. 47 ಕಿತ್ತುಕೊಳ್ಳಬಲ್ಲರು. ಆಪರೇಷನ್ ಗ್ರೀನ್ ಹಂಟ್‌ನಲ್ಲಿ ಜಮ್ಮು ಕಾಶ್ಮೀರಕ್ಕಿಂತಲೂ ಹೆಚ್ಚಿನ ಪಡೆಗಳು ಸಾಯಿಸಲ್ಪಡಬಹುದು. ಸೆಪ್ಟೆಂಬರ್‌ನಲ್ಲಿ ಅವರು ಆಪರೇಷನ್ ಗ್ರೀನ್ ಹಂಟ್ ಪ್ರಾರಂಭಿಸಿದರು. ಅವರಿಗೆ ಒಬ್ಬನೇ ಒಬ್ಬ ಮಾವೋವಾದಿಯನ್ನು ಕೊಲ್ಲಲು ಇದುವರೆಗೂ ಸಾಧ್ಯವಾಗಿಲ್ಲ. ಆದರೆ 6 ಜನ ಕೊಬ್ರಾ ಜವಾನರು ಸಾಯಿಸಲ್ಪಟ್ಟರು. ಅವರು ಕೊಲ್ಲಬಹುದಾದದ್ದು ಆದಿವಾಸಿ ವೃದ್ಧರನ್ನು ಹಾಗೂ ಮಕ್ಕಳನ್ನು. 6 ವರ್ಷದ ಹುಡುಗನ್ನು ಇರಿಯಲಾಯಿತು. 85ರ ಹರೆಯದ ವೃದ್ಧರನ್ನು ಬಯೊನೆಟ್‌ನಿಂದ ಹೊಡೆದು ಅವರ ಹಾಸಿಗೆಯಲ್ಲೇ ಕೊಲ್ಲಲಾಯಿತು.... ಪೋಲೀಸರು ಕಗ್ಗೊಲೆಗಳನ್ನು ಮಾಡುತ್ತಿದ್ದಾರೆ.

ನಂತರ ಸರ್ಕಾರ ಕೇಳುತ್ತದೆ ನೀವು ನಮ್ಮ ಜೊತೆಗೆ ಇರುತ್ತೀರೋ ಇಲ್ಲಾ ಮಾವೋವಾದಿಗಳೊಂದಿಗೆ ಇರುತ್ತೀರೊ? ಎಂದು. ನಾನು ಬಹಿರಂಗವಾಗಿ ಹೇಳುತ್ತೇನೆ ನಾವು ನಿಮ್ಮ ಪೋಲೀಸರ ಜೊತೆ ಇರುವುದಿಲ್ಲ. ನಾವು ಸಾಯಿಸಲ್ಪಡುತ್ತಿರುವ ಆದಿವಾಸಿಗಳೊದಿಗೆ ಇರುತ್ತೇವೆ ಎಂದು. ದಿಗ್ವಿಜಯ್ ಸಿಂಗ್ 'ಹೇಗೆ ನಕ್ಸಲೈಟ್ ಪ್ರಭಾವವನ್ನು ಅಭಿವೃದ್ಧಿ ಪ್ರತಿರೋಧಿಸುತ್ತದೆ' ಎಂಬ ಒಂದು ಲೇಖನ ಬರೆದರು. ನಾನು ಅವರಿಗೆ ನಾಲ್ಕು ಹಕ್ಕೊತ್ತಾಯಗಳ ಒಂದು ಪತ್ರ ಬರೆದೆ. ಮೊದಲನೇದು ಎಲ್ಲಾ ಪಡೆಗಳನ್ನು ಹಿಂಪಡೆದುಕೊಳ್ಳಿ. 700 ಹಳ್ಳಿಗಳನ್ನು ಸುತ್ತುವರೆಯಲಾಗಿದೆ. ಹಳ್ಳಿಗರು ಹೊರಗೆ ಹೋಗೋ ಹಾಗೆ ಇಲ್ಲ. ಹೊರಗಿನವರು ಯಾರೂ ಒಳಗೆ ಪ್ರವೇಶಿಸುವ ಹಾಗೆ ಇಲ್ಲ. ಆದಿವಾಸಿಗಳು 5 ಕಿ.ಮೀ ದೂರವಿರುವ ವಾರದ ಸಂತೆಗೆ ಹೋಗುತ್ತಾರೆ. ಆಕೆಗೆ ಗೊತ್ತು ಎಸ್.ಪಿ.ಒ ಗಳು ಹಿಡಿಯಬಹುದು ಎಂದು. ಹಾಗಾಗಿ ಆಕೆ 85ಕಿ.ಮಿ ಇರುವ ಸಂತೆಗೆ ಹೋಗುತ್ತಾಳೆ. ಅದಕ್ಕಾಗಿ ತೆಗೆದುಕೊಳ್ಳುವ ಸಮಯ ಎರಡು ದಿನ ಹೋಗಲು, ಎರಡು ದಿನ ಬರಲು. ಅಂದರೆ ವಾರದಲ್ಲಿ ನಾಲ್ಕು ದಿನಗಳು ನಡಿಗೆಯಲ್ಲಿ ಹೋಗುತ್ತದೆ. ನಾನು ಆಕೆಯನ್ನು ಕೇಳಿದೆ ನೀವು ಯಾಕೆ ಒಂದು ತಿಂಗಳಿಗೆ ಬೇಕಾಗುವಷ್ಟು ಅಕ್ಕಿಯನ್ನು ಒಮ್ಮೆಗೆ ಯಾಕೆ ತಂದಿಟ್ಟು ಕೊಳ್ಳಬಾರದು? ಎಂದು. "ನಮ್ಮ ಮಹುವಾ ಎಷ್ಟು ಗಳಿಸುತ್ತದೋ ಅಷ್ಟು ಮಾತ್ರ ಅಕ್ಕಿ ಖರೀದಿಸಲು ನಮಗೆ ಸಾಧ್ಯ, ಒಂದು ವೇಳೆ ನಮ್ಮ ಮಹುವಾ 20 ರೂಪಾಯಿ ಬೆಲೆ ಬಾಳಿದರೆ ನಾವು 20ರೂಪಾಯಿಯಷ್ಟು ಅಕ್ಕಿ ತರ ಬಹುದು" ಎಂದು ಆಕೆ ಉತ್ತರಿಸಿದಳು.

ಈ ಪರಿಸ್ಥಿತಿ ಯಾಕಿದೆಯೆಂದರೆ ಪ್ರಭುತ್ವದ ಕಾರಣದಿಂದ, ಬದಲಿಗೆ ನಕ್ಸಲೀಯರ ಕಾರಣದಿಂದಲ್ಲ. ಆ ವಲಯಗಳನ್ನು ವಿಮೋಚಿತ ಪ್ರದೇಶಗಳೆಂಬಂತೆ ಚಿತ್ರೀಕರಿಸುವುದು ಪ್ರಭುತ್ವ ವ್ಯೂಹದ ಒಂದು ಭಾಗವಾಗಿದೆ. ಆ ಮೂಲಕ ಅಲ್ಲಿ ಪ್ರಭುತ್ವವನ್ನು ಕಾರ್ಯಾಚರಿಸಲು ಬಿಡಲಾಗುತ್ತಿಲ್ಲ ಎಂದು ಅವರು ಹೇಳಿಕೊಳ್ಳಲು ಸಾಧ್ಯವಾಗುತ್ತದೆ. ವಾಸ್ತವದಲ್ಲಿ ಪ್ರಭುತ್ವದ ಕಾರ್ಯಾಚರಣೆಯನ್ನು ಸಲ್ವ ಜುಡುಂ ನಿಲ್ಲಿಸಿದ್ದು. ಪ್ರಭುತ್ವದ ಯಾವುದೇ ಅಂಗಗಳು ಅಲ್ಲಿ ಕಾರ್ಯಾಚರಿಸುತ್ತಿಲ್ಲ. ಯಾವುದೇ ಕಾನೂನು ಅಲ್ಲಿ ಇಲ್ಲ. ಕನಿಷ್ಟ 21ನೇ ಕಲಮಿನನ್ವಯದ ಬದುಕುವ ಹಕ್ಕು ಕೂಡ ಅಲ್ಲಿ ಇಲ್ಲ. ಆದಿವಾಸಿಗಳನ್ನು ಬೇಟೆ ಆಡಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಹೆದರಿಕೆ ಮತ್ತು ಅಸಹಾಯಕತೆಗಳಿಂದ ಹಿಂಸೆ ಹಬ್ಬಾಗುತ್ತದೆ. ಈ ಸುತ್ತುವರಿಯಲ್ಪಟ್ಟ ಹಳ್ಳಿಗಳಲ್ಲಿ ಎಲ್ಲವನ್ನೂ ಸರ್ಕಾರ ಮುಚ್ಚಿದೆ. ಅಲ್ಲಿ ಏನೂ ಇಲ್ಲ. ಶಾಲೆಗಳಿಲ್ಲ, ಡಾಕ್ಟರುಗಳಿಲ್ಲ, ಇವೆಲ್ಲಾ ನಕ್ಸಲೈಟ [illegible] ಎಂದು ಸರ್ಕಾರ ಉಚ್ಚ ನ್ಯಾಯಾಲಯಕ್ಕೆ ತಿಳಿಸುತ್ತದೆ. ಪೋಲೀಸರು ನ್ಯಾಯ ಬೆಲೆ ಅಂಗಡಿಗಳ ಮೂಲಕ ಪಡಿತರ ಹಂಚುವುದರಲ್ಲಿ ಯಾವ ಅರ್ಥವೂ ಇಲ್ಲ. ಯಾಕೆಂದರೆ ನಕ್ಸಲೈಟರು ಅವನ್ನೆಲ್ಲಾ ಲೂಟಿ ಮಾಡುತ್ತಾರೆ ಎಂದು ಹೇಳುತ್ತಲೇ ಬರುತ್ತಿದ್ದಾರೆ.

ಕಳೆದ ಐದು ವರ್ಷಗಳಿಂದ ಅಲ್ಲಿ ಅಕ್ಕಿಯನ್ನು ಪಡಿತರ ಅಂಗಡಿಗಳ ಮೂಲಕ ವಿತರಿಸುತ್ತಿಲ್ಲ. ಯಾರಾದರೂ ನಕ್ಸಲೈಟರು ಹಸಿವಿನಿಂದ ಸತ್ತಿದ್ದಾರೆಯೆ.? ವೈದ್ಯಕೀಯ ಅಧಿಕಾರಿಗಳು ನನ್ನೊಂದಿಗೆ ಹೇಳಿದ್ದರು ವೈದ್ಯರುಗಳು ಯಾರಾದರೂ ಕಾಡಿನಲ್ಲಿರುವ ರೋಗಿಗಳಿಗೆ ಚಿಕಿತ್ಸೆ ನೀಡಲು ಹೋದರೆ ಸಿ.ಆರ್.ಪಿ.ಎಫ್. ಅವರನ್ನು ಹೊಡೆಯುತ್ತದೆ. ಶಿಕ್ಷಕರು ಹೋದರೆ ಅವರಿಗೂ ಹೊಡೆಯುತ್ತಾರೆ. ಅವರು ಸಿಟ್ಟಿನಿಂದ ಕೇಳುತ್ತಾರೆ ನೀವುಗಳು ಸ್ಫೋಟಗೊಳ್ಳುವುದಿಲ್ಲ ಮತ್ತೆ ನಾವು ಯಾಕೆ ಸ್ಫೋಟಕ್ಕೆ ಗುರಿಯಾಗುತ್ತೇವೆ.? ನೀವು ನಕ್ಸಲೈಟರೊಂದಿಗೆ ಕೈ ಜೋಡಿಸಿರುತ್ತೀರಿ. ನಾನು ಅವರಿಗೆ ಹೇಳುತ್ತೇನೆ ಶಿಕ್ಷಕರು ಮತ್ತು ವೈದ್ಯರುಗಳು ನಿಮ್ಮ ಹಾಗೆ ಬಂದೂಕು ಎತ್ತಿಕೊಂಡು ಹೋಗುವುದಿಲ್ಲ ಎಂದು.

ದಂತೆವಾಡದ ಜಿಲ್ಲಾಧಿಕಾರಿ ಆದಿವಾಸಿ ಭೂಮಿಗಳನ್ನು ಆದಿವಾಸಿಯೇತರರು ವಶಪಡಿಸಿಕೊಳ್ಳಲು ಹರ್ಷದಿಂದ ಅನುಮತಿಸುತ್ತಾರೆ. ಸರ್ಕಾರವೇ ಆ ರೀತಿ ತೆಗೆದುಕೊಂಡು ಕೊಡುತ್ತಿದೆ. ಆದರೆ ಮಾವೋವಾದಿಗಳು ಇರುವುದರಿಂದ ಈ ಎಲ್ಲಾ ಕಂಪನಿಗಳಿಗೆ ತಮ್ಮ ಯೋಜನೆಗಳನ್ನು ಪ್ರಾರಂಬಿಸಲು ಆಗುತ್ತಿಲ್ಲ.

ಗೋಡೆಯೆಡೆಗೆ ತಳ್ಳಲ್ಪಟ್ಟಿದ್ದಾರೆ

ನಮಗೆ ನಿರಂತರವಾಗಿ ಸಿಗುವ ಚಿತ್ರಣವೆಂದರೆ ನಕ್ಸಲೈಟರು ಭಯಂಕರರು, ಸರ್ಕಾರ ಒಳ್ಳೆಯದು ಎಂಬುದು. ದಂತೆವಾಡದ ಆದಿವಾಸಿಗಳನ್ನು ಕೇಳಿ ನೋಡಿ. ನಾನು ಕೆಲವು ರಾಜಕಾರಣಿಗಳಿಗೆ ಹೇಳಿದೆ ನೀವು ಮಾವೋವಾದಿಗಳನ್ನು ಮಾತನಾಡಿಸಬೇಡಿ. ನೀವು ಹೇಳುವಂತೆ ಅವರಿಂದ ಬಾಧಿತರಾದವರನ್ನು, ಅಂದರೆ ಆದಿವಾಸಿಗಳನ್ನು ಮಾತನಾಡಿಸಿ. ನೀವು ಪ್ರಜಾತಾಂತ್ರಿಕವಾಗಿ ಅವರಿಂದ ಆಯ್ಕೆಯಾದ ನಾಯಕರು. ಜನರು ನಿಮ್ಮನ್ನು ಪ್ರೀತಿಸಬಹುದು. ನೀವು ಜನರನ್ನು ಪ್ರೀತಿಸಬಹುದು. ಒಂದುವೇಳೆ ಸಾರ್ವಜನಿಕರು ನಿಮ್ಮನ್ನು ಪ್ರೀತಿಸುವುದನ್ನು ನಿಲ್ಲಿಸಿ ನಕ್ಸಲೈಟರನ್ನು ಪ್ರೀತಿಸಲು ಪ್ರಾರಂಭಿಸಿದರೆಂದರೆ ಅದು ಯಾಕೆಂದು ನೀವೇ ಕಂಡುಕೊಳ್ಳಬೇಕು.

ನನ್ನ ವೈಯಕ್ತಿಕ ಆಚರಣೆ ಅಹಿಂಸೆ. ಕಳೆದ 17 ವರ್ಷಗಳಿಂದ ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಬಲಪಡಿಸುವುದು ನನ್ನ ಕೆಲಸ, ಸಂವಿದಾನ ಖಾತ್ರಿ ಗೊಳಿಸಿರುವ ಹಕ್ಕುಗಳ ಬಗ್ಗೆ, ಅಬಿವೃದ್ಧಿ ಯೋಜನೆಗಳ ಬಗ್ಗೆ, ಪ್ರಜಾತಾಂತ್ರಿಕವಾಗಿ ಆ ಹಕ್ಕುಗಳನ್ನು ಪಡೆದುಕೊಳ್ಳುವ ಬಗ್ಗೆ ಹಳ್ಳಿಗರಿಗೆ ಜಾಗೃತಿ ಮೂಡಿಸುವ ಕೆಲಸಗಳನ್ನೇ ಮಾಡುತ್ತಾ ಬಂದೆ. ಯಾಕೆಂದರೆ ನಕ್ಸಲೈಟರು ಬಂದೂಕು ತೆಗೆದುಕೊಂಡಿದ್ದರು. ನಾವು ಅಹಿಂಸೆಯನ್ನು ಬಲಪಡಿಸಲು ಅಲ್ಲಿಗೆ ಹೋದೆವು. ಆದರೆ ಸರ್ಕಾರ ನಮ್ಮನ್ನು ನಕ್ಸಲೈಟ

[illegible] ಪ್ರಭುತ್ವ ಹಾಗೆ ವರ್ತಿಸುತ್ತದೆ, ಅವರು ನಿಮ್ಮನ್ನು ಗುಲಾಮರಂತೆ ತಳ್ಳುತ್ತಾರೆ, ನಿಮ್ಮನ್ನು ಕಾಡುತ್ತಾರೆ, ಮತ್ತು ನಿಮ್ಮನ್ನು ನಕ್ಸಲೈಟರೆನ್ನುತ್ತಾರೆ.

ವಿನೋಬಾ ಬಾವೆ ನಕ್ಸಲೈಟರ ಬಗ್ಗೆ ಹೀಗೆ ಹೇಳುತ್ತಿದ್ದರು "ಈ ಯುವಕರು ಬಡವರ ಬಗ್ಗೆ ಕರುಣೆಯಿಂದ ಪ್ರೇರಿತರಾಗಿದ್ದಾರೆ ನಾನು ಅವರಿಗೆ ಸೆಲ್ಯೂಟ್ ಹೊಡೆಯುತ್ತೇನೆ." ಎಂದು. ಅವರು ಭೂದಾನ ಚಳುವಳಿ ಪ್ರಾರಂಭಿಸಿದಾಗ ನಕ್ಸಲೈಟರನ್ನು 30 ವರ್ಷ ಹಿಂದಕ್ಕೆ ನಡೆಸಿದರು. ನಾನು 17 ವರ್ಷಗಳಿಂದ ದಂತೆವಾಡದಲ್ಲಿ ಇದ್ದೇನೆ. ನಕ್ಸಲೈಟರು ಆದಿವಾಸಿಗಳ ಮದ್ಯೆ ಹೇಗೆ ಕೆಲಸ ಮಾಡಿದ್ದಾರೆ ಎಂಬುದನ್ನು ನೋಡಿದ್ದೇನೆ. ಒಂದು ಕಟ್ಟು ಕಟ್ಟಿಗೆ ತೆಗೆದುಕೊಂಡು ಹೋಗಲು ಆದಿವಾಸಿ ಮಹಿಳೆ ಅರಣ್ಯ ಇಲಾಖೆಯ ಗಾರ್ಡ್‌ಗಳಿಂದ ರೇಪಿನ ಶಿಕ್ಷೆಗೆ ಒಳಗಾಗಬೇಕಿತ್ತು. ಅವರು 3ರೂ. ದಂಡ ಕೊಡದಿದ್ದರೆ ಅರಣ್ಯ ಇಲಾಖೆಯ ಗಾರ್ಡುಗಳು ಅವರಿಂದ 300 ರೂ. ವಸೂಲಿ ಮಾಡುತ್ತಿದ್ದರು. ನಂತರ 1980ರಲ್ಲಿ ನಕ್ಸಲೈಟರು ಅಲ್ಲಿಗೆ ಬಂದರು. ಅವರು ಅರಣ್ಯ ಇಲಾಖೆಯ ಗಾರ್ಡುಗಳನ್ನು ಹಿಡಿದು ಕಟ್ಟಿ ಆದಿವಾಸಿಗಳಿಗೆ ಹೊಡೆಯಲು ಹೇಳುತ್ತಿದ್ದರು.

ಮೊದಲಬಾರಿ ಆದಿವಾಸಿಗಳು ತಮಗೂ ಕೆಲವು ಶಕ್ತಿ ಇದೆ ಎಂಬುದನ್ನು ಕಂಡುಕೊಂಡರು. ಪ್ರಭುತ್ವ ಗಾರ್ಡ್‌ಗಳನ್ನು ಶಿಕ್ಷಿಸುವ ಮೂಲಕ ಆದಿವಾಸಿಗಳನ್ನು ಸಬಲೀಕರಿಸಹುದಿತ್ತು! ಪ್ರಭುತ್ವ ಎಂದೂ ಕೂಡ ಮಹುವಾ ಹೂವಿಗೆ ಕನಿಷ್ಟ ದರವನ್ನು ನಿಗದಿ ಮಾಡಿರಲಿಲ್ಲ. ನಕ್ಸಲೈಟರು ಅದನ್ನು ಮಾಡಿದರು. ಆದಿವಾಸಿಗಳು ಎಂದೂ ಕೂಡ ಹಿಂಸೆಗೆ ಇಳಿದಿರಲಿಲ್ಲ. ಆದರೆ ಅವರು ತಮ್ಮ ದ್ವನಿಗಳನ್ನು ಎತ್ತಲು ಆರಂಭಿಸಿದರೋ ಪ್ರಭುತ್ವ ಪೋಲೀಸರನ್ನು ಕಳುಹಿಸುತಿತ್ತು. ನಕ್ಸಲೀಯರು ನನ್ನ ವಿರುದ್ಧ ಯಾಕೆ ಎಂದೂ ಹಿಂಸೆಗೆ ಇಳಿದಿರಲಿಲ್ಲ. ಅವರು ನನಗೆ ಮಂಚ ತಂದರು ಮತ್ತು ನನಗೆ ನೀರು ಕೊಟ್ಟು ಗುರೂಜಿ ಕುಳಿತುಕೊಳ್ಳಿ ಎಂದು ಹೇಳಿದರು. ಆರಂಭದಲ್ಲಿ ಮಾವೋವಾದಿಗಳು ನಮ್ಮ ವಲಯದಲ್ಲಿ ಸರ್ಕಾರಿ ಕಾರ್ಯಕ್ರಮಗಳು ಇರುವುದಿಲ್ಲ ಎಂದು ಘೋಷಿಸಿದರು. ಆದರೆ ನಾವು ಕೆಲಸ ಆರಂಭಿಸಿದ ಮೇಲೆ ನಮಗೊಂದು ಸಂದೇಶ ಕಳುಹಿಸಿ ನಾವು ಹಿಮಾಂಶುರವರ ಕೆಲಸಗಳಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಯಾಕೆಂದರೆ ಅವರಿಗೆ ಯಾವುದೇ ರಾಜಕೀಯ ಮಹತ್ವಕಾಂಕ್ಷೆ ಇಲ್ಲ ಎಂದರು.

ಪೋಲೀಸರ, ಅಮಾಯಕ ನಾಗರಿಕರ ಮೇಲಿನ ಮಾವೋವಾದಿಗಳ ಹಿಂಸೆಯ ಬಗ್ಗೆ ಜನರು ಮಾತಾಡುತ್ತಾರೆ. ನೀವು ಅರ್ಥ ಮಾಡಿಕೊಳ್ಳಬೇಕಾದರೆ ಹಿಂಸೆಯ ಆಳಕ್ಕೆ ಇಳಿದು ನೋಡಬೇಕು. ಒಬ್ಬ ಎಸ್.ಪಿ.ಓ ನನ್ನು ಕೊಂದರೆ ಅಮಾಯಕನನ್ನು ಕೊಂದರು ಎಂದು ಸರ್ಕಾರ ಪ್ರಕಟಿಸುತ್ತದೆ. ಮಾಧ್ಯಮ ಪೇಟೆಗೆ ತೆರಳುತ್ತದೆ. ಒಬ್ಬ ಆದಿವಾಸಿ ಕೊಲ್ಲಲ್ಪಟ್ಟಲ್ಲಿ ಮಾವೋವಾದಿ ಕಮಾಂಡರ್ ಕೊಲ್ಲಲ್ಪಟ್ಟ ಎಂದು ಹೇಳುತ್ತದೆ. ಆದಿವಾಸಿಗಳು ಸಾರ್ವಕಾಲಿಕವಾಗಿ ಭಯದಲ್ಲೇ ಬದುಕುತ್ತಿದ್ದಾರೆ. ಈ ವ್ಯಕ್ತಿ ಪೋಲೀಸರಿಗೆ ಮಾಹಿತಿ ನೀಡುತ್ತಾನೆ ಎಂದು ಅವರು ಭಾವಿಸಿದರೆ ನಾವೆಲ್ಲಿ ಅಡಗಿ ಕೂರುವುದು.... ನಿಮ್ಮನ್ನು ನಿರಂತರವಾಗಿ ಬೇಟೆ ಆಡುತ್ತಿದ್ದರೆ, ಮನೆಯನ್ನು ತೊರೆಯುವಂತೆ ಮಾಡಿದರೆ, ನೀವು ಪೋಲೀಸರಿಂದ ದೂರವಿರಲು ಸ್ಥಳವೊಂದನ್ನು ನೋಡಿದರೆ, ನಂತರ ಯಾರೋ ಬಂದಾಗ ನೀವು ಅನುಮಾನ ಪಟ್ಟು ಆತ ನಿಮ್ಮ ಇರುವಿಕೆ ಬಗ್ಗೆ ಪೋಲೀಸರಿಗೆ ಮಾಹಿತಿ ನೀಡಬಹುದು ಎಂದು ಭಾವಿಸಿದಲ್ಲಿ.......ಅದು ನನಗೆ ಒಂದು ಸಾರಿ ಆಗಿತ್ತು.

ಸರ್ಕಾರ ಪ್ರಜಾತಾಂತ್ರಿಕ ಗುಂಪುಗಳಿಗೆ ಹೇಳುತ್ತದೆ. ನೀವು ಹಿಂಸೆ ಬಿಡಬೇಕೆಂದು ಮಾವೋವಾದಿಗಳಿಗೆ ಹೇಳಿ ಎಂದು. ಆದರೆ ನಾವು ಹೇಳುತ್ತೇವೆ, ನೀವು ನಿಮ್ಮ ಪಡೆಗಳಿಗೆ ಅವರ ಹಿಂಸೆಯನ್ನು ನಿಲ್ಲಿಸಿರೆಂದು ಹೇಳಿ. ಮಾನವ ಹಕ್ಕು ಗುಂಪುಗಳು ಪೋಲೀಸರ ವಿರುದ್ಧ ದಾಖಲು ಮಾಡಿದ ಎಫ್.ಐ. ಆರ್.ಗಳನ್ನು ಕನಿಷ್ಟ ದಾಖಲಿಸಿಕೊಳ್ಳಿ. ನೀವು ಅಷ್ಟು ಕೂಡ ಮಾಡಲಾರಿರಿ ಮತ್ತೆ ನೀವು ಅವರಿಗೆ ಹೇಳುತ್ತೀರಿ ಹಿಂಸೆಯ ಬಗೆಗಿನ ನಿಮ್ಮ ನಿಲುವನ್ನು ಹೇಳಿ ಎಂದು. ನಾವು ಏನು ಹೇಳಬೇಕೆಂದು ನೀವು ಬಯಸುತ್ತೀರಿ.? ನಾವು ಅಲ್ಲಿ ಬದುಕುತ್ತಿದ್ದೇವೆ; ನಮಗೆ ಅಲ್ಲಿನ ಪರಿಸ್ಥಿತಿ ತಿಳಿದಿದೆ. ಕೆಲವು ಘಟನೆಗಳು ಭಯಂಕರವೆಂದು ಹೊರಗಿನಿಂದ ನೋಡುವವರಿಗೆ ಕಾಣಿಸಬಹುದು. ಕೆಲವು ಎಸ್.ಪಿ.ಓ. ಗುಂಪುಗಳು ಹಳ್ಳಿಗಳ ಮೇಲೆ ಹಳ್ಳಿಗಳನ್ನು ಸುಡುತ್ತಾ ಹೋದಾಗ ಅದು ಸಂಭವಿಸಿದ್ದು. ಹಳ್ಳಿಗರು ಅವರನ್ನು ಸುತ್ತುವರೆದು ಕೊಂದು ಹಾಕಿದರು.

ಸರ್ಕಾರ ಕಾಡಿನಲ್ಲಾದ ಹೆಲಿಕಾಪ್ಟರ್ ಪತನದಲ್ಲಿ ಬದುಕುಳಿದವರನ್ನು ಹುಡುಕಲು ಸಹಾಯ ಮಾಡಬೇಕೆಂದು ನನ್ನನ್ನು ಕೇಳಿತ್ತು. ಅವರು ಕಾಡಿನ ಒಳಗೆ ಹೋಗಲು ಬಹಳ ಭಯ ಹೊಂದಿದ್ದರು. ಆ ಹೆಲಿಕಾಪ್ಟರ್‌ನಲ್ಲಿ ಇದ್ದ ಕುಟುಂಬದ ವರು ಬಹಳ ದಿಕ್ಕೆಟ್ಟವರಂತೆ ಇದ್ದರು. ನಾನು ಮಾತನಾಡಿ ಕಾಡಿನ ಒಳಗೆ ಹೋದೆ ಆದರೆ ಪೋಲೀಸರು ನನ್ನನ್ನು ವಂಚಿಸಿದರು. ನನ್ನನ್ನು ಹಿಂಬಾಲಿಸುವುದಿಲ್ಲ ಎಂದು ಭರ ವಸೆ ನೀಡಿದ್ದ ಅವರು ಹಿಂಬಾಲಿಸಿ ಬಂದರು.

ಹಾಗೆ ಬರುವಾಗ ದಾರಿಯಲ್ಲಿ ಕೋಳಿಗಳನ್ನು, ಸಾರಾಯಿಯನ್ನು ಅವರ ಮಾಮೂಲಿ ಶೈಲಿಯಲ್ಲಿ ಲೂಟಿ ಮಾಡಿದರು...ನಾನೇ ಪೋಲೀಸರನ್ನು ಕರೆದು ತಂದೆ ಎಂದು ಮಾವೋವಾದಿಗಳು ಭಾವಿಸಿದರು. ಅವರು ಸತ್ಯ ತಿಳಿದುಕೊಂಡಿರದಿದ್ದರೆ ನನ್ನನ್ನು ಮರವೊಂದಕ್ಕೆ ಕಟ್ಟಿ ಹಾಕಿ ಮುಗಿಸಿ ಬಿಡುತ್ತಿದ್ದರು. ವಂಚನೆ ಮಾಡುವವರು ಅವರೊಳಗಿನವರೇ ಆಗಿದ್ದರೂ ಮುಗಿಸಿ ಬಿಡುತ್ತಾರೆ ಅವರು. ನಾನು ಆ ಹಳ್ಳಿಯಲ್ಲಿ 3ದಿನಗಳನ್ನು ಕಳೆದೆ. ಅಲ್ಲಿ 40 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಯಾರೂ ಇರಲಿಲ್ಲ.-ಅವರು ಯಾರೂ ಅದಕ್ಕಿಂತಲೂ ಹೆಚ್ಚಿಗೆ ಬದುಕುವುದಿಲ್ಲ. ಮಕ್ಕಳು ಪೌಷ್ಟಿಕಾಂಶ ಕೊರತೆಯಿಂದ ಬಳಲುತ್ತಿದ್ದರು. 8 ವರ್ಷದ ಬಾಲಕ ನಮ್ಮನ್ನು ಕಾಯುತ್ತಿದ್ದ. ಅವನಲ್ಲಿ ಒಂದು ಟೋಪಿ ಹಾಗೂ ಒಂದು ವಿಶಲ್ ಇತ್ತು ಅವುಗಳ ಬಗ್ಗೆ ಅವನಿಗೆ ಹೆಮ್ಮೆ ಇತ್ತು. ನಾನು ಅವನಲ್ಲಿ ಕೇಳಿದೆ ಯಾವಾಗ ಪೋಲಿಸರು ಆ ಹಳ್ಳಿಗೆ ಬಂದಿದ್ದರು? ಎಂದು. ಆತ ಹೇಳಿದ "2 ವರ್ಷಗಳ ಹಿಂದೆ" ಎಂದು. "ಅವರೇನು ಮಾಡಿದರು"? ನಾನು ಕೇಳಿದೆ. "ಅವರು 40 ಮನೆಗಳನ್ನು ಸುಟ್ಟರು. ಮೂರು ಜನರನ್ನು ಸಾಯಿಸಿದರು. ಅಲ್ಲಿ ನಿಂತಿರುವ ಮಹಿಳೆಯನ್ನು ಬಲಾತ್ಕರಿಸಿದರು" ಎಂದು ಹೇಳಿದ. ಈ ಹಳ್ಳಿ ಬೈಲಾಡಿಲಾದ ಹಿಂದೆ ಇದೆ. ಅದು ಕಲ್ಲಿದ್ದಲಿನ ಧೂಳಿನಿಂದ ಆವೃತವಾಗಿದೆ. ಅಲ್ಲಿ ಶಾಲೆ ಇಲ್ಲ. ಇದು ಭಾರತೀಯ ಅಭಿವೃದ್ಧಿ ಮಾದರಿ.

ಕೇವಲ ನ್ಯಾಯ ಮಾತ್ರ ಶಾಂತಿಯನ್ನು ತರಬಲ್ಲದು

ಸರ್ಕಾರ ಪ್ರಜಾತಾಂತ್ರಿಕ ಗುಂಪುಗಳಿಗೆ ಹೇಳುತ್ತದೆ. ನೀವು ಹಿಂಸೆ ಬಿಡಬೇಕೆಂದು ಮಾವೋವಾದಿಗಳಿಗೆ ಹೇಳಿ ಎಂದು. ಆದರೆ ನಾವು ಹೇಳುತ್ತೇವೆ, ನೀವು ನಿಮ್ಮ ಪಡೆಗಳಿಗೆ ಅವರ ಹಿಂಸೆಯನ್ನು ನಿಲ್ಲಿಸಿರೆಂದು ಹೇಳಿ. ಮಾನವ ಹಕ್ಕು ಗುಂಪುಗಳು ಪೋಲೀಸರ ವಿರುದ್ಧ ದಾಖಲು ಮಾಡಿದ ಎಫ್.ಐ.ಆರ್. ಗಳನ್ನು ಕನಿಷ್ಟ ದಾಖಲಿಸಿಕೊಳ್ಳಿ, ನೀವು ಅಷ್ಟು ಕೂಡ ಮಾಡಲಾರಿರಿ ಮತ್ತೆ ನೀವು ಅವರಿಗೆ ಹೇಳುತ್ತೀರಿ ಹಿಂಸೆಯ ಬಗೆಗಿನ ನಿಮ್ಮ ನಿಲುವನ್ನು ಹೇಳಿ ಎಂದು.- ನಾವು ಏನು ಹೇಳಬೇಕೆಂದು ನೀವು ಬಯಸುತ್ತೀರಿ.? ನಾವು ಅಲ್ಲಿ ಬದುಕುತ್ತಿದ್ದೇವೆ; ನಮಗೆ ಅಲ್ಲಿನ ಪರಿಸ್ಥಿತಿ ತಿಳಿದಿದೆ. ಕೆಲವು ಘಟನೆಗಳು ಭಯಂಕರವೆಂದು ಹೊರಗಿನಿಂದ ನೋಡುವವರಿಗೆ ಕಾಣಿಸಬಹುದು. ಕೆಲವು ಎಸ್.ಪಿ.ಓ. ಗುಂಪುಗಳು ಹಳ್ಳಿಗಳ ಮೇಲೆ ಹಳ್ಳಿಗಳನ್ನು ಸುಡುತ್ತಾ ಹೋದಾಗ ಅದು ಸಂಭವಿಸಿದ್ದು. ಹಳ್ಳಿಗರು ಅವರನ್ನು ಸುತ್ತುವರೆದು ಕೊಂದು ಹಾಕಿದರು.

ಕಳೆದ ಐದು ವರ್ಷಗಳಲ್ಲಿ ದಂತೆವಾಡಕ್ಕೆ ಯಾವುದೇ ರಾಜಕೀಯ ನಾಯಕರುಗಳು ಭೇಟಿ ಕೊಟ್ಟು ಆದಿವಾಸಿಗಳ ಸಮಸ್ಯೆಗಳೇನು ಎಂದು ಕೇಳಿಲ್ಲ. ಹಾಗಾಗಿ ನಾನು ಅಂದುಕೊಂಡೆ ಆದಿವಾಸಿಗಳನ್ನು ದೆಹಲಿಗೆ ಕರೆದು ಕೊಂಡು ಹೋಗಬೇಕು ಎಂದು. ಅಲ್ಲಿ ದೊಡ್ಡ ಹಂಗಾಮ ನಡೆಯುತ್ತದೆ ಎಂದು ಅಂದುಕೊಂಡೆ. ನಾನು ಈ ಗಾಯಗೊಂಡ ಆದಿವಾಸಿಗಳನ್ನು ಸಂವಿದಾನ ಕ್ಲಬ್‌ಗೆ ಕರೆದುಕೊಂಡು ಹೋದೆ. ಏನೂ ಆಗಲಿಲ್ಲ. ಆ ರೀತಿ ಇದೆ ನಗರವಾಸಿಗಳ ಪರಿಸ್ಥಿತಿ.; ಹಳ್ಳಿಗಳಲ್ಲಿ ನಡೆಯುತ್ತಿರುವುದರ ಬಗ್ಗೆ ಅವರು ಆಸಕ್ತಿ ವಹಿಸುವುದಿಲ್ಲ. ಅವರು ಶಾಂತಿಯನ್ನು ಬಯಸುವವರು, ಅವರು ಮಾತ್ರ ಆರಾಮದಾಯಕ ಜೀವನ ನಡೆಸುವವರು. ಅವರು ತಮ್ಮ ಆರಾಮದಾಯಕ ಜೀವನಕ್ಕೆ ತೊಂದರೆ ಆಗಬಾರದೆಂದು ಶಾಂತಿಯನ್ನು ಬಯಸುತ್ತಿದ್ದಾರೆ. ಆದರೆ ಯಾರು ಧಾಳಿಗಳನ್ನು ಸಹಿಸಿಕೊಳ್ಳುತ್ತಿದ್ದಾರೋ ಅವರಿಗಿರುವ ಆದ್ಯತೆ ನ್ಯಾಯ. ವಿನೋಬಾಬಾವೆ ಹೇಳಿದ್ದರು. "ಎಲ್ಲಿ ಅನ್ಯಾಯ ಇದೆಯೋ ಅಲ್ಲಿ ಶಾಂತಿ ಇರಲು ಸಾದ್ಯವಿಲ್ಲ" ಎಂದು. ಆದರೆ ಸರ್ಕಾರ ನ್ಯಾಯದ ಬಗ್ಗೆ ಮಾತನಾಡುವುದಿಲ್ಲ.

ಯಾಕೆ ಲಕ್ಷಾಂತರ ಜನರು ಶಸ್ತ್ರಗಳನ್ನು ಕೈಗೆತ್ತಿಕೊಂಡಿದ್ದಾರೆ.? ನಮಗೆ, ಮದ್ಯಮ ವರ್ಗಕ್ಕೆ ಅದು ಅರ್ಥವಾಗುವುದಿಲ್ಲ. ನಾವು ನಗರಗಳಲ್ಲಿ ವಾಸ ಮಾಡುತ್ತಿದ್ದೇವೆ; ಪೋಲೀಸರು ನಮಗಾಗಿ ಇದ್ದಾರೆ; ಸರ್ಕಾರ ನಮಗಾಗಿ ಇದೆ. ನಾವು ಒಂದು ಕಡೆ ಇದ್ದೇವೆ. ಇನ್ನೊಂದು ಕಡೆಯ ಜನರಿಗೆ ಪೋಲೀಸರಿಲ್ಲ, ಸರ್ಕಾರವಿಲ್ಲ. ಅವರಿಗೆ ತಿನ್ನಲು ಏನೂ ಇಲ್ಲ. ಅವರೇ ಶಸ್ತ್ರ ಹಿಡಿದುಕೊಂಡವರು. ಈ ಜನಗಳು ಹಲವಾರು ವರ್ಷಗಳಿಂದ ತಮ್ಮ ಹಕ್ಕುಗಳನ್ನು

ಕಳೆದು ಕೊಂಡಿದ್ದಾರೆ. ಅವರು ಈ ರಚನೆಯ ಹೊರಗಿದ್ದಾರೆ– ಇದು ಅವರ ಹೋರಾಟ. ಒಂದು ವೇಳೆ ನೀವು ಈ ಭೂಮಿಯ ಎಲ್ಲಾ ಜಮೀನುಗಳು ಯಾರಿಗೆ ಸೇರಿದ್ದು ಎಂದು ಕೇಳಿದರೆ.? ಸಾಮಾನ್ಯವಾಗಿ ಉತ್ತರ ನಮ್ಮೆಲ್ಲರಿಗೂ ಸೇರಿದ್ದು ಎಂದೇ ಆಗಿರುತ್ತದೆ. ಆದರೆ ವಾಸ್ತವ ಏನೆಂದರೆ ಕೆಲವರಿಗೆ ಹೆಚ್ಚು ಕೆಲವರಿಗೆ ಕಡಿಮೆ ಇದೆ. ನೀವು ನಗರದಲ್ಲಿ ವಾಸಿಸುತ್ತೀರಿ ಹಾಗಾಗಿ ನಿಮಗೆ ಹೆಚ್ಚು, ನೀವು ಬ್ರಾಹ್ಮಣರಾಗಿದ್ದೀರಿ ಹಾಗಾಗಿ ನಿಮಗೆ ಹೆಚ್ಚು, ನೀವು ವಿದ್ಯಾವಂತರಾಗಿದ್ದೀರಿ ಹಾಗಾಗಿ ನಿಮಗೆ ಹೆಚ್ಚು. ಮರೈನ್ ಡ್ರೈವ್‌ನಲ್ಲಿ ಹುಟ್ಟಿದ ಮಗು ಧಾರಾವಿಯಲ್ಲಿ ಹುಟ್ಟಿದ ಮಗುವಿನ ಮನೆಯನ್ನು ನೆಲ ಸಮ ಮಾಡಬಹುದು. ಅದು ಯಾಕೆ ಅದಲು ಬದಲಾಗುವುದಿಲ್ಲ. ?

ಅಸಮಾನತೆ ಈ ವ್ಯವಸ್ಥೆಯೊಳಗೆ ಅಂತರ್ಗತವಾಗಿ ಸೇರಿಹೋಗಿದೆ. ಯಾರು ಹೆಚ್ಚು ಸಂಪನ್ಮೂಲಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿರುತ್ತಾರೋ ಅವರ ಎಲ್ಲಾ ಭಾವನೆಗಳು ಈ ವ್ಯವಸ್ಥೆಯ ಮೌಲ್ಯದ ಭಾಗವಾಗುತ್ತವೆ. ಮತ್ತು ಹಾಗೆಯೇ ನಮ್ಮ ರಾಜಕೀಯ ವ್ಯವಸ್ಥೆಯದು ಸಹ. ಈ ಎರಡನ್ನೂ ಕೂಡ ಆರ್ಥಿಕ ವ್ಯವಸ್ಥೆ ಬೆಂಬಲಿಸುತ್ತದೆ. ಇದೇ ಈ ವ್ಯವಸ್ಥೆಯ ಮೂಲಭೂತ ರಚನೆಯಾಗಿದೆ. ಈ ರಚನೆಯೇ ಬಡವರನ್ನು ಬಡವರನ್ನಾಗಿಯೂ ಶ್ರೀಮಂತರನ್ನು ಶ್ರೀಮಂತರನ್ನಾಗಿಯೂ ಉಳಿಸುತ್ತದೆ. ನಾವು ಈ ವ್ಯವಸ್ಥೆಯಿಂದ ಸಂತೃಪ್ತರಾಗಿದ್ದೇವೆ. ಆದರೆ ಯಾರು ಇದರ ಆಘಾತಗಳನ್ನು ತಾಳಿ ಕೊಂಡಿದ್ದಾರೋ ಅವರ ಪರಿಸ್ಥಿತಿ ಏನು? ಅವರು ಇದನ್ನು ಒಡೆಯಬೇಕೆಂದು ಬಯಸುತ್ತಾರೆ. ಈ ಹೋರಾಟ ರಾಜಕಿಕ ಹಿಂಸೆಯ ವಿರುದ್ಧ. ಈ ರಚನೆ ಬದಲಾಗಿ ಸಮಾನತೆ ಸಿಗುವವರೆಗೂ ಇದು ಕೊನೆಗೊಳ್ಳುವುದಿಲ್ಲ.

ಬಾಧಿತನಾಗಿರುವ ವ್ಯಕ್ತಿ ಹೋರಾಡುತ್ತಾನೆ. ಇದು ಬಡವರ ಹೋರಾಟ. ನಕ್ಸಲೈಟರು ಅದರ ಜೊತೆಗೂಡಿದ್ದಾರೆ ಅಷ್ಟೆ. ಒಂದು ವೇಳೆ ಮಾರ್ಕ್ಸ್ ಆಗಲಿ, ಗಾಂಧಿ ಆಗಲೀ ಇಲ್ಲದಿದ್ದಲ್ಲಿ ಬಡಜನರು ಹೋರಾಡುತ್ತಿರುಲಿಲ್ಲವೆ.? ಅವರಿಗೆ ನಕ್ಸಲೈಟರಾಗಲೀ ಗಾಂಧಿವಾದಿಗಳಾಗಲೀ ಅವಶ್ಯಕತೆಯಿಲ್ಲ. ಆದರೆ ಕೆಲವು ವೇಳೆಗಳಲ್ಲಿ ಒಬ್ಬ ವಿನೋಬಾ, ಒಬ್ಬ ಗಾಂಧಿ, ಅಥವಾ ಮಾವೋವಾದಿಗಳು ಅವರ ಹೋರಾಟಗಳಲ್ಲಿ ಜೊತೆಗೂಡುತ್ತಾರೆ. ಕೇಂದ್ರ ಬಡವರ ಹೋರಾಟವನ್ನು ಸೈನ್ಯದ ಮೂಲಕ ದಮನ ಮಾಡಬಹುದೆಂದು ಕೊಂಡಿದ್ದರೆ, ಅವರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಕೆಲವು ವೇಳೆಗಳಲ್ಲಿ ಅತಿಯಾದ ದಮನ ಹೋರಾಟಗಾರರನ್ನು ಮತ್ತಷ್ಟು ಉದ್ದೀಪಿಸುತ್ತದೆ.

ಕೇಂದ್ರ ಒಂದು ವೇಳೆ ನಿಜವಾಗಿಯೂ ಶಾಂತಿಯನ್ನು ಬಯಸುತ್ತಿದ್ದಲ್ಲಿ ಅದನ್ನು ಒಂದು ವಾರದಲ್ಲಿಯೇ ಸಾಧಿಸಬಹುದು. ಅವರು ಆದಿವಾಸಿಗಳ ಮಧ್ಯೆ ಹೋಗಿ ಸಂತೋಷವನ್ನು ಹರಡಬೇಕು. ಅಂಗನವಾಡಿಗಳನ್ನು, ಆರೋಗ್ಯ ಸೇವೆಗಳನ್ನು, ಶಾಲೆಗಳನ್ನು ತೆರೆಯಬೇಕು. ಬದಲಿಗೆ ನೀವು ಮೇಲಿಂದ ಮೇಲೆ ಕಿರುಕುಳಗಳನ್ನು ಕೊಡುತ್ತಾ ಅವರನ್ನು ನಿದಾನವಾಗಿ ಕೊಲ್ಲಬಹುದೆಂದು ತಿಳಿದುಕೊಂಡಿದ್ದರೆ, ಬೆಂಕಿಯನ್ನು ರಗ್ ಎಳೆದು ನಂದಿಸಬಹುದೆಂದು ಕೊಂಡಿದ್ದರೆ ರಗ್ಗಿಗೆ ಆಘಾತ ಆಗುತ್ತದೆ. ನೀವು ಕೋಬ್ರಾಗಳನ್ನು ಕಳುಹಿಸುತ್ತೀರಾ, ಅವರು ಹಿರಿಯ ಮನುಷ್ಯನ್ನು ಅವರ ಹಾಸಿಗೆಯಲ್ಲೇ ಇರಿದು ಕೊಲ್ಲುತ್ತಾರೆ. ಮಾವೋವಾದಿಗಳು ನೀವು ಏನು ಮಾಡಬಹುದೆಂದು ಊಹಿಸಿದ್ದರೋ ಅದನ್ನೇ ನೀವು ಮಾಡುತ್ತಿದ್ದೀರಿ. ಅವರು ಹಲವಾರು ವರ್ಷಗಳಿಂದ ಪ್ರಭುತ್ವ ಶೋಷಕವೆಂದು ಆದಿವಾಸಿಗಳ ಮಧ್ಯೆ ಹೇಳುತ್ತಾ ಬಂದಿದ್ದಾರೆ.

ಇಂದು ಪ್ರಪಂಚಾದ್ಯಂತ ಬಡವರನ್ನು ಹೊರೆ ಎನ್ನುವಂತೆ, ಅವರು ಸಂಪನ್ಮೂಲಗಳ ಮೂಲಗಳನ್ನು ಬರಿದು ಮಾಡುತ್ತಿದ್ದಾರೆ ಎಂಬಂತೆ ನೋಡಲಾಗುತ್ತಿದೆ. ಅವರನ್ನು ಇನ್ನಿಲ್ಲದಂತೆ ಮುಗಿಸಿ ಹಾಕಬೇಕು ಹಾಗೆ ಮಾಡಿ ಉಳಿದವರಾದ ನಾವುಗಳು ಭೂಮಿಯ ಎಲ್ಲದರ ಮೇಲೂ ಅಧಿಪತ್ಯ ಸಾಧಿಸಬಹುದಲ್ಲ. ಆದಿವಾಸಿಗಳೇ ಅತೀ ಹೆಚ್ಚು ಇದಕ್ಕೆ ಈಡಾಗುವವರು. ನಮ್ಮ ಸರ್ಕಾರ ಆದಿವಾಸಿಗಳ ಮಾರಣಹೋಮದ ಯೋಜನೆ ಮಾಡುತ್ತಿದೆ. ಇದು ನಮ್ಮ ಆಧುನಿಕ ನಾಗರಿಕತೆ ಸಾಗುತ್ತಿರುವ ದಿಕ್ಕು. ನಾವು ಇದನ್ನು ಬೆಂಬಲಿಸಬೇಕೆ? ನಿಮಗೆ ಲಕ್ಷಾಂತರ ಜನರನ್ನು ಕೊಲ್ಲಲು ಸಾಧ್ಯವಿದೆಯೆ? ನೀವು ಪ್ರಯತ್ನಿಸಿ. ಆದರೆ ಅವರೆಲ್ಲಾ ಎಚ್ಚರಗೊಂಡು ನಿಮ್ಮನ್ನು

ಕೇಂದ್ರ ಒಂದು ವೇಳೆ ನಿಜವಾಗಿಯೂ ಶಾಂತಿಯನ್ನು ಬಯಸುತ್ತಿದ್ದಲ್ಲಿ ಅದನ್ನು ಒಂದು ವಾರದಲ್ಲಿಯೇ ಸಾಧಿಸಬಹುದು. ಅವರು ಆದಿವಾಸಿಗಳ ಮಧ್ಯೆ ಹೋಗಿ ಸಂತೋಷವನ್ನು ಹರಡಬೇಕು. ಆರೋಗ್ಯ ಸೇವೆಗಳನ್ನು–ಶಾಲೆಗಳನ್ನು ತೆರೆಯಬೇಕು. ಬದಲಿಗೆ ನೀವು ಮೇಲಿಂದ ಮೇಲೆ ಕಿರುಕುಳಗಳನ್ನು ಕೊಡುತ್ತಾ ಅವರನ್ನು ನಿಧಾನವಾಗಿ ಕೊಲ್ಲಬಹುದೆಂದು ತಿಳಿದುಕೊಂಡಿದ್ದರೆ, ಬೆಂಕಿಯನ್ನು ರಗ್ ಎಳೆದು ನಂದಿಸಬಹುದೆಂದು ಕೊಂಡಿದ್ದರೆ ರಗ್ಗಿಗೆ ಆಘಾತ ಆಗುತ್ತದೆ. ನೀವು ಕೋಬ್ರಾಗಳನ್ನು ಕಳುಹಿಸುತ್ತೀರಾ, ಅವರು ಹಿರಿಯ ಮನುಷ್ಯನ್ನು ಅವರ ಹಾಸಿಗೆಯಲ್ಲೇ ಇರಿದು ಕೊಲ್ಲುತ್ತಾರೆ. ಮಾವೋವಾದಿಗಳು ನೀವು ಏನು ಮಾಡಬಹುದೆಂದು ಊಹಿಸಿದ್ದರೋ ಅದನ್ನೇ ನೀವು ಮಾಡುತ್ತಿದ್ದೀರಿ. ಅವರು ಹಲವಾರು ವರ್ಷಗಳಿಂದ ಪ್ರಭುತ್ವ ಶೋಷಕವೆಂದು ಆದಿವಾಸಿಗಳ ಮಧ್ಯೆ ಹೇಳುತ್ತಾ ಬಂದಿದ್ದಾರೆ. ಇಂದು ಪ್ರಪಂಚಾದ್ಯಂತ ಬಡವರನ್ನು ಹೊರೆ ಎನ್ನುವಂತೆ, ಅವರು ಸಂಪನ್ಮೂಲಗಳ ಮೂಲಗಳನ್ನು ಬರಿದು ಮಾಡುತ್ತಿದ್ದಾರೆ ಎಂಬಂತೆ ನೋಡಲಾಗುತ್ತಿದೆ. ಅವರನ್ನು ಇನ್ನಿಲ್ಲದಂತೆ ಮುಗಿಸಿ ಹಾಕಬೇಕು ಹಾಗೆ ಮಾಡಿ ಉಳಿದವರಾದ ನಾವುಗಳು ಭೂಮಿಯ ಎಲ್ಲದರ ಮೇಲೂ ಅಧಿಪತ್ಯ ಸಾಧಿಸಬಹುದಲ್ಲ.

ಕೊಲ್ಲಲು ಬಂದಾಗ ನಿಮ್ಮನ್ನು ನೀವು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಬಡವರಲ್ಲಿ ಮೂರು ಬಗೆಯಿವೆ. 1) ನಿಮ್ಮ ಸಂಪತ್ತಿನಿಂದ ಬದುಕುವವರು–ಬಲೂನ್ ಮಾರುವವರು, ಮನೆ ಕೆಲಸ ಮಾಡುವವರು, ಕಟ್ಟಡ ಕೆಲಸಗಾರರು 2) ತಾವು ಶ್ರೀಮಂತರಾಗುವ ಯೋಗ್ಯತೆ ಹೊಂದಿಲ್ಲ ಎಂದು ತಿಳಿದವರು; ಅವರು ತಮ್ಮನ್ನು ಕೆಳಜಾತಿಯವರು ಎಂದು ತಿಳಿದು ಕೊಂಡಿರುವವರು; ಅವಿದ್ಯಾವಂತರು ಅವರು ಎಂದಿಗೂ ಶ್ರೀಮಂತರಾಗುವುದಿಲ್ಲ ಮತ್ತು 3) ಆದಿವಾಸಿಗಳ ರೀತಿ ಇರುವವರು, ನೀವು ಶ್ರೀಮಂತರಾಗಲು ಅವರ ಜಮೀನನ್ನು ಆಕ್ರಮಿಸುವವರೆಗೂ ಸಂತೋಷದಿಂದ ಅವರು ಕಾಡಿನಲ್ಲಿ ಇರುವವರು. ಹಾಗಾಗೆ ಅವರು ಶಸ್ತ್ರ ಕೈಗೆತ್ತಿಕೊಂಡಿದ್ದಾರೆ. ನೀವು ಚಿದಂಬರಂ ಬಳಿಗೆ ಓಡುತ್ತಿದ್ದೀರಿ. ಒಮ್ಮೆ ಉಳಿದ ಎರಡು ಬಗೆಯವರು ಮೂರನೇ ಬಗೆಯವರ ಜೊತೆಗೂಡಿದರೆ ನಿಮ್ಮದು ಎಲ್ಲವೂ ನಾಶವಾಗುತ್ತವೆ. ಈ ಬಗ್ಗೆ ನಮ್ಮ ನಿಲುವೇನು? ವಿನೋಬಾ ಬಾವೆ ಹೇಳುತ್ತಿದ್ದರು. "ಅನ್ಯಾಯವನ್ನು ಒಪ್ಪಿಕೊಳ್ಳುವುದು ತಪ್ಪು: ನಾನು ಅಂತಹುದರ ವಿರುದ್ಧ ಎದ್ದು ನಿಲ್ಲಲು ಬಡವರನ್ನು ಪ್ರೇರೇಪಿಸುತ್ತೇನೆ" ಎಂದು. ಮಧ್ಯಮ ವರ್ಗದವರ ಬಳಿಗೆ ಇಲ್ಲದೇ ಚತ್ತೀಸ್ ಗಡದಲ್ಲಿ ಇವೆಲ್ಲಾ ನಡೆಯುತ್ತಿರುವುದಲ್ಲ.

ನೀವು ಹಿಂಸೆ ಮತ್ತು ಹತ್ಯಾಕಾಂಡದ ಬೀಜಗಳನ್ನು ಬಿತ್ತುತ್ತಿದ್ದೀರಿ. ಸಲ್ವಾ ಜುಡುಂಗಿಂತಲೂ ಮೊದಲು 5000 ಮಾವೋವಾದಿಗಳಿದ್ದರು. ಸಲ್ವಾಜುಡುಂ ನಂತರ ಮಾವೋವಾದಿಗಳ ಸಂಖ್ಯೆ 1,10,000ಕ್ಕೆ– 22 ಪಟ್ಟು– ಏರಿದೆ. ಆಪರೇಷನ್ ಗ್ರೀನ್ ಹಂಟ್, ಎಲ್ಲಾ ಜೀವಂತ ಆದಿವಾಸಿಗಳನ್ನು ಪೂರ್ಣಾವಧಿ ಮಾವೋವಾದಿಗಳನ್ನಾಗಿಸುತ್ತದೆ. ಮಾವೋವಾದಿಗಳ ಸಂಖ್ಯೆ ಏರಿಕೆಯಾದಾಗ ಅವರು ತಮ್ಮ ನೆಲೆಗಳನ್ನು ವಿಸ್ತರಿಸಿಕೊಳ್ಳುತ್ತಾರೆ. ಅವರು ಮುಂಬಯಿ, ದೆಹಲಿಗಳಿಗೂ ತಲುಪುತ್ತಾರೆ. ಪಡೆ (ಸರ್ಕಾರಿ) ಗಳಲ್ಲಿನ ಯುವಜನರ ಬಗ್ಗೆಯೂ ನನಗೆ ಖೇದವಿದೆ. ಅವರು ಎರಡೂ ಕಡೆಯಿಂದಲೂ ಕಳೆದುಕೊಳ್ಳುವವರೆ, ಅವರು ಅರೆ ಸೈನಿಕ ಹಾಗೂ ಪೋಲೀಸ್ ಪಡೆ ಸೇರಿಕೊಳ್ಳದಿದ್ದಲ್ಲಿ ಹಸಿವಿನಿಂದ ಸಾಯುತ್ತಾರೆ. ಒಮ್ಮೆ ಅವರು ಸೇರಿಕೊಂಡ ಮೇಲೂ ಸಾಯುತ್ತಾರೆ, ನಿಶ್ಚಿತವಾಗಿ. ಶ್ರೀಮಂತಿಕೆಯ ವ್ಯಾಪಾರಿ ಕಾರ್ಪೋರೇಷನ್‌ಗಳ ಲಾಭಕ್ಕಾಗಿ ಯಾಕೆ ನೀವು ಈ ಯುವಕರನ್ನು ಸಾವಿನೆಡೆಗೆ ಕಳುಹಿಸುತ್ತೀರಿ? ನೀವು ಯುವ ಜನರನ್ನು ಬೇರೊಂದು ಯುವ ಜನರ ವಿರುದ್ಧ ಯುದ್ಧ ಮಾಡುವಂತೆ ಮಾಡುತ್ತಿದ್ದೀರಿ, ಆ ಮೂಲಕ ಕಾರ್ಪೋರೇಷನ್‌ಗಳು ಹೆಚ್ಚು ಸಂಪತ್ತು ಕ್ರೋಢೀಕರಿಸಲು ಸಾಧ್ಯವಾಗಬಹುದು.

ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಬನ್ನಿ ಬಸ್ತರಿಗೆ, ಆದಿವಾಸಿಗಳ ಜೊತೆಗೆ ನಿಲ್ಲಿ.

[ಮುಂಬಯಿ ಪ್ರೆಸ್ ಕ್ಲಬ್‌ನಲ್ಲಿ ಗಾಂಧಿವಾದಿ ಕಾರ್ಯಕರ್ತ, ವನವಾಸಿ ಚೇತನ ಆಶ್ರಮದ ಹಿಮಾಂಶು ಕುಮಾರ್ 31 ಅಕ್ಟೋಬರ್ 2009 ರಂದು ದಂತೆವಾಡ ಮತ್ತು ಚತ್ತೀಸ್‌ಗಡದಲ್ಲಿರುವ ಪರಿಸ್ಥಿತಿಯ ಕುರಿತು ಹಿಂದಿಯಲ್ಲಿ ಮಾಡಿದ ಭಾಷಣದ ಸಾರಾಂಶ ಇದು. ಇದನ್ನು ಜ್ಯೋತಿ ಪುನ್‌ವಾನಿಯವರು(jyoti.punwani@ gmail.com) ವರದಿ ಮಾಡಿ ಇಂಗ್ಲೀಷಿಗೆ ಅನುವಾದ ಮಾಡಿದ್ದರು. ಇಂಗ್ಲೀಷಿನ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯ ನವಂಬರ್ 21, 2009ರ ಸಂಚಿಕೆಯಲ್ಲಿ ಪ್ರಕಟವಾದ ಆ ಲೇಖನದ ಕನ್ನಡಾನುವಾದ ಇದು.] □

ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್: ಆಧುನಿಕ ಭಾರತವನ್ನು ರೂಪಿಸಿದ ಚಿಂತಕರು: ಒಂದು ಮರುನೋಟ

ಡಿ. ಎಸ್. ನಾಗಭೂಷಣ

Modernity ಗೆ ಸಂವಾದಿಯಾದ ಆಧುನಿಕತೆಯ ಅಕ್ಷರಶಃ ಅರ್ಥ, ಇಂದಿಗೆ ತಕ್ಕ ನಡೆ ಎಂದು. ಅಂದರೆ ಈ ಕಲ್ಪನೆ ಹುಟ್ಟುವ ಹಿಂದಿನವರೆಗೆ ಕಾಲ ಜಡಗಟ್ಟಿತ್ತೆಂದೇ ಇದರ ಅರ್ಥವಾಗಿರುತ್ತದೆ. ಹಾಗಾಗಿ ಆಧುನಿಕತೆ ಎಂದರೆ, ಚರಿತ್ರೆ ಜಡವಾಗಿದ್ದ ಕಾಲದಿಂದ ಬಿಡುಗಡೆ ಎಂದೂ ಅರ್ಥವಾದೀತು. ಮೂಲತಃ ಇದು ೧೫ನೇ ಶತಮಾನದಲ್ಲಿ ಯೂರೋಪ್‌ನಲ್ಲಿ ಸಂಭವಿಸಿತೆಂದು ಹೇಳಲಾದ 'ಪುನರುಜ್ಜೀವನ' ದಿಂದ ಮೂಡಿದ ಕಲ್ಪನೆ. ಇದು ಯೂರೋಪಿನ 'ಜ್ಞಾನಯುಗ' ಕೂಡಾ. ಏಕೆಂದರೆ ಇದು ಆವರೆಗೆ ಇದ್ದ ಆಲೋಚನಾ ಕ್ರಮ ಮತ್ತು ಅದನ್ನಾಧರಿಸಿದ ವ್ಯವಸ್ಥೆಯನ್ನು ಪ್ರಶ್ನಿಸಿದ ಯುಗ. ಮನುಷ್ಯ ತನ್ನನ್ನು ಮತ್ತು ಜಗತ್ತನ್ನು ನೋಡುವ ಕ್ರಮವನ್ನೇ ಬದಲಾಯಿಸಿಕೊಂಡ ಯುಗ. ವಿಜ್ಞಾನ ಹೊಸ ಅರ್ಥ ಪಡೆದ ಯುಗ.

ಸ್ನೇಹಿತರೇ, ಮೊದಲಿಗೆ ನಾನು ಇಂತಹ ಮಹತ್ವದ ಮತ್ತು ವ್ಯಾಪಕ ಚರ್ಚೆಗೆ ಕಾರಣಬಹುದಾದ ವಿಚಾರ ಸಂಕಿರಣವನ್ನು ಹೊನ್ನಾವರದಂತಹ ಸಣ್ಣ ಊರೊಂದರಲ್ಲಿ ಆಯೋಜಿಸಿರುವ 'ಮಂಥನ' ಬಳಗದ ಡಾ.ಕೃಷ್ಣ ಮತ್ತು ಡಾ.ಅನುಪಮಾ ದಂಪತಿಗಳನ್ನು ಮತ್ತು ಇವರಿಗೆ ಮಾರ್ಗದರ್ಶನ ಮತ್ತು ಸಹಕಾರ ನೀಡುತ್ತಿರುವ ಶಿವಮೊಗ್ಗ ಮುನೀರ್ ಹಾಗೂ ಡಾ.ಎಸ್. ರವೀಂದ್ರನಾಥ್ ಅವರನ್ನು ಅಭಿನಂದಿಸಬಯಸುವೆ. ಯಾಕೇಂದ್ರೆ ಇಂತಹ ವಿಚಾರ ಸಂಕಿರಣಗಳನ್ನು ಇಂದು ಬೆಂಗಳೂರು, ಮಂಗಳೂರು, ಮೈಸೂರು ಅಥವಾ ಧಾರವಾಡ-ಹುಬ್ಬಳಿಗಳಂತಹ ಮಹಾನಗರಗಳಲ್ಲಿ ಏರ್ಪಡಿಸಿದರೆ, ಅವು ಹೀಗೆ ಜನರ ಆಸಕ್ತಿ, ಗಮನ ಸೆಳೆಯುವ ಅವಕಾಶ ಕಡಿಮೆ. ಇದೇನಿದು ಬಿಲ್ ಗೇಟ್ಸ್, ನಾರಾಯಣ ಮೂರ್ತಿ, ಲಕ್ಷ್ಮಿ ಮಿತ್ತಾಲ್ ಅಥವಾ ಅಂಬಾನಿಗಳ ಬಗ್ಗೆ ಚರ್ಚೆ ಮಾಡಬೇಕಾದ ಸಮಯದಲ್ಲಿ ಇವರು, ಈಗ ಅಪ್ರಸ್ತುತವಾಗಿ ಜನ ಮರೆತೇ ಬಿಟ್ಟಿರುವವರ ಬಗ್ಗೆ ಚರ್ಚೆ ಮಾಡ ಹೊರಟಿರುವರಲ್ಲ ಎಂದು ಆಶ್ಚರ್ಯ ಪಡುವುದಷ್ಟೇ ಅಲ್ಲ, ಇದು ಇಂದಿನ ಅಭಿ ವೃದ್ಧಿ ಯುಗದ ಬಗ್ಗೆ ಸುಮ್ಮನೆ ತಕರಾರು ತೆಗೆಯುವುದನ್ನೇ ಚಟ ಮಾಡಿಕೊಂಡಿರುವ ಹತಾಶ ಎಡಪಂಥೀಯರ ಹಳಹಳಿಕೆ ಮಾತ್ರವಾಗಿದೆ ಎಂದು ಅವರು ದೂಷಿಸಿಯಾರು ಕೂಡಾ.

ಮಹಾನಗರಗಳ ಜನ, ಅವರು ಯಾವುದೇ ವರ್ಗಕ್ಕೆ ಸೇರಿರಲಿ, ಅವರಲ್ಲಿ ಬಹುಪಾಲು ಜನ ಈ 'ಅಭಿವೃದ್ಧಿ ಯುಗ'ದ ಬಹು ದೊಡ್ಡ ಫಲಾನುಭವಿಗಳಾದ ಮಧ್ಯಮ ವರ್ಗದ ಅನುಯಾಯಿಗಳೇ ಆಗಿಬಿಟ್ಟಿದ್ದಾರೆ. ಹಾಗಾಗಿ ಇಂತಹ ವಿಚಾರ ಸಂಕಿರಣಗಳು ಮಧ್ಯಮ ವರ್ಗಗಳು ಇನ್ನೂ ಅಷ್ಟಾಗಿ ಭ್ರಷ್ಟಗೊಳ್ಳದ ಇಂತಹ ದೂರದ ಸಣ್ಣ ಊರುಗಳಲ್ಲೇ ನಡೆಯುವುದು ಸಹಜವೂ, ಉಚಿತವೂ ಆಗಿದೆ.

ಇನ್ನು ಇಂದಿನ ವಿಚಾರ ಸಂಕಿರಣದ ವಿಷಯಕ್ಕೇ ಬಂದರೆ, 'ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್: ಆಧುನಿಕ ಭಾರತವನ್ನು ರೂಪಿಸಿದ ಚಿಂತಕರು: ಒಂದು ಮರುನೋಟ' ಎಂಬ ಶೀರ್ಷಿಕೆಯೇ ಇಂದು ಚರ್ಚೆಯಾಗಬೇಕಾದ ನಾಲ್ಕೈದು ಮುಖ್ಯ ಅಂಶಗಳನ್ನು ಮುನ್ನೆಲೆಗೆ ತರುವಂತಿದೆ ಎಂಬುದನ್ನು ನಾವು ಗಮನಿಸಬೇಕು. ಆ ಅಂಶಗಳೆಂದರೆ,

1. ಈಗ ನಮ್ಮ ಮುಂದಿರುವುದು ಆಧುನಿಕ ಭಾರತ.

2. ಈ ಆಧುನಿಕ ಭಾರತಕ್ಕೆ ಈ ನಾಲ್ವರ ಚಿಂತನೆಗಳೂ ಆಧಾರವಾಗಿವೆ.

3. ಆದರೆ ಈ ಆಧುನಿಕ ಭಾರತ ಇಂದು ಒಂದು ಸಮಸ್ಯಾತ್ಮಕ ವಿದ್ಯಮಾನವಾಗಿದೆ.

4. ಈ ಸಮಸ್ಯಾತ್ಮಕತೆಗೆ ಈ ಚಿಂತಕರ ಚಿಂತನೆಗಳಲ್ಲಿನ ಸಮಸ್ಯೆಗಳು ಎಷ್ಟರ ಮಟ್ಟಿಗೆ ಕಾರಣ?

5. ಈ ಸಮಸ್ಯೆಗಳನ್ನು ಇವರ ಚಿಂತನೆಗಳನ್ನು ಇವೊತ್ತಿಗೆ ವಿಸ್ತರಿಸಿಕೊಂಡು ಪರಿಹರಿಸಿಕೊಳ್ಳಬಹುದೇ, ಹೇಗೆ?

ನೀವು ಗಮನಿಸಿರಬಹುದಾದಂತೆ, ಈ ಮೇಲಿನ ಐದು ಅಂಶ ಅಥವಾ ಪ್ರಶ್ನೆಗಳ ಹಿಂದಿರುವ ಮುಖ್ಯ ವಸ್ತು ಆಧುನಿಕತೆ. ಹಾಗಾಗಿ, ಇವೊತ್ತಿನ ಚರ್ಚೆಯ ಕೇಂದ್ರ ಬಿಂದು ಆಧುನಿಕತೆಯೇ ಆಗಬೇಕಿದೆ. ಆದರೆ, ಇಂದು ಭಾರತವನ್ನು ಮಾತ್ರ ಆಧುನಿಕವೆಂದು ಕರೆಯಲಾಗುತ್ತಿಲ್ಲ. ಇಡೀ ಜಗತ್ತೇ ಆಧುನಿಕವಾಗಿದೆ. ಅಥವಾ ಜಗತ್ತು ಆಧುನಿಕವಾಗುವ ಪ್ರಕ್ರಿಯೆಯಲ್ಲಿ ಭಾರತವೂ ಆಧುನಿಕವಾಗಿದೆ. ಬಹುಶಃ ಇವೊತ್ತಿನ ಚರ್ಚೆ ಈ ಪ್ರಕ್ರಿಯೆಯ ವಿವರವಾದ ಪರಿಶೀಲನೆಯೇ ಆಗಿರುತ್ತದೆಂದು ನಾನು ಭಾವಿಸುವೆ. ಅಥವಾ ಭಾರತದ ಆಧುನಿಕತೆಯನ್ನು ಪರಿಶೀಲಿಸುವ ಮೂಲಕವೇ ಜಗತ್ತಿನ ಆಧುನಿಕತೆಯನ್ನು ಪರಿಶೀಲಿಸುವ ಕೆಲಸವೂ ಇದಾಗಬಹುದು. ಅಂದರೆ ಇವೊತ್ತು ಚರ್ಚೆಯಾಗಬೇಕಾದುದು, ಆಧುನಿಕತೆ ಮತ್ತು ಅದನ್ನು ಈ ಐವ್ವರು ಚಿಂತಕರು ಗ್ರಹಿಸಿ, ತಮ್ಮ ಚಿಂತನೆ ಮತ್ತು ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡ ರೀತಿ-ನೀತಿಗಳು. ಹಾಗೆ ನೋಡಿದರೆ, ಇವೊತ್ತಿನ ಅಂದರೆ ಸಮಕಾಲೀನ ಜಗತ್ತನ್ನು ಬಾಧಿಸುತ್ತಿರುವ ಎರಡು ಮುಖ್ಯ ಸಮಸ್ಯೆಗಳ ಹಿಂದೆ ಇರುವುದು ಈ ಆಧುನಿಕತೆಯ ಪ್ರಶ್ನೆಯೇ ಆಗಿದೆ:

1. ಇವೊತ್ತಿನ ಜಗತ್ತಿನ ಮುಖ್ಯ ಯುದ್ಧ, ಹಿಂಸಾಚಾರ ನಡೆ ದಿರುವುದು ಇಸ್ಲಾಂ ಭಯೋತ್ಪಾದನೆಯ ಸಂಬಂಧವಾಗಿ. ಇದರ ಹಿಂದೆ ಇರುವುದು ಇಸ್ಲಾಂ ಸಂಸ್ಕೃತಿ ಮತ್ತು ಆಧುನಿಕತೆಯ ನಡುವಣ ಅನುಸಂಧಾನದ ಸಮಸ್ಯೆ.

2. ಹವಾಮಾನ ವೈಪರೀತ್ಯ ಸಮ್ಮೇಳನದ ಹಿಂದಿರುವುದೂ ಈ ಆಧುನಿಕತೆ ಸೃಷ್ಟಿಸಿರುವ ಸಮಸ್ಯೆಯೇ. ಏಕೆಂದರೆ ಹವಾಮಾನ ವೈಪರೀತ್ಯಕ್ಕೆ ಕಾರಣವಾಗಿರುವ ಅತಿಯಾದ ಇಂಗಾಲ ಪ್ರಸರಣದ ಸಮಸ್ಯೆ ಇರುವುದು ಈ ಆಧುನಿಕತೆ ಸೃಷ್ಟಿಸಿಕೊಟ್ಟ ಅಭಿವೃದ್ಧಿಮಾದರಿಯಲ್ಲೇ.

ಹಾಗಾಗಿ ಇಂದಿನ ನಮ್ಮ ಚರ್ಚೆಯನ್ನು ಆರಂಭಿಸಬೇಕಾದ್ದು, ಆಧುನಿಕತೆ ಎಂದರೇನು ಎಂಬ ಪ್ರಾಥಮಿಕ ಪಶ್ನೆಯಿಂದಲೇ. ಈಗ ಪ್ರಸ್ತಾಪಿಸಿದ ಜಗತ್ತಿನ ಎರಡು ಸಮಕಾಲೀನ ಸಮಸ್ಯೆಗಳಿಗೂ ಆಧುನಿಕತೆಗೂ ಇರುವ ಸಂಬಂಧದ ಸ್ವರೂಪವೇ ಬಹುಶಃ ಈ ಆಧುನಿಕತೆಯ ಸ್ವರೂಪವನ್ನೂ ಪರಿಚಯ ಮಾಡಿಕೊಡುವಂತಿದೆ ಎಂದು ನಾನು ಭಾವಿಸಿದ್ದೇನೆ. ಆಧುನಿಕತೆ ಎಂಬುದು ನಾವು ಪಶ್ಚಿಮದ modernityಗೆ ಸಂವಾದಿಯಾಗಿ ಬಳಸುತ್ತಿರುವ ಶಬ್ದ. ಈ modernity ನಮ್ಮನ್ನು ತಾಕುವ ಮುನ್ನ ಆಧುನಿಕತೆ ಎಂಬ ಶಬ್ದ ನಮ್ಮಲ್ಲಿ ಬಳಕೆಯಲ್ಲಿತ್ತೋ ಇಲ್ಲವೋ ನಾನರಿಯೆ. ಆದರೆ ಒಂದಂತೂ ನಿಜ, ಈ ಸಂವಾದಿ ಆಧುನಿಕತೆಯಿಂದ ನಮ್ಮ ಭಾಷೆ, ಆಲೋಚನೆ, ನಂಬಿಕೆ ಮತ್ತು ಬದುಕುವ ಕ್ರಮಗಳೇ ನಿರ್ಣಾಯಕವಾಗಿ

ಬದಲಾಗಿ ಹೋಗಿವೆ. ಸ್ಥೂಲವಾಗಿ ಹೇಳುವುದಾದರೆ, ನಮ್ಮ 'ಧರ್ಮ'ವೇ ಅಲ್ಲಾಡಿ ಹೋಗಿದೆ! ಆದರೆ ಇದಕ್ಕೆ ಇಸ್ಲಾಂ ಮಾತ್ರ ಕಟುವಾಗಿ ಪ್ರತಿಕ್ರಿಯಿಸುತ್ತಿರುವುದೇಕೆ ಎಂಬುದೂ ಚರ್ಚಾರ್ಹ ವಿಷಯವಾಗಿದೆ.

Modernityಗೆ ಸಂವಾದಿಯಾದ ಆಧುನಿಕತೆಯ ಅಕ್ಷರಶಃ ಅರ್ಥ, ಇಂದಿಗೆ ತಕ್ಕ ನಡೆ(The right way for today) ಎಂದು. ಅಂದರೆ ಈ ಕಲ್ಪನೆ ಹುಟ್ಟುವ ಹಿಂದಿನವರೆಗೆ ಕಾಲ ಜಡಗಟ್ಟಿತ್ತೆಂದೇ ಇದರ ಅರ್ಥವಾಗಿರುತ್ತದೆ. ಹಾಗಾಗಿ ಆಧುನಿಕತೆ ಎಂದರೆ, ಚರಿತ್ರೆ ಜಡವಾಗಿದ್ದ ಕಾಲದಿಂದ ಬಿಡುಗಡೆ ಎಂದೂ ಅರ್ಥವಾದೀತು. ಮೂಲತಃ ಇದು 15ನೇ ಶತಮಾನದಲ್ಲಿ ಯೂರೋಪ್‌ನಲ್ಲಿ ಸಂಭವಿಸಿತೆಂದು ಹೇಳಲಾದ 'ಪುನರುಜ್ಜೀವನ' (Renaissance)ದಿಂದ ಮೂಡಿದ ಕಲ್ಪನೆ. ಇದು ಯೂರೋಪಿನ 'ಜ್ಞಾನಯುಗ' ಕೂಡಾ. ಏಕೆಂದರೆ ಇದು ಆವರೆಗೆ ಇದ್ದ ಆಲೋಚನಾ ಕ್ರಮ ಮತ್ತು ಅದನ್ನಾಧರಿಸಿದ ವ್ಯವಸ್ಥೆಯನ್ನು ಪ್ರಶ್ನಿಸಿದ ಯುಗ. ಮನುಷ್ಯ ತನ್ನನ್ನು ಮತ್ತು ಜಗತ್ತನ್ನು ನೋಡುವ ಕ್ರಮವನ್ನೇ ಬದಲಾಯಿಸಿಕೊಂಡ ಯುಗ. ವಿಜ್ಞಾನ ಹೊಸ ಅರ್ಥ ಪಡೆದ ಯುಗ. 17ನೇ ಶತಮಾನದ Des'Cartes ಎನ್ನುವ ತತ್ವಜ್ಞಾನಿಯ cogito ergo sum ಅಂದರೆ, ನಾನು ಯೋಚಿಸುತ್ತೇನೆ–ಹಾಗಾಗಿ ನಾನು ಇದ್ದೇನೆ ಎಂಬ ತತ್ವದ ಮೂಲಕ ಮನುಷ್ಯನ ಗ್ರಹಿಕೆಯ ನೆಲೆಗಳನ್ನೇ ಬದಲಾಯಿಸಿದ ಯುಗ.

ಅಂದರೆ, ಆವರೆಗೆ ದೈವ–ಧರ್ಮ ಕೇಂದ್ರಿತವಾಗಿದ್ದ ಜಗತ್ತು ಜ್ಞಾನಯುಗದ ಅನೇಕ ವೈಜ್ಞಾನಿಕ ತತ್ವಗಳ ಅವಿಷ್ಕಾರದ ಮೂಲಕ ವೈಚಾರಿಕ ಜಗತ್ತಾಯಿತು. ಅಂದರೆ, ಒಂದು ಅಖಂಡ ಅವಿಭಾಜ್ಯ ನಂಬಿಕೆಯಾಗಿದ್ದ ಜಗತ್ತು ಹಲವು ವಿದ್ಯಮಾನಗಳ–ಶಕ್ತಿಗಳ–ಚಿಂತನೆಗಳ ಜೋಡಣೆಯಾಗಿ ಕಾಣತೊಡಗಿತು. ಅಂದರೆ, ನಂಬಿಕೆಗೆ ಬದಲಾಗಿ ವಿಶ್ಲೇಷಣೆಯ ಮೂಲಕ(ಇದನ್ನು ಕಾರ್ಟೇಸಿಯನ್ ತರ್ಕ ಎಂದೂ ಕರೆಯಲಾಗುವುದು) ಜಗತ್ತನ್ನು ಅರಿಯಬಹುದೆಂಬ ಭಾವನೆ ಉಂಟಾಯಿತು. ಹಾಗಾಗಿ, ಜಗತ್ತು ಒಂದು ವೈಚಾರಿಕ ಆಕೃತಿಯಾಯಿತು. ದೈವ–ಧರ್ಮಗಳ ಅರ್ಥ–ಉದ್ದೇಶಗಳ ಬಗೆಗಿನ ನಂಬಿಕೆ ಅಲ್ಲಾಡತೊಡಗಿತು. ಹಾಗೇ ಇದರ ಉತ್ಪನ್ನಗಳಾಗಿದ್ದ ಊಳಿಗಮಾನ್ಯಶಾಹಿ – ರಾಜಶಾಹಿ ರಾಜಕೀಯ ವ್ಯವಸ್ಥೆಗಳೂ ಅಲ್ಲಾಡ ತೊಡಗಿದವು. ವ್ಯವಸ್ಥೆಯ ಎದುರು ವ್ಯಕ್ತಿಯ ಶಕ್ತಿ ಮುನ್ನೆಲೆಗೆ ಬರ ತೊಡಗಿತು. ಇದರಿಂದಾಗಿ ವ್ಯಕ್ತಿಯ ಘನತೆಯ ಕಲ್ಪನೆಯೂ ಮೂಡತೊಡಗಿತು. ಇದು ಸಹಜವಾಗಿಯೇ ಮನುಷ್ಯನಲ್ಲಿ ಸಾಮಾಜಿಕ 'ಸಮಾನತೆ'ಯ ಪರಿಕಲ್ಪನೆಯನ್ನೂ ಉದ್ದೀಪಿಸಿತು. ಆವರೆಗೆ ದೇವರು–ಧರ್ಮಗಳ ಜಿಜ್ಞಾಸೆ ಮನುಷ್ಯನ ಅಧ್ಯಾತ್ಮಿಕ ಸಮಾನತೆಯನ್ನಷ್ಟೇ ಚರ್ಚಿಸಿದ್ದರೆ ಲೌಕಿಕ ಸಮಾನತೆಯ ಪ್ರಶ್ನೆಯೂ ಈಗ ಮುಂದಕ್ಕೆ ಬಂತು.

ಇದಕ್ಕೆ ಮುಖ್ಯ ಕಾರಣ ಜ್ಞಾನಯುಗವು ಅಧ್ಯಾತ್ಮಮೂಲ ನಂಬಿಕೆಯ ಜಗತ್ತನ್ನು ಲೌಕಿಕಮೂಲ ವಿಜ್ಞಾನ ಜಗತ್ತನ್ನಾಗಿ ಮಾಡಿದ್ದು. ಇದನ್ನು ಅದು ತನ್ನ ಕ್ರಿಶ್ಚಿಯನ್ ಧರ್ಮದೊಳಗಿನ ಬಂಡಾಯದ ಮೂಲಕ ಸಾಧಿಸಿತು. ಅದು ಪ್ರತಿಭಟನೆಯ, Protestant ಧರ್ಮ ಎನಿಸಿಕೊಂಡಿತು. ಅದು ಜಗತ್ತನ್ನು ಮನುಷ್ಯನ ಸುಖ ಸವಲತ್ತುಗಳಿಗಾಗಿ ಇರುವ ದೇವರ ಕೊಡುಗೆ ಎಂದು ಸಾರಿತು. ಅಂದರೆ ಜಗತ್ತೆನ್ನುವುದು ದೇವರ ಹೊರಗಿರುವುದು; ಅದನ್ನು ಮನುಷ್ಯ ತನ್ನ ಸುಖ ಸವಲತ್ತುಗಳಿಗಾಗಿ ಬಳಸಿಕೊಳ್ಳಬಹುದು ಎಂಬ ಹೊಸ ಸ್ವಾತಂತ್ರ್ಯಕ್ಕೆ ಕಾರಣವಾಗಿ, ವಿಜ್ಞಾನ ಹಳೆಯ ಧರ್ಮದ ನೈತಿಕ ಕಟ್ಟಲೆಗಳುಗಳನ್ನು ಕಳಚಿಕೊಂಡು ದಾಪುಗಾಲುಗಳನ್ನಿಟ್ಟಿತು. ಬಂಡವಾಳವೆಂಬ ಹೊಸ ಸಂಪತ್ತಿನ ಹೊಸ ಪರಿಕಲ್ಪನೆ ಜಾರಿಗೆ ಬಂದು ಅದರ ಆಸರೆಯಲ್ಲಿ ತಂತ್ರಜ್ಞಾನದ ಬಾಗಿಲುಗಳು ತೆರೆಯುತ್ತಲೇ ಹೋದವು.

ರಾಮ ಮನೋಹರ ಲೋಹಿಯಾ

ಜಗತ್ತೆನ್ನುವುದು ಬಂಡವಾಳವಾದಿ ಕೈಗಳಿಗೆ ಸಿಕ್ಕ ಒಂದು ಗ್ರಾಹಕ ವಸ್ತುವೇ ಆಗಿ ಹೋಯಿತು. ಇದರ ಹಿಂದಿನ ವೈಚಾರಿಕತೆ ಮತ್ತು ಇದು ಕೊಡುತ್ತಾ ಹೋದ ಫಲಗಳ ರುಚಿಯು ಮನುಷ್ಯನಲ್ಲಿ ಸಾಹಸ ಮತ್ತು ಸ್ಪರ್ಧೆಗಳ ಮೂಲಕ ಸಾಧ್ಯವಾಗುವ ಲೌಕಿಕ ಸಮಾನತೆ ಮತ್ತು ಅದನ್ನು ಎತ್ತಿ ಹಿಡಿಯುವ ಪ್ರಜಾಪ್ರಭುತ್ವವಾದಿ ಆಡಳಿತದ ಪರಿಕಲ್ಪನೆಗೆ ದಾರಿ ಮಾಡಿಕೊಟ್ಟಿತು. ಹಾಗಾಗಿ, ಆಧುನಿಕತೆಯನ್ನು ಉತ್ಪಾದನೆ ಮತ್ತು ಆಡಳಿತ –ಈ ಎರಡೂ ನೆಲೆಗಳಲ್ಲಿ ಸಮಾನತೆಯ ಹರಿಕಾರ ಎಂದೂ ಕರೆಯಲಾಗುತ್ತದೆ. ಆಧುನಿಕ ನಾಗರೀಕತೆಯ ಚಾಲನ ಶಕ್ತಿ ಸಮಾನತೆ ಎಂದೂ ಹೇಳಲಾಗುತ್ತದೆ. ಇದರ ಹಿಂದೆ, ಹಿಂದಿನ ದಿನಗಳ ಶಕ್ತಿಗಳಿಗೆ ಧಿಕ್ಕಾರದ, ಹಿಂದಿನ ದಿನಗಳ ಮಿತಿಗಳ ಉಲ್ಲಂಘನೆಯ ಮತ್ತು ಹೊಸ ಸಾಹಸಗಳ ಹುಮ್ಮಸ್ಸಿನ ರೋಮಾಂಚನವಿದೆ.

ಹಾಗಾಗಿಯೇ ಇದು ಕಳೆದ ಎರಡು ಮೂರು ಶತಮಾನಗಳಲ್ಲಿ ಜಗತ್ತಿನಾದ್ಯಂತ ಹರಡಿತು. ಬಹು ಬೇಗ ರೋಗದಂತೆ ಹರಡಿತು ಎಂದು ಗಾಂಧಿ ಹೇಳುತ್ತಾರೆ. ಅದನ್ನು ಆಮೇಲೆ ನೋಡೋಣ. ಆದರೆ ಗಾಂಧೀಜಿಯ ಮಾತನ್ನು ಅಧ್ಯಾತ್ಮವಾದಿಯ ಅತಿರೇಕದ ಮಾತು ಎಂದು ಸರಿಸಿಟ್ಟು ಯೋಚಿಸಿದರೂ, ಈ ಆಧುನಿಕತೆ ಈ ಎರಡು–ಮೂರು ಶತಮಾನಗಳಲ್ಲಿ ಅದು ವರವೋ ಶಾಪವೋ ಎಂದು ಆತಂಕ ಪಡುವಷ್ಟು ಅನಾಹುತಗಳನ್ನೂ ಮಾಡಿದೆ ಎಂಬುದು ಇಂದಿನ ಜಗತ್ತನ್ನು ಸುಮ್ಮನೆ ಒಮ್ಮೆ ನೋಡಿದರೇ ಗೊತ್ತಾಗುವಂತಿದೆ. ಅದು ಪ್ರಜಾಪ್ರಭುತ್ವ ಮತ್ತು ಸಮಾನತೆಯನ್ನು ಸಾಧಿಸುವ ದಿಸೆಯಲ್ಲಿಯೇ ಬೆಳೆದಿದ್ದರೆ, ಜಗತ್ತು ದಿನೇ ದಿನೇ ಶಾಂತಿಯನ್ನೇಕೆ ಕಳೆದುಕೊಳ್ಳುತ್ತಿದೆ? ಮುಗಿಯುವ ಯುದ್ಧಗಳು, ದಿನೇ ದಿನೇ ವೈವಿಧ್ಯಮಯವಾಗುತ್ತಿರುವ ಹಿಂಸಾಚಾರಗಳ ವಿಷವರ್ತುಲದಲ್ಲೇಕೆ ಸಿಕ್ಕಿಹಾಕಿಕೊಂಡು ನರಳುತ್ತಿದೆ? ಹೆಚ್ಚೆಚ್ಚು ಪ್ರಮಾಣದ ಮತ್ತು ಮಾರಕತೆಯ ಶಸ್ತ್ರಾಸ್ತ್ರಗಳನ್ನೇಕೆ ತಯಾರಿಸುತ್ತಿದೆ? ಈ ಶಸ್ತ್ರಾಸ್ತ್ರ ತಯಾರಿಕೆ ಮತ್ತು ಮಾರಾಟವೇ ಏಕೆ ಮತ್ತು ಹೇಗೆ ಇಂದಿನ ಜಗತ್ತಿನ ಅತಿ ದೊಡ್ಡ ವಾಣಿಜ್ಯ ವ್ಯವಹಾರವಾಗಿದೆ? ಈ ಪ್ರಶ್ನೆಗಳಿಗೆ ನಾವು ಉತ್ತರ ಕಂಡುಕೊಳ್ಳುವ ಪ್ರಯತ್ನದಲ್ಲೇ ಇಂದಿನ ವಿಚಾರ ಸಂಕಿರಣದ ಸಾರ್ಥಕತೆಯೂ ಅಡಗಿದೆ ಎಂದು ನಾನು ಭಾವಿಸಿದ್ದೇನೆ.

ಏಕೆಂದರೆ, ಇಂದಿನ ಭಾರತ ಈ ಪ್ರಶ್ನೆಗಳನ್ನು ಎದುರಿಸುತ್ತಿರುವ ಜಗತ್ತಿನ ಒಂದು ಭಾಗವೇ ಆಗಿದೆ. ಅಷ್ಟೇ ಅಲ್ಲ, ಜಾಗತೀಕರಣದ ಫಲವಾಗಿ ಅದರ ಅವಿಭಾಜ್ಯ ಭಾಗವೇ ಆಗಿ ಹೋಗಿದೆ ಎಂದೂ ಹೇಳಬಹುದು. ಅಥವಾ ಹಾಗೆ ಹೇಳುವ ಮೂಲಕವೇ ಇಂದಿನ ವಿಚಾರ ಸಂಕಿರಣ ಚರ್ಚಿಸಲು ಉದ್ದೇಶಿಸಿರುವ ವಿಷಯವನ್ನು ನಾವು ಪ್ರಸ್ತುತಗೊಳಿಸಿಕೊಳ್ಳಬಹುದು. ಏಕೆಂದರೆ, ಇಂದು ನಾವು ಯಾವ ಐವರು ಚಿಂತಕರತ್ತ ಮರುನೋಟ ಅಗತ್ಯವೆಂದು ಭಾವಿಸಿರುವೆವೋ ಆ ಐವರ ಚಿಂತನೆಗಳೂ ಒಂದಲ್ಲ ಒಂದು ರೂಪದಲ್ಲಿ ಮತ್ತು ಒಂದಲ್ಲ ಒಂದು ಮಟ್ಟದಲ್ಲಿ ಆಧುನಿಕವೆಂದು ಕರೆಯಲ್ಪಡುವ ಈ ದೇಶವನ್ನು ಕಟ್ಟಿವೆ. ಆದರೆ ಹಾಗೆಯೇ, ಈ ಚಿಂತನೆಗಳು ನಿರೀಕ್ಷಿತ ಫಲ ಕೊಡುವಲ್ಲಿ ವಿಫಲವಾಗಿವೆಯೆಂದು, ಅವುಗಳನ್ನಾಧರಿಸಿದ ರಾಜಕಾರಣವನ್ನು 'ಅಪ್ರಸ್ತುತ'ವೆಂದು ಸಾರಿ, ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ 'ಸುಧಾರಣೆ'ಗಳ ಹೆಸರಿನಲ್ಲಿ ಹೊಸ ರಾಜಕಾರಣವನ್ನು ಆರಂಭಿಸಿದ್ದೇವೆ. ಆದರೆ, ಜಾಗತೀಕರಣವೆಂಬ ಈ ಹೊಸ ರಾಜಕಾರಣ ಈಗ ದೇಶವನ್ನು ಎಲ್ಲಿಗೆ ತಂದು ಮುಟ್ಟಿಸಿದೆ? ಈ ಪ್ರಶ್ನೆಯೇ ಇಂದು ನಮ್ಮಲ್ಲಿ ಈ ಐವರು ಚಿಂತಕರ ಚಿಂತನೆಗಳ ಬಗ್ಗೆ ಮರುನೋಟದ ಅಗತ್ಯವನ್ನೂ ಉಂಟು ಮಾಡಿರುವುದು ಎಂಬುದನ್ನಿಲ್ಲಿ ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಇಂದು ಭಾರತ ಅಭೂತಪೂರ್ವ ಎರಡಂಕಿ ಪ್ರಗತಿ ದರದತ್ತ ಮತ್ತು ಅದರಿಂದಾಗಿ ಕೆಲವೇ ವರ್ಷಗಳಲ್ಲಿ ಜಾಗತಿಕ ಶಕ್ತಿಯಾಗುವತ್ತ ದಾಪುಗಾಲಿಡುತ್ತಿರುವ ಮಾತುಗಳನ್ನಾಡಲಾಗುತ್ತಿದೆ. ಅದಕ್ಕೆ ತಕ್ಕಂತೆ ಇಲ್ಲಿ ಶ್ರೀಮಂತರ ಸಂಖ್ಯೆಯೂ ಹೆಚ್ಚುತ್ತಿದೆ. ಜಗತ್ತಿನ ಅತಿ ಶ್ರೀಮಂತರ ಲೆಕ್ಕ ತೆಗೆದುಕೊಂಡರೆ ಭಾರತ ಎರಡನೆಯದೋ, ಮೂರನೆಯದೋ ಸ್ಥಾನದಲ್ಲಿದೆ ಎಂದು ಹೇಳಲಾಗುತ್ತಿದೆ. ಆದರೆ ತೊಂದರೆ ಎಂದರೆ, ಬಡವರ ಸಂಖ್ಯೆಯಲ್ಲಿ ಈ ದೇಶ ಮೊದಲ ಸ್ಥಾನದಲ್ಲಿದೆ! ಅಷ್ಟೇ ಅಲ್ಲ, ದೇಶದಲ್ಲಿ ಇಂತಹ ಶ್ರೀಮಂತಿಕೆಯ ಸಾಧನೆ ಮತ್ತು ಪ್ರದರ್ಶನ, ಸಮಾಜದಲ್ಲಿ ಎಂತಹ ಹಪಾಹಪಿ ಅಥವಾ ತೀರದ ದಾಹ ಹುಟ್ಟಿಸಿದೆ ಎಂದರೆ, ಬಡತನದ ವ್ಯಾಖ್ಯೆ ದಿನೇ ಬದಲಾಗುತ್ತಿದ್ದು, ಅದು ನಿರ್ಮೂಲನವಾಗಲಾರದಂತಹ ಒಂದು ಸಮಸ್ಯೆಯಾಗಿ ಬೆಳೆಯುತ್ತಿದೆ. ಇದರ ಜೊತೆಗೇ ಬಡವ ಮತ್ತು ಶ್ರೀಮಂತರ ನಡುವಣ ಅಂತರವೂ ಎಷ್ಟು ಘರ್ಷಣಾತ್ಮಕವಾಗಿ ಬೆಳೆಯುತ್ತಿದೆಯೆಂದರೆ, ಹಿಂಸಾಚಾರ ಮಕ್ಕಳ ಆತ್ಮಹತ್ಯೆಗಳೂ ಸೇರಿದಂತೆ, ಊಹೆಗೂ ನಿಲುಕದ ವೈವಿಧ್ಯಮಯ ರೂಪಗಳನ್ನು ತಳೆದು; ಸಮಾಜದ ಮತ್ತು ಅದರಲ್ಲಿನ ಮನುಷ್ಯನ ಸೂಕ್ಷ್ಮಗಳೇ ಕಳೆದುಹೋಗುತ್ತಿವೆ.

ಕಳೆದು ಐದು ವರ್ಷಗಳಿಂದ ದೇಶಾದ್ಯಂತ ನಡೆಯುತ್ತಿರುವ ರೈತರ ಸರಣಿ ಆತ್ಮಹತ್ಯೆ ಮತ್ತು ದೇಶ ಅದಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿ ಇದಕ್ಕೊಂದು ಉದಾಹರಣೆ

ಯಾಗಿದೆ. ದೇಶದ ಪ್ರತಿ ಮಹಾನಗರವೂ ಪ್ರತಿದಿನ, ಪ್ರತಿ ಕ್ಷಣ ಮತೀಯ ಭಯೋತ್ಪಾದನೆಯ ವಿರುದ್ಧ ಕಟ್ಟೆಚ್ಚರದಲ್ಲಿ ರಬೇಕಾದ ಶಿಕ್ಷೆಗೆ ಒಳಗಾಗಿದೆ. ಇದೆಲ್ಲದರ ಪರಿಣಾಮವೆಂಬಂತೆ ಸಮಾಜದ ಅಧ್ಯಾತ್ಮಿಕತೆಯೇ ವಿಕ್ಷಿಪ್ತಗೊಂಡು, ಮಠ-ಆಶ್ರಮಗಳು ದೊಡ್ಡ ವಾಣಿಜ್ಯ ಮತ್ತು ಮನರಂಜನಾ ಕೇಂದ್ರಗಳಾಗಿ ಪರಿವರ್ತಿತವಾಗಿ, ಎಂದೂ ಇಲ್ಲದಷ್ಟು ಅಪಾರ ಜನಮನ್ನಣೆ ಪಡೆಯಲಾರಂಭಿಸಿವೆ.

ಈ ದುರಂತದ ಒಟ್ಟು ಚಿತ್ರ ಸೂಚ್ಯವಾಗಿ ನಮಗೆ ದೊರೆಯುವುದು, ನಮ್ಮ ದೇಶದ ಸ್ಥಾನ ಜಗತ್ತಿನ ಅತಿ ದೊಡ್ಡ ಆರ್ಥಿಕತೆಗಳ ಪಟ್ಟಿಯಲ್ಲಿ ಕ್ರಮೇಣ ಮೇಲೇರುತ್ತಿದ್ದರೆ, ಜಾಗತಿಕ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯಲ್ಲಿ ಕ್ರಮೇಣ ಕೆಳಗಿಳಿಯುತ್ತಿದೆ ಎಂಬ ಸಂಗತಿಯನ್ನು ಗಮನಿಸಿದಾಗ. ಆಹಾರ, ಆರೋಗ್ಯ, ಶಿಕ್ಷಣ ಇತ್ಯಾದಿ ಪ್ರಜೆಗಳ ಮೂಲಭೂತ ಅಗತ್ಯಗಳ ಲಭ್ಯತೆಯನ್ನಾಧರಿಸಿದ ಈ ಸೂಚ್ಯಂಕ, ಭಾರತವನ್ನು ಜಗತ್ತಿನ ಅತಿ ದರಿದ್ರ ದೇಶಗಳೆಂದು ಕರೆಯಲ್ಪಡುತ್ತಿದ್ದ ಆಫ್ರಿಕಾದ ಸಹರಾ ದೇಶಗಳ ಕೆಳಕ್ಕೆ ತಳ್ಳಿದೆ! ಆದರೂ ನಾವು ದೇಶ ಅಭೂತಪೂರ್ವ ಪ್ರಗತಿಯ ಹಾದಿಯಲ್ಲಿದೆ ಎಂದು ಹೇಳುತ್ತೇವೆ. ಈ ಪ್ರಗತಿಯ ಸಾರಥ್ಯವನ್ನು ವಹಿಸಿದ ಮನಮೋಹನ ಸಿಂಗ್ ಅವರನ್ನು ಈ ದೇಶ ಕಂಡ ಅತ್ಯುತ್ತಮ ಪ್ರಧಾನ ಮಂತ್ರಿ ಎನ್ನುತ್ತೇವೆ... ಆದರೆ ಇವರು ರಾಜಕಾರಣವನ್ನು ಪ್ರವೇಶಿದ್ದೇ, ಪಂಜಾಬ್‌ನ ಅಧಿಕೃತ ನಿವಾಸಿಯಾಗಿದ್ದರೂ ತಾವು ಅಸ್ಸಾಂನ ನಿವಾಸಿ ಎಂದು ಸುಳ್ಳು ಪ್ರಮಾಣ ಪತ್ರ ನೀಡಿ ರಾಜ್ಯಸಭಾ ಸದಸ್ಯರಾಗುವ ಮೂಲಕ. (ಅದಕ್ಕೆ ನಮ್ಮ ಸುಪ್ರೀಂ ಕೋರ್ಟು ತನ್ನ ಜಾಣತನವನ್ನೆಲ್ಲ ಪ್ರದರ್ಶಿಸಿ 'ತಾಂತ್ರಿಕ' ಅನುಮೋದನೆ ನೀಡಿತೆಂಬುದು ಬೇರೆ ವಿಚಾರ!) ಹಾಗೇ ಅವರು ಎರಡು ಬಾರಿ ಪ್ರಧಾನ ಮಂತ್ರಿಯಾಗಿರುವುದೂ, ಜನತೆಯನ್ನು ಎದುರಿಸಿ ಆಯ್ಕೆಯಾದ ನೇರ ಪ್ರತಿನಿಧಿಯಾಗಲ್ಲ, ಹಿಂಬಾಗಿಲಿನ ರಾಜ್ಯಸಭಾ ಸದಸ್ಯತ್ವದ ಮೂಲಕವೇ! ಆದರೂ ಇದನ್ನೆಲ್ಲ ನಾವು ಪ್ರಗತಿಶೀಲ ಪ್ರಜಾಪ್ರಭುತ್ವದ ದಿಗ್ವಿಜಯ ಎನ್ನುತ್ತೇವೆ. ಇದು ವಿಕ್ಷಿಪ್ತತೆ. ಸಂಪೂರ್ಣ ವಿಕ್ಷಿಪ್ತತೆ.

ಇದು ವಿಕಿಪ್ತತೆ ಏಕೆಂದರೆ, ಖೈರ್ಲಾಂಜಿಯಂತಹ ಅಮಾನುಷ ಜಾತಿ ದೌರ್ಜನ್ಯವನ್ನು, ಪಂಜಾಬ್-ಹರ್ಯಾಣಾ-ಪ.ಉತ್ತರ ಪ್ರದೇಶಗಳ ಗ್ರಾಮಗಳಲ್ಲಿ ಜಾತಿ ಬಿಟ್ಟು ಮದುವೆಯಾದ ತಮ್ಮ ಮಕ್ಕಳನ್ನು ಅವರ ತಂದೆ ತಾಯಿಗಳೇ 'ಮರ್ಯಾದಾ ಹತ್ಯೆ' ಎಂಬ ಹೆಸರಲ್ಲಿ ನಿರ್ಭಯರಾಗಿ ಮತ್ತು ನಿಷ್ಕರುಣೆಯಿಂದ ಕೊಲ್ಲಬಲ್ಲರೆಂಬುದನ್ನು, ಚಿಲ್ಲರೆ ಬೀದಿಕಳ್ಳನೊಬ್ಬನನ್ನು ಪೋಲೀಸು ಪೇದೆಯೊಬ್ಬ ತನ್ನ ಮೋಟರು ಸೈಕಲ್ಲಿಗೆ ಕಟ್ಟಿಕೊಂಡು ಜನರ ಸಮ್ಮುಖದಲ್ಲೇ ರಸ್ತೆಯಲ್ಲಿ ಎಳೆದಾಡಿ ಹಿಂಸಿಸಬಲ್ಲನೆಂಬುದನ್ನು, ಎಳೆಯ ಹೆಣ್ಣು ಮಗಳೊಬ್ಬಳು ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರೇಪಿಸಿದ ಪೋಲೀಸ್ ಉನ್ನತ ಅಧಿಕಾರಿಯೊಬ್ಬನ ಲೈಂಗಿಕ ಚೇಷ್ಟೆಯ ಅಪರಾಧಕ್ಕೆ 6 ತಿಂಗಳುಗಳ ಸಾದಾ ಸಜೆಯ ಶಿಕ್ಷೆ ವಿಧಿಸಲು ನಮ್ಮ ನ್ಯಾಯಾಂಗಕ್ಕೆ 19 ವರ್ಷಗಳು ಬೇಕಾಗುತ್ತದೆಂಬುದನ್ನು, ಗಣಿ ಕಾರ್ಮಿಕನೊಬ್ಬನ ಅದೃಷ್ಟ ಖುಲಾಯಿಸಿ ಆತ ರಾಜ್ಯವೊಂದರ ಮುಖ್ಯಮಂತ್ರಿಯಾದ ಎರಡು ಮೂರು ವರ್ಷಗಳಲ್ಲೇ ಖಜಾನೆಗೆ 4000 ಕೋಟಿ ರೂಪಾಯಿಗಳ ವಂಚನೆ ಮಾಡಬಲ್ಲನೆಂಬುದನ್ನು, ನಾವು ದೇಶಕ್ಕೆ ಬಡಿದಿರುವ ದೊಡ್ಡ ರೋಗವೊಂದರ ಲಕ್ಷಣಗಳೆಂದು ಭಾವಿಸಲೇ ಸಾಧ್ಯವಾಗುವುದಿಲ್ಲ!

> **ಆಧುನಿಕ ನಾಗರೀಕತೆಯನ್ನು ಗಾಂಧಿಯಂತೆ ಇಡಿಯಾಗಿ ಪ್ರಶ್ನಿಸದೆ, ಮಾರ್ಕ್ಸ್‌ನಂತೆಯೇ ಅದರಲ್ಲಿನ ಸಮಾನತೆಯ ತುಡಿತದಲ್ಲಿ ಮನುಷ್ಯನ ಬಿಡುಗಡೆಯ ಸಾಧ್ಯತೆಯನ್ನು ಕಂಡು ವಿಕೇಂದ್ರಿತ ಉತ್ಪಾದನಾ ಮತ್ತು ಆಡಳಿತ ತಂತ್ರಗಳ ಮೂಲಕ ಅದರ ವೇಗ ಮತ್ತು ಆಕ್ರಮಣಶೀಲತೆಗಳನ್ನು ಪಳಗಿಸಬಲ್ಲ ಸರಳ ಸಭ್ಯಜೀವನ ಮಟ್ಟದ ಸೃಜನಶೀಲ ಸಿದ್ಧಾಂತವೊಂದನ್ನು ಮಂಡಿಸಿದ ಲೋಹಿಯಾ ಇಂದು ಸಮಕಾಲೀನ ರಾಜಕೀಯ ಚರ್ಚೆಗಳ ಮಧ್ಯದಿಂದಲೇ ಕಾಣೆಯಾಗಿದ್ದಾರೆ ಏಕೆ?**

ಈ ಸಂಬಂಧ ನಾನು ಕಣ್ಣಾರೆ ಕಂಡು ಗಾಬರಿಯಾದ ಒಂದು ಉದಾಹರಣೆಯೆಂದರೆ, ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣಕ್ಕೆ, ಹಣ ಹೆಚ್ಚು ಕೊಡುತ್ತಾರೆಂದು ನಮ್ಮ ರೈತರು-ಹೋರಾಟ ಮಾಡಿ ಬಗ್ಗೈರ್ ಹುಕಂ ಕೃಷಿ ಮಾಡುತ್ತಿದ್ದವರೂ ಸೇರಿದಂತೆ-ಮುಗಿಬಿದ್ದು ತಮ್ಮ ಕೃಷಿ ಭೂಮಿಯನ್ನು ಕೊಡಲು ಮುಂದಾದದ್ದು. ಶಿವಮೊಗ್ಗಕ್ಕೆ ವಿಮಾನ ನಿಲ್ದಾಣ ಏಕೆ, ಯಾರಿಗಾಗಿ;ಅದರ ನಿರ್ಮಾಣದ ಹಿಂದೆ ಇರುವ ಉದ್ದೇಶ ಮತ್ತು ಹಿತಾಸಕ್ತಿಗಳು ಎಂತಹವು, ಯಾವುವು ಎಂಬ ಪ್ರಶ್ನೆಗಳೇ ಇಲ್ಲಿ ಅಪ್ರಸ್ತುತವಾದ ಪರಿ, ಈ ವಿಕ್ಷಿಪ್ತತೆ ಇಡೀ ಸಮಾಜವನ್ನೇ ಹೇಗೆ ಆವರಿಸಿದೆ ಎಂಬುದನ್ನು ಸೂಚಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಹಾಗೇ ಶಿವಮೊಗ್ಗದ ಕೆಲವು ರೈತರು, ಭೂಮಿ ಕೊಡದಿದ್ದರೆ ಕೈಗಾರಿಕೀಕರಣವಾಗಿ ದೇಶ ಉದ್ಧಾರವಾಗುವುದಾರೂ ಹೇಗೆ ಎಂದು ಪ್ರಶ್ನಿಸುತ್ತಾ, ಮುಖ್ಯಮಂತ್ರಿಯವರೇ ಮಧ್ಯಸ್ಥಿಕೆ ವಹಿಸುವುದಾರೆ(ಇದರ ಹಿಂದಿನ ಕಾರಣವನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ...) ತಾವು ಭೂಮಿ ಕೊಡಲು ಕಾತುರರಾಗಿರುವುದಾಗಿ ಘೋಷಿಸಿದ್ದಾರೆ! ಕಾರ್ಪೋರೇಟ್ ಬಂಡವಾಳವಾದ ನಮ್ಮ ಪ್ರಜಾಸತ್ತಾತ್ಮಕ ಸಂಘಟನಾ ಶಕ್ತಿಯ ಮೂಲ ಬೇರುಗಳನ್ನೇ ತಿಂದುಹಾಕ ಹೊರಟಿದೆ. ಮುಖ್ಯಮಂತ್ರಿ ತಮ್ಮ ಆಡಳಿತದ ಮೂಲ ಮಂತ್ರ ಇನ್ನು ಅಭಿವೃದ್ಧಿ, ಅಭಿವೃದ್ಧಿ ಅಭಿವೃದ್ಧಿ ಎನ್ನುತ್ತಿದ್ದರೆ, ಜನರಿಗೆ ಅದು 40%,40% 40%(ಕಮೀಷನ್) ಎಂದು ಕೇಳಿಸುತ್ತಿದೆ!

ಈ ವಿಕ್ಷಿಪ್ತತೆಯ ಮೂಲ ಎಲ್ಲಿದೆ? ಜಾಗತೀಕರಣ ಎಂಬ ನವ ವಸಾಹತುಶಾಹಿ ರಾಜಕಾರಣದಲ್ಲಿದೆ ಎಂದು ಸುಲಭವಾಗಿ ಹೇಳಿಬಿಡಬಹುದು. ಆದರೆ ಈ ಜಾಗತೀಕರಣವಾದರೂ ಯಾವುದರ ಫಲ? ರಾಷ್ಟ್ರೀಯ ಎಲ್ಲೆಗಳನ್ನು ಮೀರಿದ ಮುಕ್ತ ಮಾರುಕಟ್ಟೆ ಆರ್ಥಿಕತೆಯನ್ನು ಪ್ರತಿಪಾದಿಸುವ ಅದನ್ನು, ಆಧುನಿಕತೆಯ ಬಾಗಿಲು ತೆರೆದ ಬಂಡವಾಳವಾದದ ಆತ್ಯಂತಿಕ ಘಟ್ಟ ಎಂದು ವರ್ಣಿಸಲಾಗುತ್ತಿದೆ. ಆದರೆ ಈ ಬಂಡವಾಳವಾದ ತನ್ನ ಗೋರಿಯನ್ನು ತಾನೇ ತೋಡಿಕೊಂಡು ಸಮತಾವಾದಕ್ಕೆ ದಾರಿ ಮಾಡಿಕೊಡುತ್ತದೆ ಎಂದು ವಾದಿಸಿದ ಮಾರ್ಕ್ಸ್ ಇಂದಿನ ರಾಜಕೀಯ ಚರ್ಚೆಗಳಲ್ಲಿ ಎಲ್ಲಿ ನಿಲ್ಲುತ್ತಾನೆ? ಜಾಗತಿಕ ಕ್ರಾಂತಿಯ ಕಹಳೆಯೂದಿದ ಮಾರ್ಕ್ಸ್‌ವಾದವೆಂಬುದೇಕೆ ಇಂದು ಭಾರತದಲ್ಲಿ ಮಾರ್ಕ್ಸ್‌ವಾದಿ ಎಂದು ಕರೆದುಕೊಳ್ಳುವ ರಾಜಕಾರಣಿಗಳ ನಡುವೆಯೇ ತನ್ನ ರಾಜಕೀಯ ಚಲನಶೀಲತೆಯನ್ನು ಕಳೆದುಕೊಂಡು ಕೆಲವು ಪಂಡಿತ ವಲಯಗಳ ಚರ್ಚಾ ವಸ್ತು ಮಾತ್ರ ಆಗಿ ಹೋಗಿದೆ? ಹಾಗೇ, ಬಂಡವಾಳವಾದದ ಬಾಗಿಲು ತೆರೆದ ಆಧುನಿಕತೆಯನ್ನೇ, ಅದು ರಾಕ್ಷಸೀಯವಾಗಿ ಹರಡುತ್ತಾ ಹೋಗುವ ಭೌತ ನಾಗರೀಕತೆಯ ಹರಿಕಾರನೆಂದು ಗುರುತಿಸಿ, ಅದನ್ನು ಆತ್ಮಬಲದಿಂದಷ್ಟೇ ವಿರೋಧಿಸಲು ಸಾಧ್ಯವೆಂದು ಹೇಳಿ; ಅದಕ್ಕೆ ಪರ್ಯಾಯವಾಗಿ ಸ್ವಾವಲಂಬಿ ಗ್ರಾಮ ಸಂಸ್ಕೃತಿಯನ್ನು ಪ್ರತಿಪಾದಿಸಿದ ಗಾಂಧಿ ಇಂದು ಅಧ್ಯಯನ ಮತ್ತು ಹೋರಾಟಗಳೆರಡರ ನೆಲೆಗಳಲ್ಲೂ ಕೇವಲ ಪ್ರತಿರೋಧದ ಸಂಕೇತವಾಗಿಬಿಟ್ಟು, ಪ್ರತಿಭಟನೆಗಳ ಸಂದರ್ಭದಲ್ಲಿ ಮಾತ್ರ ಏಕೆ ನೆನಪಿಗೆ ಬರುತ್ತಾರೆ? ಅದೂ ಆಧುನಿಕ ನಾಗರೀಕತೆಯ ಫಲಗಳಿಗಾಗಿ ನಡೆಯುವ ಪ್ರತಿಭಟನೆಯ ಸಂದರ್ಭಗಳಲ್ಲಿ!

ಇನ್ನು ಆಧುನಿಕ ನಾಗರೀಕತೆಯನ್ನು ಗಾಂಧಿಯಂತೆ ಇಡಿಯಾಗಿ ಪ್ರಶ್ನಿಸದೆ, ಮಾರ್ಕ್ಸ್‌ನಂತೆಯೇ ಅದರಲ್ಲಿನ ಸಮಾನತೆಯ ತುಡಿತದಲ್ಲಿ ಮನುಷ್ಯನ ಬಿಡುಗಡೆಯ ಸಾಧ್ಯತೆಯನ್ನು ಕಂಡು; ವಿಕೇಂದ್ರಿತ ಉತ್ಪಾದನಾ ಮತ್ತು ಆಡಳಿತ ತಂತ್ರಗಳ ಮೂಲಕ ಅದರ ವೇಗ ಮತ್ತು ಆಕ್ರಮಣಶೀಲತೆಗಳನ್ನು ಪಳಗಿಸಬಲ್ಲ ಸರಳ ಸಭ್ಯ ಜೀವನಮಟ್ಟದ ಸೃಜನಶೀಲ ಸಿದ್ಧಾಂತವೊಂದನ್ನು ಮಂಡಿಸಿದ ಲೋಹಿಯಾ ಇಂದು ಸಮಕಾಲೀನ ರಾಜಕೀಯ ಚರ್ಚೆಗಳ ಮಧ್ಯದಿಂದಲೇ ಕಾಣೆಯಾಗಿದ್ದಾರೆ ಏಕೆ? ಕಂಡರೂ ಮುಲಾಯಂ, ಲಾಲೂ ಇತ್ಯಾದಿ ಭಂಡ ರಾಜಕಾರಣಿಗಳ ಮೂಲಕವಷ್ಟೇ ಕಾಣುವ ದುಸ್ಥಿತಿಗೆ ಈಡಾಗಿದ್ದಾರೇಕೆ? ಇದು ನಮ್ಮ ತಾತ್ವಿಕ ಚರ್ಚೆಗಳು ಸೃಜನಶೀಲತೆಯನ್ನು ಕಳೆದುಕೊಂಡು ಭಂಡ ದಾರಿ ಹಿಡಿದಿರುವ ಸಂಕೇತವೇ? ಇವರ ಮಧ್ಯೆ, ಭಾರತದ ಪರಂಪರಾಗತ ದುಡಿಯುವ ಮತ್ತು ಅಪಮಾನಿತ ವರ್ಗವಾಗಿದ್ದ ದಲಿತರ ಶಾಪವಿಮೋಚನೆಯನ್ನು ಆಧುನಿಕ ನಾಗರೀಕತೆಯ ವಿಸ್ತರಣೆಯಲ್ಲಿ ಕಂಡು, ಅದನ್ನು ಉದಾರವಾದಿ ಪ್ರಜಾಪ್ರಭುತ್ವದ ಮೂಲಕ ಜನತೆಯ ಉಳಿದ ಭಾಗದೊಡನೆ ಸೇರಿ ಸಾಧಿಸುವ ಕನಸು ಕಂಡ ಅಂಬೇಡ್ಕರ್‌ರ ಚಿಂತನೆಗಳು ನಮ್ಮ ಮುಖ್ಯ ರಾಜಕೀಯ ಚರ್ಚೆಗಳ ಅಂಚಿನಲ್ಲೇ ಉಳಿದು, ಇಂದಿನ ಬಹುಜನ ಸಮಾಜ ಪಕ್ಷದ ರೂಪದಲ್ಲಿ ಅಶ್ಲೀಲಗೊಳ್ಳುವ ಅಪಾಯವನ್ನು ಎದುರಿಸುತ್ತಿದೆ ಏಕೆ?

ಈ ಪ್ರಶ್ನೆಗಳಿಗೆ ನಾವು ಕಂಡುಕೊಳ್ಳುವ ಉತ್ತರಗಳೇ ಬಹುಶಃ ಈ ಐವ್ವರು ಚಿಂತಕರತ್ತ ಮರುನೋಟದ ಸಾಧುತ್ವ ಮತ್ತು ಸಾಧ್ಯತೆಗಳನ್ನು ತೆರೆಯಬಲ್ಲವು. ಇವರೆಲ್ಲ ಇಂದು ಅಪ್ರಸ್ತುತಗೊಂಡಿರುವುದೆಂದು ಹೇಳಲಾದ ಸಮಾಜವಾದಿ ಚಿಂತನಾ ಕ್ರಮಕ್ಕೆ ಸೇರಿದವರು. ಆಧುನಿಕತೆ ಸೃಷ್ಟಿಸಿದ ಹೊಸ ಸಂಪತ್ತು ಮತ್ತು ಅಧಿಕಾರ ಕೇಂದ್ರಗಳ ಅಧ್ಯಯನ ಮಾಡಿ, ಅವುಗಳನ್ನು ಸಮಾನತೆಯ ಗುರಿಯತ್ತ ಪುರ್ನಸಂಘಟಿಸುವ ಪ್ರಯತ್ನ ಮಾಡಿದವರು. ಇವರಲ್ಲಿ ಮಾರ್ಕ್ಸ್ ವೈಜ್ಞಾನಿಕ ಸಮಾಜವಾದಿ ಎನಿಸಿಕೊಂಡರೆ, ಲೋಹಿಯಾ ಪ್ರಜಾಸತ್ತಾತ್ಮಕ ಸಮಾಜವಾದಿ ಎನಿಸಿಕೊಂಡವರು. ಅಂಬೇಡ್ಕರ್ ಸಂವೈಧಾನಿಕ ಸರ್ಕಾರಿ ಸಮಾಜವಾದವನ್ನು ಪ್ರತಿಪಾದಿಸಿದವರು. ಗಾಂಧೀಜಿ, ಔಪಚಾರಿಕವಾಗಿ ಸೈದ್ಧಾಂತಿಕ ನೆಲೆಯಲ್ಲಿ ಸಮಾಜವಾದಿ ಎಂದೆನಿಸಿಕೊಳ್ಳದಿದ್ದರೂ, ತಮ್ಮದೇ ಅನೌಪಚಾರಿಕ ರೀತಿಯಲ್ಲಿ ಸಾರ್ವತ್ರಿಕ ಸಮಾನತೆಯ ಪ್ರತಿಪಾದಕರಾಗಿ, ತಮ್ಮನ್ನು ಹೆಮ್ಮೆಯಿಂದ ಹುಟ್ಟು ಸಮಾಜವಾದಿ ಎಂದು ಕರೆದುಕೊಂಡವರು.

ಆದರೆ ಇವರ ಮಧ್ಯೆ ಕೆಲವು ಮೂಲಭೂತ ಭಿನ್ನಾಭಿಪ್ರಾಯಗಳಿದ್ದವು. ಅವುಗಳ ವಿವರಗಳಿಗೆ ನಾನಿಲ್ಲಿ ಹೋಗುವುದಿಲ್ಲವಾದರೂ, ಇಂತಹ ಭಿನ್ನಾಭಿಪ್ರಾಯಗಳ ಮೂಲ ನೆಲೆಯೊಂದನ್ನು ಗುರುತಿಸುವುದು ಇವೊತ್ತಿನ ಚರ್ಚೆಯ ದೃಷ್ಟಿಯಿಂದ ಮುಖ್ಯ ಎಂದು ನಾನು ಭಾವಿಸಿದ್ದೇನೆ. ಅದು ಇತಿಹಾಸವನ್ನು ಅರ್ಥ ಮಾಡಿಕೊಳ್ಳುವ ನೆಲೆ.

ಮಾರ್ಕ್ಸ್ ಇತಿಹಾಸವನ್ನು ನಿರೂಪಿಸಲು ಕಟ್ಟಿದ ವರ್ಗ ಹೋರಾಟದ ಸಿದ್ಧಾಂತವನ್ನು ಗಾಂಧೀಜಿ 'ಕಟ್ಟುಕಥೆ' ಎಂದು ತಳ್ಳಿ ಹಾಕಿದರು. 'ದಾಸ್ ಕ್ಯಾಪಿಟಲ್'ನ್ನು ಓದಿದ್ದ ಗಾಂಧಿ, ಮಾರ್ಕ್ಸ್‌ನಿಗೆ ಆ ಎಲ್ಲ ಪರಿಶ್ರಮಕ್ಕೆ ದೊರೆತ ಬಿಡುವು ತಮಗೆ ದೊರೆತಿದ್ದರೆ ತಾವು ಅದನ್ನು ಇನ್ನೂ ಚೆನ್ನಾಗಿ ಬರೆಯುತ್ತಿದ್ದುದಾಗಿ ಹೇಳುತ್ತಾರೆ. ಬಹುಶಃ ಅವರು, ಅದು ಎಷ್ಟಾದರೂ ಬರವಣಿಗೆ ಎಂಬ ಸಣ್ಣ ವ್ಯಂಗ್ಯದೊಂದಿಗೆ ಈ ಮಾತನ್ನಾಡಿದರೋ ಏನೋ ಎನಿಸುತ್ತದೆ! ಅವರ ಪ್ರಕಾರ ಮಾನವ ಇತಿಹಾಸ ಎಂದರೆ, ಕೆಲವು ಘರ್ಷಣೆಗಳ 'ಬಿಡುವು'ಗಳುಳ್ಳ ಮಾನವ ಪ್ರೇಮದ ನಿರಂತರ ಕಥೆ. ಲೋಹಿಯಾ ಕೂಡಾ ಮಾರ್ಕ್ಸ್‌ನ ವರ್ಗ ಹೋರಾಟದ ಸಿದ್ಧಾಂತ ಇತಿಹಾಸದ ಸರಳೀಕರಣ ಎಂದು ಪ್ರತಿಪಾದಿಸಿ; ಆಧುನಿಕನಾಗರೀಕತೆ ಸೃಷ್ಟಿಸಿದ ವಸಾಹತುಶಾಹಿಯನ್ನು ಪರಿಗಣಿಸದೆ 'ಸಮಾಜವಾದಿ ಸಮಾನತೆ' ಯನ್ನು ಅರ್ಥೈಸಲಾಗುವುದಿಲ್ಲ ಎಂದು ವಾದಿಸಿದರು. ಇದು ಒಂದು ರೀತಿಯಲ್ಲಿ ಆಧುನಿಕ ನಾಗರೀಕತೆ ಕುರಿತ ಗಾಂಧಿ ಚಿಂತನೆಯ ರಾಜಕೀಯ ವಿಸ್ತರಣೆಯೇ ಆಗಿತ್ತು. ಇನ್ನು ಅಂಬೇಡ್ಕರ್ ವರ್ಗ ವೈರುಧ್ಯಗಳನ್ನು ಭಾರತದ ಸಂದರ್ಭದಲ್ಲಿ ಜಾತಿ ಪರಿಭಾಷೆಯ ನೆಲೆಯಲ್ಲಿ ಒಪ್ಪಿದರಾದರೂ, ಅದು ಮಾರ್ಕ್ಸ್ ಹೇಳಿದ 'ಕ್ರಾಂತಿಕಾರಿ' ಮಾರ್ಗದ ಮೂಲಕ ಅಲ್ಲ; ಸಂಸದೀಯ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಪರಿಹರಿಸಲ್ಪಡಬೇಕು ಎಂದು ನಂಬಿದ್ದರು.

ಹೀಗಾಗಿ ಆಧುನಿಕ ನಾಗರೀಕತೆ ಮತ್ತು ಅದರ ಚಲನಶೀಲತೆ ಕುರಿತಂತೆ ಮಾರ್ಕ್ಸ್ ಒಂದು ನೆಲೆಯಲ್ಲಿ ನಿಂತು ಚರ್ಚಿಸಿದರೆ, ಮಿಕ್ಕ ಮುವ್ವರು ಇನ್ನೊಂದು ನೆಲೆಯಲ್ಲಿ ನಿಂತು ಚರ್ಚಿಸಿದಂತೆ ತೋರುತ್ತದೆ. ಇದಕ್ಕೆ ಮುಖ್ಯಕಾರಣ, ಇಡೀ ಜಗತ್ತು ಮನುಷ್ಯ ಶ್ರಮದಿಂದ ಸೃಷ್ಟಿಯಾಗಿದೆ ಎಂಬ ಭೌತ ನಿಲುವನ್ನು ತಳೆಯುವ ಮೂಲಕ ಮಾರ್ಕ್ಸ್, ಮನುಷ್ಯನನ್ನು ಮೂಲತಃ ಇತಿಹಾಸದ ಉಪಕರಣ ಮಾತ್ರವಾಗಿ ನೋಡಿದನೇನೋ ಎಂಬ ಅನುಮಾನ ಮಿಕ್ಕ ಮೂವರು ಚಿಂತಕರಲ್ಲಿದ್ದಂತಿರುವುದು. ಈ ಮೂವರ ಪ್ರಕಾರ, ಮನುಷ್ಯ ಒಮ್ಮೆಗೇ ಉಪಕರಣವೂ ಹೌದು, ಗುರಿಯೂ ಹೌದು; ಅವನು ಉಪಕರಣವಾಗಿರುವುದು ಗುರಿಯಾಗುವ ಪ್ರಕ್ರಿಯೆಯ ಭಾಗವಾಗಿಯೇ. ಇದು ಮಾರ್ಕ್ಸ್‌ನ ಆಲೋಚನಾ ಕ್ರಮದಲ್ಲಿ ದೂರ ತರ್ಕದ ಭಾಗವಾಗಿ ಮತ್ತು ಆನುಷಂಗಿಕ ಮಾತ್ರವಾಗಿ ಕಾಣಲು ಕಾರಣ, ಆತ ಯೂರೋಪಿನ ಜ್ಞಾನಯುಗ ಮೂಲವಾದ ಭೌತವಾದಿ ನಾಗರೀಕತೆಯ ಉತ್ಪನ್ನ ಎಂಬುದೇ ಆಗಿರಬಹುದು. ಈ ಒಡಕನ್ನು ಅರಿಯದೇ ಭಾರತದಲ್ಲಿ ಸಮಾಜವಾದಿ ಸಿದ್ಧಾಂತಗಳು ಮತ್ತು ಹೋರಾಟಗಳು ತಮ್ಮ ತಮ್ಮಲ್ಲೇ ಕಟುವಾಗಿ ಹೊಡೆದಾಡಿಕೊಂಡಿದ್ದರಿಂದಲೇ, ಅವು ಗುರಿ ಕಾಣದಾಗಿ ಸೋತು, ಅಂತಿಮವಾಗಿ ಜಾಗತೀಕರಣ ಎಂಬ ನವ ಬಂಡವಾಳವಾದಿ ಮತ್ತು ನವವಸಾಹತುವಾದಿ ರಾಜಕಾರಣಕ್ಕೆ ಸುಲಭವಾಗಿ ದಾರಿ ಮಾಡಿಕೊಟ್ಟಿತೆಂದು ಹೇಳಬಹುದು.

ದುಃಖದ ಸಂಗತಿಯೆಂದರೆ, ಈ ಐವ್ವರು ಚಿಂತಕರ



ಮಾರ್ಕ್ಸ್

ನಡುವಣ ತಾತ್ವಿಕ ಭಿನ್ನಾಭಿಪ್ರಾಯಗಳು ಈ ಚಿಂತನೆಗಳನ್ನ ಧಾರಿಸಿದ ಚಳುವಳಿಗಳ ಸಂದರ್ಭದಲ್ಲಿ ವಿಪರೀತಕ್ಕೆ ಹೋಗಿ ಪರಸ್ಪರ ಶತ್ರುತ್ವ ರೂಪವನ್ನು ತಾಳಿಬಿಟ್ಟವೆ. ಈ ಭಿನ್ನಾಭಿಪ್ರಾಯಗಳು ತುಂಬಾ ಸಂಕೀರ್ಣ ನೆಲೆಯವಾಗಿದ್ದು, ಅವು ಶೋಷಣೆ ಮತ್ತು ಅಸಮಾನತೆಗಳೆಂಬ ಯಮಳ ಶತ್ರುವಿನೆದುರಿಗೆ ಪೂರ್ಣವಾಗಿ ಪರಸ್ಪರ ವಿರುದ್ಧ ವಾದವುಗಳೇನಲ್ಲ ಎಂಬ ವಿವೇಕವೇ ಈ ಚಳುವಳಿಗಳ ಸ್ಪರ್ಧಾತ್ಮಕತೆಯ ಕಾವಿನಲ್ಲಿ ಕಾಣೆಯಾಗಿದೆ.

ಈ ಹಿನ್ನೆಲೆಯಲ್ಲಿ, ಒಂದು ಕಡೆ ಮಾರ್ಕ್ಸ್‌ನ ಇತಿಹಾಸ ತತ್ವ ಮತ್ತು ಅದರ ನೈತಿಕ ನಿರಪಕ್ಷತೆಯನ್ನು ಪ್ರಶ್ನಿಸುವ ಲೋಹಿಯಾ, ಮಾರ್ಕ್ಸ್‌ನನ್ನು ಆತನ ಚಿಂತನೆಯ ಮೂಲಭೂತ ಕ್ರಾಂತಿ ಕಾರಕತ್ವಕ್ಕಾಗಿ ಇತಿಹಾಸದ ಮಹಾಪುರುಷರಲ್ಲೊಬ್ಬ ಎಂದು ವರ್ಣಿಸಿದ್ದರೆ; ಇನ್ನೊಂದು ಕಡೆ ಖಾದಿ ಮತ್ತು ಗ್ರಾಮೋದ್ಯೋಗವನ್ನು ಗಾಂಧಿಯ ಪ್ರೇತವೆಂದು ಖಂಡಿಸುವ ಲೋಹಿಯಾ, ಗಾಂಧೀಜಿ ಆಧುನಿಕ ನಾಗರೀಕತೆಯನ್ನು ವಿಮರ್ಶಿಸುವ ಸೃಜನಶೀಲ ಪರಿಯಲ್ಲಿ ಅವರನ್ನು ಹೊಸ ವಿಶ್ವ ನಾಗರೀಕತೆಯ ಹರಿಕಾರರನ್ನಾಗಿ ಕಂಡು ಬುದ್ಧ ಮತ್ತು ಕ್ರಿಸ್ತನ ನಂತರದ ಮಾನವತೆಯ ಮಹಾ ಪ್ರತೀಕ ಎಂದು ಗುರುತಿಸುವ ಮೂಲಕ ತಮ್ಮ ಸಮಾಜವಾದಿ ಹೋರಾಟದ ಮೂಲಸ್ಫೂರ್ತಿಯನ್ನಾಗಿ ಮಾಡಿಕೊಂಡಿದ್ದರು ಎಂಬುದನ್ನೂ ನಾವು ಗಮನಿಸಬೇಕು.

ಹಾಗೇ, ಗಾಂಧೀಜಿಯ 'ಮಹಾತ್ಮ'ತನವನ್ನು ಗೇಲಿ ಮಾಡುವಂತೆ ತೋರುವ ಅಂಬೇಡ್ಕರ್, ಪೂನಾ ಒಪ್ಪಂದಕ್ಕೆ ಸಹಿ ಹಾಕುವ ಸಂದರ್ಭದಲ್ಲಿ ಗಾಂಧೀಜಿಯನ್ನು 'ಮಹಾತ್ಮಾಜಿ' ಎಂದೇ ಸಂಬೋಧಿಸಿ ಆಡುವ ಈ ಮಾತುಗಳನ್ನೂ ನಾವು ಈ ಸಂದರ್ಭದಲ್ಲಿ ಗಮನಿಸಬೇಕು: 'ಅವರನ್ನು ಮುಖತಃ ಭೇಟಿಯಾಗಿ ಮಾತನಾಡಿದಾಗಲೇ ನನ್ನ ಮತ್ತು ಅವರ ನಡುವೆ ಎಷ್ಟೊಂದು ಸಾಮ್ಯಗಳಿವೆ ಎಂಬುದು ನನ್ನ ಅರಿವಿಗೆ ಬಂದು ನಾನು ಆಶ್ಚರ್ಯ, ಪರಮಾಶ್ಚರ್ಯಗೊಂಡೆ. ಅವರು ಈ ಸಂದರ್ಭದಲ್ಲಿ ದುಂಡು ಮೇಜಿನ ಪರಿಷತ್ ಸಂದರ್ಭದಲ್ಲಿದ್ದುದಕ್ಕಿಂತ ಎಷ್ಟು ಭಿನ್ನರಾಗಿದ್ದರೆಂದರೆ, ಅವರು ತಮ್ಮ ಶಿಷ್ಯರಗಿಂತ ನನ್ನ ಕಡೆಗೇ ಹೆಚ್ಚು ಒಲವು ತೋರಿದ್ದಾರೆ... ಆ ಮೂಲಕ ನನ್ನನ್ನು ದೊಡ್ಡ ಸಂಕಟದಿಂದ ಪಾರು ಮಾಡಿದ್ದಾರೆ. ಹಳೆಯದೆಲ್ಲಾ ಹಳೆಯದೇ. ಹಾಗಾಗಿ ಅದನ್ನೆಲ್ಲ ಮರೆತು ನಾನು ಇಂದು ಸಂತೋಷದಿಂದ ಈ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದೇನೆ'.

ಅಲ್ಲದೆ, ಗಾಂಧೀಜಿ 'ಸ್ವಾತಂತ್ರ್ಯ ಹೋರಾಟ' ಎಂಬ ತಮ್ಮ ಬದುಕಿನ ಅರ್ಥದ ಅನ್ವೇಷಣೆಯ ಹೋರಾಟದ ಆಧಾರದ ಮೇಲೆ 'ದೇವರು ಸತ್ಯ' ಎಂಬ ಸಾಂಪ್ರದಾಯಿಕ ಸತ್ಯವನ್ನು 'ಸತ್ಯವೇ ದೇವರು' ಎಂದು ತಲೆಕೆಳಗು ಮಾಡುವ ಮೂಲಕ ಹಿಂದೂ ಧರ್ಮ ವನ್ನು ಮರಳಿ ಬೌದ್ಧ ಧರ್ಮದೆಡೆಗೆ ಒಯ್ಯುವ ಪ್ರಯತ್ನ ಮಾಡಿದರೆ, ಅಂಬೇಡ್ಕರ್ ತಮ್ಮ ಹೋರಾಟದ ಬದುಕಿನ ಸಾರ್ಥಕತೆ ಕಂಡುಕೊಳ್ಳಲು ತಮ್ಮ ಬದುಕಿನ ಅಂತಿಮ ದಿನಗಳಲ್ಲಿ ಬೌದ್ಧ ಧರ್ಮವನ್ನು ಸೇರಿಕೊಂಡರು ಎಂಬ ಸಂಗತಿ ಮೂಲತಃ ಇವರಿಬ್ಬರದೂ ಸಾಮಾಜಿಕ ನೆಲೆಗಳ ಭಿನ್ನತೆಯ ಹೊರತಾಗಿ, ಒಂದೇ ಎರಕದ ವ್ಯಕ್ತಿತ್ವಗಳು ಎಂಬುದನ್ನು ಶ್ರುತಪಡಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಇಲ್ಲಿ ನಾವು ಗಮನಿಸಬೇಕಾದ ಇನ್ನೂ ಒಂದು ಕುತೂಹಲದಾಯಕ ಸಂಗತಿ ಎಂದರೆ, ಅಂಬೇಡ್ಕರ್ ಮಾರ್ಕ್ಸ್‌ವಾದವನ್ನು ಅದು ಹಿಂಸೆಯನ್ನು ಇತಿಹಾಸದ ಸೂಲಗಿತ್ತಿ ಎಂದು ವರ್ಣಿಸುತ್ತಾ ಕ್ರಾಂತಿಯನ್ನು ಪ್ರತಿಪಾದಿಸಿದ್ದಕ್ಕಾಗಿ ಅದರಿಂದ ದೂರ ಸರಿದವರಾದರೂ, ತಾವು ಮಾನವನ ಅಂತಿಮ ಬಿಡುಗಡೆಯ ಸಾಧನವೆಂದು ಒಪ್ಪಿದ ಬೌದ್ಧ ಧರ್ಮವನ್ನು ವ್ಯಾಖ್ಯಾನಿಸಿದ್ದು ಮಾತ್ರ ಮಾರ್ಕ್ಸ್ ವಾದಿ ಪರಿಭಾಷೆಯಲ್ಲಿಯೇ! ಇದನ್ನು ಬೌದ್ಧ ಪಂಡಿತರು ಒಪ್ಪುವುದಿಲ್ಲ ಎಂಬುದು ಬೇರೆ ಮಾತು.

ಇಂತಹ ಅಂಬೇಡ್ಕರರನ್ನು ಲೋಹಿಯಾ, ಗಾಂಧೀಜಿಯ ನಂತರದ ಯಾವುದೇ ಸವರ್ಣೀಯ ನಾಯಕನಿಗೂ ಸಮನಾಗಬಲ್ಲ ಧೀಮಂತ ನಾಯಕ ಎಂದು ಗುರುತಿಸುತ್ತಾರೆ ಎಂಬುದನ್ನೂ ನಾವು ಗಮನಿಸಬೇಕು. ಐವತ್ತರ ದಶಕದಲ್ಲಿ ತಮ್ಮ ಪ್ರಜಾ ಸಮಾಜವಾದಿ ಪಕ್ಷ ತನ್ನ ತಾತ್ವಿಕ ದಿಕ್ಕನ್ನು ಕಳೆದುಕೊಂಡು ನೆಹ್ರೂವಾದಿಯಾಗುತ್ತಿದೆಯೆಂದು ಅದನ್ನು ಬಿಟ್ಟು ತಮ್ಮದೇ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿಕೊಂಡ ಸಂದರ್ಭದಲ್ಲಿ ಲೋಹಿಯಾ, ಅನೇಕ ರಾಜಕೀಯ ಪ್ರಯೋಗಗಳನ್ನು ಮಾಡಿ ಹಣ್ಣಾಗಿದ್ದ ಅಂಬೇಡ್ಕರರನ್ನು ತಮ್ಮ ಪಕ್ಷದ ಕಕ್ಷೆಗೆ ತರುವ ಪ್ರಯತ್ನ ಮಾಡುತ್ತಾರೆ. ಆದರೆ ಆ ಪ್ರಯತ್ನ ನಡೆಯುತ್ತಿರುವ ಸಂದರ್ಭದಲ್ಲೇ ಅಂಬೇಡ್ಕರ್ ವಿಧಿವಶರಾದಾಗ, ಲೋಹಿಯಾ ತಮ್ಮ ಕಿರಿಯ ಸಮಾಜವಾದಿ ಗೆಳೆಯ ಮಧು ಲಿಮಯೆಗೆ ಬರೆದ ಪತ್ರದಲ್ಲಿ ಹೀಗೆ ಬರೆಯುತ್ತಾರೆ: ' ಅಂಬೇಡ್ಕರ್ ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿಯನ್ನು ಒಂದಲ್ಲ ಒಂದು ದಿನ ನಾಶಪಡಿಸಬಹುದೆಂಬ ನನ್ನ ಆತ್ಮವಿಶ್ವಾಸದ ಹಾಗೂ ನೆಮ್ಮದಿಯ ಪ್ರತೀಕವಾಗಿದ್ದರು. ಮಹಾ ವಿದ್ವಾಂಸರೂ, ಮಹಾ ಪ್ರಾಮಾಣಿಕರೂ, ಬಹು ಸ್ವತಂತ್ರ ಬುದ್ಧಿಯವರೂ ಆಗಿದ್ದ ಸಮಗ್ರ ವ್ಯಕ್ತಿತ್ವದ ಅಂಬೇಡ್ಕರ್, ಬಾಹ್ಯ ಜಗತ್ತಿನ ಎದುರು ಭಾರತದ ಪ್ರತೀಕವಾಗಿ ನಿಲ್ಲಬಲ್ಲವರಾಗಿದ್ದರು. ಆದರೆ ಅವರ ಮನಸ್ಸು ಕಹಿಯಾಗಿತ್ತು ಮತ್ತು ಯಾವಾಗಲೂ ಅವರು ಪ್ರತ್ಯೇಕತೆಯನ್ನು ಬಯಸುತ್ತಿದ್ದರು. ದಲಿತೇತರ ನಾಯಕರಾಗಲು ಅವರು ನಿರಾಕರಿಸಿದರು. ಕಳೆದ ಐದು ಸಾವಿರ ವರ್ಷಗಳಲ್ಲಿ ದಲಿತರು ಅನುಭವಿಸಿರುವ ನೋವು ಮತ್ತು ಅಪಮಾನಗಳ ಅರಿವು ನನಗಿದೆ. ಆದರೆ ಅಂಬೇಡ್ಕರರಂತಹ ಅಪೂರ್ವ ವ್ಯಕ್ತಿತ್ವದ ನಾಯಕ ಇದನ್ನು ಮೀರಬಲ್ಲರೆಂದು ಆಶಿಸಿದ್ದೆ. ನನ್ನ ಆಸೆ

(49ನೇ ಪುಟಕ್ಕೆ)

ಮತ್ತೊಮ್ಮೆ ವಿಮರ್ಶೆಗೊಳಗಾಗುವ ಸಂಸ್ಕೃತಾನುಕರಣ



"ಸಂಸ್ಕೃತಾನುರಕಣ" ಶಬ್ದವನ್ನು ಪ್ರಪ್ರಥಮ ವಾಗಿ ಎಂ.ಎನ್ ಶ್ರೀನಿವಾಸ್,ಖ್ಯಾತ ಸಮಾಜ ಶಾಸ್ತ್ರಜ್ಞ ಕೊಡಗಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾ ವಣೆ ಸಂದ ರ್ಭದಲ್ಲಿ ಪ್ರಯೋಗಿಸಿದರು. ಇದು ಪ್ರಥಮ ಬಾರಿಗೆ. ಅಕ್‌ಫರ್ಡ್ ವಿ.ವಿಗೆ ಡಿ.ಫಿಲ್ ಪದವಿಗಾಗಿ ಅರ್ಪಿಸಿದ ಥೀಸಿಸ್ ನಲ್ಲಿ ಕಂಡು ಬರುತ್ತದೆ. ವಾಸ್ತವ ವಾಗಿ ಶ್ರೀನಿ ವಾಸ್‌ರವರು ಇನ್ನೊಬ್ಬ ಖ್ಯಾತ ಸಮಾಜ ಶಾಸ್ತ್ರಜ್ಞ ಜಿ.ಸ್.ಗುರೆಂ 'ವರ ಶಿಷ್ಯರು. ಇವರು ಗ್‌ಳಳ ರಲ್ಲಿಯೇ ತಮ್ಮ ಪ್ರಥಮ ಪಿಹೆಚ್.ಡಿ ಯ ನ್ನು ಬೊಂಬಾಯಿ ವಿ.ವಿ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಅವರ ಸಂಶೋಧನೆಗೆ ತೆಗೆದು ಕೊಂಡ ವಿಷಯ ಕೂ ರ್ಗಿಗಳ ಸಾಮಾಜಿಕ ಬದಲಾವಣೆ. ಆಕ್ಸ್ ಫರ್ಡ್‌ನಲ್ಲೂ ಇದೇ ವಿಷಯವನ್ನು ಇನ್ನಷ್ಟು ಆಳವಾಗಿ ಅಭ್ಯ ಸಿಸ ಲು ವಿಷಯವನ್ನು ಮತ್ತೋಮ್ಮೆ ಎತ್ತಿಕೊಂಡರು.

ಐವತ್ತು ವರುಷದ ನಂತರ ಖ್ಯಾತ ಸಮಾಜ ಶಾಸ್ತ್ರಜ್ಞ ಪ್ರೊ. ಎಂ.ಎಸ್.ಶ್ರೀನಿವಾಸ್ ಪ್ರತಿಪಾದಿಸಿದ "ಸಂಸ್ಕೃತಾನುಕರಣ" ಮತ್ತೊಮ್ಮೆ ಚರ್ಚೆಗೆ ಹಾಗೂ ವಿಮರ್ಶೆಗೊಳಗಾಗುತ್ತಿದೆ. ಕೆಲವು ತಿಂಗಳ ಹಿಂದೆ ಕರಾವಳಿಯ ಜಿಲ್ಲೆಯಾದ ಉಡುಪಿಯಲ್ಲಿ ಸೆಮಿನಾರೊಂದು ನಡೆ ದಿತ್ತು. ಅದೊಂದು ಸಾಧಾರಣ ಅಥವಾ ಯಾವುದೇ ವಿಶಿಷ್ಟತೆ ಇಲ್ಲದ ಸೆಮಿನಾರ್ ಅನ್ನಲು ಸಾಧ್ಯವಿಲ್ಲ. ಅದು ಒಂದೆಡೆ ಅಕಾಡೆಮಿಕ್ ಸೆಮಿ ನಾರ್ ತರಹ ಇದ್ದರೆ, ಮತ್ತೊಂದೆಡೆ ಜಾತಿಯ ಸೆಮಿನಾರ್ ಆಗಿತ್ತು . ಈ ಸೆಮಿನಾರ್ ಅನ್ನು ನಡೆಸಿದವರು ವಿಶ್ವಕರ್ಮ ಸಮುದಾಯದವರು. ವಿಶ್ವಕರ್ಮ ಒಕ್ಕೂಟದ ಆಶ್ರಯದಲ್ಲಿ ನಡೆದ ಸೆಮಿನಾರ್‌ನ ಶೀರ್ಷಿಕೆ ಈ ರೀತಿಯಿತ್ತು ಸಂಸ್ಕೃತಾನುಕರಣ ಮತ್ತು ವಿಶ್ವ ಬ್ರಾಹ್ಮಣರು. ಸೆಮಿನಾರ್‌ನ ಮೂಲ ಉದ್ದೇಶ ಇಡೀ ಸಮುದಾಯಕ್ಕೆ ಖ್ಯಾತ ಸಮಾಜ ಶಾಸ್ತ್ರಜ್ಞ ರಾದ ಪ್ರೊ.ಎಂ.ಎನ್.ಶ್ರೀನಿವಾಸ್‌ರವರಿಂದ "ವಿಶ್ವ ಬ್ರಾಹ್ಮಣ" ರಿಗಾದ ತಪ್ಪುಗಳನ್ನು ಸರಿಪಡಿಸುವುದಾಗಿತ್ತು ಇವರ ಪ್ರಕಾರ ಶ್ರೀನಿವಾಸ್ "ಸಂಸ್ಕೃತಾನುಕರಣ" ಸಿದ್ಧಾಂತಕ್ಕೆ "ಸ್ಮಿತ್ ಆಫ್ ಸೌತ್ ಇಂಡಿಯಾ", ಅದರಲ್ಲೂ ವಿಶ್ವಕರ್ಮ/ವಿಶ್ವಬ್ರಾಹ್ಮಣ ಜಾತಿಯನ್ನು ಉದಾಹಣೆಯಾಗಿ ತೆಗೆದುಕೊಂಡು ಅವಹೇಳನಕಾರಿಯಾಗಿ ವಿಶ್ಲೇಷಿಸಿ ಐತಿಹಾಸಿಕ ತಪ್ಪು ಮಾಡಿದ ಮಹಾನ್ ವ್ಯಕ್ತಿ. ಈ ಸೆಮಿನಾರ್‌ನ್ನು ಒಟ್ಟಾರೆಯಾಗಿ "ಸಂಸ್ಕೃ ತಾನುಕರಣ"ದ ನಿರಾಕರಣೆ,ಮೇಲ್ಜಾತಿಯ ಯಜಮಾನಿಕೆಯೊಂದಿಗೆ ಮುಖಾಮುಖಿ, ಹೊಸ ಐಡೆಂಟಿಟಿಯ ಚೌಕಟ್ಟನ್ನು ನಿರ್ಮಿಸುವ ಸಮು ದಾಯಗಳ ರೂಪಗಳಲ್ಲಿ ನೋಡಬೇಕು.

1950ರ ದಶಕದಲ್ಲಿ ಮಂಡಿಸಿದ ಸಮಾಜ ಶಾಸ್ತ್ರದ ಒಂದು ವಾದ ಇವತ್ತೇಕೆ ಪ್ರಸ್ತುತವಾಗುತ್ತಿದೆ? ಹಾಗೂ ಮಹತ್ವದಾಗುತ್ತಿದೆ? "ಸಂಸ್ಕೃತಾನುಕರಣ ಸಿದ್ಧಾಂತವನ್ನು ವಿರೋಧಿಸಲು ಒಂದು ಸಮುದಾ ಯಕ್ಕೆ ಅರ್ಧ ಶತಮಾನಗಳೇ ಬೇಕಾಯಿತೇ? ಎಂಬಿತ್ಯಾದಿ ಪ್ರಶ್ನೆಗಳು ಉದ್ಭವಿಸುವುದು ಸಹಜ.

ವಿಶ್ವ ಕರ್ಮರ ವಾದದಲ್ಲಿ ಎರಡು ಅಜೆಂಡಾಗಳಿರುವುದು ಸ್ಪಷ್ಟ. ಒಂದನೇದಾಗಿ ತಾವೂ ಸಾಮಾಜಿಕವಾಗಿ ವಿಶ್ವ ಬ್ರಾಹ್ಮಣರೆಂದು ಘೋಷಿಸಿ ಸಂಸ್ಕೃತಾನುಕರಣ ತಮಗೆ ಅನ್ವಯ ಆಗಲಾರದೆಂದು ಹೇಳಿ ಇಡೀ ಸಿದ್ಧಾಂತವನ್ನೇ ನಿರಾಕರಿಸುವುದು.. ಆ ಮೂಲಕ ತಾವು ಬ್ರಾಹ್ಮ ಣರಿಗಿಂತಲೂ ಮೇಲು ಎಂದು ಸಾರಿ ಹೇಳಿ ಕೊಳ್ಳುವುದು. ಇದಕ್ಕಾಗಿ ಇತಿಹಾಸ ಹಾಗೂ ಪುರಾಣವನ್ನು ಮತ್ತೆ ಮತ್ತೆ ಕೆದಕಿ ಹೊಸ ಸಾಮಾ ಜಿಕ ಐಡೆಂಟಿಟಿಯನ್ನು ನಿರ್ಮಿಸುವುದು. ಇಲ್ಲಿ ಐತಿಹಾಸಿಕವಾಗಿ ಬಂದಿ ರುವ ಸಮುದಾಯದ ಕುರಿತಾದ ಪಡಿಯಚ್ಚುಗಳ ನಿರ್ಮಿತಿಯ ನಿರಾ ಕರಣೆ ಒಂದೆಡೆಯಾದರೆ, ಮತ್ತೊಂದೆಡೆ ಬೌದ್ಧಿಕವಾಗಿ ಶ್ರೀನಿವಾಸ ರವರ ಸಿದ್ಧಾಂತವನ್ನು ಸಂಪೂರ್ಣವಾಗಿ ಅಲ್ಲಗಳೆದು ಹೊಸ ವಾದ ವನ್ನು ಮುಂದಿಡುವುದು ಅಷ್ಟೇ ಮುಖ್ಯವಾಗುತ್ತದೆ. ಇದು ಈ ವಾದದಲ್ಲಿ ಸ್ಪಷ್ಟವಾಗಿದೆ. "ಶಿಲ್ಪಿ ಯನ್ನು ಬ್ರಾಹ್ಮಣರು ಎಂದು ಕರೆಯುವುದು ಪ್ರಾಚೀನ ಕಾಲ ದಿಂದಲೂ ರೂಢಿಯಲ್ಲಿದೆ. ಅದೇ ಇಂದಿಗೂ ಬಳಕೆಯ ಲ್ಲಿದೆ. ವಿಶ್ವಕರ್ಮ ಎಂಬುದು ಬ್ರಾಹ್ಮಣ ಕುಲವಾಚಕ ಶಬ್ದವೇ ಆಗಿದೆ. ಅದಕ್ಕೆ ಬ್ರಾಹ್ಮಣರು ಎಂದು ಸೂಚಿಸುವ ಅವಶ್ಯಕತೆಯಿಲ್ಲ ಎಂಬುದು ನಿರ್ವಿವಾದ. ವಿಶ್ವಬ್ರಾಹ್ಮಣರ ಗೋತ್ರಗಳು, ಸಾನಗ, ಸನಾ ತನ, ಅಹಭೂನಸ, ಪ್ರತ್ನಸ, ಸುಪರ್ಣ ಹಾಗೆಯೇ ಸಪ್ತರ್ಷಿಗಳು ಬ್ರಾಹ್ಮಣರಲ್ಲಿರುವ ಗೋತ್ರಗಳು ವಿಶ್ವಾಮಿತ್ರ,ಜಮದಗ್ನಿ, ಭಾರದ್ವಾಜ, ಅಗಸ್ತ್ಯ ಇತ್ಯಾದಿ. ಈ ಎಲ್ಲಾ ಕಾರಣದಿಂದ ವಿಶ್ವಬ್ರಾಹ್ಮಣರು ಮೂಲತಃ ಬ್ರಾಹ್ಮಣರೇ ಆಗಿರುತ್ತಾರೆ. ಆದ್ದರಿಂದ ಅನುಕರಣೆಯ ಪ್ರಶ್ನೆಯೇ ಬರೆ ವುದಿಲ್ಲ. ತಮ್ಮ ಜಾತೀಯ ಪ್ರಾಬಲ್ಯಕ್ಕಾಗಿ ವಿಶ್ವಬ್ರಾಹ್ಮಣರನ್ನು ಸಂಸ್ಕೃ ತಾನುರಕಣಕ್ಕೆ ಒಳಪಟ್ಟವರು ಎನ್ನುತ್ತಾರೆ ಎಂ.ಎನ್.ಶ್ರೀನಿವಾಸ್.'ಇದು ಅವಾಸ್ತವ, ಅಪ್ರಸ್ತುತ,ಅಸಂಬಂದ್ಧ ಎಂಬುದರಲ್ಲಿ ಎರಡು ಮಾತಿಲ್ಲ." ಒಂದೆಡೆ ತಮ್ಮನ್ನು ವಿಶ್ವ ಬ್ರಾಹ್ಮಣರೆಂದು ನಿರ್ಮಿಸುವ ಸಮುದಾಯ ಮತ್ತೊಂದೆಡೆ ರಾಜಕೀಯ ರಹಿತವಾಗಿರಲು ಸಾಧ್ಯವೇ? ಕರ್ನಾಟಕ ದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಗುರುತಿಸಿಕೊಳ್ಳುವುದು ಎಷ್ಟು ಸರಿ? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಬೇಕಾದದ್ದು ಅನಿವಾರ್ಯ.

ಈ ಸಂದರ್ಭದಲ್ಲಿ ವಿಶ್ವಕರ್ಮರು ತಮ್ಮ ರಾಜಕೀಯ ಅಜೆಂಡಾ ಗಳನ್ನು ಎಲ್ಲಿಯೂ ತೋರಿಸಿಕೊಳ್ಳುವುದಿಲ್ಲ. ಅದರರ್ಥ ಅವರು ರಾಜ ಕೀಯ ರಹಿತರರೂ ಅಲ್ಲ. ಈ ರೀತಿಯ ರಾಜಕಾರಣಕ್ಕೆ ವಿಶ್ವಕ ರ್ಮರೂ ಅಪವಾದವಲ್ಲ, ಯಾಕೆಂದರೆ ಇವತ್ತಿನ ಸಂಧರ್ಭದಲ್ಲಿ ಯಾವುದೇ ಸಮುದಾಯ ರಾಜಕೀಯ ರಹಿತವಾಗಿರಲು ಸಾಧ್ಯವಿಲ್ಲ, ಅದರಲ್ಲೂ ಮಧ್ಯಮ ಜಾತಿಗಳಂತೂ ಇದರಿಂದ ಹೊರತಾಗಿಲ್ಲ. ಕೆಲವು ವರುಷದ ಹಿಂದೆ ಉದ್ಯೋಗ ಹಾಗೂ ನೇಮಕಾತಿಯಲ್ಲಿ 5 ಶೇಕಡಾ ಮೀಸಲಾತಿ, ಐದು ನಿಗಮಗಳ ಸ್ಥಾಪನೆ, ಆರೋಗ್ಯದ ಕಾರ್ಡ್ ಹಾಗೂ ಇತ್ತೀಚೆಗೆ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭೆ ಮೂರು ಶೇಕಡಾದಲ್ಲಿ ಸಾಲ ನೀಡಲು ಒತ್ತಾಯಿಸಿದ್ದು ಇಲ್ಲಿ ಉಲ್ಲೇಖಿ ಸಬೇಕು. ಇವೆಲ್ಲವನ್ನು ಸಮುದಾಯ ರಾಜಕೀಯದ ಭಾಗವಾಗಿವು ದನ್ನು ಎತ್ತಿ ತೋರಿಸುತ್ತದೆ. ಇಲ್ಲಿಸಾಮಜಿಕ ಹಾಗೂ ರಾಜಕೀಯ ದ್ವಂದ್ವಗಳ ನಡುವೆ ಸಮುದಾಯದ ಹೊಸ ಐಡೆಂಟಿಟಿಯ ನಿರ್ಮಾಣ ಅಂತರ್ಗತವಾಗಿರುವುದು ವಾಸ್ತವ. ದುರಂತವೆಂದರೆ ಸಾಮಾಜಿಕ ಪಡಿ ಯಚ್ಚುಗಳನ್ನು ನಿರಾಕರಿಸಲು ಒಂದು ಸಮುದಾಯಕ್ಕೆ ಅರ್ಧ ಶತ ಮಾನಗಳೇ ಬೇಕಾಯಿತು. ಇದು ಸಮುದಾಗಳಲ್ಲಿರುವ ಬೌದ್ಧಿಕ ಕೊರ ತೆಯನ್ನು ಎತ್ತಿತೋರಿಸುತ್ತದೆ. 1950ರ ದಶಕದಲ್ಲಿಯೇ ಸಮುದಾಯ ಗಳು ಎಂ.ಎನ್ ಶ್ರೀನಿವಾಸ್‌ರವರ ಸಂಸ್ಕೃತಾನುಕರಣವನ್ನು ಏಕೆ ವಿರೋಧಿಸಲು ಸಾಧ್ಯವಾಗಲಿಲ್ಲ? ಸಂಸ್ಕೃತಾನುಕರಣ ಇವತ್ತಿನ ಸಂದ ರ್ಭದಲ್ಲಿ ಎಷ್ಟು ಪ್ರಸ್ತುತ?

"ಸಂಸ್ಕೃತಾನುರಕಣ" ಶಬ್ದವನ್ನು ಪ್ರಪ್ರಥಮವಾಗಿ ಎಂ.ಎನ್ ಶ್ರೀನಿವಾಸ್,ಖ್ಯಾತ ಸಮಾಜ ಶಾಸ್ತ್ರಜ್ಞ ಕೊಡಗಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆ ಸಂದ ರ್ಭದಲ್ಲಿ ಪ್ರಯೋಗಿಸಿದರು. ಇದು ಪ್ರಥಮ ಬಾರಿಗೆ ಅಕ್ಸ್ ಫರ್ಡ್ ವಿ.ವಿಗೆ ಡಿ.ಫಿಲ್ ಪದವಿಗಾಗಿ ಅರ್ಪಿಸಿದ ಥೀಸಿಸ್ ನಲ್ಲಿ ಕಂಡು ಬರುತ್ತದೆ. ವಾಸ್ತವ ವಾಗಿ ಶ್ರೀನಿವಾಸ್‌ರವರು ಇನ್ನೊಬ್ಬ ಖ್ಯಾತ ಸಮಾಜ ಶಾಸ್ತ್ರಜ್ಞ ಜಿ.ಸ್.ಗುರೆರವರ

> **ಸಂಸ್ಕೃತಾನುಕರಣೆಗೆ ಯುದ್ಧವೂ ಕಾರಣವಾಗಿರುವ ಸ್ವಾರಸ್ಯಕರವಾದ ಘಟನೆ ಒಂದಿದೆ. ಇದನ್ನು ಸ್ವಾತಂತ್ರ್ಯ ಪೂರ್ವದಲ್ಲಿ ದಲಿತರಾದ ಜಾಟವರ ಸಂದರ್ಭದಲ್ಲಿ ನೋಡಬಹುದು.**

ಶಿಷ್ಯರು. ಇವರು 1944 ರಲ್ಲಿಯೇ ತಮ್ಮ ಪ್ರಥಮ ಪಿಹೆಚ್.ಡಿಯನ್ನು ಬೊಂಬಾಯಿ ವಿ.ವಿ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಅವರ ಸಂಶೋಧನೆಗೆ ತೆಗೆದು ಕೊಂಡ ವಿಷಯ ಕೂರ್ಗಿಗಳ ಸಾಮಾಜಿಕ ಬದಲಾವಣೆ. ಆಕ್ಸ್‌ಫರ್ಡ್‌ನಲ್ಲೂ ಇದೇ ವಿಷಯವನ್ನು ಇನ್ನಷ್ಟು ಆಳವಾಗಿ ಅಭ್ಯಸಿಸಲು ವಿಷಯವನ್ನು ಮತ್ತೊಮ್ಮೆ ಎತ್ತಿಕೊಂಡರು. ಅಲ್ಲಿ ಅವರ ಆರಂಭದ ಮಾರ್ಗದರ್ಶಕರು ಪ್ರೋ.ಆರ್ ರ್‍ಯಾಡಿಫಿಪ್, ಅವರ ನಿವೃತ್ತಿನಂತರ ಪ್ರೋ.ಇವಾನ್ ಆಗಿದ್ದರು.

1952ರಲ್ಲಿ ಪ್ರಕಟವಾದ ರಿಲಿಜಿಯನ್ ಆಂಡ್ ಸೊಸೈಟಿ ಅಮಂಗ್ ದ ಕೂರ್ಗಿಸ್ ಆಫ್ ಸೌತ್ ಇಂಡಿಯಾದಲ್ಲಿ ಸಂಸ್ಕೃತಾನುಕರಣಣದ ವಿಶ್ಲೇಷಣೆ ದೊರೆಯುತ್ತದೆ. ಅವರ ಪ್ರಕಾರ ಅಂದಿನ ಸಂದರ್ಭದಲ್ಲಿ ಜಾತಿ ಚಲನಶೀಲವಾಗಿರುತ್ತದೇ ಹೊರತು ಅದು ಚಲನಹೀನವಾಗಿರುವುದಿಲ್ಲ.. ಇದಕ್ಕೆ ಸಾಧ್ಯವಾದದ್ದು ಬ್ರಿಟಿಷರು ಅಳವಡಿಸಿದ ಆಧುನಿಕ ಸಂಪರ್ಕ ಸಾಧನಗಳು, ವಿದ್ಯಾಭ್ಯಾಸ, ಇತ್ಯಾದಿ. ಇದರ ಒಟ್ಟು ಪರಿಣಾಮ ಸಮುದಾಯಗಳಲ್ಲಿ ಹೊಸ ಮೌಲ್ಯಗಳ ಅಳವಡಿಕೆ. ಇದರರ್ಥ ಅದು ಸಾಮಾಜಿಕ ಚೌಕಟ್ಟುಗಳನ್ನು ಬದಲಾಯಿಸುತ್ತದೆ ಎಂಬ ಅರ್ಥವಲ್ಲ. ಬದಲಾವಣೆಯನ್ನು ಜಾತಿಗಳಲ್ಲಿ, ಅದರಲ್ಲೂ ಮಧ್ಯಮ ಜಾತಿಗಳಲ್ಲಿ ಸಾಮಾನ್ಯವಾಗುತ್ತದೆ. ಮಧ್ಯಮ ಜಾತಿಗಳು ಮೇಲ್ಜಾತಿಗಳ,ಅದರಲ್ಲೂ ಬ್ರಾಹ್ಮಣರ ಜೀವನ ಶೈಲಿ, ಮೌಲ್ಯಗಳನ್ನು, ನಂಬಿಕೆಗಳನ್ನು ಅನುಸರಿಸುತ್ತವೆ. ಸಂಸ್ಕೃತಾನುಕರಣದ ಪ್ರಕ್ರಿಯೆ ಸಂದರ್ಭದದಲ್ಲಿ ಈ ಜಾತಿಗಳು ಸಂಸ್ಕೃತದಲ್ಲಿರುವ ಕರ್ಮ, ಧರ್ಮ, ಪಾಪ, ಮಾಯಾ, ಸಂಸಾರ, ಸಂಸ್ಕಾರ ಇತ್ಯಾದಿಗಳನ್ನು ತಮ್ಮದಾಗಿಸುತ್ತವೆ. ವಾಸ್ತವವಾಗಿ ಶ್ರೀನಿವಾಸ್ ಪ್ರಕಾರ ಸಂಸ್ಕೃತಾನುಕರಣವೆಂಬುವುದು ನಿರಂತರ ಪ್ರಕ್ರಿಯೆ. ಸಂಸ್ಕೃತಾನುಕರಣ ಪ್ರಕ್ರಿಯೆಗೆ ಅವರು ನೀಡುವ ಉದಾಹರಣೆ ಕೊಡಗಿನಲ್ಲಿದ್ದ "ಸ್ಮಿತ್"-ವಿಶ್ವಕರ್ಮ ಸಮುದಾಯಗಳು. ಶ್ರೀನಿವಾಸ್ ಪ್ರಕಾರ ಸಂಸ್ಕೃತಾನುಕರಣವೆಂಬುದು ಬರೀ ಜಾತಿಗಳಿಗೆ ಮಾತ್ರ ಸೀಮಿತಗೊಂಡ ಪ್ರಕ್ರಿಯೆಯಲ್ಲ. ಬುಡಕಟ್ಟು ಜನಾಂಗ ಅಥವಾ ಸಮುದಾಯ ಸಂಸ್ಕೃತಾನುಕರಣ ಪ್ರಕ್ರಿಯೆಯಿಂದ ಹೊರತಾಗಿಲ್ಲ. ಇದಕ್ಕೆ ಅವರು ನೀಡುವ ಉದಾಹರಣೆ ಎಂದರೆ ಉತ್ತರ ಭಾರತದ ಭಿಲ್, ಗೊಂಡರು, ಹಾಗೂ ಒರಾನ್ ಬುಡಕಟ್ಟುಗಳು.

ಈ ಸಂಸ್ಕೃತಾನುಕರಣಣದ ಸಮಸ್ಯೆ ಆರಂಭಗೋಳ್ಳುವುದು ಅದು ಉಪಯೋಗಿಸುವ ಮೆಥಾಡಾಜಿಯಿಂದಲೇ. ಒಂದು ಪ್ರದೇಶಕ್ಕೆ ಅಥವಾ ಒಂದು ಸಮುದಾಯಕ್ಕೆ ಸೀಮಿತವಾದ ಅಧ್ಯಯನವನ್ನು ಇಡೀ ಭಾರತದ ವಿವಿಧ ಸಮಾಜಗಳಿಗ್ಗೆ ಅನ್ವಯಿಸುವುದು ಎಷ್ಟು ಸಮಂಜಸ? ಅಥವಾ ವಿಶ್ಲೇಷಿಸಲು ಸಾಧ್ಯವೇ? ವಾಸ್ತವವಾಗಿ ಶ್ರೀನಿವಾಸ್ ಇದೇ ತಪ್ಪನ್ನೇ ಮಾಡಿದರು, ಎರಡನೆದಾಗಿ ಸಂಸ್ಕೃತಾನುಕರಣೆಗೆ ವಸಾಹತು ಶಾಹಿಯ ಪ್ರಭಾವವನ್ನು ಅತೀ ಮುಖ್ಯವೆಂದು ವಾದಿಸಿದರು. ಇದ್ದನ್ನು ಸಾಕಷ್ಟು ಸಂಶೋಧಕರು ಅಂದಿನ ಸಂಧರ್ಭದಲ್ಲಿಯೇ ವಿರೋಧಿಸಿದ್ದರು. ಪಂಜಾಬಿನ ಸಿಖ್ ಸಮುದಾಯದ ಬದಲಾಣೆವೆಯ ಸಂದರ್ಭದಲ್ಲಿ ವಸಾಹತು ಶಾಹಿಯ ಪ್ರಭಾವವನ್ನು ಚನಾರಂತಹ ಸಂಶೋಧಕರು ಅಲ್ಲಗಳೆದಿದ್ದರು. ಅವರ ಪ್ರಕಾರ ಸಿಖ್ ಸಮುದಾಯ ಸಂಸ್ಕೃತಾನುಕರಣಗೊಳ್ಳಲು ಸೂಫಿಸಂ, ಮಧ್ಯ ಪೂರ್ವದ ಪ್ರಭಾವ ಹಾಗೂ ಆರ್ಯ ಸಮಾಜ ಕಾರಣ.

ಸಂಸ್ಕೃತಾನುಕರಣೆಗೆ ಆರ್ಥಿಕ ಶೋಷಣಾ ಸಂಬಂಧವೂ ಹೇಗೆ ಕಾರಣೀಭೂತವಾಗುತ್ತದೆ ಎಂದು ಶ್ರೀನಿವಾಸ್ ಗುರುತಿಸದೇ ಹೋದರು. ಬಹಳಷ್ಟು ರೈತ ಹೋರಾಟಗಳ ಸಂದರ್ಭದಲ್ಲಿ ಇವುಗಳು ಕಂಡು ಬರುತ್ತದೆ. ಆಧುನಿಕತಯೊಂದಿಗೆ ಶೋಷಣಾ ಸಂಬಂಧವನ್ನು ಕಲ್ಪಿಸಿ ಕೊಟ್ಟವರೇ ಬ್ರಿಟಿಷ್ ವಸಾಹತು ಶಾಹಿಗಳು!

ಸಂಸ್ಕೃತಾನುಕರಣೆಗೆ ಯುದ್ಧವೂ ಕಾರಣವಾಗಿರುವ ಸ್ವಾರಸ್ಯಕರವಾದ ಘಟನೆ ಒಂದಿದೆ. ಇದನ್ನು ಸ್ವಾತಂತ್ರ್ಯ ಪೂರ್ವದಲ್ಲಿ ದಲಿತರಾದ ಜಾಟವರ ಸಂದರ್ಭದಲ್ಲಿ ನೋಡಬಹುದು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಉತ್ತರಪ್ರದೇಶದ ಚಮಾರರಿಗೆ ಚರ್ಮಕಾರಿಕೆಗೆ ಹೆಚ್ಚಿನ ಬೇಡಿಕೆ ಬಂತು. ಇದರಿಂದ ಆರ್ಥಿಕವಾಗಿ ಸಧೃಡಗೊಂಡ ಸಮುದಾಯ 1940ರ ದಶಕದಲ್ಲಿಯೇ ತಾವು ಕ್ಷತ್ರಿಯ ಸಮುದಾಯಕ್ಕೆ ಸೇರಿದವರು ಎಂದೆಲ್ಲಾ ವಾದಿಸತೊಡಗಿತ್ತು. ಅದಕ್ಕಾಗಿ ಒಂದು ಮಿಥ್ಯೆಯನ್ನು ಕೂಡ ಸೃಷ್ಟಿಸಿತ್ತು.ಇದಕಿಕ್ಕಂತ ಸ್ವಲ್ಪ ಭಿನ್ನವಾದ ರಾಜಕಾರಣವನ್ನು ಕರ್ನಾಟಕದಲ್ಲಿ ನೋಡನಹುದು. ಬಹು ಮುಖ್ಯವಾಗಿ ಕರ್ನಾಟದಲ್ಲಿ ಮಧ್ಯಮ ಜಾತಿಗಳ ರಾಜಕಾರಣದಲ್ಲಿ ನೋಡಬಹುದು.

ಈ ರಾಜಕಾರಣಗಳಲ್ಲಿ ಬಹಳ ಮುಖ್ಯವಾಗಿ ಉಲ್ಲೇಖಿಸಬೇಕಾದ ಸಮುದಾಯಗಳೆಂದರೆ ಉತ್ತರ ಕರ್ನಾಟಕದ ಕೆಲವೆಡೆ ನೆಲೆಸಿರುವ ಕುನ್‌ಬಿಗಳು. ಮೂಲ:ತವಾಗಿ ರೈತ ಸಮುದಾಯಗಳಿಂದ ಬಂದಿರುವ ಕುನ್‌ಬಿಗಳು ತಮ್ಮನ್ನು ಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ಮಹಾರಾಷ್ಟ್ರ, ಗುಜರಾತ್, ಮಧ್ಯ ಪ್ರದೇಶ, ಹಾಗೂ ಕರ್ನಾಟಕದಲ್ಲಿ ಹರಡಿರುವ ಕುನ್‌ಬಿಗಳು ರಾಜಪೂತ ಕುಟುಂಬದೊಂದಿಗಿರುವ ಸಂಬಂಧಗಳನ್ನು ಹಾಗೂ ಆಳ್ವಿಕೆಯ ನೆನಪುಗಳನ್ನು ಈ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಉಪಯೋಗಿಸುತ್ತಾರೆ. ತಾವು ಕ್ಷತ್ರಿಯರೆಂದು ವಾದಿಸುವುದರಿಂದ ತಮಗೆ ಹೊಸ ಸಾಮಾಜಿಕ ಐಡೆಂಟಿಟಿ ದೊರೆಯಬಹುದೆಂಬ ನಂಬಿಕೆ ಅವರಲ್ಲಿದೆ. ತಾವೂ ಕ್ಷತ್ರಿಯರೆಂದು ವಾದಿಸುವ ಸಮುದಾಯಗಳು ಇನ್ನೂ ಕೆಲವಿದೆ. ಅವರಲ್ಲಿ ಕರಾವಳಿಯ ಬಂಟರು ಅಥವಾ ನಾಡವರು, ಹಳೆಯ ಮೈಸೂರಿನ "ಅರಸ"ರು, ಕೊಡಗಿನ ಕೂರ್ಗಿಗಳು ಇತ್ಯಾದಿಯವರು. ಬಂಟರು ಕ್ಷತ್ರಿಯ ವಂಶದ ನಾಗವಂಶಿಗಳೆಂದೂ ಕೂಡ ಗುರುತಿಸಲಾಗುತ್ತದೆ. ಮೂಲತ:ವಾಗಿ ಬಂಟರು ಭೂಮಿಯೊಂದಿಗೆ ಸಂಬಂಧವನ್ನು ಇಟ್ಟುಕೊಂಡ ಸಮುದಾಯಗಳು- ಭೂಮಾಲೀಕರು, ಸರಂಜಾಮಶಾಹಿಗಳು ಹೌದು. ಅಲ್ಲದೇ ಕರ್ನಾಟಕದಲ್ಲಿರುವ ಪದ್ಮಶಾಲಿಗಳು ತಮ್ಮನ್ನು ಪದ್ಮಬ್ರಾಹ್ಮಣರೆಂದು ಕರೆಯುವ ವಾಡಿಕೆ ಇದೆ.

ಎಂ.ಎನ್ ಶ್ರೀನಿವಾಸ್ ತಮ್ಮ ಸಂಸ್ಕೃತಾನುಕರಣದ ಸಂದರ್ಭದಲ್ಲಿ "ಬ್ರಾಹ್ಮಣೀಕರಣ" ಎಂಬ ಶಬ್ಧದ ಪ್ರಯೋಗವನ್ನು ಮಾಡುವುದಿಲ್ಲ. ಸಂಸ್ಕೃತಾನುಕರಣವನ್ನೇ ಬ್ರಾಹ್ಮಣೀಕರಣವೆಂದು ಅವರು ಒಪ್ಪಿಕೊಳ್ಳದಿರಲು ಒಂದೆರಡು ಕಾರಣಗಳನ್ನು ವಿವಿಧ ಲೇಖನಗಳಲ್ಲಿ ನೀಡುತ್ತಾರೆ, 1956 ರಲ್ಲಿ ಫಾರ್ ಈಸ್ಟರ್ನ್ ಕ್ವಟರ್ಲಿಯಲ್ಲಿ ಪ್ರಕಟವಾದ ಒಂದು ಲೇಖನವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಉತ್ತಮ. ಅವರ ಪ್ರಕಾರ ಸಂಸ್ಕೃತಾನುಕರಣದ ಪ್ರಕ್ರಿಯೆಯಲ್ಲಿ ಬ್ರಾಹ್ಮಣೀಕರಣ ಅಂತರ್ಗವಾಗಿರುತ್ತದೆ ಅಥವಾ ಒಂದು ಭಾಗವಾಗಿರುತ್ತದೆ, ಆದರೆ ಕೆಲವೊಮ್ಮೆ ಅದು ಬ್ರಾಹ್ಮಣೀಕರಣದಿಂದ ಸ್ವಲ್ಪ ವಿಭಿನ್ನವಾಗಿರಬಹುದು. ವೇದಕಾಲದಲ್ಲಿ ಬ್ರಾಹ್ಮಣರೂ ಕೂಡ ಹಸು ಮಾಂಸ ಭಕ್ಷಣೆ, ಸೋಮರಸದ ಕುಡಿತ ಹಾಗೂ ರಕ್ತದ ಅರ್ಪಣೆಯನ್ನು ಮಾಡುತ್ತಿದ್ದರೆಂದು ಶ್ರೀನಿವಾಸ್ ಗುರುತಿಸುತ್ತಾರೆ(ಪು.481). ವೇದೋತ್ತರ ಕಾಲಾವಧಿಯಲ್ಲಿ ಈ ರೀತಿಯ ಜೀವನಶೈಲಿಯಲ್ಲಿ ಬದಲಾವಣೆಯಾಗಿರುವುದನ್ನು ಶ್ರೀನಿವಾಸ್ ಗುರುತಿಸುತ್ತಾರೆ. ಈ ಬದಲಾವಣೆಗೆ ಬೌದ್ಧ ಧರ್ಮ -ಜೈನ ಧರ್ಮಗಳ ಪ್ರಭಾವ ನಿಚ್ಚಳವಾಗಿತ್ತು. ಇದರರ್ಥ ಇಂದಿನ ಸಂಧರ್ಭದಲ್ಲಿ ಎಲ್ಲಾ ಬ್ರಾಹ್ಮಣರು ಶಾಖಹಾರಿಗಳಲ್ಲ. ಬೆಂಗಾಳದ ಬ್ರಾಹ್ಮಣರು, ಸಾರಸ್ವತರೂ, ಕಾಶ್ಮೀರಿಗಳೂ ಇವತ್ತೀಗೂ ಮಾಂಸಹಾರಿಗಳು. ಬೆಂಗಾಲಿಗಳಿಗೆ ಮೀನು ಇಲ್ಲದಿದ್ದರೆ ಜೀವನವಿಲ್ಲ. ಅದು ಅವರ ಜೀವನದ ಭಾಗ.

"ಸಂಸ್ಕೃತಾನುಕರಣ"ದ ವಾದದಲ್ಲಿರುವ ಇನ್ನೊಂದು ಆಯಾಮವೇನೆಂದರೆ ಅದು ವಿಶ್ಲೇಷಣೆಯನ್ನು ಕೆಲವೇ ಜಾತಿಗಳಗಳಿಗೆ ಸೀಮಿತಗೊಳಿಸುತ್ತದೆ. ಅದು ಅಸ್ಪೃಶ್ಯ ಜಾತಿಗಳಿಗೆ "ಸಂಸ್ಕೃತಾನುಕರಣ"ದ ಚೌಕಟ್ಟನ್ನು ದಾಟಲು ಅಥವಾ ಅವಕಾಶಕ್ಕೆ ದಾರಿ ಮಾಡಿಕೊಡುವುದಿಲ್ಲ. ಯಾಕೆಂದರೆ, ಪ್ರೋ.ಶ್ರೀನಿವಾಸ್ ಪ್ರಕಾರ ಈ ಜಾತಿಗಳು ತಮ್ಮ ಕೊಳಕಾದ ಉದ್ಯೋಗಗಳನ್ನು ಬಿಟ್ಟುಕೊಡುವುದಿಲ್ಲ, ಅಲ್ಲದೇ ಅವುಗಳು ಶಾಖಾಹಾರಿಗಳಾಗಲೂ ಸಾಧ್ಯವಿಲ್ಲ. ಜಾತಿಗಳು "ಸಂಸ್ಕೃತಾನುಕರಣ"ಗೊಳ್ಳಬೇಕಾದರೆ ಕೆಲವು ಚಾರಿತ್ರಿಕ ಅಂಶಗಳಿರಬೇಕಾದದ್ದು ಅನಿವಾರ್ಯ: ಅ) ಅವುಗಳು ಸ್ಪಶ್ಯ ಹಾತಿಗಳಿಂದ ಬಂದಿರಬೇಕು; ಬ) ಅವುಗಳ ಆರ್ಥಿಕ ಸ್ಥಾನಮಾನ ಸಾಕಷ್ಟು ಸುಧಾರಿಸಬೇಕು, ಸ)ಅವುಗಳು ಮೇಲ್ಜಾತಿಗೆ ಮುಖಾಮುಖಿಯಾಗುವ ಜಾತಿಗಳಾಗಿರಬೇಕು. ಈ ರೀತಿಯಾಗಿ "ಸಂಸ್ಕೃತಾನುಕರಣ"ವು ದಲಿತರನ್ನು, ಹಾಗೂ ಅತ್ಯಂತ ಕೆಳ ಜಾತಿಗಳನ್ನು ಒಳಗೊಳ್ಳುವುದೇ ಇಲ್ಲ. ದಲಿತ ಮುಸ್ಲಿಂಮರಾಗಲೀ, ದಲಿತ ಕ್ರಿಶ್ಚಿಯನ್ನರಾಗಲೀ ಈ ಚೌಕಟ್ಟಿನೊಳಗೆ ಬರಲು ಸಾಧ್ಯವೇ ಇಲ್ಲ. ಇದು ಸೀಮಿತಗೊಳ್ಳುವುದು ದ್ವಿಜ, ಮಧ್ಯಮ ಜಾತಿ ಹಾಗೂಭಲಾಡ್ಯ ಜಾತಿಗಳ ನಡುವೆ.

ಕೆಲವೊಮ್ಮೆ ದಲಿತರು ಶಾಖಹಾರಿಗಳಾದರೆ, ಉಪವಾಸಗಳನ್ನು ಆಚರಿಸಿದರೆ ಅದು ಶ್ರೀನಿವಾಸ್‌ರ ವಿಶ್ಲೇಷಣೆಯಲ್ಲಿ "ಸಂಸ್ಕೃತಾನುಕರಣ"ವಲ್ಲ. ಇವತ್ತಿನ ಸಂದರ್ಭದಲ್ಲಿ ಜಾತಿಗಳ ಆಧುನಿಕತೆಗೆ "ಸಂಸ್ಕೃತಾನುಕರಣ"ವೇ ಕಾರಣವಾಗಬೇಕಾಗಿಲ್ಲ. ಅದಕ್ಕೆ ವಿವಿಧ ಕಾರಣಗಳಿರಬಹುದು: ಶೋಷಣೆಯ ತೀವ್ರತೆ, ಆರ್ಥಿಕತೆಯ ಬದಲಾವಣೆ, ಅಥವಾ ಜಾಗತೀಕರಣದ ಫಲಶ್ರುತಿಯೂ ಆಗಿರಬಹುದು.

ಶ್ರೀನಿವಾಸ್‌ರವರ ಬರವಣೆಗೆ ಅಂದಿನ ವಸಾಹತು ಶಾಹಿಯ ಯಜಮಾನಿಕೆಯ ಒಂದು ಭಾಗವಾಗಿರಬಹುದೇ? ಎಂಬ ಗುಮಾನಿ ಬರುವುದು ಸಹಜ. ವಸಾಹತುಶಾಹಿ ಹಾಗೂ "ಸಂಸ್ಕೃತಾನುಕರಣ"ದ ಅಂತಿಮ ಗುರಿ ಬೇರೆ ಬೇರೆ ಆಗಿರಲಿಲ್ಲ. ವಸಾಹತುಶಾಹಿಯ ಅಂತಿಮ ಗುರಿ ವಸಾಹತುಶಾಹಿಯ ಅಳ್ವಿಕೆ, ಶಕ್ತಿ-ಯಜಮಾನಿಕೆಯನ್ನು ಗಟ್ಟಿಗೊಳಿಸುವುದಾದರೆ, "ಸಂಸ್ಕೃತಾನುಕರಣ"ದ

(49ನೇ ಪುಟಕ್ಕೆ)

ನೇಣುಗಂಬದಲಿ ನಿರಪರಾಧಿ





ಬಿಸಿಲ ಸೂರ್ಯನ ಕಾವು ತಟ್ಟಿ
ಕರುಳ ಬಳ್ಳಿಯ ಹೂವು ಬಾಡಿ
ಶಂಕೆಯಿದ್ದರೆ ಶೋಧಿಸಿ ನೋಡಿರಿ
ನನ್ನ ಮನೆ, ಮಾಡು, ಮೂಲೆ, ಗೂಡು
ಬೇಕಿದ್ದರೆ ನನ್ನ ರಕ್ತದ ಕಣಕಣದಲ್ಲಿ
ಕೋಟಿಕೋಟಿ ಜೀವಂತ ಸಾಕ್ಷೀಗಳಿವೆ
ಹೆಕ್ಕಿ ನೋಡಿರಿ ಮುಕ್ಕಾದರೂ ಸರಿಯೇ
ಅಲ್ಲಿ ಪೂರ್ವಿಕರ ಜೋಗುಳ ಕೋಶವಿದೆ
ಮಳೆ, ಮೋಡ, ಮೊಳಕೆಯಲ್ಲಿ ಶೋಧಿಸಿರಿ
ಸಿಡಿಲು, ಮಿಂಚು, ಗುಡುಗಿನ ಶಬ್ಧದಲ್ಲಿ
ಸೂರ್ಯ ಚಂದ್ರರು ಸಂಧಿಸುವಲ್ಲಿ.

ತುತ್ತು ತುತ್ತಿಗೂ ಬೆವರ ಬಿತ್ತುವ
ಒಡಲಧಗೆ ನಂದಿಸುವ ಶ್ರಮಿಕನವನು
ಕರುಳ ಬತ್ತಿಯ ಹೊಸೆದು ದೀಪ ಹಚ್ಚುವನು
ಮರೆಮಾಡಿ ಬಿರುಗಾಳಿಗೆ ಆರಿ ಹೋಗದಂತೆ
ಒಡಲೊಳಗಿನ ಕೆಂಡದ ಕನಸುಗಳಿಗೆ
ಕಿಡಿ ತಾಗದಂತೆ ಅಡ್ಡ ಗೋಡೆಯಾದವನು
ಧರೆ ಹೊತ್ತಿ ಉರಿಯದಂತೆ
ಕಣ್ಣಾಳದಲಿ ಹಿಡಿದಿಟ್ಟ ಆಕಾಶ ನೆಲಕಚ್ಚದಂತೆ
ಕೊಲೆಗಡುಕರ ಸಂತೆ ಮೈದಾನದಲ್ಲಿ
ನಾಳೆಗಳು ಸುಟ್ಟು ಕರಕಲಾಗದಂತೆ
ಮುಳ್ಳುಗಳು ಚುಚ್ಚದಂತೆ ಎಚ್ಚರದಲಿ,
ಧರೆಯ ಭಾರಕ್ಕೆ ಹೆಗಲ ನೀಡಿದವನು.

ಭಯ ತುಂಬಿದ ಮುಖ ಬಿಳಿಚಿಕೊಂಡಿದೆ
ರಕ್ತ ಹೆಪ್ಪುಗಟ್ಟುತ್ತಿದೆ ಸ್ಫೋಟದ ಶಬ್ಧಕೆ
ಎಲುಬುಗೂಡಿನ ಹಂದರಗಳು ನಲುಗಿ
ಗೋರಿಯಿಂದೆದ್ದಮೋಡ ಕಂಬನಿ ಸುರಿಸಿ
ಕೇಳುತ್ತಿದೆ ಹೇಳು ವ್ಯಾಘ್ರನೆ
ಸಿಡಿಮದ್ದಿಗೆ ಸಮುದಾಯದ ಬಲಿಯೇಕೆ?
ನೆಲದ ಮೇಲೆ ನರಮಂಡಲದ ಬಳ್ಳಿ
ನೇಣುಗಂಬದಲ್ಲಿ ನಿರಪರಾಧಿ ಬೇರುಗಳು
ರಕ್ತದೋಕುಳಿಯಲ್ಲಿ ತೊಯ್ಯಬೇಕೇಕೆ?

ಶಸ್ತ್ರಾಸ್ತ್ರಗಳು ನಾಗರೀಕತೆಯ ಕುರುಹುಗಳಲ್ಲ
ನಾಟಿ ಔಷಧಿಯೂ ಅಲ್ಲ, ಬುದ್ಧನ ಬೆಳಕೂ ಅಲ್ಲ
ಪ್ರವಾದಿಗಳ ಹಿತನುಡಿಯೂ ಅಲ್ಲ

ಬೆಟ್ಟದೆತ್ತರಕೆ ಬಿದ್ದಹೆಣರಾಶಿಯಿಂದ
ಅರೆಜೀವಗಳ ನಾಭಿಯಾಳದ ಸಂಕಟ
ನೋವಿನ ಕಿಡಿಗಳ ನೇರ ನೋಟ
ಕಾಲನ ಹಾಲಾಹಲದ ಮುನ್ಸೂಚನೆಯೇ?
ದೇಶದುದ್ದಗಲಕ್ಕೂ ಸಂಚಾರ ಹೊರಟ ಭಸ್ಮಾಸುರ
ಜನಾಂಗೀಯ ದ್ವೇಷ ಬೆಳಸಿದ್ದು ಸಾಕು
ಜಟಿನ ಬೇಟೆಯ ಲೆಕ್ಕಾಚಾರದಲ್ಲಿ
ಬೆನ್ನಹುರಿಗೆ ಸಿಡಿಮದ್ದು ಸಿಕ್ಕಿಸಿಕೊಂಡಿಹನು
ಚರ್ಚು, ಮಠ, ಮಸೀದಿಗಳ ಶಿಖರಕ್ಕೆ
ನೆತ್ತರು ಕಳೆಗಳಿವೆ–ಅತ್ತರು, ಉದುಬತ್ತಿಗಳಿವೆ.

ಅನಾಥ ಕನಸಿನ ತುಟಿಯಲ್ಲಿ ನಗುವಿಲ್ಲ
ತುಕ್ಕು ಹಿಡಿದಿದೆ ಬುದ್ದಿಗೆ ಆತ್ಮಸಾಕ್ಷಿಗೆ
ಲೋಕದಲಿ ಮುಗಿದಿಲ್ಲ ಯುದ್ಧವಿನ್ನೂ
ಕ್ಯಾತೆ ತೆಗೆಯುತ್ತಲೇ ಇದ್ದಾನೆ ಠೇಕೇದಾರ.
ಮುಗಿಲಮೋಡಗಳು ಸಾಗರದಾಚೆ ನಿಂತು
ನೆತ್ತರ ಕಂಬನಿ ಸುರಿಸಿ ಬಿಕ್ಕುತ್ತಿವೆ.
ಧ್ಯಾನ ಗೋರಿಯಿಂದ ಹೊರ ಬಂದ ಬೆಳ್ಳಕ್ಕಿ
ಕಾಲದ ಗಂಟೆ ಬಾರಿಸಿ ಕೇಳುತ್ತಿದೆ.
ಒಬ್ಬನ ತಪ್ಪಿಗೆ ಸಮುದಾಯದ ಬಲಿಯೇಕೆ?
ನೇಣುಗಂಬದಲಿ ನಿಲ್ಲಿಸಿದ ಠೇಕೇದಾರನೇ
ಹೇಳು
ಹೇಳುವದಾದರೆ ಅಪರಾಧಿಯ ಹೆಸರು
ಸಮುದಾಯವನು ಸೂಲೆಗೇರಿಸುವ ಛಲವೇಕೆ?
ಮುಖ್ಯ ವಾಹಿನಿ ಛಿದ್ರಗೊಳಿಸುವ
ಹುನ್ನಾರವೇಕೆ?

○ ಕೆ. ಷರೀಫಾ

(27ನೇ ಪುಟದಿಂದ)

ಮನದ ಮೊನೆಯ ಕೊನೆ

ಆ ಬದಿಯಿಂದ ಮಾತಿಲ್ಲ. ಅಶೋಕ ತುಂಬಾ ಕೋಪದಿಂದ

'ನನಗೇ ಸುಳ್ಳು ಹೇಳಿ ನೀನು ಏನು ಸಾಧಿಸಬೇಕು ಎಂದಿರುವೆ..?' ಮತ್ತೂ ಮಾತಿಲ್ಲ. ಕ್ಷಣ ಹೊತ್ತಿನ ನಂತರ

'ಸಾರಿ... ನೀವು ಬೈತೀರಿ ಅಂತ..' ಸಮಜಾಯಿಷಿ ನೀಡುವವರೊಳಗೆ

'ಈಗ ನೀನು ಮಾಡಿದ್ದಾದರೂ ಏನು..? ಹೊಗಳಿಸಿಕೊಳ್ಳುವ ಕೆಲಸವೇ..? ಅಲ್ಲವೇ ಗಂಡನಿಗೇ ನೀ ಸುಳ್ಳು ಹೇಳಿ ಏನು ಮಾಡುವವಳಿದ್ದೆ..? ನಿನ್ನ ತಾಯಿಗಾದರೂ ತಿಳಿಯಬೇಡವೇ..?'

'ಅವಳದೇನೂ ತಪ್ಪಿಲ್ಲ. ತಪ್ಪೆಲ್ಲಾ ನಂದೇ' ಅಶೋಕ ಇನ್ನೂ ಜೋರಾಗಿ

'ನಿನಗೆ ಸೊಕ್ಕು.. ನಾನು ಬರುವಾಗ ಅಷ್ಟೆಲ್ಲಾ ಹೇಳಿ ಬಂದರೂ..' ಎಂದು ಅರಚುತ್ತಿರುವದನ್ನು ಕಂಡು ಆ ಬಸ್ ಸ್ಟಾಪ್‌ನಲ್ಲಿದ್ದ ಜನ ಅಶೋಕನ ಮುಖವನ್ನೆ ದಿಟ್ಟಿಸುತ್ತಿದ್ದರು. ಅದನ್ನು ಗಮನಿಸಿ

'ಆಯ್ತು ಇಡು' ಎಂದು ಮಾತನ್ನು ಕತ್ತರಿಸಿದ. ಅಷ್ಟರಲ್ಲಿ ಬೇಂದ್ರೆ ಸಾರಿಗೆಯ ಬಸ್ ಒಂದು ಬಂದು ನಿಂತಿತು. ಇನ್ನೂ ಹೆಂಡತಿಯ ಆ ಸುಳ್ಳಿನ ರಗಳೆಯಲ್ಲಿಯೇ ಇದ್ದ ಅಶೋಕನಿಗೆ ಅದರಲ್ಲಿ ಸೀಟು ಇವೆಯೋ ಇಲ್ಲವೋ ಎಂದು ಯೋಚಿಸಲೂ ಆಗಲಿಲ್ಲ. ಹತ್ತಿ ಬಿಟ್ಟ. ಸುದೈವಕ್ಕೆ ಹಿಂಬದಿ ಒಂದೇ ಒಂದು ಸೀಟು ಇವನಿಗಾಗಿಯೇ ಎನ್ನುವಂತೆ ಖಾಲಿಯಿತ್ತು. ಅಲ್ಲಿ ಹೋಗಿ ಕುಳಿತ. ಆ ಹಿಂದಿನ ಸೀಟುಗಳ ಸಾಲಲ್ಲಿ ಒಬ್ಬ ಪೋಲಿಸನೂ ಇದ್ದ. ಸೀಟಿಗೆ ಮುಕುಳಿಯೂರಿದ್ದೇ ಮತ್ತದೇ ಸುಳ್ಳಿನ ಕಂತೆ. ಅಷ್ಟಕ್ಕೂ ಉಷಾ ತನಗೇ ಸುಳ್ಳು ಹೇಳಿದಳಲ್ಲ..? ಹಾಗೆ ಸುಳ್ಳು ಹೇಳುವ ಮೂಲಕ ಏನಾದರೂ ತಪ್ಪು ಕೆಲಸ ಛೇ..ಛೇ.. ಸಾಧ್ಯವಿಲ್ಲ ಅವಳು ಎಂಥವಳು ಎನ್ನುವದು ತನಗೆ ಚೆನ್ನಾಗಿ ಗೊತ್ತು ಹಾಗೆ ಸಂಶಯ ಪಡುವ ಅವಶ್ಯಕತೆಯಿಲ್ಲ. ಎಂದು ಮನದಲ್ಲೇ ಅಂದುಕೊಂಡ.

ಮತ್ತೆ ಅವನ ಮನಸು ಗಲಿಬಿಲಿಗೊಂಡು ದಿನಾಲು ನೋಡುವ ಆ ಮಳ್ಳ ಧಾರವಾಹಿಗಳ ಪ್ರಭಾವದಿಂದ ಏನಾದರೂ.. ಏ.. ಹೇ.. ಖಂಡಿತ ಹಾಗಿಲ್ಲ ಗೊತ್ತಿದ್ದೋ ಗೊತ್ತಿಲ್ಲದೆಯೋ ಒಂದು ಸುಳ್ಳು ಆಕೆ ಹೇಳಿದಳು. ಹಿಂದೊಮ್ಮೆ ಹೀಗೇ ಒಂದೆರಡು ಸುಳ್ಳು ಹೇಳಿ ಇಬ್ಬರೂ ಗಂಟೆಗಟ್ಟಲೇ ಜಗಳವಾಡಿದ್ದಿದೆ. ಬಾರಲ್ಲಿ ಕುಳಿತು ಪೆಗ್ ಹಾಕುವದರಿಂದ ಹಿಡಿದು ಎಲ್ಲೋ ಒಂದು ಸುಂದರ ಮುಖಮಂದಾರ ಕಂಡಾಗ ಕೊಂಚ ಗಲಿಬಿಲಿಗೊಳ್ಳುವವರೆಗೂ ತಾನು ಅವಳ ಮುಂದೆ ಹೇಳಿರುತ್ತೇನೆ. ಹಾಗೆ ಹೇಳುವದೇ ಸಂಬಂಧ ಗಟ್ಟಿಗೊಳ್ಳಲು ಕಾರಣ ಎನ್ನುವದು ಅವನ ನಂಬಿಕೆ. ಆದರೆ ಅವಳು ಹೀಗೆ ಸುಳ್ಳು ಹೇಳುತ್ತಿರುವದು ಮೂರನೇಯ ಬಾರಿ. ಅದ್ಯಾಕೆ ಹಾಗೆ..? ಎನ್ನುವದು ಅವನಿಗೆ ಸಂಶಯದ ಒಗಟಾಗಿ ಕಾಣಲು..ಕಾಡಲು ಶುರು ಮಾಡಿತ್ತು. ಹೀಗೆಲ್ಲಾ ತರಾವರಿಯಾಗಿ ಯೋಚಿಸುವದರೊಳಗೆ ನವನಗರ ಬಂದಾಗಿತ್ತು. ಕಂಡಕ್ಟರ್ ಜೋರಾಗಿ ಟಿಕೆಟ್.. ಟಿಕೆಟ್.. ಎನ್ನುವದು ಕಿವಿಗೆ ಬಿದ್ದಿದ್ದೇ ಎದೆ ಝುಲ್ಲೆಂದಿತು. ಮೈ ಬೆದರಿ ಬೆವರೆದ್ದಿತು. ಕಿಸೆಯಿಂದ ಹಣ ತೆಗೆಯುತ್ತಿರುವಂತೆ ಪಕ್ಕದವನೊಬ್ಬ

'ರೀ ಸುಮ್ನೀರಿ ಟಿಕೆಟ್ ಚೆಕ್ ಮಾಡಂವ ಅದಾನ, ಪಾಪ ಅವನನ್ನು ಕೆಲಸದಿಂದಲೇ ತೆಗೆಯುತ್ತಾರೆ' ಎಂದ.

'ಇನ್ನೊಬ್ಬ ಇಲ್ಲೀಯವರೆಗೆ ಏನು ಮಾಡತಿದ್ದಿರಿ..?' ಎಂದಾಗ ಅಶೋಕನ ಮುಖ ಬಿಳಿಚಿಕೊಂಡಿತ್ತು.

' ಏನೋ ಒಂದು ತಾಪತ್ರಯ ಕುರಿತು ಗೇನಿಸುತ್ತಿದ್ದೆ.' ಎಂದಾಗ ಮಗದೊಬ್ಬ

'ಅದೇನೋ ಹಂಗ ಹೇಳಿ ಸಾರ್ ಅಗ್ತೀರಿ, ಪಾಪ ಆ ಬಡಪಾಯಿ ಏನು ಮಾಡಬೇಕು..? ಹಂಗ ಮಾಡಬಾರದು' ಮುಂದಿನ ಸೀಟಿನವನೊಬ್ಬ ಹಿಂದೆ ಹೊರಳಿ ನೋಡಿದ. ಅಶೋಕ ಇನ್ನಷ್ಟು ಬೆಚ್ಚಿ ಬಿದ್ದ.. ಅತ್ತ ತನ್ನ ಮುಂದೆ ಕುಳಿತು ಮೌಲ್ಯಮಾಪನ ಮಾಡುವ ಇನ್ನೊಬ್ಬ ಅಧ್ಯಾಪಕ. ಇಡೀ ಮನಸು ಕಪಿ ಆದಂಗಾಯ್ತು. ಮಾತೇ ಹೊರಡಲಿಲ್ಲ.. ಉಗುಳು ನುಂಗುತ್ತಾ ಅಶೋಕ 'ನಾನು ಬೇಕಂತ..' ಅನ್ನೋದರೊಳಗೆ ಅದೇ ಸಾಲಲ್ಲಿ ಕುಳಿತ ಪೋಲಿಸು

'ನೋಡು ದೇಶಾವರಿ ಮಾತು ಬ್ಯಾಡ.. ನೋಡಲಿಕ್ಕೆ ಇಷ್ಟು ಡೀಸೆಂಟ್ ಆಗಿ ಕಾಣ್ತಿ, ಹತ್ತು ರೂಪಾಯಿ ಸಲುವಾಗಿ ಇಂಥಾ ಹಲ್ಕಟ್ಗಿರಿ ಮಾಡ್ತಿರಲ್ಲರೀ.' ಎಂದ. ಅಶೋಕನಿಗೆ ಮರು ಮಾತನಾಡಲಾಗಲಿಲ್ಲ. ಬಾಜೂ ಕುಳಿತ ಇನ್ನೊಬ್ಬ 'ನೋಡ್ರಿ ಈಗಲೂ ಏನೂ ಅಗಿಲ್ಲ ಟಿಕೆಟ್ ಚೆಕ್ ಮಾಡಂವ ಇನ್ನೂ ಮುಂದ ಅದಾನ ಅಂವಾ ಇಲ್ಲಿಗಿ ಬರೋದರೊಳಗ ಪಟ್ಟಂತ ಜಿಗಿದು ಬಿಡ್ರಿ. ಸಾಕಷ್ಟು ಬಸ್ ಸಿಗ್ತಾವ. ಇಲ್ಲಾಂದ್ರ ನಿಮಗೂ ತೊಂದರೆ ಅವನಿಗೂ ತೊಂದರೆ' ಅನ್ನೋ ಸಜೇಶನ್ ನೀಡಿದ. ಅದೇ ಸರಿಯಾದ ಮಾರ್ಗ ಎನಿಸಿ ತುಸು ಮುಜುಗರದಿಂದಲೇ ಅಶೋಕ ಕೆಳಗಿಳಿದ. ಆದರೂ ಮನದ ಮೊನೆಯ ಕೊನೆಯಲ್ಲಿ ಏನೋ ಒಂದು ಪ್ರಮಾದ ಕುಳಿತು ಕುಕ್ಕಿದಂಗಾಗುತ್ತಿತ್ತು.

ಆ ಮಧ್ಯಾಹ್ನ ಊಟವೂ ಮಾಡಲಿಕ್ಕಾಗಲಿಲ್ಲ. ಆ ಬಸ್ಸಿನಲ್ಲಿಯ ಆಜೂ ಬಾಜೂ ಇದ್ದ ಸಹ ಪ್ರಯಾಣಿಕರ ಡೈಲಾಗ್‌ಗಳು ಮತ್ತೆ ಮತ್ತೆ ಅವನ ಮಾನಸದಲ್ಲಿ ಗಿರಕೀ ಹೊಡೆಯುತ್ತಿದ್ದವು. ನಾನು ಏನು..? ತನ್ನ ಸ್ಥಿತಿ ಏನು..? ತಾನು ಉದ್ದೇಶಪೂರ್ವಕವಾಗಿಯೇ ಹಾಗೆ ಮಾಡಿದ್ದಾಗಿತ್ತೇ..? ಎನ್ನುವ ಪ್ರಶ್ನೆಗಳನ್ನು ಹಾಕಿಕೊಂಡು ಲಾಜಿಂಗ್ ಕಡೆಗೆ ಹೆಜ್ಜೆ ಹಾಕಿದ. ಲಗುಬಗೆಯ ಆ ಹೆಜ್ಜೆಗಳು ಆ ಗಳಿಗೆಯಲ್ಲಿ ತ್ರಾಣ ಕಳೆದುಕೊಂಡಂತಾಗಿದ್ದವು. ಬಟ್ಟೆ ತೆಗೆಯದೇ ಕಾಟ್ ಮೇಲೆ ಮೈ ಚೆಲ್ಲಿದ. ತನ್ನ ಎದುರು ಸೀಟಲ್ಲಿದ್ದ ವ್ಯಕ್ತಿ ಹೊರಳಿ ನೋಡಿದ ದೃಶ್ಯ ಮರುಕಳಿಸಿತು. ಆ ನೋಟ ಅವನನ್ನು ಮುಳ್ಳು ಹಾಸಿಗೆಯ ಮೇಲೆ ನೂಕಿದಂಗಿತ್ತು. ಫ್ಯಾನ್ ಬಟನ್ ಹಾಕಿದ. ಅದರ ರೆಕ್ಕೆಗಳನ್ನೇ ದಿಟ್ಟಿಸುತ್ತಿದ್ದ. ಅವು ಸ್ವಲ್ಪೇ ಹೊತ್ತಿನಲ್ಲಿ ಅದೃಶ್ಯವಾದವು. ಹಾಳಾದ ಆ ಬಸ್ಸಿನಲ್ಲಿಯ ಘಟನೆ.. ನೆನಪು.. ಮಾತ್ರ ಹಾಗೇ ಗಕ್ಕನೇ ಮರೆಯಾಗಲಿಲ್ಲ.

****

ಕಹಿಯಾದ ಮನಸನ್ನು ಹೊತ್ತು ಮರುದಿನ ಮೌಲ್ಯಮಾಪನದ ಸ್ಥಳಕ್ಕೆ ಬಂದ. ಅಲ್ಲಲ್ಲಿ ನಿಂತು ಮಾತನಾಡುತ್ತಿದ್ದ ಯಾರ ಮುಖಗಳೂ ಇಷ್ಟವಾಗಲಿಲ್ಲ. ದೂರದಲ್ಲಿ ಗಿಡದ ಕೆಳಗೆ ನಿನ್ನೆ ಮುಂದಿನ ಸೀಟಲ್ಲಿದ್ದ ಮುಖ ತನ್ನ ಜೊತೆಗಿರುವವರೊಂದಿಗೆ ಏನೋ ಹರಟುತ್ತಾ ಜೋರಾಗಿ ಗಹಗಹಿಸಿ ನಗುತ್ತಿತ್ತು. ಅವನು ತನ್ನನ್ನೇ ತಿವಿಯಲು ಸಜ್ಜಾಗಿ ನಿಂತ ಭರ್ಚಿಯಂತೆ ತೋರುತ್ತಿದ್ದ. ಅವನ ತುಟಿಯ ಬಡಿತವನ್ನು ದಿಟ್ಟಿಸಿದ. ತನ್ನ ಬಗ್ಗೆಯೇ ಅವರಿಗೆ ಏನೋ ಹೇಳುತ್ತಿರುವಂತೆ ಭಾವಿಸಿದ. ತನಗೆ ಪರಿಚಯವಿರುವ ಆತ್ಮೀಯನೊಬ್ಬ ಏನೋ ಒಂದು ವಿಷಯವನ್ನು ಹೇಳುವಾಗ ಅದನ್ನು ಅಡ್ಡಾದಿಡ್ಡಿಯಾಗಿ ಕತ್ತರಿಸಿ, ಹಿಂದಿನ ದಿನ ಬಸ್ಸಿನಲ್ಲಿ ನಡೆದ ಘಟನೆಯನ್ನು ಅವನ ಮುಂದೆ ಹೇಳಿದ. ಹೇಳಿ ಹಗುರಾಗಲು ನೋಡಿದ. ಅವನೂ 'ಅದೆಲ್ಲಾ ಸಹಜ ನೀವೇನು ಬೇಕಂತಾ ಮಾಡಿದ್ದೇ..?' ಎಂದಾಗ ತುಸು ಹಗುರಾಗಿದ್ದ. ನಿಧಾನವಾಗಿ ಮೌಲ್ಯಮಾಪನದ ಕೊಠಡಿಯ ಕಡೆಗೆ ಹೆಜ್ಜೆ ಹಾಕುವಾಗ ಶ್ರೀಧರ ಭಟ್ ಅನ್ನೋ ಒಬ್ಬ ಉಪನ್ಯಾಸಕ 'ಹೋಯ್ ಅಶೋಕಾ..' ಎಂದು ಕೂಗಿದ. ಅಶೋಕ ಈ ಭಟ್ ಹೀಗೆ ಸುಖಾಸುಮ್ಮನೇ ಕೂಗುವವನಲ್ಲ ಅನ್ನುವದನ್ನು ಅರಿತಿದ್ದ. ಆ ಗುಮಾನಿಯಿಂದಲೇ 'ಹೇಳಿ ಭಟ್ರೆ' ಅಂದ.

'ನಮ್ಮಲ್ಲಿ ಕೆಲವರು ಎಂತೆಂಥವರು ಇದ್ದಾರೆ ಗೊತ್ತೇನ್ರೀ..? ನಿನ್ನೆ ಒಬ್ಬ ಅಧ್ಯಾಪಕ ಮಹಾಶಯ ಬೇಂದ್ರೆ ಬಸ್‌ಲ್ಲಿ ಟಿಕೆಟ್ ತೆಗೆದುಕೊಳ್ಳದೇ ಸಿಕ್ಕಿ ಬಿದ್ದು ಫಜೀತಿಯಾದನಂತೆ..' ಹಿ..ಹಿ..ಹಿ.. ಎಂದ. ಅಶೋಕ ತುಸು ಗಲಿಬಿಲಿಗೊಂಡು ಏನನ್ನೂ ಪ್ರತಿಕ್ರಿಯಿಸಲಿಲ್ಲ. ಭಟ್ಟನ ಮುಖವನ್ನೊಮ್ಮೆ ದಿಟ್ಟಿಸಿದ. ಮಾತು ಮನಸಿನ ಕನ್ನಡಿ ಎಂದು ಅವನ ಹಣೆಯ ಮೇಲೆ ಬರೆದಂತೆ ಕಂಡಿತು. 'ಹೌದಾ..?' ಎಂದು ಮುನ್ನಡೆದ. ಮೆಲ್ಲಗೆ ಹೊರಳಿ ನೋಡಿದ. ಗಿಡದ ಕೆಳಗಿನ ನೆರಳಲ್ಲಿಯ ಮುಖದ ವ್ಯಂಗ್ಯ ನಗು ಇನ್ನೂ ಅಡಗಿರಲಿಲ್ಲ. □

ಆ ಮಧ್ಯಾಹ್ನ ಊಟವೂ ಮಾಡಲಿಕ್ಕಾಗಲಿಲ್ಲ. ಆ ಬಸ್ಸಿನಲ್ಲಿಯ ಆಜೂ ಬಾಜೂ ಇದ್ದ ಸಹ ಪ್ರಯಾಣಿಕರ ಡೈಲಾಗ್‌ಗಳು ಮತ್ತೆ ಮತ್ತೆ ಅವನ ಮಾನಸದಲ್ಲಿ ಗಿರಕೀ ಹೊಡೆಯುತ್ತಿದ್ದವು. ನಾನು ಏನು..? ತನ್ನ ಸ್ಥಿತಿ ಏನು..? ತಾನು ಉದ್ದೇಶಪೂರ್ವಕವಾಗಿಯೇ ಹಾಗೆ ಮಾಡಿದ್ದಾಗಿತ್ತೇ..? ಎನ್ನುವ ಪ್ರಶ್ನೆಗಳನ್ನು ಹಾಕಿಕೊಂಡು ಲಾಜಿಂಗ್ ಕಡೆಗೆ ಹೆಜ್ಜೆ ಹಾಕಿದ. ಲಗುಬಗೆಯ ಆ ಹೆಜ್ಜೆಗಳು ಆ ಗಳಿಗೆಯಲ್ಲಿ ತ್ರಾಣ ಕಳೆದುಕೊಂಡಂತಾಗಿದ್ದವು. ಬಟ್ಟೆ ತೆಗೆಯದೇ ಕಾಟ್ ಮೇಲೆ ಮೈ ಚೆಲ್ಲಿದ. ತನ್ನ ಎದುರು ಸೀಟಲ್ಲಿದ್ದ ವ್ಯಕ್ತಿ ಹೊರಳಿ ನೋಡಿದ ದೃಶ್ಯ ಮರುಕಳಿಸಿತು.

ರಾಜಕೀಯದ ಬಡತನ- ಒಂದು ವಿಮರ್ಶೆ



ಆರ್ಥಿಕ ಬಡತನ, ವರಮಾನ ಬಡತನ, ಮಾನವ ಬಡತನ ಮುಂತಾದವುಗಳ ಬಗ್ಗೆ ನಮಗೆಲ್ಲ ಗೊತ್ತು. ಅದರೆ ರಾಜಕೀಯದ ಬಡತನವೆಂದರೇನು? ಇಲ್ಲಿ ಲೇಖಕರು ರಾಜಕಾರಿಣಿಗಳ ಬಡತನದ ಬಗ್ಗೆ ಮಾತನಾಡುತ್ತಿಲ್ಲ. ಏಕೆಂದರೆ ಇಂದು ರಾಜಕಾರಣದಲ್ಲಿರುವವರು ಬಡವರಾಗಿರುವುದಿಲ್ಲ. ರಾಜಕಾರಣದ ಜನಪ್ರಿಯ-ಸೀಮಿತ ನಿರ್ವಚನ -ಅರ್ಥವನ್ನು ಬದಿಗಿಟ್ಟು ಲೇಖಕರು ಇಲ್ಲಿ ರಾಜಕಾರಣವು ಹೇಗೆ ವಂಚಿತರ, ಅಂಚಿನಲ್ಲಿರುವವರ ಮತ್ತು ಮಹಿಳೆಯರ, ಪರಿಶಿಷ್ಟರ ಸಂಘಟಿತ ಶಕ್ತಿಯಾಗಬೇಕು ಮತ್ತು ಧ್ವನಿಯಾಗಬೇಕು ಎಂಬುದನ್ನು ಇಲ್ಲಿ ಚರ್ಚಿಸುತ್ತಿದ್ದಾರೆ.

ಡಾ.ಎಂ.ಚಂದ್ರಪೂಜಾರಿ ಅವರು ಇಂದು ಕರ್ನಾಟಕದಲ್ಲಿ ಅಭಿವೃದ್ಧಿ ಕುರಿತಂತೆ ಅತ್ಯಂತ ಸೃಜನಶೀಲವಾಗಿ ಚಿಂತಿಸುತ್ತಿರುವ ಕೆಲವೇ ಕೆಲವು ಸಮಾಜವಿಜ್ಞಾನಿಗಳಲ್ಲಿ ಒಬ್ಬರಾಗಿದ್ದಾರೆ. ಇವರು ಕರ್ನಾಟಕದ ಅಭಿವೃದ್ಧಿ ಕುರಿತಂತೆ ಈಗಾಗಲೆ ಅನೇಕ ಕೃತಿಗಳನ್ನು ಬರೆದಿದ್ದಾರೆ. ಇವರು ಸಂಶೋಧನೆ ಎಂದರೇನು, ಅದನ್ನು ನಡೆಸುವುದು ಹೇಗೆ, ಅದರ ಹಿಂದಿನ ಸೈದ್ಧಾಂತಿಕ ಸಂಗತಿಗಳಾವುವು, ಈಗ ಕರ್ನಾಟಕದಲ್ಲಿ ನಡೆಯುತ್ತಿರುವ ಸಂಶೋಧನೆಗೆ ಸಂಬಂಧಿಸಿದ ಮಿತಿಗಳಾವುವು ಎಂಬುದನ್ನು ಕುರಿತಂತೆ ವಿಶಿಷ್ಟವಾದ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಸಂಶೋಧನೆ ಬಗ್ಗೆ ಕನ್ನಡದಲ್ಲಿ ಬರೆದಿದ್ದಾರೆ ಎಂಬ ಕಾರಣಕ್ಕೆ ಮಾತ್ರ ಇವರು ಮುಖ್ಯರಾಗುವುದಿಲ್ಲ. ಇದನ್ನು ನಾವು ಪ್ರಜ್ಞಾಪೂರ್ವಕವಾಗಿ ಗಮನಿಸಬೇಕು. ಸಂಶೋಧನೆ ಕುರಿತಂತೆ ಇವರು ಕರ್ನಾಟಕದ ಹಿನ್ನೆಲೆಯಲ್ಲಿ ಅನೇಕ ಸೂಕ್ಷ್ಮ ಸಂಗತಿಗಳನ್ನು ನಮ್ಮ ಮುಂದಿಡುತ್ತಾರೆ. ಈ ಬಗ್ಗೆ ಅತ್ಯಂತ ಅಧಿಕೃತವಾಗಿ ಮಾತನಾಡಬಲ್ಲ ವಿದ್ವಾಂಸರು ಅವರಾಗಿದ್ದಾರೆ. ಈ ಕುರಿತ ಅವರ ಕೆಲಸವನ್ನು 'ಸಂಶೋಧನೆ ಬಗ್ಗೆ ಸಂಶೋಧನೆ'ಯೆಂದು ಕರೆಯಬಹುದು. ನಮ್ಮ ರಾಜ್ಯದಲ್ಲಿ ಅಪಾರ ಸಂಖ್ಯೆಯಲ್ಲಿ ಸಮಾಜವಿಜ್ಞಾನಿಗಳಿದ್ದಾರೆ. ಆದರೆ ಅವರು ಜನರ ನಡುವೆ ನಿಂತು ಅಭಿವೃದ್ಧಿ ಬಗ್ಗೆ ಮಾತನಾಡುತ್ತಿಲ್ಲ ಅಥವಾ ಅವರ ಅಧ್ಯಯನಗಳಲ್ಲಿ ಜನರು ಸಂಶೋಧನೆಯ ಮೂಲಧಾತುವಾಗಿಲ್ಲ.

ವಾಸ್ತವ ಸಂಗತಿಯೆಂದರೆ ಇಂದು ನಮ್ಮಲ್ಲಿ ಅಭಿವೃದ್ಧಿ ಬಗ್ಗೆ, ಸಾಮಾಜಿಕ ಬದಲಾವಣೆ ಬಗ್ಗೆ, ಸಮಾನತೆ ಬಗ್ಗೆ, ಲಿಂಗಅಸಮಾನತೆ ಬಗ್ಗೆ, ಪ್ರಚಲಿತ ಸಮಸ್ಯೆಗಳ ಬಗ್ಗೆ ಮಾತನಾಡುವವರೆಲ್ಲಾ ಹೆಚ್ಚಾಗಿ ಸಾಹಿತಿಗಳಾಗಿರುತ್ತಾರೆ ಇಲ್ಲವೆ ಆಕ್ಟಿವಿಷ್ಟರಾಗಿರುತ್ತಾರೆ. ನೆರೆ ಬಂತು, ಗಣಿ ಕುರಿತಂತೆ ಚರ್ಚೆಗಳಾಗುತ್ತಿವೆ, ಚುನಾವಣೆಯಲ್ಲಿ ಹಣದ ಪಾತ್ರ ಕುರಿತ ವಿವಾದ, ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಸಮಸ್ಯೆ, ಲಿಂಗ ತಾರತಮ್ಯ, ರೈತರ ಭೂಮಿಯನ್ನು ಸರ್ಕಾರವು ಒತ್ತಾಯದಿಂದ ಆಕ್ರಮಿಸಿ ಕೊಳ್ಳುತ್ತಿರುವುದು -ಇಂತಹ ಹತ್ತಾರು ವಿಷಯಗಳಿವೆ. ಆದರೆ ಇಂತಹ ವಿಷಯ ಕುರಿತಂತೆ ಕರ್ನಾಟಕದಲ್ಲಿ ಸಮಾಜ ವಿಜ್ಞಾನಿಗಳು ಮಾತನಾಡಿದ್ದು, ಸಂಶೋಧನೆ ಆಧಾರದ ಮೇಲೆ ಅಭಿಪ್ರಾಯ ಮಂಡಿಸಿದ್ದು ಕಡಿಮೆ. ಈ ವಿವಾದಗಳ ಬಗ್ಗೆ ನಮ್ಮ ಸಮಾಜವಿಜ್ಞಾನಿಗಳು ತಮ್ಮ ನಿಲವನ್ನು ಪ್ರತಿಪಾದಿಸಿದ್ದು ಇಲ್ಲವೇ ಇಲ್ಲವೆಂದರೂ ನಡೆಯುತ್ತದೆ. ಇಲ್ಲಿ ಅಪವಾದಗಳಿರಬಹುದು. ಆದರೆ ಸಾಮಾಜಿಕ, ರಾಜಕೀಯ, ಆರ್ಥಿಕ ಸಂಗತಿಗಳ ಬಗ್ಗೆ ಸಮಾಜವಿಜ್ಞಾನಿಗಳು ತಮ್ಮ ನಿಲವನ್ನು ಮಂಡಿಸಬೇಕು ಎಂಬುದರ ಬಗ್ಗೆ ಅನೇಕರಿಗೆ ನಂಬಿಕೆಯೇ ಇದ್ದಂತೆ ಕಾಣುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಎಂ.ಚಂದ್ರಪೂಜಾರಿ ಅವರ ಇತ್ತೀಚಿಗಿನ ಕೃತಿ 'ರಾಜಕೀಯದ ಬಡತನ' ವನ್ನು ನೋಡಬೇಕು (ಡಾ.ಎಂ. ಚಂದ್ರ ಪೂಜಾರಿ(2008). ರಾಜಕೀಯದಲ್ಲಿ ಬಡತನ. ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ). ಪ್ರಸ್ತುತ ಪ್ರಬಂಧದಲ್ಲಿ ಈ ಕೃತಿಯ ಸೈದ್ಧಾಂತಿಕ ನೆಲೆಯನ್ನು ಕುರಿತಂತೆ ಮತ್ತು ಅಭಿವೃದ್ಧಿ ನೀತಿಗೆ ಸಂಬಂಧಿಸಿದಂತೆ ಅದು ಎತ್ತಿರುವ ಪ್ರಶ್ನೆಗಳನ್ನು ಕುರಿತಂತೆ ಚರ್ಚೆ ಮಾಡಲು ಪ್ರಯತ್ನಿಸಲಾಗಿದೆ. ಇದು ಪುಸ್ತಕ ಪರಿಚಯವೂ ಹೌದು ಮತ್ತು ಇಂದಿನ ಕರ್ನಾಟಕದ ರಾಜಕಾರಣದ ಬಗೆಗಿನ ಟೀಕೆಯೂ ಹೌದು.

ಪಾರಮಾರ್ಥಿಕ ಪರಿಭಾಷೆಯ ಮೆರೆದಾಟ

ಇಂದು ಸಮಾಜವಿಜ್ಞಾನಗಳನ್ನು ಕುರಿತ ಚರ್ಚೆಗಳಲ್ಲಿ ಪಾರಮಾರ್ಥಿಕ ರಾಜಕಿಯ ಪರಿಭಾಷೆಯು ಮೆರೆದಾಡುತ್ತಿರುವುದನ್ನು ಕಾಣಬಹುದಾಗಿದೆ. ಇದೊಂದು ರೀತಿಯ ಯಥಾಸ್ಥಿತಿವಾದಿ ಪರಿಭಾಷೆಯಾಗಿದೆ. ಹಕ್ಕಿನ ಪರಿಭಾಷೆಗೆ ವಿರುದ್ಧವಾಗಿ ಹಂಗಿನ ಪರಿಭಾಷೆಯನ್ನು ಉನ್ನತ ಮಟ್ಟಕ್ಕೇರಿಸುವ ಹುನ್ನಾರ ಇಂದು ನಡೆದಿದೆ. ಈ ಪರಿಭಾಷೆಯು ಕಳೆದ ಶತಮಾನದ ಕೊನೆಯ ದಶಕದಲ್ಲಿ ಆರಂಭಗೊಂಡು ಇಂದು ಗಟ್ಟಿಯಾಗಿ ಬೆಳೆಯ ತೊಡಗಿದೆ. ಈ ಪರಿಭಾಷೆಯ ವಿರುದ್ಧ ಸಮಾಜವಿಜ್ಞಾನದ ಪರಿಭಾಷೆಯಲ್ಲಿ ಪ್ರಸ್ತುತ ಕೃತಿಯು ಮಾತನಾಡುತ್ತದೆ. ಇದು ಪ್ರಭುತ್ವದ ಪರಿಭಾಷೆಗೆ ಪ್ರತಿಯಾಗಿ ಪ್ರಜೆಗಳ ಪರಿಭಾಷೆಯಲ್ಲಿ ಮಾತನಾಡುತ್ತದೆ. ಸಂಶೋಧನೆಯು ಮೂಲಭೂತವಾಗಿ ಪ್ರಜೆಗಳ ಪರಿಭಾಷೆಯದ್ದಾಗಬೇಕು(ಅಂದರೆ ಅದು ಸರಳವಾಗಿರಬೇಕು ಅಥವಾ ಸುಲಭವಾಗಿರಬೇಕು ಎಂಬ ಅರ್ಥದಲ್ಲಿ ಅಲ್ಲ). ಅಭಿವೃದ್ಧಿ ಅಥವಾ ಪರಿವರ್ತನೆಯೆಂಬುದು ನಮ್ಮ ಆಯ್ಕೆಯಾಗಬೇಕೆ ವಿನಾ ಅದು ನಮಗೆ ಅನಿವಾರ್ಯವಾಗಬಾರದು.

ಬಡತನದಿಂದ ಮುಕ್ತರಾಗುವುದು, ಅಥವಾ ಶಿಕ್ಷಣ ಸೌಲಭ್ಯ ಪಡೆಯುವುದು, ಕುಡಿಯುವ ನೀರನ್ನು ದೊರಕಿಸಿಕೊಳ್ಳುವುದು ಮುಂತಾದವು ಜನರ ಹಕ್ಕುಗಳು. ಅದು ಯಾರ ದಾನವೂ ಅಲ್ಲ. ಅದು ಬಿಕ್ಷೆಯಲ್ಲ(ನೋಡಿ:ಪು:09). ಹಾಗೆ ನೋಡಿದರೆ ಈ ನೀರು, ಗಾಳಿ, ಖನಿಜ, ಬೆಳಕು, ಭೂಮಿ ಎಲ್ಲವೂ ಪ್ರಕೃತಿದತ್ತವಾದ ಸಂಗತಿಗಳು. ಅವು ಯಾರ ಸೊತ್ತೂ ಅಲ್ಲ. ಈ ಸಂಗತಿಗಳ ಮೇಲೆ ಯಾರೂ ಬಂಡವಾಳ ಹೂಡಿಲ್ಲ. ಇದನ್ನೆಲ್ಲಾ ಸರ್ಕಾರವೊಂದು ಕೊಡುತ್ತಿದೆಯೆಂದು ಭಾವಿಸುವುದು ಪ್ರಜಾಪ್ರಭುತ್ವ ವಿರೋಧಿ ಸಂಗತಿಯಾಗುತ್ತದೆ. ಇಂದು ಕರ್ನಾಟಕದಲ್ಲಿ ಮಾತು ಮಾತಿಗೆ ರಾಜಕಾರಿಣಿಗಳು, ಎಲ್ಲ ಪಕ್ಷದವರೂ, ಹೋಮ-ಹವನ, ದಾನ-ದತ್ತಿ, ಅನ್ನ ಸಂತರ್ಪಣೆಗಳಲ್ಲಿ ನಿರತರಾಗಿರುವುದು ಕಂಡು ಬರುತ್ತದೆ. ಇಂದು ಮಠ-ಮಾನ್ಯಗಳಿಗೆ ಮತ್ತು ಸಂತರು-ಸ್ವಾಮಿಗಳಿಗೆ ಎಲ್ಲಿಲ್ಲದ ಮಹತ್ವ ಬಂದುಬಿಟ್ಟಿದೆ. ಬಡವರ, ವಂಚಿತರ, ಅಂಚಿನಲ್ಲಿರುವವರ, ಮಹಿಳೆಯರ ಸ್ಥಾನವನ್ನು ಇಂದು ಸರ್ಕಾರದ ಮಟ್ಟದಲ್ಲಿ ಈ ಸಾಧು-ಸಂತರು, ಸ್ವಾಮಿಗಳು, ಯೋಗಿಗಳು ಆಕ್ರಮಿಸಿಕೊಂಡು ಬಿಟ್ಟಿದ್ದಾರೆ.

ಇವರೆಲ್ಲರೂ, ಸರ್ಕಾರವನ್ನು ಸೇರಿಸಿಕೊಂಡು ಇಂದು ನಾವು ಎದುರಿಸುತ್ತಿರುವ ಬಡತನ, ಬೆಲೆ ಏರಿಕೆ, ಪ್ರಾದೇಶಿಕ ಅಸಮತೋಲನ, ರೈತರ ಆತ್ಮಹತ್ಯೆಗಳು ಎಲ್ಲವುಗಳಲ್ಲೂ ವಿಧಿಯಾಟವನ್ನು ಕಾಣುತ್ತಾರೆ. ಇದನ್ನೆ ಇಲ್ಲಿ ಪಾರಮಾರ್ಥಿಕ ರಾಜಕೀಯ ಪರಿಭಾಷೆಯೆಂದು ಕರೆಯಲಾಗಿದೆ. ಎಂ.ಚಂದ್ರಪೂಜಾರಿ ಯಾವುದನ್ನೂ ರಾಜಕೀಯದ ಬಡತನ

ವೆಂದು ಕರೆದಿದ್ದಾರೋ ಅದರ ಮೂಲದಲ್ಲಿರುವ ಸಂಗತಿಯೆಂದರೆ ಈ ಹಂಗಿನ ಪರಿಭಾಷೆ. ಇಂದು ಪ್ರಜೆಗಳ ಬಗ್ಗೆ ಮಾತನಾಡಬೇಕಾದ ರಾಜಕೀಯ ಪಕ್ಷಗಳು, ಸರ್ಕಾರಗಳು 'ಪ್ರಭುತ್ವ'ವನ್ನು ವೈಭವೀಕರಿಸುವ ಕೆಲಸದಲ್ಲಿ ನಿರತವಾಗಿವೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ಶ್ರೀಕೃಷ್ಣದೇವರಾಯನ 500ನೆಯ ಪಟ್ಟಾಭಿಷೇಕ ಮಹೋತ್ಸವ ಅಥವಾ ಸಪ್ತ ಮಾಲಾ/ಅನುಸೂಯ ಮಾಲಾ ಅಭಿಯಾನ, ವರಮಹಾಲಕ್ಷ್ಮಿ ಪೂಜೆ ಮುಂತಾದವು. ಇವು ಅತ್ಯಂತ ಸ್ಪಷ್ಟವಾಗಿ ನಮ್ಮ ರಾಜಕಾರಣದ ಬಡತನವನ್ನು, ದಾರಿದ್ರ್ಯವನ್ನು ತೋರಿಸುತ್ತವೆ. ಸಂಘರ್ಷದ ಪರಿಭಾಷೆಯನ್ನು ಹೀಗಳೆಯುವ ಪಾರಮಾರ್ಥಿಕ ರಾಜಕಾರಣದಿಂದ ಮತ್ತು ಅದನ್ನೇ ನೆಮ್ಮಿಕೊಂಡಿರುವ ರಾಜಕೀಯ ಪಕ್ಷಗಳಿಂದ ಏನನ್ನು ತಾನೆ ಬಡವರು, ವಂಚಿತರು, ಮಹಿಳೆಯರು ಬಯಸಬಹುದು?

ರಾಜಕೀಯದ ಬಡತನವೆಂದರೇನು?

ಆರ್ಥಿಕ ಬಡತನ, ವರಮಾನ ಬಡತನ, ಮಾನವ ಬಡತನ ಮುಂತಾದವುಗಳ ಬಗ್ಗೆ ನಮಗೆಲ್ಲ ಗೊತ್ತು. ಆದರೆ ರಾಜಕೀಯದ ಬಡತನವೆಂದರೇನು? ಇಲ್ಲಿ ಲೇಖಕರು ರಾಜಕಾರಣಿಗಳ ಬಡತನದ ಬಗ್ಗೆ ಮಾತನಾಡುತ್ತಿಲ್ಲ. ಏಕೆಂದರೆ ಇಂದು ರಾಜಕಾರಣದಲ್ಲಿರುವವರು ಬಡವರಾಗಿರುವುದಿಲ್ಲ. ರಾಜಕಾರಣದ ಜನಪ್ರಿಯ-ಸೀಮಿತ ನಿರ್ವಚನ-ಅರ್ಥವನ್ನು ಬದಿಗಿಟ್ಟು ಲೇಖಕರು ಇಲ್ಲಿ ರಾಜಕಾರಣವು ಹೇಗೆ ವಂಚಿತರ, ಅಂಚಿನಲ್ಲಿರುವವರ ಮತ್ತು ಮಹಿಳೆಯರ, ಪರಿಶಿಷ್ಟರ ಸಂಘಟಿತ ಶಕ್ತಿಯಾಗಬೇಕು (ಶಕ್ತಿಯಾಗಬೇಕಾಗಿತ್ತು)ಮತ್ತು ಧ್ವನಿಯಾಗಬೇಕು (ಧ್ವನಿಯಾಗಬೇಕಾಗಿತ್ತು)ಎಂಬುದನ್ನು ಇಲ್ಲಿ ಚರ್ಚಿಸುತ್ತಿದ್ದಾರೆ.

ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ನೆಲೆಯಲ್ಲಿ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳುವ, ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ಆ ನೆಲೆಯಲ್ಲಿ ಉತ್ತರ ಕಂಡುಕೊಳ್ಳುವ ಪ್ರಯತ್ನವೆಂದು ರಾಜಕಾರಣವನ್ನು ಪರಿಭಾವಿಸಿಕೊಂಡಿದ್ದಾರೆ(ನೋಡಿ:ಪು:191-192). ಈ ಕೃತಿಯಲ್ಲಿ ಅನುಸಂಧಾನಾತ್ಮಕವಾಗಿ ಮತ್ತು ಆವಿಷ್ಕರಾತ್ಮಕವಾಗಿ ರಾಜಕಾರಣವನ್ನು ಪರಿಭಾವಿಸಿಕೊಂಡಿರುವ ಪರಿ ಇದಾಗಿದೆ. ಇಂದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಶ್ನೆಗಳಿಗೆ ಮಠಗಳಲ್ಲಿ, ಸ್ವಾಮಿಗಳಲ್ಲಿ, ಹೋಮ-ಹವನಗಳಲ್ಲಿ ಮಂತ್ರ-ಮಾಟಗಳಲ್ಲಿ ಉತ್ತರ ಹುಡುಕುವ-ಕಂಡುಕೊಳ್ಳುವ ಪ್ರವೃತ್ತಿ ಕಂಡು ಬರುತ್ತಿದೆ. ಇದನ್ನೇ ಇಲ್ಲಿ ಲೇಖಕರು ರಾಜಕೀಯದ ಬಡತನವೆಂದು ಕರೆದಿದ್ದಾರೆ. ರಾಜಕಾರಣವು ಏನು ಮಾಡಬೇಕೋ ಅದನ್ನು ಮಾಡುವುದನ್ನು ಬಿಟ್ಟು ಸಂಕುಚಿತ ರೀತಿಯಲ್ಲಿ, ಕೋಮುವಾದದಲ್ಲಿ, ಧರ್ಮಾಂಧತೆಯಲ್ಲಿ, ಹಣದ ಥೈಲಿಯ ವಿನಿಮಯದಲ್ಲಿ, ಮಾಫಿಯಾ ದರೋಡೆಯಲ್ಲಿ, ಎಲ್ಲೈಟರ ಓಲೈಕೆಯಲ್ಲಿ ಯಜ್ಞ-ಯಾಗಗಳಲ್ಲಿ ನಿರತವಾಗಿರುವುದನ್ನು ರಾಜಕೀಯ ಬಡತನವೆಂದು ಇಲ್ಲಿ ಕರೆಯಲಾಗಿದೆ. ಈ ಬಗೆಯ ರಾಜಕಾರಣಕ್ಕೆ ಜನರ, ಅಂದರೆ ಬಹುಸಂಖ್ಯಾತರಾದ ಬಡವರ, ಮಹಿಳೆಯರ, ಅಂಚಿನಲ್ಲಿರುವವರ, ಪರಿಶಿಷ್ಟರ ಅಳಲು, ದಂದುಗಗಳು ಮುಖ್ಯವಾಗುವುದಿಲ್ಲ. ಪ್ರಧಾನಧಾರೆ ಅಭಿವೃದ್ಧಿ ನೀತಿ-ಸಿದ್ಧಾಂತಗಳು ಹುಸಿಯಾಗುತ್ತಿರುವುದು ಸ್ಪಷ್ಟವಾಗಿದ್ದರೂ ಅವುಗಳನ್ನೇ ಇವು ನಂಬಿಕೊಂಡಿದ್ದರೆ ಅದರ ಬಗ್ಗೆ ಮತ್ತೇನನ್ನು ಹೇಳಲು ಬರುತ್ತದೆ?.

ಈ ಕೃತಿಯಲ್ಲಿ ಒಟ್ಟು ಏಳು ಪ್ರಬಂಧಗಳಿವೆ. ವಿವಿಧ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲಾಗಿದೆ. ಕೋಮುವಾದದ ಬಗ್ಗೆ, ಬಡತನದ ಬಗ್ಗೆ, ಮೀಸಲಾತಿ ಬಗ್ಗೆ, ಕರ್ನಾಟಕದಲ್ಲಿನ ಅಭಿವೃದ್ಧಿ ರಾಜಕಾರಣದ ಬಗ್ಗೆ, ಅಧಿಕಾರದ ಬಗ್ಗೆ ಇಲ್ಲಿ ವಿವರವಾಗಿ ಚರ್ಚೆ ಮಾಡಲಾಗಿದೆ. ಈ ಸಂಕಲನದಲ್ಲಿ ಚರ್ಚೆಯ ವಿಷಯಗಳು ಬೇರೆ ಬೇರೆಯಾಗಿದ್ದರೂ ಅವುಗಳ ಮೂಲದಲ್ಲಿನ ತಾತ್ವಿಕ ನೆಲೆಗಟ್ಟು ಮಾತ್ರ ಒಂದೇ ಆಗಿದೆ. ಅಧಿಕಾರವೆನ್ನುವುದು ಹೇಗೆ ನಮ್ಮಲ್ಲಿ ಉಳ್ಳವರ ಪರವಾಗಿ ಕೆಲಸ ಮಾಡುತ್ತದೆ ಎಂಬುದನ್ನು ಇಲ್ಲಿ ಲೇಖಕರು ಅನೇಕ ಪುರಾವೆಗಳೊಂದಿಗೆ ಚರ್ಚಿಸಿದ್ದಾರೆ. ರಾಜಕಾರಣವು ಯಾಕೆ ಬಡವರ, ಅಂಚಿನಲ್ಲಿರುವವರ ಮತ್ತು ಮಹಿಳೆಯರ ಪರವಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಇಲ್ಲಿನ ಚರ್ಚೆಯ ಮುಖ್ಯ ವಿಷಯವಾಗಿದೆ. ನಮ್ಮಲ್ಲಿ ಬಡತನವನ್ನು, ಸಾಮಾಜಿಕ ಪರಿವರ್ತನೆಯನ್ನು, ಅಧಿಕಾರ ಮತ್ತು ಜ್ಞಾನಗಳ ನಡುವಿನ ಸಂಬಂಧವನ್ನು ಪರಿಭಾವಿಸಿಕೊಂಡಿರುವ ಪರಿಯು ಹೇಗೆ ಸೀಮಿತವಾದ ರೀತಿಯಲ್ಲಿದೆ ಎಂಬುದನ್ನು ಇಲ್ಲಿ ವಿಶದವಾಗಿ ವಿವರಿಸಲಾಗಿದೆ.

ಡಾ.ಎಂ.ಚಂದ್ರಪೂಜಾರಿ

ಪ್ರಜಾಪ್ರಭುತ್ವವು ಯಾರಿಗೆ ಬೇಕು ಎಂದರೆ ಅದು ಬಡವರಿಗೆ ಬೇಕು ಎಂಬ ಉತ್ತರ ಪ್ರಸ್ತುತ ಅಧ್ಯಯನದಲ್ಲಿ ಸ್ಪಷ್ಟವಾಗಿದೆ. ಇಲ್ಲಿನ ಸಮಸ್ಯೆಯೆಂದರೆ ಪ್ರಜಾಪ್ರಭುತ್ವವು ಬಡವರಿಗೆ ಬೇಕು, ಸರಿ. ಆದರೆ ಅದರಿಂದ ತೀವ್ರಗತಿಯಲ್ಲಿ ಮತ್ತು ವ್ಯಾಪಕ ರೀತಿಯಲ್ಲಿ ಬದಲಾವಣೆ ನಡೆಯಬೇಕಾದರೆ ಬಡವರು ಮೊದಲು ಅಕ್ಷರಸ್ಥರಾಗಬೇಕು.

ನಮ್ಮ ರಾಜಕಾರಣಕ್ಕೆ ಜನರನ್ನು ಸಂಘಟಿಸುವ, ಅಭಿವೃದ್ಧಿಯನ್ನು ಮುಖ್ಯವಾದ ರಾಜಕೀಯ ಸಂಗತಿಯನ್ನಾಗಿ ಮಾಡುವ, ಸಮಸ್ಯೆಗಳ ಬಗ್ಗೆ, ಅವುಗಳ ವಿವಿಧ ಮುಖಗಳ ಬಗ್ಗೆ ಚರ್ಚೆ ಮಾಡುವ ಕ್ರಮ ಯಾಕೆ ಸಾಧ್ಯವಾಗುತ್ತಿಲ್ಲ ಎಂಬುದುನ್ನು ಇಲ್ಲಿ ವಿವರಿಸಲಾಗಿದೆ. ಚುನಾವಣೆಯ ಸಂದರ್ಭವನ್ನು ಬಿಟ್ಟರೆ ನಮ್ಮ ರಾಜಕಾರಣಕ್ಕೆ ಜನರು ಜ್ಞಾಪಕಕ್ಕೆ ಬರುವುದಿಲ್ಲ. ನಮ್ಮಲ್ಲಿ ರಾಜಕಾರಣವು ಬಹುಜನರ ಒಳಿತನ್ನು ಮಾಡುವ ದಿಶೆಯಲ್ಲಿ ಕ್ರಿಯಾಶೀಲವಾಗಿಲ್ಲ. ರಾಜಕೀಯವೆನ್ನುವುದು ಒಂದು ರೀತಿಯಲ್ಲಿ ಸಮಾಜದಲ್ಲಿ 'ಕೊಳಕು' ಸಂಗತಿಯಾಗಿ ಬಿಟ್ಟಿದೆ. ಆದರೆ ಬಡವರು, ವಂಚಿತರು, ಮಹಿಳೆಯರು ರಾಜಕೀಯದ, ಚುನಾವಣೆಯ, ಓಟು ಹಾಕುವ ಸಂಗತಿಗಳಲ್ಲಿ, ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟಿದ್ದಾರೆ. ಈ ವೈರುಧ್ಯವನ್ನು ಇಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

'ಸಾಮಾನ್ಯರ ಚುನಾವಣಾ ರಾಜಕೀಯ' ಎನ್ನುವ ಅಧ್ಯಾಯದಲ್ಲಿ ಹೇಗೆ ಜನರು ಓಟು ಹಾಕುವ ಸಂಗತಿಯನ್ನು ತೀರ್ಮಾನ ಮಾಡುತ್ತಾರೆ, ಅಲ್ಲಿ ಯಾವ ಯಾವ ಸಂಗತಿಗಳು ಕೆಲಸ ಮಾಡುತ್ತವೆ, ಜನರು ರಾಜಕಾರಣದ ಬಗ್ಗೆ ಹೇಗೆ ಯೋಚಿಸುತ್ತಾರೆ ಎಂಬ ಸಂಗತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಇಲ್ಲಿ ಚರ್ಚೆ ಮಾಡಲಾಗಿದೆ. ರಾಜಕಾರಣದ ಬಗ್ಗೆ ಜನರ ಅಭಿಪ್ರಾಯಗಳು ಹೇಗೆ ಭಿನ್ನ ಭಿನ್ನವಾಗಿರುತ್ತವೆ ಎಂಬುದಕ್ಕೆ ಇಲ್ಲಿ ನಮಗೆ ಆಧಾರಗಳು ದೊರೆಯುತ್ತವೆ. ಚುನಾವಣೆಗಳಲ್ಲಿ ಜನರು ಮಾಧ್ಯಮಗಳಲ್ಲಿ ಬರುವ ಸೂಚನೆಗಳನ್ನು ಆಧರಿಸಿ ಅಥವಾ ಚುನಾವಣೆ ಬಗ್ಗೆ ಸಾಮಾನ್ಯವಾಗಿರುವ ನಂಬಿಕೆಗಳಿಗೆ ವಿಭಿನ್ನವಾಗಿ ವರ್ತಿಸುತ್ತಾರೆ ಎಂಬುದು ಇಲ್ಲಿ ಕಂಡು ಬರುತ್ತದೆ. ಅದೊಂದು ಸಂಕೀರ್ಣವಾದ ಸಂಗತಿ ಎಂಬುದು ಇಲ್ಲಿ ಸ್ಪಷ್ಟವಾಗಿದೆ. ಉದಾಹರಣೆಗೆ ಜಾತಿ/ಮತ/ಧರ್ಮ ನೋಡಿ ಓಟು ಹಾಕಿದ್ದೀರಾ ಎಂಬ ಪ್ರಶ್ನೆಗೆ ಶೇ 68 ರಷ್ಟು ಮಂದಿ ಇಲ್ಲವೆಂದು ಉತ್ತರ ನೀಡಿದ್ದಾರೆ. ದುಡ್ಡು/ವಸ್ತುಗಳನ್ನು ಪಡೆದು ಓಟು ಹಾಕಿದ್ದೀರಾ ಎಂಬ ಪ್ರಶ್ನೆಗೆ ಶೇ 48 ರಷ್ಟು ಮಂದಿ ಇಲ್ಲವೆಂದು ಪ್ರತಿಕ್ರಿಯಿಸಿದ್ದಾರೆ.

ಪ್ರಜಾಪ್ರಭುತ್ವವು ಯಾರಿಗೆ ಬೇಕು ಎಂದರೆ ಅದು ಬಡವರಿಗೆ ಬೇಕು ಎಂಬ ಉತ್ತರ ಪ್ರಸ್ತುತ ಅಧ್ಯಯನದಲ್ಲಿ ಸ್ಪಷ್ಟವಾಗಿದೆ. ಇಲ್ಲಿನ ಸಮಸ್ಯೆಯೆಂದರೆ ಪ್ರಜಾಪ್ರಭುತ್ವವು ಬಡವರಿಗೆ ಬೇಕು, ಸರಿ. ಆದರೆ ಅದರಿಂದ ತೀವ್ರಗತಿಯಲ್ಲಿ ಮತ್ತು ವ್ಯಾಪಕ ರೀತಿಯಲ್ಲಿ ಬದಲಾವಣೆ ನಡೆಯಬೇಕಾದರೆ ಬಡವರು ಮೊದಲು ಅಕ್ಷರಸ್ಥರಾಗಬೇಕು. ಈ ಅಧ್ಯಯನದಲ್ಲಿನ ನಮೂನೆಯಲ್ಲಿ ಅಕ್ಷರಸ್ಥರು-ಅನಕ್ಷರಸ್ಥರು ಎಂಬ ವರ್ಗೀಕರಣವಿಲ್ಲ. ಜನರು ಇಲ್ಲಿ ವಸ್ತುಸ್ಥಿತಿಯ ಆಧಾರದ ಮೇಲೆ ಉತ್ತರ ನೀಡಿರುವಂತೆ ಕಾಣುತ್ತದೆ. ಸಮಸ್ಯೆಯನ್ನು ವಿಶ್ಲೇಷಣೆ ಮಾಡಿ ಪ್ರತಿಕ್ರಿಯೆ ನೀಡಿದಂತಿಲ್ಲ. ತಮ್ಮ ತಿಳುವಳಿಕೆ-ತಮಗೆ ಪ್ರಾಪ್ತವಾದ ತಿಳುವಳಿಕೆಗಳ ನಡುವಿನ ಸಂಬಂಧ-ಸಂಯೋಜನೆಯ ನೆಲೆಯಲ್ಲಿ ಇಲ್ಲಿ ಉತ್ತರಗಳು ಉಂಟಾದಂತೆ ಕಾಣುವುದಿಲ್ಲ.

ಮೀಸಲಾತಿಯನ್ನು ಕುರಿತಂತೆ ಇಂದು ಬಹಳಷ್ಟು ಚರ್ಚೆಗಳಾಗುತ್ತಿವೆ. ಅದರ ಬಗ್ಗೆ ಇಲ್ಲಿ ಲೇಖಕರು ಮೂಲಭೂತವಾದ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಅದನ್ನು ಜಾತಿಯ ನೆಲೆಯಲ್ಲಿ ಪರಿಭಾವಿಸಿ ಕೊಳ್ಳುತ್ತಿರುವ ಕಾರಣದಿಂದಾಗಿ ಅದು ಸೀಮಿತ ನೆಲೆಯಲ್ಲಿ ಸಾಮಾಜಿಕ ಬದಲಾವಣೆಯ ಆಯುಧವಾಗಿ ಕೆಲಸ ಮಾಡುತ್ತಿದೆ. ಜಾತಿಯ ನೆಲೆಯೆಂದಾಗ ಲೇಖಕರು ಅದನ್ನು ಇಲ್ಲಿ 'ಎಲ್ಲ ಜಾತಿಗಳಲ್ಲೂ ಬಡವರಿದ್ದಾರೆ, ಆದ್ದರಿಂದ ಎಲ್ಲ ಜಾತಿಯಲ್ಲಿರುವ ಬಡವರಿಗೆ ಮೀಸಲಾತಿಯನ್ನು ವಿಸ್ತರಿಸಬೇಕು' ಎಂಬ ರೂಢಿಗತವಾದ ಅರ್ಥದಲ್ಲಿ ಹೇಳುತ್ತಿಲ್ಲ. ಅದಕ್ಕೆ ಪ್ರತಿಯಾಗಿ ಮೀಸಲಾತಿಯು ತಳಸ್ತರದ ಬಡವರ ಅಭಿವೃದ್ಧಿಗೆ

...ವಾದ ಅಸ್ತ್ರವಾಗಬೇಕಾದರೆ ಅದನ್ನು ಸಂಘಟಿತ ರೀತಿಯಲ್ಲಿ ಜಾತಿಗಳು ಬಳಸಿಕೊಳ್ಳಬೇಕಾಗುತ್ತದೆ ಎಂಬ ಸಂಗತಿಯ ಕಡೆ ನಮ್ಮ ಗಮನ ಸೆಳೆಯುತ್ತಿದ್ದಾರೆ.

ಇದಕ್ಕಿಂತ ಮುಖ್ಯವಾಗಿ ಮೀಸಲಾತಿಗೆ ಕೋಮುವಾದಿ ರಾಜಕಾರಣವು ತರುತ್ತಿರುವ ಕುತ್ತನ್ನು ಇಂದು ನಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಮೀಸಲಾತಿಗೆ ನಮ್ಮ ದೇಶದಲ್ಲಿರುವ ಪ್ರಬಲವಾದ ಸಂಘಟಿತ ವಿರೋಧ ಎಲ್ಲಿಂದ ಬರುತ್ತಿದೆಯೆಂದರೆ ಅದು ಪಾರಮಾರ್ಥಿಕ ಕೋಮುವಾದಿ ರಾಜಕಾರಣದಿಂದ ಬರುತ್ತಿದೆ. ಇಂದು ಅಲ್ಲಿ ಕೇವಲ ಅಲ್ಪಸಂಖ್ಯಾತರನ್ನು ಮಾತ್ರ ತಮ್ಮ ಕೋಮುವಾದಿ ರಾಜಕಾರಣದ ಗುರಿಯನ್ನಾಗಿ ಮಾಡಿಕೊಳ್ಳಲಾಗಿದೆ. ಆದರೆ ಇದನ್ನು ಮುಂದೆ ಅವರು ವಿಸ್ತೃತಗೊಳಿಸಿ ಅದನ್ನು ಪರಿಶಿಷ್ಟರಿಗೂ ಅನ್ವಯಿಸುವುದಿಲ್ಲ ಎಂಬುದಕ್ಕೆ ಆಧಾರವೇನಿಲ್ಲ. ಉದಾಹರಣೆಗೆ ಮಧ್ಯಾಹ್ನದ ಶಾಲಾ ಬಿಸಿಯೂಟದಲ್ಲಿ ಮೊಟ್ಟೆಯನ್ನು ನೀಡಬೇಕೆಂಬ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ಪಾರಮಾರ್ಥಿಕ ಕೋಮುವಾದಿ ರಾಜಕಾರಣ ಹೇಗೆ ವಿಫಲಗೊಳಿಸಿತು ಎಂಬುದು ಇನ್ನೂ ನಮ್ಮ ಮುಂದೆ ಹಸಿರಾಗಿದೆ.

ಅಲ್ಪಸಂಖ್ಯಾತರೆಂಬ ನುಡಿಯ ಬಳಕೆಯನ್ನೇ ಕೋಮುವಾದಿಗಳು ಪ್ರಶ್ನಿಸುತ್ತಿದ್ದಾರೆ. ಅದೇ ರೀತಿಯಲ್ಲಿ ಪರಿಶಿಷ್ಟರೆಂಬ ನುಡಿಯ, ದಲಿತರೆಂಬ ನುಡಿಯ ಬಳಕೆಯ ಬಗ್ಗೆಯೂ ಕೋಮುವಾದಿ ರಾಜಕಾರಣಕ್ಕೆ ಆಕ್ಷೇಪವಿದೆ. ಇದನ್ನು ನಾವು ರಾಜಕೀಯದ ಬಡತನವೆಂದು ಕರೆಯಬಹುದು. ಅವರ ಏಕಘ ನಾಕೃತಿಯ ವ್ಯವಸ್ಥೆಯ ಪ್ರಣಾಳಿಕೆಯಲ್ಲಿ ಮೀಸಲಾತಿಗೆ ಅವಕಾಶವಿರಲು ಸಾಧ್ಯವಿಲ್ಲ. ಈ ಪಾರಮಾರ್ಥಿಕ ರಾಜಕಾರಣವು ನಮ್ಮ ದೇಶದಲ್ಲಿನ ಬಹುರೂಪಿ ಸಾಮಾಜಿಕ ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಮೀಸಲಾತಿಗೆ ಬಹುಮುಖ್ಯವಾದ ಅಪಾಯವೆಲ್ಲಿದೆಯೆಂದರೆ ಈ ರಾಜಕಾರಣವು ಪ್ರತಿಪಾದಿಸುತ್ತಿರುವ ಏಕರೂಪೀಕರಣ ಪ್ರಣಾಳಿಕೆಯಲ್ಲಿದೆ.

ಬಡತನವನ್ನು ಕುರಿತಂತೆ ಒಂದು ಪ್ರಬಂಧದಲ್ಲಿ ಸಂಶೋಧಕರು ಚರ್ಚೆ ಮಾಡಿದ್ದಾರೆ. ಅದನ್ನು ಬಂಡವಾಳದ ಕೊರತೆಯ ನೆಲೆಯಲ್ಲಿ, ಅಥವಾ ವರಮಾನದ ಕೊರತೆಯ ನೆಲೆಯಲ್ಲಿ, ಅಥವಾ ಉದ್ಯಮಶೀಲತೆಯ ಕೊರತೆಯ ನೆಲೆಯಲ್ಲಿ ವಿಶ್ಲೇಷಣೆ ಮಾಡುವ, ಅರ್ಥ ಮಾಡಿಕೊಳ್ಳುವ ಅಥವಾ ಗುರುತಿಸುವ ಕ್ರಮವನ್ನು ಇಲ್ಲಿ ಪ್ರಶ್ನೆ ಮಾಡಲಾಗಿದೆ. ಬಂಡವಾಳದ ಹೂಡಿಕೆಯನ್ನು ಹೆಚ್ಚಿಸುವುದರ ಮೂಲಕ ಅದನ್ನು ಬಗೆಹರಿಸಬಹುದೆಂಬ ವಾದ ಎಷ್ಟು ಹುಸಿಯಾದುದು ಎಂಬುದನ್ನು ಇಲ್ಲಿ ಲೇಖಕರು ಅನಾವರಣ ಮಾಡಿದ್ದಾರೆ. ಅನೂಚಾನವಾಗಿ ಹರಿದು ಕೊಂಡು ಬರುತ್ತಿರುವ ಮತ್ತು ಜಡ್ಡುಗಟ್ಟಿಹೋಗಿರುವ ಸಾಮಾಜಿಕ ಅಸಮಾನತೆಯ–ಅದರಿಂದ ಪ್ರಾಪ್ತವಾಗುವ ಅಸ್ವಾತಂತ್ರ್ಯ ಹೇಗೆ ಬಡತನಕ್ಕೆ ಕಾರಣವಾಗಿದೆ ಎಂಬುದನ್ನು ಇಲ್ಲಿ ಚರ್ಚೆ ಮಾಡಲಾಗಿದೆ. ಬಂಡವಾಳಕ್ಕೆ ಹೇಗೆ ಆರ್ಥಿಕ ಅಸಮಾನತೆಯು ಆಧಾರವಾಗಿದೆಯೋ ಅದೇ ರೀತಿಯಲ್ಲಿ ಬಡತನಕ್ಕೆ ಸಾಮಾಜಿಕ ಅಸಮಾನತೆಯು ಆಧಾರವಾಗಿದೆ ಎಂಬುದನ್ನು ಇಲ್ಲಿ ತೋರಿಸಲಾಗಿದೆ.

ಸ್ವಾತಂತ್ರ್ಯವನ್ನು ಎರಡು ನೆಲೆಗಳಲ್ಲಿ ಪರಿಭಾವಿಸಿಕೊಳ್ಳಬಹುದು. ಮೊದಲನೆಯದು ಇತ್ಯಾತ್ಮಕ ಸ್ವಾತಂತ್ರ್ಯ ಮತ್ತು ಎರಡನೆಯದು ನೇತ್ಯಾತ್ಮಕ ಸ್ವಾತಂತ್ರ್ಯ. ಇಲ್ಲಿ ಚಂದ್ರ ಪೂಜಾರಿ ಅವರು ಇತ್ಯಾತ್ಮಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಸಂವಿಧಾನಾತ್ಮಕವಾಗಿ ಅನೇಕ ಬಗೆಯ ಸ್ವಾತಂತ್ರ್ಯಗಳನ್ನು ನೀಡಲಾಗಿದೆ. ಅವು ಕೇವಲ ನೇತ್ಯಾತ್ಮಕ ಸ್ವಾತಂತ್ರ್ಯ. ಆದರೆ ಬಡವರಿಗೆ ತಮ್ಮ ಬಡತನದಿಂದ ಮುಕ್ತಿ ಪಡೆದುಕೊಳ್ಳುವ ಸ್ವಾತಂತ್ರ್ಯವಿದೆಯೇ? ಅವರಿಗೆ ಅನಕ್ಷರತೆಯಿಂದ ಬಿಡುಗಡೆ ಪಡೆದುಕೊಳ್ಳುವುದು ಸಾಧ್ಯವಾಗಿದೆಯೇ?. ಈ ನೆಲೆಯಲ್ಲಿ ಸ್ವಾತಂತ್ರ್ಯವನ್ನು ನಾವು ಪರಿಭಾವಿಸಿಕೊಳ್ಳಬೇಕಾಗಿದೆ. ವಾಸ್ತವವಾಗಿ ನಮ್ಮ ಸಮಾಜದಲ್ಲಿ ಬಡವರಿಗೆ ಅನೇಕ ರೀತಿಯ ಸ್ವಾತಂತ್ರ್ಯಗಳನ್ನು ನೀಡಲಾಗಿದೆ. ಅವರು ಈಗ ಸಂಕೋಲೆಗಳಿಂದ ಮುಕ್ತರಾಗಿದ್ದಾರೆ. ಆದರೆ ಇಲ್ಲಿರುವ ಸಮಸ್ಯೆ ಅದಲ್ಲ. ಅವರಿಗೆ ಇತ್ಯಾತ್ಮಕ ಸ್ವಾತಂತ್ರ್ಯವಿಲ್ಲ. ಅವರಿಗಿರುವುದು ಕೇವಲ ನೇತ್ಯಾತ್ಮಕ ಸ್ವಾತಂತ್ರ್ಯ. ಈ ಇತ್ಯಾತ್ಮಕ ಸ್ವಾತಂತ್ರ್ಯವು ಒಂದು ವಿಧದಲ್ಲಿ ಜನರ ಧಾರಣಾ ಸಾಮರ್ಥ್ಯಕ್ಕೆ ಸಂಬಂಧಿಸಿದ ಸಂಗತಿಯಾಗಿದೆ.

ಧಾರಣಾ ಸಾಮರ್ಥ್ಯವು ಕೇವಲ ವರಮಾನ ಅಥವಾ ಬಂಡವಾಳದಿಂದ ಬಂದು ಬಿಡುವುದಿಲ್ಲ. ಜನರು ತಮ್ಮ ಬದುಕಿನ ಸ್ಥಿತಿಗತಿಯನ್ನು ಉತ್ತಮ ಪಡಿಸಿಕೊಳ್ಳಲು ಸಮಾಜದಲ್ಲಿ ಲಭ್ಯವಿರುವ ಅವಕಾಶಗಳನ್ನು ಎಷ್ಟರ ಮಟ್ಟಿಗೆ ದಕ್ಕಿಸಿಕೊಳ್ಳುತ್ತಾರೆ ಎಂಬುದನ್ನೇ ಇಲ್ಲಿ ಧಾರಣಾ ಸಾಮರ್ಥ್ಯವೆಂದು ಕರೆಯಲಾಗಿದೆ. ಈ ದಕ್ಕಿಸಿಕೊಳ್ಳುವ ಸಾಮರ್ಥ್ಯವು ಜಾತಿಯ ಕಾರಣಕ್ಕೆ, ಪ್ರಾದೇಶಿಕ ಕಾರಣಕ್ಕೆ, ಧರ್ಮದ ಕಾರಣಕ್ಕೆ ಸೀಮಿತವಾಗಿ ಬಿಡಬಹುದು. ಈ ಕಾರಣಕ್ಕೆ ಅಮರ್ತ್ಯ ಸೇನ್ ಅಭಿವೃದ್ಧಿಯನ್ನು ಹೀಗೆ ನಿರ್ವಚಿಸುತ್ತಾನೆ. 'ಜನರು ಅನುಭವಿಸುತ್ತಿರುವ ಅನೇಕ ಬಗೆಯ ಅಸ್ವಾತಂತ್ರ್ಯಗಳನ್ನು ನಿರ್ಮೂಲನ ಮಾಡುವ ಪ್ರಕ್ರಿಯೆಯೇ ಅಭಿವೃದ್ಧಿ'(ನೋಡಿ .ಸೇನ್‌ನ 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' ಕೃತಿಯ ಮುನ್ನುಡಿ)

ಬಡತನದ ನಿವಾರಣೆಗೆ ವರಮಾನದ ಸಮಾನ ವಿತರಣೆಯೂ ಪರಿಹಾರವಲ್ಲ. ಏಕೆಂದರೆ ಅದು ಕೂಡ ವರಮಾನದ ವರ್ಧನಾ ಅಭಿವೃದ್ಧಿ ಪ್ರಣಾಳಿಕೆಯನ್ನೇ ಆಧರಿಸಿದೆ. ಡಾ.ಎಂ.ಚಂದ್ರಪೂಜಾರಿ ಸ್ಪಷ್ಟವಾಗಿ ಗುರುತಿಸಿರುವಂತೆ ಸಂಪತ್ತಿನ ಸಮಾನ ವಿತರಣೆಯೊಂದಿಗೆ ಕೆಳಸ್ತರದಲ್ಲಿ ಜನರನ್ನು ಸಶಕ್ತೀಕರಣಗೊಳಿಸುವ ಕ್ರಮವೂ ಅಗತ್ಯ(ಪು: 149). ಇದನ್ನೇ ಅಮರ್ತ್ಯಸೇನ್ ಧಾರಣಾ ಸಾಮರ್ಥ್ಯವೆಂದು ಕರೆದಿದ್ದಾನೆ. ಅಭಿವೃದ್ಧಿಯ ಮೇಲೆ, ಅಂದರೆ ಏರಿಕೆಯಾದ ವರಮಾನದ ಮೇಲೆ ತಳಸ್ತರದ ಜನರಿಗೆ ಅಧಿಕಾರ– ಸೇನ್‌ನ ಪರಿಭಾಷೆಯಲ್ಲಿ ಹೇಳಬೇಕೆಂದರೆ ಹಕ್ಕುದಾರಿಕೆ– ಪ್ರಾಪ್ತವಾಗಬೇಕು ಅಥವಾ ಏರಿಕೆಯಾದ ವರಮಾನವನ್ನು ತಮ್ಮ ಬದುಕನ್ನಾಗಿ ಪರಿವರ್ತಿಸಿಕೊಳ್ಳುವ ಸಾಮರ್ಥವನ್ನು ಜನರು ಪಡೆದುಕೊಳ್ಳಬೇಕು. ಇಲ್ಲಿ ರಾಜಕಾರಣದ ಪಾತ್ರ ನಿರ್ಣಾಯಕವಾದುದಾಗಿದೆ. ಆದರೆ ನಮ್ಮಲ್ಲಿ ರಾಜಕಾರಣಕ್ಕೆ ಇವು ಮುಖ್ಯವಾಗುತ್ತಿಲ್ಲ. ಇದನ್ನೇ ಇಲ್ಲಿ ಲೇಖಕರು ರಾಜಕೀಯದ ಬಡತನವೆಂದು ಕರೆದಿದ್ದಾರೆ.

ಬಹಳ ಅಚ್ಚರಿಯ ಸಂಗತಿಯೆಂದರೆ ಇಂದು ಬಡತನದ ಬಗ್ಗೆ ಮಾತನಾಡುವುದೇ ಕಷ್ಟವಾಗಿ ಬಿಟ್ಟಿದೆ. ಏಕೆಂದರೆ ಅದು ಇಂದು ಫ್ಯಾಶನಬಲ್ ಅಲ್ಲ. ಎಲ್ಲರೂ ವರಮಾನ ವರ್ಧನೆ ಬಗ್ಗೆ ಒಂದು ರೀತಿಯಲ್ಲಿ ಜಪ ಮಾಡುತ್ತಿದ್ದಾರೆ. ಇದು ಫ್ಯಾಶನ್. ಈ ವರ್ಷ ಭಾರತದ ಜಿಡಿಪಿಯು ಶೇ 7 ಅಥವಾ ಶೇ 8 ರ ಪ್ರಮಾಣದಲ್ಲಿ ವರ್ಧಿಸಿ ಬಿಟ್ಟರೆ ಸಾಕು, ನಮ್ಮ ಸಮಸ್ಯೆಗಳೆಲ್ಲ ಬಗೆಹರಿದು ಬಿಡುತ್ತವೆ ಎನ್ನುವ ರೀತಿಯಲ್ಲಿ ಮಾತನಾಡಲಾಗುತ್ತಿದೆ. ಆದರೆ ಬಡತನವನ್ನು ಅಳೆಯುವ ವಿಷಯ ಕುರಿತಂತೆ ಹೊಸ ಪದ್ಧತಿಯೊಂದರ ಬಗ್ಗೆ ಮಾತನಾಡುತ್ತಿರುವ ತೆಂಡುಲ್ಕರ್ ವರದಿಯು ಬಡತನದ ಪ್ರಮಾಣವು ಈ ಹಿಂದೆ ಮಾಡಿದ ಅಂದಾಜಿನ ಪ್ರಮಾಣಕ್ಕಿಂತ ಅದು ಅಂದು ವಾಸ್ತವವಾಗಿ ಅಧಿಕವಾಗಿತ್ತೆಂದು ತೋರಿಸಿಕೊಟ್ಟಿದೆ. ಈ ವರಮಾನದ ವರ್ಧನೆಗೂ ಮತ್ತು ಬಡತನದ ನಿವಾರಣೆಗೂ ತೀವ್ರತರವಾದ ಸಂಬಂಧವಿಲ್ಲವೆಂಬುದು ಬಹಳ ಹಿಂದೆಯೇ ಸ್ಪಷ್ಟವಾಗಿದೆ.

ಬಡತನದ ನಿವಾರಣೆಗೆ ಬಂಡವಾಳದ, ವರಮಾನದ ವರ್ಧನೆ ಬೇಕು. ಆದರೆ ಈ ವರ್ಧನೆಯೇ ಬಡತನ ನಿವಾರಣೆಯ ಸೂಚಿಯಲ್ಲ. ಆದರೆ ನಮ್ಮ ರಾಜಕಾರಣವು ಅದನ್ನು ಇನ್ನೂ ನೆಮ್ಮಿಕೊಂಡು ಬಡತನದ ನಿವಾರಣೆಗೆ ಮತ್ತು ಅಭಿವೃದ್ಧಿಗೆ ವರಮಾನ ವರ್ಧನೆಯೊಂದೆ ಪರಿಹಾರವೆನ್ನುವಂತೆ ವರ್ತಿಸುತ್ತಿದೆ. ಇದನ್ನು ರಾಜಕೀಯದ ಬಡತನವೆಂದು ಕರೆಯಬಹುದು. ಬಡತನವನ್ನು ನೇರವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಎದುರಿಸದೆ ಬೇರೆ ದಾರಿಯೇ ಇಲ್ಲ. ಆದರೆ ನಮ್ಮ ರಾಜಕಾರಣಕ್ಕೆ ಇದು ಬೇಕಾಗಿಲ್ಲ.

ಬಡತನದ ನಿವಾರಣೆಗೆ ವರಮಾನದ ಸಮಾನ ವಿತರಣೆಯೂ ಪರಿಹಾರವಲ್ಲ. ಏಕೆಂದರೆ ಅದು ಕೂಡ ವರಮಾನದ ವರ್ಧನಾ ಅಭಿವೃದ್ಧಿ ಪ್ರಣಾಳಿಕೆಯನ್ನೇ ಆಧರಿಸಿದೆ. ಡಾ.ಎಂ.ಚಂದ್ರಪೂಜಾರಿ ಸ್ಪಷ್ಟವಾಗಿ ಗುರುತಿಸಿರುವಂತೆ ಸಂಪತ್ತಿನ ಸಮಾನ ವಿತರಣೆಯೊಂದಿಗೆ ಕೆಳಸ್ತರದಲ್ಲಿ ಜನರನ್ನು ಸಶಕ್ತೀಕರಣಗೊಳಿಸುವ ಕ್ರಮವೂ ಅಗತ್ಯ(ಪು: 149). ಇದನ್ನೇ ಅಮರ್ತ್ಯಸೇನ್ ಧಾರಣಾ ಸಾಮರ್ಥ್ಯವೆಂದು ಕರೆದಿದ್ದಾನೆ. ಅಭಿವೃದ್ಧಿಯ ಮೇಲೆ, ಅಂದರೆ ಏರಿಕೆಯಾದ ವರಮಾನದ ಮೇಲೆ ತಳಸ್ತರದ ಜನರಿಗೆ ಅಧಿಕಾರ– ಸೇನ್‌ನ ಪರಿಭಾಷೆಯಲ್ಲಿ ಹೇಳಬೇಕೆಂದರೆ ಹಕ್ಕುದಾರಿಕೆ– ಪ್ರಾಪ್ತವಾಗಬೇಕು ಅಥವಾ ಏರಿಕೆಯಾದ ವರಮಾನವನ್ನು ತಮ್ಮ ಬದುಕನ್ನಾಗಿ ಪರಿವರ್ತಿಸಿಕೊಳ್ಳುವ ಸಾಮರ್ಥವನ್ನು ಜನರು ಪಡೆದುಕೊಳ್ಳಬೇಕು. ಇಲ್ಲಿ ರಾಜಕಾರಣದ ಪಾತ್ರ ನಿರ್ಣಾಯಕವಾದುದಾಗಿದೆ. ಆದರೆ ನಮ್ಮಲ್ಲಿ ರಾಜಕಾರಣಕ್ಕೆ ಇವು ಮುಖ್ಯವಾಗುತ್ತಿಲ್ಲ. ಇದನ್ನೇ ಇಲ್ಲಿ ಲೇಖಕರು ರಾಜಕೀಯದ ಬಡತನವೆಂದು ಕರೆದಿದ್ದಾರೆ.

'ಕರ್ನಾಟಕದ ಅಭಿವೃದ್ಧಿ ರಾಜಕಾರಣ'ವೆನ್ನುವ ಪ್ರಬಂಧದಲ್ಲಿ ಲೇಖಕರು ಸಂಕ್ಷಿಪ್ತವಾಗಿ ಕರ್ನಾಟಕದಲ್ಲಿ ಅಭಿವೃದ್ಧಿಯನ್ನು ಹೇಗೆ ಪರಿಭಾವಿಸಿಕೊಳ್ಳಲಾಗಿದೆ, ಅದಕ್ಕೆ ಸಂಬಂಧಿಸಿದಂತೆ ಹೇಗೆ ನೀತಿಗಳನ್ನು ರೂಪಿಸಲಾಗುತ್ತಿದೆ, ಮತ್ತು ಅದನ್ನು ಅದು ಹೇಗೆ ನಿರ್ವಹಿಸುತ್ತಿದೆ ಎಂಬು

ದನ್ನು ಇಲ್ಲಿ ಅವರು ಚರ್ಚಿಸಿದ್ದಾರೆ. ಇಲ್ಲಿ ಅವರು ಅನೇಕ ಸಂಗತಿಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಆದರೆ ಅದು ಚರ್ವಿತಚರ್ವಣದಂತೆ ಕಾಣುತ್ತದೆ. ಉದಾಹರಣೆಗೆ ಪ್ರಾದೇಶಿಕ ಅಸಮಾನತೆಯ ಚರ್ಚೆಯನ್ನು ನೋಡಬಹುದು. ಡಾ.ಡಿ.ಎಂ.ನಂಜುಂಡಪ್ಪ ವರದಿಯ ತಾತ್ವಿಕ ನೆಲೆಗಟ್ಟಿನ ಬಗ್ಗೆ ಮತ್ತು ಅದರ ಪ್ರಧಾನ ಶಿಫಾರಸ್ಸಿನ ಬಗ್ಗೆ ಲೇಖಕರು ಎತ್ತುವ ಪ್ರಶ್ನೆ ಸರಿಯಾಗಿದೆ. ಆದರೆ ಆ ವರದಿಯನ್ನು ಕೇವಲ ಬಂಡವಾಳ ವಿನಿಯೋಜನೆಯ ಶಿಫಾರಸ್ಸಿಗೆ ಸೀಮಿತಗೊಳಿಸುವುದು ಸರಿಯಲ್ಲ. ಈ ಪ್ರಬಂಧದಲ್ಲಿ ಒಂದು ಮಾತು ಹೀಗಿದೆ. 'ವಸಾಹತ್ತೋತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ(ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ)ಹೆಚ್ಚು ಕಡಿಮೆ ಒಂದೇ ಪ್ರಮಾಣದ ಬಂಡವಾಳ ವಿನಿಯೋಜನೆ ನಡೆದಿದೆ. ಹಾಗೆಂದು ಆ ಎಲ್ಲ ಪ್ರದೇಶಗಳು ಒಂದೇ ಪ್ರಮಾಣದ ಅಭಿವೃದ್ಧಿ ಸಾಧಿಸಿಲ್ಲ'(ಪು:141).

ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯು ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಜಿಲ್ಲೆ-ಜಿಲ್ಲೆಗಳ ನಡುವೆ ಅಭಿವೃದ್ಧಿ ಸಂಬಂಧಿ ಅಸಮಾನತೆಯಿದ್ದಾಗ ಅವುಗಳ ನಡುವೆ ಬಂಡವಾಳವನ್ನು ಸಮಾನವಾಗಿ ನೀಡುವುದರಿಂದ ಅಸಮಾನತೆಯು ಉಲ್ಬಣಗೊಳ್ಳುತ್ತದೆಯೇ ವಿನಾ ಅದು ಕಡಿಮೆಯಾಗುವುದು ಸಾಧ್ಯವಿಲ್ಲ ಎಂಬುದನ್ನು ಮತ್ತೆ ಮತ್ತೆ ಸ್ಪಷ್ಟಪಡಿಸಿದೆ.

ಅಧಿಕಾರ ಮತ್ತು ಜ್ಞಾನ.

ಈ ಸಂಕಲನದ ಬಹು ಮುಖ್ಯವಾದ ಸೈದ್ಧಾಂತಿಕ ಪ್ರಬಂಧವೆಂದರೆ 'ಅಧಿಕಾರ ಮತ್ತು ಜ್ಞಾನ'. ಇವೆರಡರ ನಡುವಿನ ಸಂಬಂಧವನ್ನು ಅನೇಕ ಆಯಾಮಗಳಲ್ಲಿ ಲೇಖಕರು ಚರ್ಚಿಸಿದ್ದಾರೆ. ನಮ್ಮ ಅನೇಕ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳಿಗೆ ಇವೆರಡರ ನಡುವಿನ ಸಂಬಂಧದ ಬಗೆಗಿನ ಕುರುಡು ನಂಬಿಕೆಯು ಮೂಲಭೂತ ಕಾರಣವಾಗಿದೆ. ಅಧಿಕಾರ ಬೇರೆ ಮತ್ತು ಜ್ಞಾನ ಬೇರೆ ಎನ್ನುವ ನಂಬಿಕೆಯು ವ್ಯಾಪಕವಾಗಿ ಹರಡಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಅಧಿಕಾರವೆನ್ನುವುದು ಪ್ರಾಪಂಚಿಕವಾದುದೆಂದೂ ಜ್ಞಾನವೆನ್ನುವುದು ಪಾರಮಾರ್ಥಿಕವಾದುದೆಂದೂ ಜನಪ್ರಿಯ ನೆಲೆಯಲ್ಲಿ ಜನರು ನಂಬಿಬಿಟ್ಟಿದ್ದಾರೆ. ಇದು ಸರಿಯಲ್ಲವೆಂದು ಲೇಖಕರು ಇಲ್ಲಿ ವಾದಿಸುತ್ತಿದ್ದಾರೆ. ಈ ಅಧ್ಯಾಯದಲ್ಲಿ ಲೇಖಕರು ಅಧಿಕಾರಕ್ಕೆ ಸಂಬಂಧಿಸಿದಂತೆ ಸಮಾಜವಿಜ್ಞಾನಿಗಳು ಲಾಗಾಯ್ತಿನಿಂದ ರೂಪಿಸಿಕೊಂಡು ಬಂದ ಸಿದ್ಧಾಂತಗಳ ನೆಲೆಯಲ್ಲಿ ಚರ್ಚೆಯನ್ನು ಬೆಳೆಸಿದ್ದಾರೆ.

ಸ್ಟ್ರಕ್ಚರಲ್ ಫಂಕ್ಷನಲಿಸಂ ಸಿದ್ಧಾಂತವಿರಬಹುದು, ಅರ್ಥಶಾಸ್ತ್ರದ ನೆಲೆಯಲ್ಲಿ ಜ್ಞಾನವನ್ನು ಕುರಿತ ಪರಿಭಾಷೆ ಮತ್ತು ಅದರ ಆಧಾರವಾದ ಮೆಥಡಾಲಜಿಕಲ್ ಇನ್‌ಡಿವಿಜಿಯಲಿಸಂ ಇರಬಹುದು, ರೇಶನಲ್ ಚಾಯ್ಸ್ ಪ್ರಣಾಳಿಕೆಯಿರಬಹುದು- ಇವು ಅಧಿಕಾರ ಮತ್ತು ಜ್ಞಾನದ ಉತ್ಪಾದನೆಯ ಪ್ರಶ್ನೆಗಳನ್ನು ಹೇಗೆ ಪರಿಭಾವಿಸಿಕೊಂಡಿವೆ ಎಂಬುದನ್ನು ಇಲ್ಲಿ ವಿವರವಾಗಿ ಚರ್ಚಿಸಿರುವ ಲೇಖಕರು ಅವುಗಳ ಮಿತಿಗಳನ್ನು ಕುರಿತು ತಮ್ಮ ಟೀಕೆಗಳನ್ನು ಇಲ್ಲಿ ಮಂಡಿಸಿದ್ದಾರೆ.

ಇಲ್ಲಿ ಅವರು ಚರ್ಚೆಗೆ ಎತ್ತಿಕೊಂಡಿರುವ ಪ್ರಶ್ನೆಯೆಂದರೆ ಈ ಸಿದ್ಧಾಂತಗಳು ಅಧಿಕಾರವನ್ನು ಒಂದು ಅಖಂಡ ಸಂಗತಿಯನ್ನಾಗಿ ಮಾಡಿಕೊಂಡಿರುವ ಬಗೆ. ಅದು ಹಾಗಿರಲು ಸಾಧ್ಯವಿಲ್ಲ. ಎರಡನೆಯದಾಗಿ ಇಲ್ಲಿ ಅಧಿಕಾರವನ್ನು ಆರ್ಥಿಕ ಸಂಗತಿಗೆ ಮಾತ್ರ ಸೀಮಿತಗೊಳಿಸಿಕೊ

ಜ್ಞಾನವೇ ಅಧಿಕಾರವೆಂಬ ಮಾತಿದೆ. ಅದರ ಬಗ್ಗೆ ಇಲ್ಲಿ ಹೆಚ್ಚು ಚರ್ಚೆಯಾಗಿಲ್ಲ. ಜ್ಞಾನವು ಉನ್ನತವಾದುದು, ಅಧಿಕಾರವು ಲೌಕಿಕವಾದುದೆಂಬ ವಾದವು ಎಷ್ಟೇ ನಿಜವಾದರೂ ಜ್ಞಾನದ ವಾರಸುದಾರರು ಅದನ್ನು ಅಧಿಕಾರವಾಗಿ ಚಲಾಯಿಸಿರುವ ಉದಾಹರಣೆಗಳು ನಮಗೆ ದೊರೆಯುತ್ತವೆ. ಹೇಳಲು ಮಾತ್ರ ಅಧಿಕಾರ ಲೌಕಿಕ. ಆದರೆ ವಾಸ್ತವದಲ್ಲಿ ಅದು ಅವರಿಗೆ ಅಸ್ತ್ರವಾಗಿದೆ. ಜ್ಞಾನವನ್ನು ಕೇವಲ ಒಂದು ಬೌದ್ಧಿಕ ಸಂಗತಿಯನ್ನಾಗಿ ನೋಡುವ ಕ್ರಮದ ಮಿತಿಗಳನ್ನು ಇಲ್ಲಿ ತೋರಿಸಲಾಗಿದೆ. ಅದು ಬಡವರಿಗೆ, ವಂಚಿತರಿಗೆ, ಪರಿಶಿಷ್ಟರಿಗೆ, ಮಹಿಳೆಯರಿಗೆ ಅನ್ಯಾಯದ ವಿರುದ್ಧ ಹೋರಾಡಲು ಅಗತ್ಯವಾದ ಶಕ್ತಿಯನ್ನು ನೀಡಬಹುದು. ಉಳ್ಳವರ ಅಧಿಕಾರವನ್ನು, ಅದರ ದಮನಕಾರಿ ನೆಲೆಗಳನ್ನು ಹತ್ತಿಕ್ಕಲು ಉಳಿದವರು ತಮ್ಮ ಅಧಿಕಾರವನ್ನು ಬಳಸಿಕೊಳ್ಳಬಹುದಾಗಿದೆ.

ಳ್ಳಲಾಗಿದೆ. ಆದರೆ ಅಧಿಕಾರವೆನ್ನುವುದು ಬಹುರೂಪಿಯಾದುದು. ಅದು ಸಾಮಾಜಿಕ ಸ್ಥಾನಮಾನದಿಂದ, ರಾಜಕೀಯ ಹಕ್ಕುಗಳಿಂದ, ಶಿಕ್ಷಣದಿಂದ, ಜಾತಿಯಿಂದ, ಧರ್ಮದಿಂದ, ಸರ್ಕಾರಿ ಹುದ್ದೆಗಳಿಂದ -ಅದು ಒಬ್ಬ ವ್ಯಕ್ತಿಗೆ ಅಥವಾ ವ್ಯವಸ್ಥೆಗೆ ದಕ್ಕಿಬಿಡಬಹುದು. ಅಧಿಕಾರವಿರುವವರಿಗೆ ಹೇಗೆ ಅದು ಶಕ್ತಿಯನ್ನು ನೀಡುತ್ತದೋ ಅದೇ ರೀತಿಯಲ್ಲಿ ಅಧಿಕಾರವಿಲ್ಲದವರು ಅದನ್ನು ಎದುರಿಸುವ ಅಧಿಕಾರದ ಬಗ್ಗೆ ಯೋಚಿಸಬಹುದು. ಅಧಿಕಾರವನ್ನು ಹೀಗೆ ಅದು ಇರುವವರ ನೆಲೆಯಿಂದ ಮಾತ್ರ ಚರ್ಚಿಸಿದರೆ ಸಾಕಾಗುವುದಿಲ್ಲ. ಅದು ಇಲ್ಲದವರ ನೆಲೆಯಿಂದಲೂ ನಾವು ಚರ್ಚೆ ಮಾಡಬೇಕಾಗುತ್ತದೆ.

ಜ್ಞಾನವೇ ಅಧಿಕಾರವೆಂಬ ಮಾತಿದೆ. ಅದರ ಬಗ್ಗೆ ಇಲ್ಲಿ ಹೆಚ್ಚು ಚರ್ಚೆಯಾಗಿಲ್ಲ. ಜ್ಞಾನವು ಉನ್ನತವಾದುದು, ಅಧಿಕಾರವು ಲೌಕಿಕವಾದುದೆಂಬ ವಾದವು ಎಷ್ಟೇ ನಿಜವಾದರೂ ಜ್ಞಾನದ ವಾರಸುದಾರರು ಅದನ್ನು ಅಧಿಕಾರವಾಗಿ ಚಲಾಯಿಸಿರುವ ಉದಾಹರಣೆಗಳು ನಮಗೆ ದೊರೆಯುತ್ತವೆ. ಹೇಳಲು ಮಾತ್ರ ಅಧಿಕಾರ ಲೌಕಿಕ. ಆದರೆ ವಾಸ್ತವದಲ್ಲಿ ಅದು ಅವರಿಗೆ ಅಸ್ತ್ರವಾಗಿದೆ. ಜ್ಞಾನವನ್ನು ಕೇವಲ ಒಂದು ಬೌದ್ಧಿಕ ಸಂಗತಿಯನ್ನಾಗಿ ನೋಡುವ ಕ್ರಮದ ಮಿತಿಗಳನ್ನು ಇಲ್ಲಿ ತೋರಿಸಲಾಗಿದೆ. ಅಧಿಕಾರವೆನ್ನುವುದು ನಕಾರಾತ್ಮಕವಾಗಿರಬೇಕಾಗಿಲ್ಲ. ಅದು ಬಡವರಿಗೆ, ವಂಚಿತರಿಗೆ, ಪರಿಶಿಷ್ಟರಿಗೆ, ಮಹಿಳೆಯರಿಗೆ ಅನ್ಯಾಯದ ವಿರುದ್ಧ ಹೋರಾಡಲು ಅಗತ್ಯವಾದ ಶಕ್ತಿಯನ್ನು ನೀಡಬಹುದು. ಉಳ್ಳವರ ಅಧಿಕಾರವನ್ನು, ಅದರ ದಮನಕಾರಿ ನೆಲೆಗಳನ್ನು ಹತ್ತಿಕ್ಕಲು ಉಳಿದವರು ತಮ್ಮ ಅಧಿಕಾರವನ್ನು ಬಳಸಿಕೊಳ್ಳಬಹುದಾಗಿದೆ. ಹೀಗೆ ಅಧಿಕಾರಕ್ಕೆ ಇತ್ಯಾತ್ಮಕ ಮುಖವಿರುತ್ತದೆ. ಅದನ್ನು ಉಳಿದವರ ಪ್ರಜ್ಞೆಯ ಭಾಗವನ್ನಾಗಿ ಮಾಡಬೇಕಾದ ಅಗತ್ಯವನ್ನು ಕುರಿತಂತೆ ಇಲ್ಲಿ ಲೇಖಕರು ಮಾತನಾಡುತ್ತಿದ್ದಾರೆ. ಈ ಪ್ರಾಪಂಚಿಕತೆ-ಪಾರಮಾರ್ಥಿಕತೆ ಕುರಿತ ಚರ್ಚೆಯ ಹುನ್ನಾರವನ್ನು ಬಡವರು, ವಂಚಿತರು, ಮಹಿಳೆಯರು ಅರ್ಥ ಮಾಡಿಕೊಳ್ಳಬೇಕಾಗಿದೆ. ಅಧಿಕಾರ ಮತ್ತು ಜ್ಞಾನಗಳ ನಡುವಿನ ಸಂಬಂಧವು ಈಗ ಉಳ್ಳವರ ಪರವಾಗಿದೆ. ಅದನ್ನು ಉಳಿದವರ ಪರವಾಗುವಂತೆ ಮಾಡಬೇಕಾದ ಅಗತ್ಯವನ್ನು ಲೇಖಕರು ಒತ್ತಿ ಹೇಳುತ್ತಿದ್ದಾರೆ. ಈ ರೀತಿಯ ಪಲ್ಲಟವನ್ನುಂಟು ಮಾಡುವುದೇ ಸಂಶೋಧನೆಯ ಒಂದು ಉದ್ದೇಶವಾಗಿದೆ.

ಕರ್ನಾಟಕದ ಅಭಿವೃದ್ಧಿಯನ್ನು, ಅದಕ್ಕೆ ಸಂಬಂಧಿಸಿದ ಇತರೆ ಅನೇಕ ಸೈದ್ಧಾಂತಿಕ ಸಂಗತಿಗಳನ್ನು, ನಮ್ಮ ರಾಜಕಾರಣದ 'ರಾಜಕೀಯ' ದಾರಿದ್ರ್ಯವನ್ನು, ಇಂದು ಹಬ್ಬುತ್ತಿರುವ ಪಾರಮಾರ್ಥಿಕ ಪರಿಭಾಷೆಯನ್ನು ಕುರಿತಂತೆ ಹೊಸ ರೀತಿಯಲ್ಲಿ ಡಾ.ಎಂ.ಚಂದ್ರಪೂಜಾರಿ ಅವರು ಇಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಅಭಿವೃದ್ಧಿ, ಸಾಮಾಜಿಕ ಬದಲಾವಣೆ, ಸಮಾನತೆ, ದಲಿತ ವಿಮೋಚನೆ ಮುಂತಾದ ಸಂಗತಿಗಳ ಬಗ್ಗೆ ಬದ್ಧತೆಯುಳ್ಳವರೆಲ್ಲರೂ ಈ ಕೃತಿಯನ್ನು ಅವಶ್ಯ ಗಮನಿಸಬೇಕು ಮತ್ತು ಅದರ ಬಗ್ಗೆ ಚರ್ಚೆಯೊಂದನ್ನು ಬೆಳೆಸುವುದು ಅಗತ್ಯ. ಈ ಉದ್ದೇಶದಿಂದ ಪ್ರಸ್ತುತ ಲೇಖನದಲ್ಲಿ ಅವರು ತಮ್ಮ ಕೃತಿಯಲ್ಲಿ ಎತ್ತಿರುವ ಪ್ರಶ್ನೆಗಳಿಗೆ ಚರ್ಚೆಯ ಒಂದು ರೂಪವನ್ನು ನೀಡಲು ಪ್ರಯತ್ನಸಿದ್ದೇನೆ. ಈ ಕೃತಿಯಲ್ಲಿ ಲೇಖಕರು ಚರ್ಚೆಯ ಮುಂಚೂಣಿಗೆ ತಂದಿರುವ ಎಲ್ಲ ಸಂಗತಿಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸುವುದು ನನಗೆ ಸಾಧ್ಯವಾಗಿಲ್ಲ. ಇದರ ಬಗ್ಗೆ ಓದುಗರು ಮೂಲ ಕೃತಿಯನ್ನು ಅಧ್ಯಯನ ಮಾಡಿ ಅದರ ಬಗ್ಗೆ ಪ್ರಶ್ನೆಗಳನ್ನೆತ್ತ ಬಹುದು ಮತ್ತು ಅಲ್ಲಿ ಎತ್ತಿರುವ ಪ್ರಶ್ನೆಗಳ ಕುರಿತ ಚರ್ಚೆಯನ್ನು ಮುಂದುವರಿಸಬಹುದು ಹಾಗೂ ಬೆಳೆಸಬಹುದು.

ಈ ಕೃತಿಯ ಒಂದು ಮಿತಿಯೆಂದರೆ ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆ, ಅಧಿಕಾರ, ಸಮಾನತೆ ಮುಂತಾದ ವಿಷಯಗಳನ್ನು ಕುರಿತ ಚರ್ಚೆಗಳಲ್ಲಿ ಲಿಂಗ ಸಂಬಂಧಗಳ ಬಗ್ಗೆ ಪ್ರಶ್ನೆಗಳನ್ನು ಎತ್ತದಿರುವುದು. ಇಲ್ಲಿನ ಸೈದ್ಧಾಂತಿಕ ಚೌಕಟ್ಟಿನಲ್ಲಿ ಲಿಂಗ ಸಂಬಂಧಗಳ ಸಂಗತಿಗಳು ಸೇರುತ್ತವೆ ಎಂಬ ಸಮಜಾಯಿಷಿ ನೀಡಬಹುದು. ಅದು ನಿಜ. ರಾಜಕೀಯದ ಬಡತನವೆಂದಾಗ ಅಲ್ಲಿ ಲಿಂಗ ಸಂಬಂಧಿ ಪ್ರಶ್ನೆಗಳು ಮುಖ್ಯವಾಗುತ್ತಿಲ್ಲ ಎನ್ನುವುದು ಧ್ವನಿತವಾಗುತ್ತದೆ. ರಾಜಕಾರಣವು ಮಹಿಳೆಯ ಪರವಾಗಿ ಪ್ರಶ್ನೆಗಳನ್ನು ಎತ್ತಬೇಕು ಎಂಬ ಒತ್ತಾಸೆ ಇಲ್ಲಿ ಪ್ರಚ್ಛನ್ನವಾಗಿ ಕೆಲಸ ಮಾಡಿರುವಂತೆ ಕಾಣುತ್ತದೆ. 'ಅಧಿಕಾರ ಮತ್ತು ಜ್ಞಾನ' ಪ್ರಬಂಧದಲ್ಲಿ ಲಿಂಗ ಸಂಬಂಧಿ ಪ್ರಶ್ನೆಗಳನ್ನು ಎತ್ತಲು ಲೇಖಕರಿಗೆ ಅವಕಾಶವಿತ್ತು. ಏಕೆಂದರೆ ಜ್ಞಾನ-ಅಧಿಕಾರ ಎರಡೂ ಸೇರಿ ಮಹಿಳೆಯರನ್ನು ಲಾಗಾಯ್ತಿನಿಂದಲೂ ಶೋಷಣೆ ಮಾಡಿಕೊಂಡು ಬಂದಿರುವುದನ್ನು ಗುರುತಿಸುವುದು ಕಷ್ಟವಾಗಬಾರದು.

ಇಲ್ಲಿ ಜ್ಞಾನವು ಅಧಿಕಾರಕ್ಕೆ(ಪುರುಷರ)- ಅಧಿಕಾರವು ಜ್ಞಾನಕ್ಕೆ ಪರಸ್ಪರ ಪೂರಕವಾಗಿ ಕೆಲಸ ಮಾಡುವ ಸಂಗತಿಗಳೆಂಬುದು ಇಂದು ರಹಸ್ಯವಾಗೇನು ಉಳಿದಿಲ್ಲ. ಅವರ ಹಿತಾಸಕ್ತಿಗಳು ಒಟ್ಟಾರೆ ಸಮಾನತೆಯ ಪ್ರಣಾಳಿಕೆಯ ಚೌಕಟ್ಟಿನಲ್ಲಿ ಸೇರುತ್ತವೆ ಎಂಬ ಸಮಾಧಾನವೂ ಸಮಾಧಾನವಾಗಲು ಸಾಧ್ಯವಿಲ್ಲ. □

ಟೆಲಿವಿಷನ್ ಮೂಲಕ ಇಂಗ್ಲಿಷ್ ಶಿಕ್ಷಣ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಇಂಗ್ಲಿಷ್ ಭಾಷೆ ಬಿಡುಗಡೆಯ ಮಾರ್ಗವೇ ಎಂಬ ಪ್ರಶ್ನೆ ಈಗ ಪ್ರಶ್ನೆಯಾಗಿ ಉಳಿದಿಲ್ಲ. ಇಂಗ್ಲಿಷ್ ಭಾಷೆ ಹಲವು ಸಮಸ್ಯೆಗಳಿಗೆ ಪರಿಹಾರ ಎಂಬ ಉತ್ತರ ಎಲ್ಲರಿಗೂ ತಿಳಿದಿದೆ. ಇಂತಹ ಇಂಗ್ಲಿಷ್ ಭಾಷೆಯನ್ನು ಸುಲಭವಾಗಿ ಕಲಿಸುವುದು ಹೇಗೆ ಎಂಬುದು ಈಗ ನಮ್ಮ ಮುಂದಿರುವ ಸಮಸ್ಯೆ.

ಅದಕ್ಕೂ ಮುಂಚೆ 'ಪಿತೃಭಾಷೆ'ಯ ಬದಲಿಗೆ 'ಮಾತೃಭಾಷೆ' ಚಾಲ್ತಿಗೆ ಹೇಗೆ ಬಂತು ಎಂಬುದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಿದೆ. ಇದಕ್ಕೆ ಉತ್ತರ ತೀರ ಸರಳವಾದುದು. ಮಗು ತಂದೆಗಿಂತ ತಾಯಿಯೊಂದಿಗೆ ಹೆಚ್ಚು ಸಮಯ ಕಳೆಯುತ್ತದೆ.

ಆದರೆ ದಲಿತರ ವಿಷಯಕ್ಕೆ ಬಂದರೆ ಈ ವಿಚಾರದಲ್ಲಿ ಒಂದು ಸಮಸ್ಯೆಯಿದೆ. ಜಾತಿಯಾಧಾರಿತ ಶಿಕ್ಷಣ ವ್ಯವಸ್ಥೆಯ ಪರಿಣಾಮವಾಗಿ ಬಹುತೇಕ ದಲಿತ ತಾಯಂದಿರಿಗೆ ಇಂಗ್ಲಿಷ್ ಬರುವುದಿಲ್ಲ. ಇಂಗ್ಲಿಷ್ ಭಾಷೆ ಮಾತನಾಡುವ ದಲಿತ ಪೋಷಕರ ಸಂಖ್ಯೆ ತೀರ ಕಡಿಮೆ. ನಾನು ಮಾತನಾಡುತ್ತಿರುವುದು ದಲಿತ ಮಧ್ಯಮವರ್ಗದ ಬಗ್ಗೆ, ದಲಿತ ಕೆಳವರ್ಗದ ಬಗ್ಗೆಯಲ್ಲ.

ದಲಿತ ಪೋಷಕರು ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಕಳುಹಿಸಿದರೂ, ಮಕ್ಕಳು ಹೆಚ್ಚು ಸಮಯವನ್ನು ತಾಯಂದಿರೊಂದಿಗೆ ಕಳೆಯುತ್ತಾರೆ. ಹೀಗಾಗಿ ಶಾಲೆಗಳಲ್ಲಿ ಕಲಿತ ಇಂಗ್ಲಿಷ್ ಭಾಷೆ, ಮನೆಗೆ ಬಂದು ತಾಯಂದಿರೊಂದಿಗೆ ಮಾತನಾಡುವಾಗ ಮರೆತುಹೋಗುವ ಸಾಧ್ಯತೆಯೇ ಹೆಚ್ಚು.

ದಲಿತರ ಮನೆಗಳಿಗೆ ಭೇಟಿ ಕೊಡುವ ಸಂಬಂಧಿಕರು ಕೂಡ ಪ್ರಾದೇಶಿಕ ಭಾಷೆಯ ಬಲಿಪಶುಗಳಾಗಿರುತ್ತಾರೆ. ಸಂಬಂಧಿಕರ ಮಕ್ಕಳೂ ಕೂಡ ಹಿಂದಿ, ತಮಿಳು, ಕನ್ನಡ ಅಥವಾ ಮರಾಠಿ ಭಾಷೆಯ ಶಾಪಕ್ಕೆ ತುತ್ತಾಗಿರುತ್ತಾರೆ. ಈ ಹಿನ್ನೆಯಲ್ಲಿ ದಲಿತರ ಮಕ್ಕಳಿಗೆ ಇಂಗ್ಲಿಷ್ ಭಾಷೆ ಕಲಿಸುವುದು ಒಂದು ಸವಾಲೇ ಸರಿ.

ಇಂಗ್ಲಿಷ್ ಭಾಷೆ ಮತ್ತು ಇಂಗ್ಲಿಷ್ ಉಡುಗೆ ತೊಡುಗೆಗಳ ಬಗ್ಗೆ ಮಾತನಾಡಲು ನಾನು ಉತ್ತರ ಪ್ರದೇಶದ ಒಂದು ಪಟ್ಟಣಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದೆ. ನಾನು ಅಲ್ಲಿಂದ ಹಿಂದಿರುಗುವ ಮುಂಚೆ ಕೆಲವು ದಲಿತ ಕಾರ್ಯಕರ್ತರೊಂದಿಗೆ ಊಟ ಮಾಡುವಾಗ ಮನೆಯಲ್ಲಿ ಇಂಗ್ಲಿಷ್ ಕಲಿಸುವ ವಿಚಾರದಲ್ಲಿ ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅವರನ್ನು ವಿಚಾರಿಸಿದೆ.

ದಲಿತ ಮಕ್ಕಳಿಗೆ ಇಂಗ್ಲಿಷ್ ಕಲಿಸುವಲ್ಲಿ ದೊಡ್ಡ ಸಮಸ್ಯೆಯಾಗಿರುವುದು ಟೆಲಿವಿಷನ್‌ನ ಕೆಟ್ಟ ಪ್ರಭಾವ ಎಂದು ಕಾರ್ಯಕರ್ತರೊಬ್ಬರು ಅಭಿಪ್ರಾಯ ಪಟ್ಟರು. "ಮಕ್ಕಳು ಕಾರ್ಟೂನ್ ವಾಹಿನಿಗಳನ್ನು ನೋಡುತ್ತಾ ಕಾಲ ಕಳೆಯುತ್ತಾರೆ. ಹೀಗಾಗಿ ನಾನು ಕೇಬಲ್ ಸಂಪರ್ಕ ತೆಗೆಸಿದ್ದೇನೆ" ಎಂದು ಅವರು ಹೇಳಿದರು. ಇತರರು ಕೂಡ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಸ್ಯೆಗೆ ನಾನೊಂದು ಪರಿಹಾರ ನೀಡಿದಾಗ ಕಾರ್ಯಕರ್ತರೆಲ್ಲರೂ ಹರ್ಷ ವ್ಯಕ್ತಪಡಿಸಿದರು. "ಡಿಷ್ ಟಿವಿ ಆಂಟೆನಾ ಅಳವಡಿಸಿಕೊಳ್ಳಿ." ಡಿಷ್ ಟಿವಿ ಎರಡು ಅತ್ಯುತ್ತಮವಾದ ಸೇವೆ ಒದಗಿಸುತ್ತದೆ. ಚಂದಾದಾರರು ತಾವು ನೋಡಲು ಇಚ್ಚಿಸದ ವಾಹಿನಿಗಳನ್ನು ಬ್ಲಾಕ್ ಮಾಡಬಹುದು. ತಮಗೆ ಬೇಕಾದ ಭಾಷೆಯನ್ನು ಆಯ್ದುಕೊಳ್ಳಬಹುದು. ಇದರಲ್ಲಿ ಇಂಗ್ಲಿಷ್ ಕೂಡ ಸೇರಿದೆ.

"ಇಂಗ್ಲಿಷೇತರ ವಾಹಿನಿಗಳನ್ನು ಬ್ಲಾಕ್ ಮಾಡಿ. ಕಾರ್ಟೂನ್ ನೆಟ್‌ವರ್ಕ್ ಸೇರಿದಂತೆ ಕೇವಲ ಇಂಗ್ಲಿಷ್ ವಾಹಿನಿಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಿ, ದಲಿತ ಮಕ್ಕಳು ತಮ್ಮ ತಾಯಂದಿರೊಂದಿಗೆ ಕಳೆಯುವ ಸಮಯಕ್ಕಿಂತ ಹೆಚ್ಚು ಸಮಯವನ್ನು ಕಾರ್ಟೂನ್ ವಾಹಿನಿಯನ್ನು ನೋಡುತ್ತಾ ಕಳೆಯುವಂತಹ ವಾತಾವರಣವನ್ನು ನಿರ್ಮಿಸಿ. ಹೀಗೆ ಮಾಡಿದರೆ, ಮಕ್ಕಳು ಶಾಲೆಯಲ್ಲಿ ಇಂಗ್ಲಿಷ್ ಕಲಿಯುವುದಕ್ಕಿಂತ ಹೆಚ್ಚಾಗಿ ಮನೆಯಲ್ಲಿಯೇ ಇಂಗ್ಲಿಷ್ ಕಲಿಯುವಂತಾಗುತ್ತದೆ." ನನ್ನ ವಾದವನ್ನು ಒಪ್ಪಿಕೊಂಡ ಬಹಳಷ್ಟು ಮಂದಿ ತಮ್ಮ ಮನೆಗಳಲ್ಲಿ ಡಿಷ್ ಆಂಟೆನಾ ಸಂಪರ್ಕ ಪಡೆಯುವುದಾಗಿ ಭರವಸೆ ನೀಡಿದರು.

ದಲಿತ ಪೋಷಕರು, ಮುಖ್ಯವಾಗಿ ತಾಯಂದಿರು ಇಂಗ್ಲಿಷ್ ಭಾಷೆ ಕಲಿಯಬೇಕು. ಡಿಷ್ ಟಿವಿ ಮೂಲಕ ಇವರು ಕೂಡ ಇಂಗ್ಲಿಷ್ ಕಲಿಯಲು ಸಾಧ್ಯ. ಟಿವಿಯಲ್ಲಿ ಪ್ರಸಾರವಾಗುವ ಇಂಗ್ಲಿಷ್ ಚಲನಚಿತ್ರಗಳು, ನಮ್ಮ ದೇಶಿ ಚಲನಚಿತ್ರಗಳಿಗಿಂತ ಸುಮಾರು ಒಂದು ಶತಮಾನ ಮುಂದಿದೆ. ಭಾರತೀಯ ಭಾಷೆಯ ಸಿನಿಮಾಗಳಲ್ಲಿ ನಟ–ನಟಿಯರು ಇದ್ದಕ್ಕಿದ್ದಂತೆ ಹಾಡಲು, ನೃತ್ಯ ಮಾಡಲು ಆರಂಭಿಸುತ್ತಾರೆ. ಇವುಗಳಲ್ಲಿ ಕೆಲವಾದರೂ ನೋಡುವಂತಿದ್ದರೆ, ಅವು ಕೂಡ ಹಾಲಿವುಡ್ ಚಿತ್ರಗಳಿಂದ ಪ್ರಭಾವ ಹೊಂದಿದ ಚಿತ್ರಗಳಾಗಿರುತ್ತವೆ. ಡಿಷ್ ಟಿವಿ ಅದ್ಭುತವಾದ ಹಿಂದಿ ಚಿತ್ರಗಳನ್ನು ಪ್ರಸಾರ ಮಾಡುತ್ತಿರುವಾಗ ಡ್ಯೂಪ್ಲಿಕೇಟ್ ಚಿತ್ರಗಳನ್ನು ಯಾಕೆ ನೋಡಬೇಕು? ಓರ್ವ ಅನಕ್ಷರಸ್ಥ ಕೂಡ ಒಂದು ವರ್ಷ ನಿರಂತರವಾಗಿ ಇಂಗ್ಲಿಷ್ ವಾಹಿನಿಗಳನ್ನು ನೋಡುತ್ತಿದ್ದರೆ, ಆ ಭಾಷೆಯನ್ನು ಅರ್ಥೈಸಿಕೊಳ್ಳಲಾರಂಭಿಸುತ್ತಾನೆ.

ದಲಿತ ಪೋಷಕರು ಮಗುವಿಗೆ ಜನ್ಮ ನೀಡಿದ ದಿನವೇ ಡಿಷ್ ಟಿವಿ ಸಂಪರ್ಕ ಪಡೆಯಬೇಕು. ಮಗುವಿನ ಹೆಸರಿನಲ್ಲಿ ಒಂದು ಬ್ಯಾಂಕ್ ಅಕೌಂಟ್ ತೆರೆದು ಹಣವಿರಿಸಲು ಆರಂಭಿಸಬೇಕು. ತಮ್ಮ ಬಡಾವಣೆಯ ಅತ್ಯುತ್ತಮ ಇಂಗ್ಲಿಷ್ ಶಾಲೆಯ ದಾಖಲಾತಿ ಶುಲ್ಕ, ಮತ್ತಿತರ ಶುಲ್ಕಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಮಗು ಹುಟ್ಟಿದ ದಿನದಿಂದ ಕುಡಿತ, ಮತ್ತಿತರ ಚಟುವಟಿಕೆಗಳಿಗೆ ಹಣ ಪೋಲು ಮಾಡುವುದನ್ನು ನಿಲ್ಲಿಸಬೇಕು. ಆಹಾರಸೇವನೆಯನ್ನು ಕೂಡ ಕಡಿಮೆ ಮಾಡಬೇಕು. ಮಿತ ಆಹಾರ ದೀರ್ಘಾಯುಸ್ಸು ನೀಡುತ್ತದೆ. ಮಗುವಿಗೆ ಮೂರು ವರ್ಷ ತುಂಬುವುದರೊಳಗೆ, ಮಗುವಿನ ಹೆಸರಿನಲ್ಲಿ ಕನಿಷ್ಠ ಒಂದು ಲಕ್ಷ ಹಣವಿರಬೇಕು.

ದಲಿತ ಮಧ್ಯಮವರ್ಗದವರಿಗೆ ನನ್ನದೊಂದು ಚಿಕ್ಕ ಸಲಹೆ: ದಲಿತ ಪೋಷಕರು ತಮ್ಮ ಮಕ್ಕಳು ತಮ್ಮ ತಾಯಂದಿರೊಂದಿಗೆ ಕಳೆಯುವ ಸಮಯಕ್ಕಿಂತ ಹೆಚ್ಚಾಗಿ, ಟಿವಿಯಲ್ಲಿ ಇಂಗ್ಲಿಷ್ ಕಾರ್ಟೂನ್ ಕಾರ್ಯಕ್ರಮಗಳನ್ನು ನೋಡುವುದರಲ್ಲಿ ಹೆಚ್ಚು ಸಮಯ ವಿನಿಯೋಗಿಸುವಂತಹ ವಾತಾವರಣ ನಿರ್ಮಿಸಬೇಕು.

ಇಂಗ್ಲಿಷ್ ಭಾಷೆಯ ಪರಿಚಯ

ಎಲೀಟ್ ಅಥವಾ ಮಧ್ಯಮ ವರ್ಗ ಕೆಲವು ಸೇವೆಗಳ ಬಳಕೆಯನ್ನು ನಿಲ್ಲಿಸಿದರೆ ಅವುಗಳ ಗುಣಮಟ್ಟ ಕುಸಿಯುತ್ತದೆ ಎಂಬುದು ರಾಜಕೀಯ ಚಿಂತಕ ಪ್ರೊ. ದೇವೇಶ್ ಕಪೂರ್ ಅವರ

ದಲಿತ ಪೋಷಕರು, ಮುಖ್ಯವಾಗಿ ತಾಯಂದಿರು ಇಂಗ್ಲಿಷ್ ಭಾಷೆ ಕಲಿಯಬೇಕು. ಡಿಷ್ ಟಿವಿ ಮೂಲಕ ಇವರು ಕೂಡ ಇಂಗ್ಲಿಷ್ ಕಲಿಯಲು ಸಾಧ್ಯ. ಟಿವಿಯಲ್ಲಿ ಪ್ರಸಾರವಾಗುವ ಇಂಗ್ಲಿಷ್ ಚಲನಚಿತ್ರಗಳು, ನಮ್ಮ ದೇಶಿ ಚಲನಚಿತ್ರಗಳಿಗಿಂತ ಸುಮಾರು ಒಂದು ಶತಮಾನ ಮುಂದಿದೆ. ಭಾರತೀಯ ಭಾಷೆಯ ಸಿನಿಮಾಗಳಲ್ಲಿ ನಟ-ನಟಿಯರು ಇದ್ದಕ್ಕಿದ್ದಂತೆ ಹಾಡಲು, ನೃತ್ಯ ಮಾಡಲು ಆರಂಭಿಸುತ್ತಾರೆ. ಇವುಗಳಲ್ಲಿ ಕೆಲವಾದರೂ ನೋಡುವಂತಿದ್ದರೆ, ಅವು ಕೂಡ ಹಾಲಿವುಡ್ ಚಿತ್ರಗಳಿಂದ ಪ್ರಭಾವ ಹೊಂದಿದ ಚಿತ್ರಗಳಾಗಿರುತ್ತವೆ. ಡಿಷ್ ಟಿವಿ ಅದ್ಭುತವಾದ ಹಿಂದಿ ಚಿತ್ರಗಳನ್ನು ಪ್ರಸಾರ ಮಾಡುತ್ತಿರುವಾಗ ಡ್ಯೂಪ್ಲಿಕೇಟ್ ಚಿತ್ರಗಳನ್ನು ಯಾಕೆ ನೋಡಬೇಕು? ಓರ್ವ ಅನಕ್ಷರಸ್ಥ ಕೂಡ ಒಂದು ವರ್ಷ ನಿರಂತರವಾಗಿ ಇಂಗ್ಲಿಷ್ ವಾಹಿನಿಗಳನ್ನು ನೋಡುತ್ತಿದ್ದರೆ, ಆ ಭಾಷೆಯನ್ನು ಅರ್ಥೈಸಿಕೊಳ್ಳಲಾರಂಭಿಸುತ್ತಾನೆ.

ಸಿದ್ಧಾಂತ. ಹಲವಾರು ಕಾರಣಗಳಿಂದಾಗಿ ಅನುಷ್ಠಾನಕ್ಕೆ ಬಂದ ಮಧ್ಯಾಹ್ನದ ಬಿಸಿಯೂಟ ಯೋಜನೆಯಿಂದಾಗಿ ಸಮಾಜದ ಉನ್ನತ ಹಾಗೂ ಮಧ್ಯಮವರ್ಗ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುತ್ತಿಲ್ಲ. ಹೀಗಾಗಿ ಇವುಗಳ ಗುಣಮಟ್ಟ ಕುಸಿಯುತ್ತಾ ಬಂದಿದೆ.

ಜಾತಿಯಾಧಾರಿತ ಕಾರಣಗಳಿಗಾಗಿ, ಮೇಲ್ಜಾತಿಯ ಪೋಷಕರು ತಮ್ಮ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಮುಂದುವರೆಸಲು ಬಿಡುತ್ತಿಲ್ಲ. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸ್ಲೇಟ್‌ಗಳ ಸ್ಥಳಗಳನ್ನು ಪ್ಲೇಟ್‌ಗಳು ಆಕ್ರಮಿಸಿಕೊಂಡಿವೆ. ಶಾಲೆಗಳಲ್ಲಿ ಶಿಕ್ಷಣ ಸಂಪೂರ್ಣ ನಿಂತುಹೋಗಿದೆ. ಶಾಲಾ ಶಿಕ್ಷಣವನ್ನು ಸಾಮಾಜಿಕವಾಗಿ ಮೂಲೆಗುಂಪು ಮಾಡಲಾಗುತ್ತಿದೆ.

ಪ್ರಾಥಮಿಕ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಬಹುತೇಕ ಶಿಕ್ಷಕರು ದಲಿತರಲ್ಲದ ಕಾರಣ ಹಾಗೂ ಈ ಶಾಲೆಗಳಲ್ಲಿ ಕಲಿಯುತ್ತಿರುವ ಬಹುತೇಕ ಮಕ್ಕಳು ದಲಿತರೆಂದು ಗೊತ್ತಿರುವುದರಿಂದ, ಕಲಿಸುವ ಬದಲು ಕೇವಲ ಉಣಿಸುವ ಕಾಯಕದಲ್ಲಿ ಕಾಲ ಕಳೆಯ ತೊಡಗಿದ್ದಾರೆ. ಇತ್ತೀಚೆಗೆ ಉತ್ತರ ಪ್ರದೇಶದ 21 ಜಿಲ್ಲೆಗಳ ಸುಮಾರು 400 ದಲಿತ ಶಿಕ್ಷಕರನ್ನು ನಾನು ಸಮಾರಂಭವೊಂದರಲ್ಲಿ ಭೇಟಿ ಮಾಡಿದ್ದೆ. ಈ ಶಿಕ್ಷಕರಲ್ಲಿ ಎಷ್ಟು ಮಂದಿ ತಮ್ಮ ಮಕ್ಕಳನ್ನು ತಾವು ಬೋಧಿಸುತ್ತಿರುವ ಶಾಲೆಗೆ ಸೇರಿಸಿದ್ದಾರೆ ಎಂಬ ನನ್ನ ಪ್ರಶ್ನೆಗೆ ಅವರೆಲ್ಲರ ಉತ್ತರ ನಕಾರಾತ್ಮಕವಾಗಿತ್ತು.

ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣದ ಗುಣಮಟ್ಟ ಕುಸಿದಿರುವ ಪರಿಣಾಮ, ದಲಿತ ಪೋಷಕರು ಕೂಡ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಂದ ಹೊರತರಬೇಕು. ದಲಿತರು ಕೂಡ ತಮ್ಮ ಮಕ್ಕಳನ್ನು ಮೇಲ್ಜಾತಿಯವರು ಆಯ್ಕೆ ಮಾಡುವ ಶಾಲೆಗಳಿಗೆ ದಾಖಲು ಮಾಡಬೇಕು. ಹಳ್ಳಿಗಳು ಮತ್ತು ಸಣ್ಣ ಪಟ್ಟಣಗಳಲ್ಲಿರುವ ಖಾಸಗಿ ಶಾಲೆಗಳಿಗೆ 'ದುಬಾರಿ' ಶುಲ್ಕ ಪಾವತಿಸಿ ತಮ್ಮ ಮಕ್ಕಳನ್ನು ದಾಖಲು ಮಾಡಲು ದಲಿತರು ಶಕ್ತರೇ?

1994–95ರ ಆಯ್ದ ಶೈಕ್ಷಣಿಕ ಅಂಕಿ ಅಂಶಗಳ ಪ್ರಕಾರ 1995–96ರ ಶೈಕ್ಷಣಿಕ ವರ್ಷದಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಅನುಷ್ಠಾನಗೊಳ್ಳುವ ಸಂದರ್ಭದಲ್ಲಿ ಸುಮಾರು 18.5 ದಶಲಕ್ಷ ದಲಿತ, ಮತ್ತು 9.2 ದಶಲಕ್ಷ ಆದಿವಾಸಿ ಮಕ್ಕಳು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯತ್ತಿದ್ದರು. ಅಂದರೆ ಸುಮಾರು 28 ದಶಲಕ್ಷ ದಲಿತ/ಆದಿವಾಸಿ ಮಕ್ಕಳು ಶಿಕ್ಷಣಕ್ಕಾಗಿ ಶಾಲೆಗಳಿಗೆ ಸೇರಿದ್ದರು, ಊಟಕ್ಕಾಗಿ ಅಲ್ಲ.

ಅದೇ ರೀತಿ 1960–61ರ ಶೈಕ್ಷಣಿಕ ವರ್ಷದಲ್ಲಿ ಸುಮಾರು 3.19 ದಶಲಕ್ಷ ದಲಿತ, ಮತ್ತು ಸುಮಾರು 1.34 ಆದಿವಾಸಿ ಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದರು. 1960ರ ಸಂದರ್ಭದಲ್ಲಿ ದೇಶ ಅತ್ಯಂತ ಭಯಾನಕವಾದ ಕ್ಷಾಮವನ್ನು ಕಂಡಿತ್ತು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಅಂದರೆ ದಿನಕ್ಕೆ ಒಪ್ಪತ್ತು ಊಟಕ್ಕೂ ಕಷ್ಟವಿದ್ದ ಸಂದರ್ಭದಲ್ಲಿ ದಲಿತ/ ಆದಿವಾಸಿಗಳು ಶಿಕ್ಷಣ ಪಡೆಯಲು ಉತ್ಸುಕರಾಗಿದ್ದರು ಎಂದರೆ ಈಗ ಯಾಕೆ ಸಾಧ್ಯವಾಗಬಾರದು?

ಉತ್ತರ ಪ್ರದೇಶ ರಾಜ್ಯದ ಗ್ರಾಮೀಣ ಪ್ರದೇಶಗಳ ಖಾಸಗಿ ಶಾಲೆಗಳಲ್ಲಿ ಮಾಸಿಕ ಶುಲ್ಕ 50ರಿಂದ 100 ರೂ. ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು ಇರಬಹುದು. ತೀರ ಬಡ ದಲಿತರು ಕೂಡ ದಿನಕ್ಕೆ 100 ರೂ. ಗಳಿಸುತ್ತಾರೆ.

> **ಪ್ರಾಥಮಿಕ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಬಹುತೇಕ ಶಿಕ್ಷಕರು ದಲಿತರಲ್ಲದ ಕಾರಣ ಹಾಗೂ ಈ ಶಾಲೆಗಳಲ್ಲಿ ಕಲಿಯುತ್ತಿರುವ ಬಹುತೇಕ ಮಕ್ಕಳು ದಲಿತರೆಂದು ಗೊತ್ತಿರುವುದರಿಂದ, ಕಲಿಸುವ ಬದಲು ಕೇವಲ ಉಣಿಸುವ ಕಾಯಕದಲ್ಲಿ ಕಾಲ ಕಳೆಯ ತೊಡಗಿದ್ದಾರೆ. ಇತ್ತೀಚೆಗೆ ಉತ್ತರ ಪ್ರದೇಶದ 21 ಜಿಲ್ಲೆಗಳ ಸುಮಾರು 400 ದಲಿತ ಶಿಕ್ಷಕರನ್ನು ನಾನು ಸಮಾರಂಭವೊಂದರಲ್ಲಿ ಭೇಟಿ ಮಾಡಿದ್ದೆ. ಈ ಶಿಕ್ಷಕರಲ್ಲಿ ಎಷ್ಟು ಮಂದಿ ತಮ್ಮ ಮಕ್ಕಳನ್ನು ತಾವು ಬೋಧಿಸುತ್ತಿರುವ ಶಾಲೆಗೆ ಸೇರಿಸಿದ್ದಾರೆ ಎಂಬ ನನ್ನ ಪ್ರಶ್ನೆಗೆ ಅವರೆಲ್ಲರ ಉತ್ತರ ನಕಾರಾತ್ಮಕವಾಗಿತ್ತು. ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣದ ಗುಣ ಮಟ್ಟ ಕುಸಿದಿರುವ ಪರಿಣಾಮ, ದಲಿತ ಪೋಷಕರು ಕೂಡ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಂದ ಹೊರತರಬೇಕು.**

ಹೀಗಾಗಿ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಮಾಸಿಕ 100 ರೂ. ಶಾಲಾ ಶುಲ್ಕ ಪಾವತಿಸುವುದು ಹೆಚ್ಚು ಕಷ್ಟವೇನೂ ಆಗದು. ಇನ್ನು ಸಮವಸ್ತ್ರಕ್ಕೆ ವಾರ್ಷಿಕ ಸುಮಾರು 200 ರೂ. ಖರ್ಚಾಗಬಹುದು. ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕೆ ವರ್ಷಕ್ಕೆ 1000 ರೂ. ಖರ್ಚು ಮಾಡುವುದು ದಲಿತರಿಗೆ ಕಷ್ಟವೇನಲ್ಲ. ಆತ್ಮವಿಶ್ವಾಸವಿದ್ದರೆ ಕಡು ಬಡವರು ಕೂಡ ಅಷ್ಟು ಹಣ ಗಳಿಸಬಹುದು.

ಇಲ್ಲಿ ಇನ್ನೊಂದು ಪ್ರಮುಖ ಪ್ರಶ್ನೆಯಿದೆ. ಗ್ರಾಮೀಣ ಪ್ರದೇಶದಲ್ಲಿರುವ ಈ ಖಾಸಗಿ ಶಾಲೆಗಳು ದಲಿತ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಶಕ್ತವಾಗಿವೆಯೇ? ಖಂಡಿತ ಇಲ್ಲ. ಆದರೆ ಮೇಲ್ಜಾತಿಯ ಮಕ್ಕಳಿಗೂ ಇದೇ ಶಿಕ್ಷಣ ಲಭಿಸುತ್ತಿರುವುದರಿಂದ ಬೇರೆ ದಾರಿಯಿಲ್ಲ. ಅದೇನೇ ಇರಲಿ, ಈ ಶಾಲೆಗಳಿಂದಾಗಿ ದಲಿತ ಮಕ್ಕಳಿಗೆ ಕನಿಷ್ಠ ಇಂಗ್ಲಿಷ್ ಭಾಷೆಯ ಗಂಧ ಗಾಳಿಯ ಪರಿಚಯವಾದರೂ ಆಗುವುದರಲ್ಲಿ ಸಂಶಯವಿಲ್ಲ.

"ಇಂಗ್ಲಿಷ್ ಮಾಧ್ಯಮ" ಶಾಲೆಗಳೆಂದು ಪ್ರಚಾರ ಮಾಡಿಕೊಳ್ಳುವ ಗ್ರಾಮೀಣ ಪ್ರದೇಶದ ಖಾಸಗಿ ಶಾಲೆಗಳಲ್ಲಿ ಕನಿಷ್ಠ ಮೊದಲ ದಿನದಿಂದಲೇ "ಎಬಿಸಿಡಿ"ಯನ್ನು ಕಲಿಸಲಾಗುತ್ತದೆ. 5–6 ವರ್ಷದ ಮಗುವಿನ ಮೇಲೆ ಇದು ಶಾಶ್ವತವಾದ ಪ್ರಭಾವ ಬೀರುತ್ತದೆ. 12–12ನೇ ವಯಸ್ಸಿಗೆ "ಎಬಿಸಿಡಿ" ಕಲಿಸಲಾರಂಭಿಸಿದಾಗ ಇಂತಹ ಪ್ರಭಾವ ಕಂಡುಬರುವುದಿಲ್ಲ. ಅಂದರೆ ಯಾವುದೇ ಭಾಷೆಯ ಮೇಲೆ ಸುಲಭವಾಗಿ ಹಿಡಿತ ಸಾಧಿಸಲು ಎಳೆ ವಯಸ್ಸಿನಿಂದ ಭಾಷೆ ಕಲಿಸುವುದರಿಂದ ಮಾತ್ರ ಸಾಧ್ಯ.

ಇದರ ಜೊತೆಗೆ, ಈ ಖಾಸಗಿ ಶಾಲೆಗಳು ಮಕ್ಕಳು ಇಂಗ್ಲಿಷರಂತೆ ಉಡುಗೆ ತೊಡುವುದನ್ನು ಕೂಡ ಕಲಿಸುತ್ತವೆ. ಉತ್ತರ ಪ್ರದೇಶದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರವನ್ನು ನೀಡಲಾಗುತ್ತದೆ. ಆದರೆ ಸಮವಸ್ತ್ರ ಟೈ ಒಳಗೊಂಡಿರುವುದಿಲ್ಲ. ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಬೂಟು, ಸಾಕ್ಸ್‌ಗಳನ್ನು ಕೂಡ ಧರಿಸುವುದಿಲ್ಲ. ಹೀಗಾಗಿ ಸಮವಸ್ತ್ರದ ವಿಚಾರದಲ್ಲಿ ಕೂಡ ಸರ್ಕಾರಿ ಶಾಲೆಯ ಮಕ್ಕಳು 'ಅರೆ ಬರೆ ಇಂಗ್ಲಿಷ್' ಶೈಲಿ ಅನುಸರಿಸುತ್ತಾರೆ ಎನ್ನಬಹುದು. ಖಾಸಗಿ ಶಾಲೆಗಳಲ್ಲಿ ಶಿಕ್ಷಕರು ಶುಭ್ರವಾದ ಸಮವಸ್ತ್ರ ತೊಡಿಸಿ ಕಳುಹಿಸುವಂತೆ ಪೋಷಕರಿಗೆ ಹೇಳುತ್ತಲಿರುತ್ತಾರೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಈ ರೀತಿ ಸಲಹೆಗಳಿಗೆ ಜಾಗವಿಲ್ಲ. ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಸೂಕ್ತವಾಗಿ ಕಲಿಯಲಾಗದಿದ್ದರೂ ದಲಿತ ಮಕ್ಕಳು ಕನಿಷ್ಠ ಇಂಗ್ಲಿಷ್‌ನ ಗಂಧ ಗಾಳಿಯ ಪರಿಚಯವನ್ನಾದರೂ ಮಾಡಿಕೊಳ್ಳುತ್ತಾರೆ.

*   *   *   *   *

ಭೂ ಸುಧಾರಣೆಯ ಬಗ್ಗೆ ಎರಡು ಭಿನ್ನವಾದ ಧೋರಣೆ ಹೊಂದಿರುವ ದಲಿತ ಗುಂಪುಗಳ ಪರಿಚಯ ನನಗಿದೆ: (1) ಬಹುತೇಕ ದಲಿತರು ಭೂರಹಿತ ಕೃಷಿ ಕಾರ್ಮಿಕರಾಗಿರುವುದರಿಂದ ಸರ್ಕಾರ ಭೂ ಸುಧಾರಣೆ ಕೈಗೊಂಡು ದಲಿತರಿಗೆ ಸೂಕ್ತವಾಗಿ ಕೃಷಿ ಭೂಮಿಯನ್ನು ಒದಗಿಸಬೇಕು. (2) ಬೃಹತ್ ಕಾರ್ಪೊರೇಟ್ ಸಂಸ್ಥೆಗಳು ದಲಿತರ ಕೃಷಿ ಭೂಮಿಯನ್ನು ಕೊಳ್ಳೆ ಹೊಡೆಯುವುದರಿಂದ ದಲಿತರು ಎಸ್‌ಇಜೆಡ್ (ವಿಶೇಷ ಆರ್ಥಿಕ ವಲಯ)ಗಳನ್ನು ವಿರೋಧಿಸಬೇಕು. ಓರ್ವ ಸಂವೇದನಶೀಲ ವ್ಯಕ್ತಿಯಾಗಿ ನಾನು ಸಾಮಾನ್ಯವಾಗಿ ಇತರರ ಧೋರಣೆಯ ಬಗ್ಗೆ ಹಾಸ್ಯ ಮಾಡುವುದಿಲ್ಲ. ಆದರೆ ದಲಿತರ ಈ ಎರಡು ಧೋರಣೆಗಳ ಬಗ್ಗೆ ಮೊದಲಿಗೆ ಕೇಳಿದಾಗ ನನಗೆ ನಗು ತಡೆಯಲಾಗಿರಲಿಲ್ಲ.

ಆದರೆ ಇತ್ತೀಚೆಗೆ ಈ ರೀತಿ ಚಿಂತಿಸುವ ದಲಿತ ಗುಂಪುಗಳನ್ನು ನಾನು ಲೇವಡಿ ಮಾಡುವುದಿಲ್ಲ. ದಲಿತ ಕಾರ್ಯಕರ್ತರು, ಬುದ್ಧಿಜೀವಿಗಳನ್ನು ಭೇಟಿ ಮಾಡಿದಾಗ ಸಾಮಾನ್ಯವಾಗಿ ಅವರಿಗೆ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಗ್ರಾಮೀಣ ಪ್ರದೇಶದಲ್ಲಿರುವ ಬಹುತೇಕ ದಲಿತರು ಭೂರಹಿತ ಕೃಷಿ ಕಾರ್ಮಿಕರು ಎಂಬುದು ನಿಜವೇ? ಈ ಪ್ರಶ್ನೆಗೆ ಹೌದು ಎಂದು ಉತ್ತರಿಸುವ ಬಹುತೇಕ ದಲಿತರು ಭೂ ಸುಧಾರಣೆಯ ಪರವಾಗಿ ಮಾತನಾಡುತ್ತಾರೆ. ಬಂಡವಾಳಶಾಹಿಗಳು ನಮ್ಮ ಭೂಮಿಯನ್ನು ಕಡಿಮೆ ಬೆಲೆಗೆ ಖರೀದಿಸುವುದರಿಂದ ನಾವು ಎಸ್‌ಇಜೆಡ್‌ಗಳನ್ನು ವಿರೋಧಿಸಬೇಕೆ? ಈ ಪ್ರಶ್ನೆಗೂ ಹೌದು ಎಂದು ಉತ್ತರಿಸುತ್ತಾರೆ.

ದಲಿತ ಬುದ್ಧಿಜೀವಿಗಳು ಕೂಡ ಇದೇ ರೀತಿಯ ಅಭಿಪ್ರಾಯ ಹೊಂದಿರುವುದರಿಂದ ಈ ವಿಚಾರದ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿದ್ದೇನೆ. ಹೊಸ ವರ್ಷದಲ್ಲಿ ದಲಿತ ನಾಯಕರು ಇಂತಹ ಇಬ್ಬಗೆಯ ಚಿಂತನೆಯನ್ನು ಬಿಡುವುದಾಗಿ ಪಣ ತೊಡಬೇಕಿದೆ. ಎಸ್‌ಇಜೆಡ್‌ಗಳು ಜಾತಿರಹಿತ ಉದ್ಯೋಗಗಳನ್ನು ಸೃಷ್ಟಿಸುವುದಲ್ಲದೆ ಕೈಗಾರಿಕೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಕೈಗಾರಿಕೀಕರಣದ ಹೊರತಾಗಿ ಭಾರತ, ನಗರ ಕೇಂದ್ರಿತ ನಾಗರಿಕತೆಯೆಡೆಗೆ ಸಾಗಲು ಸಾಧ್ಯವಿಲ್ಲ. ಹಳ್ಳಿಗಳು ದಲಿತರ ಪಾಲಿಗೆ ನರಕ.

ಬಂಡವಾಳಶಾಹಿ ವ್ಯವಸ್ಥೆ ಜಮೀನ್ದಾರಿ ವ್ಯವಸ್ಥೆಗೆ ಇತಿಶ್ರೀ ಹಾಡುತ್ತದೆ. ಜಮೀನ್ದಾರಿ ಕೃಷಿ ವ್ಯವಸ್ಥೆಯಲ್ಲಿ

ದಲಿತರ ಭವಿಷ್ಯದ ಚಿಂತನೆ

ಜಾತಿವ್ಯವಸ್ಥೆ ಪರಿಣಾಮಕಾರಿಯಾಗಿ ಕೆಲಸ ಮಾಡುವುದು ದಲಿತ ನಾಯಕರಿಗೆ ಗೊತ್ತಿರದ ವಿಚಾರವೇನಲ್ಲ. ಆದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದು ಸಾಧ್ಯವಿಲ್ಲ. ಬಂಡವಾಳಶಾಹಿ ವ್ಯವಸ್ಥೆ ಕೂಡ ಜಾತಿ ವ್ಯವಸ್ಥೆಯನ್ನು ಬೇರೆ ರೀತಿಯಲ್ಲಿ ಮುಂದುವರೆಸುತ್ತದೆ ಎಂದು ಬಹಳಷ್ಟು ಮಂದಿ ದಲಿತ ಚಿಂತಕರು ಅಭಿಪ್ರಾಯಪಡುತ್ತಾರೆ. ಜಮೀನ್ದಾರಿ ವ್ಯವಸ್ಥೆಯಲ್ಲಿ ಅಧಿಕಾರಯುತವಾಗಿ ಕಾರ್ಯನಿರ್ವಹಿಸುವಂತೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಜಾತಿ ಪ್ರಭಾವ ಬೀರಲು ಸಾಧ್ಯವೇ? ಖಂಡಿತ ಇಲ್ಲ.

ದಲಿತ ಸಮುದಾಯದ ಚಿಂತಕರ ಈ ಇಬ್ಬಗೆಯ ಧೋರಣೆಯಿಂದ ರೋಸಿ ಹೋಗಿ, ಇತ್ತೀಚೆಗಿನ ದಿನಗಳಲ್ಲಿ ತೀರ ಸರಳವಾದ ಪ್ರಶ್ನೆಯನ್ನು ನಾನು ಎಲ್ಲರ ಮುಂದಿಡಲಾರಂಭಿಸಿದ್ದೇನೆ. ಜಮೀನ್ದಾರಿ ವ್ಯವಸ್ಥೆಯ ಪೋಸ್ಟರ್ ಬಾಯ್ ರಾಜಾ ಭಯ್ಯಾ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಪೋಸ್ಟರ್ ಬಾಯ್ ರತನ್ ಟಾಟಾ, ಇವರಿಬ್ಬರಲ್ಲಿ ನಿಮ್ಮ ಮಕ್ಕಳು ಯಾರ ಸಂಸ್ಥೆಯಲ್ಲಿ ಉದ್ಯೋಗ ಮಾಡುವುದನ್ನು ನೀವು ಬಯಸುತ್ತೀರ? ಬಹಳಷ್ಟು ಮಂದಿ "ರತನ್ ಟಾಟಾ" ಎಂದು ಉತ್ತರಿಸುತ್ತಾರೆ. ಹೌದು, ಭಾರತದ ಬಹುತೇಕ ಭಾಗ ಕೃಷಿ ಅವಲಂಬಿತವಾಗಿರುವುದರಿಂದ ಜಾತಿ ವ್ಯವಸ್ಥೆ ಶಕ್ತಿಯುತವಾಗಿದ್ದು, ಬಂಡವಾಳಶಾಹಿ ವ್ಯವಸ್ಥೆಯೊಳಗೂ ಪ್ರವೇಶ ಮಾಡುವ ಸಾಧ್ಯತೆ ಇದ್ದೇ ಇದೆ. ಆದರೆ ಜಾತಿ ವ್ಯವಸ್ಥೆ ಜಮೀನ್ದಾರಿ ಕೃಷಿ ಸಮಾಜದಲ್ಲಿ ಅಧಿಕಾರಯುತವಾಗಿ ಹಿಡಿತ ಸಾಧಿಸಿದಂತೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಿಡಿತ ಸಾಧಿಸಲು ಸಾಧ್ಯವಿಲ್ಲ. ಭಾರತ ದೊಡ್ಡ ಪ್ರಮಾಣದಲ್ಲಿ ಬಂಡವಾಳಶಾಹಿ ವ್ಯವಸ್ಥೆಗೆ ಪಲ್ಲಟಗೊಂಡಾಗ ಜಾತಿವ್ಯವಸ್ಥೆಯ ಪ್ರಭಾವ ಕ್ಷೀಣಿಸುತ್ತದೆ.

ಬಹುತೇಕ ದಲಿತ ಬುದ್ಧಿಜೀವಿಗಳು, ಚಿಂತಕರು ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಮಾರುಕಟ್ಟೆ ಆರ್ಥಿಕ ವ್ಯವಸ್ಥೆ (ಉದಾಹರಣೆಗೆ ಸಾರ್ವಜನಿಕ ವಲಯದ ಖಾಸಗೀಕರಣ) ಸರ್ಕಾರದ ಹಿಡಿತವನ್ನು ಸಡಿಲಗೊಳಿಸುತ್ತದೆ. ದಲಿತರ ಶ್ರೇಯೋಭಿಲಾಷೆ ಬಯಸುವ ಏಕೈಕ ಸಂಸ್ಥೆಯಾದ ಸರ್ಕಾರದ ಹಿಡಿತದಿಂದ ಅರ್ಥವ್ಯವಸ್ಥೆ ಮುಕ್ತವಾದರೆ ದಲಿತರಿಗೆ ಉಳಿಗಾಲವಿಲ್ಲ ಎಂಬ ಆತಂಕ ಬಹಳಷ್ಟು ಮಂದಿ ದಲಿತರಲ್ಲಿದೆ. ದಲಿತ ಮಧ್ಯಮವರ್ಗ ಸರ್ಕಾರದ ಮೀಸಲಾತಿ ನೀತಿಯಿಂದಾಗಿ ಶಿಕ್ಷಣ, ಉದ್ಯೋಗ ವಲಯದಲ್ಲಿ ಪ್ರಯೋಜನ ಪಡೆದಿರುವುದು ನಿಜ. ಆದರೆ ಮೀಸಲಾತಿ ನೀತಿ ಖಾಸಗಿ ಕ್ಷೇತ್ರದಲ್ಲಿ ಕೂಡ ಯಶಸ್ವಿಯಾಗಲು ಸಾಧ್ಯವಿದೆ. ಅಮೆರಿಕಾದಲ್ಲಿ ಇದು ಸಾಧ್ಯವಾಗುವುದಾದರೆ, ಭಾರತದಲ್ಲಿ ಯಾಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಇನ್ಫೋಸಿಸ್ ಮತ್ತು ಫೋರ್ಬ್ಸ್ ಇಂಡಿಯಾ ಸಂಸ್ಥೆ ಅಮೆರಿಕಾ ಮಾದರಿಯ ಸಕಾರಾತ್ಮಕ ಮೀಸಲಾತಿ ನೀತಿಯನ್ನು ಪ್ರಯೋಗಾತ್ಮಕವಾಗಿ ಅನುಸರಿಸುತ್ತಿದೆ. ಟಾಟಾ ಸಂಸ್ಥೆ ಕೂಡ ಇದೇ ಮಾದರಿಯನ್ನು ಅನುಸರಿಸುವ ಚಿಂತನೆ ನಡೆಸುತ್ತಿದೆ.

ವಿಶ್ವದಾದ್ಯಂತ ಮಾರುಕಟ್ಟೆ ಆರ್ಥಿಕ ವ್ಯವಸ್ಥೆ ಹಳೆಯ ಸಾಮಾಜಿಕ ವ್ಯವಸ್ಥೆಯನ್ನು ನಾಶ ಮಾಡಿದೆ. ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯಲ್ಲಿ ಭೋಗ ವಸ್ತುಗಳ ಖರೀದಿ ಸಾಮರ್ಥ್ಯ ಸಮಾಜವನ್ನು ನಿಯಂತ್ರಿಸುತ್ತದೆ. ಸಾಮಾಜಿಕ ಶ್ರೇಣಿ ಕೂಡ ಪೂರ್ವ ನಿರ್ಧಾರಿತವಲ್ಲ. ಆದರೆ ಸಾಂಪ್ರದಾಯಿಕ ಜಾತಿವ್ಯವಸ್ಥೆಯಲ್ಲಿ ಸಾಮಾಜಿಕ ಶ್ರೇಣಿ ಪೂರ್ವ ನಿರ್ಧಾರಿತವಾಗಿರುತ್ತದೆ. ಮಾರುಕಟ್ಟೆ ಆರ್ಥಿಕ ವ್ಯವಸ್ಥೆ ದಲಿತರಿಗೆ ಮುಕ್ತವಾದ ಅವಕಾಶ ನೀಡುತ್ತದೆ. ಹೀಗಾಗಿ ಮಾರುಕಟ್ಟೆ ಆಧಾರಿತ ಕ್ರಾಂತಿಕಾರಿ ಸಾಮಾಜಿಕ ವ್ಯವಸ್ಥೆಯನ್ನು ದಲಿತರು ಏಕೆ ವಿರೋಧಿಸಬೇಕು?

ದಲಿತ ಬುದ್ಧಿಜೀವಿಗಳು, ಚಿಂತಕರು ಜಾಗತೀಕರಣವನ್ನು ವಿರೋಧಿಸುವ ವಿಚಾರವಂತೂ ನನಗೆ ಒಗಟಾಗಿ ಪರಿಣಮಿಸಿದೆ. ಹಿಂದೂ ಧರ್ಮ ಶಾಸ್ತ್ರ ಹಿಂದೂಗಳು ವಿದೇಶಕ್ಕೆ ಹೋಗುವುದನ್ನು ನಿಷೇಧಿಸಿದೆ. ಬಾಹ್ಯ ಪ್ರಪಂಚದೊಂದಿಗೆ ಸಂಪರ್ಕವಿಲ್ಲದ ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆ ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಘಪರಿವಾರ ಜಾಗತೀಕರಣವನ್ನು ವಿರೋಧಿಸುವುದು ಸಹಜ. ಆದರೆ ದಲಿತರು ಜಾಗತೀಕರಣವನ್ನು ವಿರೋಧಿಸುವುದರ ಮರ್ಮ ನನಗಂತೂ ಅರ್ಥವಾಗಿಲ್ಲ.

ಜಾಗತೀಕರಣವನ್ನು ವಿರೋಧಿಸಲು ಸಂಘಪರಿವಾರ ಮತ್ತು ಎಡಪಕ್ಷಗಳು ಒಂದಾಗುವುದು ಅಚ್ಚರಿಯ ವಿಚಾರವೇನಲ್ಲ. ಆದರೆ ದಲಿತ ನಾಯಕರು ಕೂಡ ಇದೇ ವಾದವನ್ನು ಹೇಗೆ ಮಂಡಿಸಲು ಸಾಧ್ಯ? 1990ರ ನಂತರ ಜಾತಿ ಮತ್ತು ದಲಿತ ಸಂಬಂಧಿ ವಿಚಾರಗಳಿಗೆ ಜಾಗತಿಕ ಮಟ್ಟದಲ್ಲಿ ಪ್ರಚಾರ ಸಿಗುತ್ತಿದೆ. ಆದರೆ 1990 ಮುಂಚೆ ಇದು ಸಾಧ್ಯವಾಗಿರಲಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

> **ಬಹುತೇಕ ದಲಿತ ಬುದ್ಧಿಜೀವಿಗಳು, ಚಿಂತಕರು ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಮಾರುಕಟ್ಟೆ ಆರ್ಥಿಕ ವ್ಯವಸ್ಥೆ ಸರ್ಕಾರದ ಹಿಡಿತವನ್ನು ಸಡಿಲಗೊಳಿಸುತ್ತದೆ. ದಲಿತರ ಶ್ರೇಯೋಭಿಲಾಷೆ ಬಯಸುವ ಏಕೈಕ ಸಂಸ್ಥೆಯಾದ ಸರ್ಕಾರದ ಹಿಡಿತದಿಂದ ಅರ್ಥವ್ಯವಸ್ಥೆ ಮುಕ್ತವಾದರೆ ದಲಿತರಿಗೆ ಉಳಿಗಾಲವಿಲ್ಲ ಎಂಬ ಆತಂಕ ಬಹಳಷ್ಟು ಮಂದಿ ದಲಿತರಲ್ಲಿದೆ. ದಲಿತ ಮಧ್ಯಮವರ್ಗ ಸರ್ಕಾರದ ಮೀಸಲಾತಿ ನೀತಿಯಿಂದಾಗಿ ಶಿಕ್ಷಣ, ಉದ್ಯೋಗ ವಲಯದಲ್ಲಿ ಪ್ರಯೋಜನ ಪಡೆದಿರುವುದು ನಿಜ. ಆದರೆ ಮೀಸಲಾತಿ ನೀತಿ ಖಾಸಗಿ ಕ್ಷೇತ್ರದಲ್ಲಿ ಕೂಡ ಯಶಸ್ವಿಯಾಗಲು ಸಾಧ್ಯವಿದೆ. ಅಮೆರಿಕಾದಲ್ಲಿ ಇದು ಸಾಧ್ಯವಾಗುವುದಾದರೆ, ಭಾರತದಲ್ಲಿ ಯಾಕೆ ಸಾಧ್ಯವಾಗುವುದಿಲ್ಲ.**

ಸಿದ್ಧಾಂತಗಳಿಗಿಂತ ಮುಖ್ಯವಾಗಿ ದಲಿತರ ಏಳ್ಗೆ ಮುಖ್ಯ ಎಂಬುದನ್ನು ದಲಿತ ನಾಯಕರು ಇನ್ನಾದರೂ ಅರ್ಥೈಸಿಕೊಳ್ಳಬೇಕಿದೆ.

ಹೊಸ ಕ್ರಾಂತಿ

ಉತ್ತರ ಪ್ರದೇಶದ ಹರ್ದೋಯಿ ಜಿಲ್ಲೆಗೆ ಸೇರಿದ ಪಿಹನಿ ಎಂಬ ಸಣ್ಣ ತಾಲ್ಲೂಕು ಕೇಂದ್ರಕ್ಕೆ ನಾನು ಹಲವಾರು ಸಲ ಭೇಟಿ ನೀಡಿದ್ದೇನೆ. ಇತ್ತೀಚೆಗೆ ಉತ್ತರ ಪ್ರದೇಶ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಪ್ರವಾಸ ಕೈಗೊಂಡಿದ್ದಾಗ ನನ್ನ ಹಳೆಯ ಮಿತ್ರ ರಾಮ ಚಂದರ್ ಅವರನ್ನು ಭೇಟಿ ಮಾಡಿದ್ದೆ.

ರಾಮ ಚಂದರ್ ಶಹಜಹಾನ್‌ಪುರ್ ಜಿಲ್ಲೆಗೆ ಸೇರಿದ್ದರೂ, ಅವರ ಗ್ರಾಮ ಹರ್ದೋಯಿ ಜಿಲ್ಲೆಯ ಗಡಿಯಲ್ಲಿದೆ ಮತ್ತು ಪಿಹನಿ ತಾಲ್ಲೂಕು ಕೇಂದ್ರಕ್ಕೆ ಹತ್ತಿರದಲ್ಲಿದೆ. ಸಂಬಂಧಿಕರನ್ನು ಭೇಟಿ ಮಾಡಲು ರಾಮ ಚಂದರ್ ಆಗಾಗ ಪಿಹನಿಗೆ ಭೇಟಿ ನೀಡುವುದುಂಟು. ಶಹಜಹಾನ್‌ಪುರ್ ಮತ್ತು ಹರ್ದೋಯಿ ಜಿಲ್ಲೆಯ ದಲಿತರಿಗೆ "ಪಿಯನಿ"ಯ ಸ್ವಾರಸ್ಯಕರ ಕಥೆಯ ಪರಿಚಯವಿರುತ್ತದೆ. 1985ರಲ್ಲಿ ಪಿಹನಿಯಲ್ಲಿ ಓರ್ವ ಠಾಕೂರ್ ಜಾತಿಯ ಜಮೀನ್ದಾರ ಗಿರಣಿಯನ್ನು ಆರಂಭಿಸುತ್ತಾನೆ. ಕುಟುಂಬ ಒಡೆತನದ ಗೋಧಿ ಗಿರಣಿಗಳು ಉತ್ತರ ಪ್ರದೇಶದ ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ. ಗಿರಣಿ ಬರುವುದಕ್ಕೆ ಮುಂಚೆ ಗೋಧಿಯನ್ನು ಮಹಿಳೆಯರು ಕುಟ್ಟಿ ಹಿಟ್ಟು ಮಾಡುತ್ತಿದ್ದರು. ಈ ಭೂಮಾಲೀಕರು ತಮ್ಮ ಭೂಮಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರನ್ನು ಗೋಧಿಹಿಟ್ಟು ಮಾಡಲು ಕರೆಸುತ್ತಿದ್ದರು.

ತನ್ನ ಯೌವನಾವಸ್ಥೆಯಲ್ಲಿ ಜಮೀನ್ದಾರನ ಮನೆಯಲ್ಲಿ ಗೋಧಿ ಹಿಟ್ಟು ಮಾಡಲು ಹೋಗುತ್ತಿದ್ದ ಓರ್ವ ಹಿರಿಯ ದಲಿತ ಹೆಂಗಸು ತನ್ನ ಮನೆಯ ಗೋಧಿಯನ್ನು ಅದೇ ಜಮೀನ್ದಾರನ ಗಿರಣಿಗೆ ತೆಗೆದುಕೊಂಡು ಹೋಗುತ್ತಿದ್ದಳು. ಒಂದು ದಿನ ಗಿರಣಿಯಂತ್ರ ಸರಿಯಾಗಿ ಕೆಲಸ ಮಾಡದೆ ಗಟ್ಟಿಯಾದ ಹಿಟ್ಟು ನೀಡಿದಾಗ, ಆಕೆ ತನ್ನ ಮಾಜಿ ಮಾಲೀಕನನ್ನು ಪ್ರಶ್ನಿಸುತ್ತಾಳೆ; "ಠಾಕೂರ್ ಸಾಹೇಬರೇ ಹಿಂದೆ ನಾವು ಗೋಧಿಯನ್ನು ಸರಿಯಾಗಿ ಕುಟ್ಟದೆ ಹಿಟ್ಟು ಗಟ್ಟಿಯಾಗಿದ್ದರೆ ನಮಗೆ ಹೊಡೆದು ಬಡಿದು ಮಾಡುತ್ತಿದ್ದಿರಿ. ಈಗ ಈ ಗಿರಣಿ ಕೂಡ ಗಟ್ಟಿ ಹಿಟ್ಟು ನೀಡಿದೆ. ಈಗ ನಾನು ಏನು ಮಾಡಲಿ?" ಆಕೆಯ ತಮಾಷೆಯ ಪ್ರಶ್ನೆಗೆ ಕಕ್ಕಾಬಿಕ್ಕಿಯಾದ ಠಾಕೂರ್ ಒಮ್ಮೆ ಆಕೆಯನ್ನು ನೋಡಿ ಸುಮ್ಮನಾಗುತ್ತಾನೆ.

ಮರುದಿನ ಠಾಕೂರ್ ಗಿರಣಿ ಅಂಗಡಿಯನ್ನು ಮುಚ್ಚುತ್ತಾನೆ. ತನ್ನ ಹಿಂದಿನ ದಿನಗಳನ್ನು ನೆನೆದು ಜಮೀನ್ದಾರನ ಮನಸ್ಸಿಗೆ ತೀವ್ರ ಆಘಾತವಾಗಿದ್ದಿರಬಹುದು. ತನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದ ಕೃಷಿ ಕಾರ್ಮಿಕರಿಗೆ ಅದರಲ್ಲೂ ದಲಿತರಿಗೆ ಸೇವೆ ಒದಗಿಸುವ ವಿಚಾರ ಅವನನ್ನು ತೀವ್ರವಾಗಿ ಬಾಧಿಸಿರಬಹುದು. ಹೀಗಾಗಿ ಆತ ಇನ್ನೆಂದೂ ಗಿರಣಿ ಅಂಗಡಿಯ ಬಾಗಿಲು ತೆರೆಯಲಿಲ್ಲ. ತನಗೆ

ನಷ್ಟವಾದರೂ ಪರವಾಗಿಲ್ಲ, ಅವನಿಗೆ ಜಾತಿ ಪ್ರತಿಷ್ಠೆ ಮುಖ್ಯವಾಗಿತ್ತು.

"ಠಾಕೂರ್‌ನ ಮಕ್ಕಳು ಈಗ ಏನು ಮಾಡುತ್ತಿದ್ದಾರೆ?" ಎಂದು ನಾನು ರಾಮ ಚಂದರ್‌ಗೆ ಕೇಳಿದಾಗ "ಅವರು ನಮ್ಮ ಭೂಮಿಯಲ್ಲಿ ಉಳುಮೆ ಮಾಡುತ್ತಿದ್ದಾರೆ" ಎಂದು ರಾಮ ಚಂದರ್ ಕಣ್ಣು ಹೊಡೆದರು. ಈ ಹಿಂದಿನ ಬಹುತೇಕ ಭೂಮಾಲೀಕ ಕುಟುಂಬಗಳು ಈಗ ಟ್ರ್ಯಾಕ್ಟರ್‌ಗಳನ್ನು ಖರೀದಿಸಿವೆ. ಉತ್ತರ ಪ್ರದೇಶದ ಗ್ರಾಮೀಣ ಪ್ರದೇಶದಲ್ಲಿ ಜಾನುವಾರುಗಳು ಬಹುತೇಕ ಕಣ್ಮರೆಯಾಗಿರುವುದರಿಂದ ಟ್ರ್ಯಾಕ್ಟರ್ ಮಾಲೀಕರು ಹಣಕ್ಕಾಗಿ ಯಾವುದೇ ಭೂಮಿಯನ್ನು ಉಳುತ್ತಾರೆ.

ಇದೇ ಸಂದರ್ಭದಲ್ಲಿ ರಾಮ ಚಂದರ್ ಮತ್ತು ಇತರ ಹನ್ನೆರಡು ಮಂದಿ ಗೆಳೆಯರೊಂದಿಗೆ ಶಹಜಹಾನ್ ಪುರ್‌ನ ಹಳ್ಳಿಯೊಂದಕ್ಕೆ ಭೇಟಿ ನೀಡಿದ್ದೆ. ಅಲ್ಲಿ ದಲಿತ ಕೇರಿಯ ಒಂದಷ್ಟು ಮಂದಿ ದಲಿತರ ಮನೆಗಳಿಗೆ ಕೂಡ ಭೇಟಿ ನೀಡಿದ್ದೆವು. ಇವರಲ್ಲಿ ಬಹಳಷ್ಟು ಮಂದಿ ಹಾಲಿನ ಚಹಾ ನೀಡಿದ್ದು ನನಗೆ ಅಚ್ಚರಿ ಉಂಟು ಮಾಡಿತು. ಉತ್ತರ ಪ್ರದೇಶದ ಗ್ರಾಮೀಣ ಭಾಗದಲ್ಲಿ ಹಾಲಿನ ಚಹಾ ಸೇವನೆ ತೀರ ಹೊಸ ವಿದ್ಯಮಾನ.

ಯಾವುದೇ ಜಾನುವಾರುಗಳಿಲ್ಲದೆ ಹಾಲು ಹೇಗೆ ಸಿಗುತ್ತದೆ ಎಂದು ನಾನು ಅವರನ್ನು ಪ್ರಶ್ನಿಸಿದಾಗ, ಗ್ರಾಮದ ಓರ್ವ ಬ್ರಾಹ್ಮಣ ಪಂಡಿತನಿಂದ ಖರೀದಿಸುವುದಾಗಿ ತಿಳಿಸಿದರು. ಹಿಂದೆ ಭೂ ಮಾಲೀಕನಾಗಿದ್ದ ಈತ ಈಗ ಹೆಚ್ಚಿನ ಆದಾಯದ ನಿರೀಕ್ಷೆಯಲ್ಲಿ ಎರಡು ಮಿಶ್ರತಳಿಯ ಹಸುಗಳನ್ನು ಖರೀದಿಸಿದ್ದಾನೆ. ಕನಿಷ್ಠ 15 ದಲಿತ ಕುಟುಂಬಗಳು ಬ್ರಾಹ್ಮಣನ ಬಳಿ ಹಾಲು ಖರೀದಿಸುವುದಾಗಿ ಅಲ್ಲಿನ ಹಿರಿಯ ದಲಿತರೊಬ್ಬರು ಹೇಳಿದರು. ಈ ಬ್ರಾಹ್ಮಣ ಹಾಲು ಮಾರಾಟಗಾರ ಪ್ರತಿದಿನ ದಲಿತರ ಕೇರಿಗೆ ಬಂದು ಅವರ ಮನೆಗೆ ಹಾಲು ನೀಡಿ ಹೋಗುತ್ತಾನೆ. ತಿಂಗಳ ಮೊದಲ ವಾರದಲ್ಲಿ ಒಂದು ದಿನ ದಲಿತ ಕೇರಿಗೆ ಬಂದು ಹಣ ಸಂಗ್ರಹಿಸುತ್ತಾನೆ.

ತಮ್ಮ ಕೌಟುಂಬಿಕ ಅವಶ್ಯಕತೆಗನುಗುಣವಾಗಿ ದಲಿತರು ಪ್ರತಿದಿನ 250 ಮಿ. ಲೀಟರ್‌ನಿಂದ ಒಂದು ಲೀಟರ್ ವರೆಗೆ ಹಾಲು ಖರೀದಿಸುತ್ತಾರೆ. ಇನ್ನು ಕೆಲವು ದಲಿತರು ಹಬ್ಬ ಹರಿದಿನಗಳಂದು ಮಾತ್ರ ಹಾಲು ಖರೀದಿಸುತ್ತಾರೆ. "ಮುಂದೊಂದು ದಿನ ಓರ್ವ ಬ್ರಾಹ್ಮಣ ದಲಿತರ ಕೇರಿಗೆ ಬಂದು ಹಾಲು ಮಾರುತ್ತಾನೆ. ಅದನ್ನು ಖರೀದಿಸಲು ದಲಿತರ ಬಳಿ ಸಾಕಷ್ಟು ಹಣ ಇರುತ್ತದೆ ಎಂದು ನಿಮಗೆ ಯಾವಾಗಲಾದರೂ ಅನಿಸಿತ್ತೆ?" ಎಂದು ನಾನು ಹಿರಿಯ ತಲೆಮಾರಿನ ದಲಿತರೊಬ್ಬರನ್ನು ಕೇಳಿದಾಗ, "ನನ್ನ ಕನಸು ಮನಸಿನಲ್ಲೂ ಊಹಿಸಿರಲಿಲ್ಲ ಸ್ವಾಮಿ" ಎಂದು ಅವರು ಉತ್ತರಿಸಿದರು. ಆಗ ಇದೇ ಕುಟುಂಬಕ್ಕೆ ಸೇರಿದ ಬ್ರಾಹ್ಮಣರು ದಲಿತರನ್ನು ಹೇಗೆ ನಡೆಸಿಕೊಳ್ಳುತ್ತಿದ್ದರು ಎಂಬ ವಿವರಗಳನ್ನು ಅವರು ನೀಡಿದರು.

ದಲಿತರ ಕೇರಿಯಲ್ಲಿ ಬ್ರಾಹ್ಮಣನೋರ್ವ ಹಾಲು ಮಾರುವುದು ಹಾಗೂ ಠಾಕೂರ್‌ಗಳು ಹಣಕ್ಕಾಗಿ ದಲಿತರ ಭೂಮಿಯಲ್ಲಿ ಉಳುಮೆ ಮಾಡುವುದಕ್ಕಿಂತ ದೊಡ್ಡ ಸಾಮಾಜಿಕ ಕ್ರಾಂತಿ ಇನ್ನಾವುದಿದೆ?

ಯಾವುದೋ ಒಂದು ಹಳ್ಳಿಯಲ್ಲಿ ಮಾತ್ರ ಇಂತಹ ಬದಲಾವಣೆಯಾಗುತ್ತಿರುವುದು ಕೂಡ ಕ್ರಾಂತಿಕಾರಿ ವಿಚಾರವೇ. ಉತ್ತರ ಪ್ರದೇಶದಲ್ಲಿ ಯಾರ ಗಮನಕ್ಕೂ ಬಾರದೆ ಇಂತಹ ದೊಡ್ಡ ಕ್ರಾಂತಿ ಈಗಾಗಲೇ ಆರಂಭವಾಗಿದೆ. □

ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್: ಆಧುನಿಕ ಭಾರತವನ್ನು ರೂಪಿಸಿದ ಚಿಂತಕರು: ಒಂದು ಮರುನೋಟ

(37ನೇ ಪುಟದಿಂದ)

ಈಡೇರುವುದರೊಳಗೇ ಅವರನ್ನು ಸಾವು ಒಯ್ದಿದೆ...'

ಇಂದು ಮರುನೋಟಕ್ಕೆ ಆಯ್ಕೆ ಮಾಡಿಕೊಂಡಿರುವ ಐವ್ವರು ಚಿಂತಕರ ಚಿಂತನೆಗಳಲ್ಲಿದ್ದ ಇಂತಹ ಸೂಕ್ಷ್ಮ ಮತ್ತು ನಿರ್ಣಾಯಕ ಅಂತರ್ಸಂಬಂಧಗಳನ್ನು ನಾವು ಇಂದು ಗುರುತಿಸಿ ವಿಸ್ತರಿಸಬೇಕಿದೆ. ಇಂದಿನ ಸಂದರ್ಭಕ್ಕೆ ತಕ್ಕ ಹಾಗೆ ವ್ಯಾಖ್ಯಾನಿಸಬೇಕಿದೆ. ಏಕೆಂದರೆ ಈ ಎಲ್ಲ ಚಿಂತನೆಗಳಲ್ಲಿನ ಅಂತರ್ವಿರೋಧಗಳ ಲಾಭ ಪಡೆದು ಅವನ್ನು ಅಪ್ರಸ್ತುತೀಕರಿಸುವ ಮೂಲಕ ಜಾರಿಗೆ ಬಂದಿರುವ ಇಂದಿನ ಹೊಸ ರಾಜಕಾರಣದ ಚಾಲನಾ ಶಕ್ತಿ ಯಾರಿಗೂ, ಯಾವುದಕ್ಕೂ ಉತ್ತರದಾಯಿಯಾಗಿರದ; ಹಾಗಾಗಿ ಯಾವುದೇ ನೈತಿಕ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡದ ಮುಕ್ತ ಮಾರುಕಟ್ಟೆ ಆರ್ಥಿಕತೆ ಎಂಬುದೂ ಈ ಸಂದರ್ಭದಲ್ಲಿ ನಮಗೆ ನೆನಪಿರುವುದು ಒಳ್ಳೆಯದು.

ಏಕೆಂದರೆ, ಆಧುನಿಕ ನಾಗರೀಕತೆಯ ಇಂದಿನ ಒಂದು ದೊಡ್ಡ ಬಿಕ್ಕಟ್ಟಿನ ಪ್ರತೀಕವಾಗಿರುವ ಹವಾಮಾನ ಬದಲಾವಣೆ ಕುರಿತ ಈಚಿನ ಕೋಪೆನ್‌ಹೇಗನ್ ಸಮ್ಮೇಳನದ ಸಂದರ್ಭದಲ್ಲಿ, ತನ್ನ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಲಾರೆ ಎಂದು ಮತ್ತೆ ಘೋಷಿಸುವ ಮೂಲಕ ಪರೋಕ್ಷವಾಗಿ ಯುದ್ಧ ಸಂಸ್ಕೃತಿಯನ್ನು ಎತ್ತಿ ಹಿಡಿದ ಅಮೆರಿಕಾದ ನಿಲುವಿಗೆ; ಇತರ ದೇಶಗಳ ವಿರೋಧದ ಮಧ್ಯೆಯೂ, ಭಾರತ ಚೀನಾದ ಜೊತೆ ಸೇರಿ(ಈ ಎರಡೂ ಜಾಗತಿಕ ಮಟ್ಟದ ಹೊಸ ಮಾರುಕಟ್ಟೆಗಳು) ಪೂರಕವೆನ್ನಿಸುವ ಪಾತ್ರ ವಹಿಸಿತೆಂಬುದನ್ನು ನಾವಿಲ್ಲಿ ಗಮನಿಸಬೇಕು. ಇದು ಈ ನಾಗರೀಕತೆಯ ತಲೆ ಸಂಪೂರ್ಣ ಕೆಟ್ಟಿದೆ ಎನ್ನುವುದರ ದ್ಯೋತಕವಲ್ಲವೆ?

ಹಾಗಾಗಿ, ಇಂದಿನ ಚರ್ಚೆ ಮುಖ್ಯವಾಗಿ ಈ ನೆಲೆಯಲ್ಲಿ, ಅಂದರೆ ಇತಿಹಾಸದ ಭೌತ-ಅಭೌತ ವ್ಯಾಖ್ಯಾನಗಳ ನೆಲೆಯಲ್ಲಿ ನಡೆದು, ಆಧುನಿಕ ನಾಗರೀಕತೆ ಆತ್ಯಂತಿಕವಾಗಿ ಎಂತಹ ಮನುಷ್ಯನನ್ನು ಸೃಷ್ಟಿಸಹೊರಟಿದೆ ಎಂಬುದರ ಪರಿಶೀಲನೆಯ ಮೂಲಕ ಹೊಸ ಸಮಾಜವಾದಿ ಚಿಂತನೆಗೆ ದಾರಿ ಮಾಡಿಕೊಡುವಂತಾಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(ಇದೇ ಜನವರಿ ಹತ್ತರಂದು ಹೊನ್ನಾವರದಲ್ಲಿ 'ಮಂಥನ' ಸಾಹಿತ್ಯಿಕ-ಸಾಂಸ್ಕೃತಿಕ ಬಳಗ ಇದೇ ವಿಷಯದ ಬಗ್ಗೆ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಆಡಿದ ಆಶಯ ಮಾತುಗಳ ವಿಸ್ತೃತ ರೂಪ) □

ಮತ್ತೊಮ್ಮೆ ವಿಮರ್ಶೆಗೊಳಗಾಗುವ ಸಂಸ್ಕೃತಾನುಕರಣ

(39ನೇ ಪುಟದಿಂದ)

ಅಂತಿಮಗುರಿ ಮೇಲ್ಜಾತಿಯ ಸಂಸ್ಕೃತಿಯನ್ನು ಎತ್ತಿ ಹಿಡಿದು. ಉಳಿದ ಜಾತಿಗಳು "ಸಂಸ್ಕೃತಾನುಕರಣ" ಹೀನವೆಂದು ಪುಷ್ಟೀಕರಿಸುವುದು. ಅಂದರೆ ಮೇಲ್ಜಾತಿಗಳ ಯಜಮಾನಿಕೆ ಸರಿ-ಅವಶ್ಯಕವೆಂದು ಸಾರಿ ಸಾರಿ ಹೇಳುವುದು. ಇಲ್ಲಿ ವಸಾಹತು ಮಾಡುವ ರಾಜಕೀಯವನ್ನು "ಸಂಸ್ಕೃತಾನುಕರಣ"ವೂ ಮಾಡುತ್ತದೆ. ಉಳಿದ ಸಂಸ್ಕೃತಿಗಳು ಇವೆರಡರ ಅಂತಿಮ ವಿಶ್ಲೇಷಣೆಯಲ್ಲಿ "ಸಂಸ್ಕೃತಿ ಹೀನ", "ಅನಾಗರೀಕ", ಹಾಗೂ "ಆಧುನಿಕ ವಿರೋಧಿ".

ವಾಸ್ತವವಾಗಿ ಎಂ.ಎನ್.ಶ್ರೀನಿವಾಸ್ ಬರೆಯುವ ಕಾಲದಲ್ಲಿ ಬೌದ್ಧಿಕ ವಲಯ ವಸಾಹತುಶಾಹಿಯ ಪ್ರಭಾವದಿಂದ ಹೊರ ಬಂದಿರಲಿಲ್ಲ. ಬೌದ್ಧಿಕ ವಲಯಕ್ಕೆ ಸ್ವಾಯತ್ತೆಯನ್ನು ಸಾಧಿಸಲು ಸಾಧ್ಯನೂ ಇರಲಿಲ್ಲ. ಅಂದು ತಮ್ಮ ಗುರು ಫ್ರೊ.ಆರ್ ರ್ಯಾಡಿಫಿಫ್‌ರ ಸ್ಟ್ರಚಲಿಸ್ಟ್-ಫಂಕ್ಷನಲಿಸ್ಟ್‌ನ ಪ್ರಭಾವಗೊಳಗಾದರೂ, ಅವರ ಮೇಲೆ ವಸಾಹತುಶಾಹಿಯ ಪ್ರಭಾವ ಇದ್ದೇ ಇತ್ತು. ಅಂದಿನ ಸಂದರ್ಭದಲ್ಲಿ ಜಾತಿಗಳಂತೂ ಎಂ.ಎನ್.ಶ್ರೀನಿವಾಸ್‌ರ ವಾದವನ್ನು ವಿರೋಧಿಸುವಷ್ಟು ಅಥವಾ ಪರ್ಯಾಯ ವಾದವನ್ನು, ಥಿಯರಿಯನ್ನು ನಿರ್ಮಿಸುವಷ್ಟು ಶಕ್ತಿಶಾಲಿಯಾಗಿ ಬೆಳೆದಿರಲಿಲ್ಲ. ಜಾತಿಯ ಐಡೆಂಟಿಟಿಗಳು ಇನ್ನೂ ಅಮೂರ್ತವಾಗಿದ್ದವು. ಇದಕ್ಕೆ ವಿಶ್ವಕರ್ಮರು ಕೂಡ ಅಪವಾದವಾಗಿರಲಿಲ್ಲ. ವಿಶ್ವಕರ್ಮರ ಮೊದಲ ಹೋರಾಟದ ಧ್ವನಿಗಳು ರಾಜಕೀಯವಾಗಿ ಕಂಡು ಬಂದದ್ದು ಇತ್ತೀಚಿನ ದಿನಗಳಲ್ಲಿ ಅನ್ನಬಹುದು.

ರಾಷ್ಟ್ರೀಯ ಕಾರ್ಮಿಕ . ದಿನಾಚರಣೆಯನ್ನು "ವಿಶ್ವಕರ್ಮರ"ದಿನಾಚರಣೆಯಾಗಿ ಘೋಷಿಸಬೇಕೆಂಬ ಬೇಡಿಕೆಯನ್ನು ಈ ಸಂದರ್ಭದಲ್ಲಿ ನೋಡಬೇಕು. ಸಂಖ್ಯಾಧಾರಿತವಾಗಿ ವಿಶ್ವಕರ್ಮರು ಬಹುದೊಡ್ಡ ಸಮುದಾಯವಲ್ಲ- 80 ಲಕ್ಷ ಜನಸಂಖ್ಯೆಯಲ್ಲಿ ಸಾಕಷ್ಟು ಒಳಪಂಗಡಗಳಿವೆ, (ಆಚಾರಿ,ಅಕ್ಕಸಾಲೆ, ಬೈಲು ಅಕ್ಕಸಾಲೆ, ದೈವಾಗ್ನ ಬ್ರಾಹ್ಮಣ ,ಪಂಚಾಲ್,ಸೋನಾರ್, ಶಿಲ್ಪಿ ಇತ್ಯಾದಿ) ಮೇಲ್ಜಾತಿಗಳಲ್ಲಿ ಇರುವಂತೆ ಬಹು ಮುಖ್ಯವಾಗಿ ಐದು ಗೋತ್ರಗಳಿವೆ. ಇವತ್ತು ವಿಶ್ವಕರ್ಮರು ಸಂಸ್ಕೃತಾನುಕರಣವನ್ನು ವಿರೋಧಿಸುವುದರ ಅರ್ಥವೇನೆಂದರೆ: ಸಮುದಾಯಗಳು ತಮ್ಮ ಶಕ್ತಿಯನ್ನು ಪ್ರದರ್ಶಿಸುವಷ್ಟು ಎಚ್ಚೆತ್ತುಗೊಂಡಿದ್ದಾವೆ, ಇಡೀ ಸಾಮಾಜಿಕ ಚೌಕಟ್ಟನ್ನು ಪ್ರಶ್ನಿಸುವಷ್ಟು ಬೆಳೆದಿದ್ದಾವೆ ಎಂಬುದಾಗಿದೆ. ಈ ಸಂದರ್ಭದಲ್ಲಿರುವ ಬಹುಮುಖ್ಯವಾದ ತಾಕಲಾಟವೇನೆಂದರೆ: ವಿಶ್ವಕರ್ಮರ ಯಾವ ಯೋಜನೆಯನ್ನು ಸ್ವಿಕರಿಸಬೇಕು: ಸಾಮಾಜಿಕವಾಗಿ "ವಿಶ್ವಬ್ರಾಹ್ಮಣ"ರೆಂದು ಸ್ವೀಕರಿಸಿ "ಹೊಸ ಬ್ರಾಹ್ಮಣರ ನ್ನಾಗಿಸುವುದೇ?- ಆಮೂಲಕ ಹಿಂದುಳಿದ ಜಾತಿಗಳಿಗೆ ಮತ್ತೊಂದು ವೈರುಧ್ಯವನ್ನು ನಿರ್ಮಿಸುವುದೇ? ಅಥವಾ ರಾಜಕೀಯವಾಗಿ ಹಿಂದುಳಿದ ಪಟ್ಟಿಯಲ್ಲಿ "ಹಿಂದುಳಿದ ವರ್ಗ"ಗಳಾಗಿ ಗುರುತಿಸುವುದೇ? □

ಬುದ್ಧಾಯಣ

೫೩

ಅಸತ್ಯ ಎಂದಾದರೂ ತಲೆ ಕಾಯುವುದೇ?

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ಬೋಧಿಸತ್ವರು ವಾರಾಣಾಸಿಯಲ್ಲಿ ಮಹಾಧನವಂತ ಶ್ರೇಷ್ಟಿಯಾಗಿ ಜನಿಸಿದರು. ಅವರು ಪ್ರಾಪ್ತ ವಯಸ್ಸಿಗೆ ಬಂದ ನಂತರ ಮದುವೆಯಾಯಿತು. ಅವರ ಹೆಂಡತಿಯು ಕಾಲಾನಂತರ ಗರ್ಭಿಣಿಯಾದಳು. ಆಕೆಯು ಗಂಡು ಮಗುವಿಗೆ ಜನ್ಮ ನೀಡಿದಳು. ಅದೇ ಸಮಯದಲ್ಲಿ ಅವರ ಮನೆಯ ದಾಸಿಯೊಬ್ಬಳು ಗಂಡು ಮಗುವಿಗೆ ಜನ್ಮ ನೀಡಿದಳು. ಅದೇ ಸಲುಗೆ ಮತ್ತು ವಿಶ್ವಾಸದಿಂದ ದಾಸಿಯ ಮಗುವನ್ನು ತನ್ನ ಸ್ವತಃ ಮಗನಂತೆ ಬೋಧಿಸತ್ವರು ನೋಡಿಕೊಳ್ಳುತ್ತಿದ್ದರು. ಹಾಗಾಗಿ ಆ ಇಬ್ಬರೂ ಜೊತೆ ಜೊತೆಯಾಗಿ ಬೆಳೆದರು. ಬೋಧಿಸತ್ವರು ಆ ಇಬ್ಬರನ್ನು ಒಂದೇ ಗುರುವಿನ ಬಳಿ ವಿದ್ಯೆ ಕಲಿಯಲು ಅನುವು ಮಾಡಿಕೊಟ್ಟರು. ದಾಸಿಯ ಮಗನಿಗೆ "ಕಟಾಹಕ" ಎಂದು ನಾಮಕರಣ ಮಾಡಿದರು.

ಆತ ಬೋಧಿಸತ್ವರ ಮಗನಂತೆ ಶೀಲವಂತನಾಗದೆ, ಅತಿ ಜಾಣತನ, ದುರಾಸೆ, ಕುತಂತ್ರ, ಮೋಸಗಾರಿಕೆ ಮತ್ತು ಆಹಂಕಾರ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದ. ಅವನ ದೋಷವನ್ನೇಲ್ಲ ಅರಿತರು ಕೂಡ ಬೋಧಿಸತ್ವರು ಆತನಿಗೆ ತನ್ನ ಮನೆಯಲ್ಲಿ ಕೆಲಸವನ್ನು ಕೊಟ್ಟು ಆಶ್ರಯ ನೀಡಿದ್ದರು. ಆದರೆ ಆ ಮನೆಯ ಬಂಧು ಬಳಗ, ಸ್ನೇಹಿತರು, ಹಿತೈಷಿಗಳು ಈತ ದಾಸಿಯ ಪುತ್ರನೆಂದು ಕಡೆಗಣಿಸಿ ಹಿಂಸೆ ಅವಮಾನ ಮಾಡಿ ಕೀಳಾಗಿ ನೋಡಿಕೊಳ್ಳುತ್ತಿದ್ದರು. ತನ್ನ ಮಿತ್ರನಾದ ಬೋಧಿಸತ್ವ ಶ್ರೇಷ್ಠಿಯ ಮಗನನ್ನು ಕಂಡಾಗಲ್ಲೆಲ್ಲ ಕರಬುತ್ತಿದ್ದನು. ನಾನು ಅವನಿಗೆ ಸರಿ ಸಮನಾಗಿ ಮೆರಿಯಬೇಕೆಂದು ಹಗಲುಗನಸು ಕಾಣುತ್ತಿದ್ದ .

ಹೀಗಿರಲು ಒಂದು ದಿನ ಆತನ ಮನದಲ್ಲಿ ಒಂದು ದುಷ್ಟ ಬುದ್ಧಿಯು ನುಸುಳಿತು ಅದೆಂದರೆ; ದೂರದ ಗಡಿ ಪ್ರಾಂತ್ಯದಲ್ಲಿ ಬೋಧಿಸತ್ವರ ಪರಮ ಮಿತ್ರನಾದ ಶ್ರೀಮಂತ ಶ್ರೇಷ್ಟಿ ಇದ್ದ. ಆತನಿಗೆ ಒಬ್ಬಳು ಸುಂದರಳಾದ ಏಕೈಕ ಪುತ್ರಿ ಇದ್ದಳು. ನಾನೇಕೆ ಆತನಲ್ಲಿಗೆ ಹೋಗಿ ನಾನೇ ಶ್ರೇಷ್ಠಿಯ ಮಗನೆಂದು ಸುಳ್ಳು ಹೇಳಿ ಆತನ ಮಗಳನ್ನು ಮದುವೆಯಾಗಿ ಸುಖವಾಗಿ ಇರಬಾರದು! ಎಂಬುದೇ ಆಗಿತ್ತು. ಆತ ತಡ ಮಾಡದೆ ಬೋಧಿಸತ್ವರು ಬರೆದಂತೆ ಈ ರೀತಿ ಪತ್ರ ಬರೆದ: "ಪ್ರಿಯ ಮಿತ್ರನಿಗೆ ವಂದನೆಗಳು. ನಾನು ನನ್ನ ಮಗನಾದ ಕಟಾಹಕನನ್ನು ಈ ಪತ್ರದೊಂದಿಗೆ ಕಳುಹಿಸುತ್ತಿದ್ದೇನೆ. ನಾವುಗಳು ಪರಸ್ಪರ ವಿವಾಹ ಸಂಬಂಧವನ್ನು ಬೆಳೆಸುವುದು ಯೋಗ್ಯವಾಗಿದೆ. ಆ ಕಾರಣಕ್ಕಾಗಿ ನನ್ನ ಮಗನನ್ನು ನಿನ್ನ ಬಳಿ ಕಳುಹಿಸುತ್ತಿದ್ದೇನೆ. ನೀನು ಆತನಿಗೆ ನಿನ್ನ ಮಗಳನ್ನು ಕೊಟ್ಟು ವಿವಾಹ ಮಾಡಿ ಅಲ್ಲಿಯೇ ಇಟ್ಟುಕೋ. ನಾನು ಇಲ್ಲಿ ಜರೂರು ಕೆಲಸದ ಒತ್ತಡದ ಮೇಲೆ ಇದ್ದೇನೆ. ಸಮಯ ಸಿಕ್ಕಾಗ ಬಂದು ನಿನ್ನನ್ನು ಮತ್ತು ಮಗನನ್ನು ಬಂದು ಕಾಣುತ್ತೇನೆ.!" ಎಂದು ಪತ್ರವನ್ನು ಮುಗಿಸಿದ. ನಂತರ ಆ ನಕಲಿ ಪತ್ರಕ್ಕೆ ಬೋಧಿಸತ್ವರು ಇಲ್ಲದ ಸಮಯ ಸಾಧಿಸಿ ಅವರ ಉಂಗುರದ ಮುದ್ರೆಯನ್ನು ಒತ್ತಿಕೊಂಡು ಆ ಪತ್ರಕ್ಕೆ ಅಧಿಕೃತ ದೃಢತೆ ಸಿಗುವಂತೆ ಮಾಡಿಕೊಂಡ. ಬಳಿಕ ಯಾರೂ ಇಲ್ಲದ ಸಮಯ ಸಾಧಿಸಿ ದಾರಿ ಖರ್ಚಿಗೆ ಹಣ, ಮದುವೆಯಾಗುವ ಹೆಣ್ಣಿಗೆ ವಸ್ತ್ರ, ಒಡವೆ, ಚಿನ್ನಾಭರಣಗಳು ಮತ್ತು ದಾರಿಯಲ್ಲಿ ತಿನ್ನಲು ಬುತ್ತಿಯ ಗಂಟನ್ನು ಕಟ್ಟಿಕೊಂಡು ಸಿದ್ಧವಾದನು. ಮರು ದಿನ ಎಲ್ಲರು ಏಳುವ ಮೊದಲೇ ಎದ್ದು ಮನೆಯಿಂದ ಹೊರ ನೆಡೆದ. ಸಂಜೆಯ ಒಳಗೆ ಗಡಿನಾಡಿನ ಶ್ರೇಷ್ಠಿಯ ಮನೆ ತಲುಪಿದ.

ಶ್ರೇಷ್ಠಯು ಆತನನ್ನು ಕಂಡು; "ಮಗು, ನೀನು ಯಾರು? ಎಲ್ಲಿಂದ ಬಂದೆ? ಏನು ವಿಷಯ?" ಎನ್ನಲು, ಕಟಾಹಕನು ನಯವಿನಯದಿಂದ ಅವರಿಗೆ ವಂದಿಸುತ್ತಾ;

ಒಂದು ದಿನ ಆತನ ಮನದಲ್ಲಿ ಒಂದು ದುಷ್ಟ ಬುದ್ಧಿಯು ನುಸುಳಿತು ಅದೆಂದರೆ; ದೂರದ ಗಡಿ ಪ್ರಾಂತ್ಯದಲ್ಲಿ ಬೋಧಿಸತ್ವರ ಪರಮ ಮಿತ್ರನಾದ ಶ್ರೀಮಂತ ಶ್ರೇಷ್ಟಿ ಇದ್ದ. ಆತನಿಗೆ ಒಬ್ಬಳು ಸುಂದರಳಾದ ಏಕೈಕ ಪುತ್ರಿ ಇದ್ದಳು. ನಾನೇಕೆ ಆತನಲ್ಲಿಗೆ ಹೋಗಿ ನಾನೇ ಶ್ರೇಷ್ಠಿಯ ಮಗನೆಂದು ಸುಳ್ಳು ಹೇಳಿ ಆತನ ಮಗಳನ್ನು ಮದುವೆಯಾಗಿ ಸುಖವಾಗಿ ಇರಬಾರದು! ಎಂಬುದೇ ಆಗಿತ್ತು. ಆತ ತಡ ಮಾಡದೆ ಬೋಧಿಸತ್ವರು ಬರೆದಂತೆ ಈ ರೀತಿ ಪತ್ರ ಬರೆದ: "ಪ್ರಿಯ ಮಿತ್ರನಿಗೆ ವಂದನೆಗಳು. ನಾನು ನನ್ನ ಮಗನಾದ ಕಟಾಹಕನನ್ನು ಈ ಪತ್ರದೊಂದಿಗೆ ಕಳುಹಿಸುತ್ತಿದ್ದೇನೆ.

ಸಿ. ಹೆಚ್. ರಾಜಶೇಖರ್



"ಪೂಜ್ಯರೇ, ನಾನು ವಾರಾಣಾಸಿಯಿಂದ ಬಂದಿದ್ದೇನೆ. ನಾನು ನಿಮ್ಮ ಆಪ್ತ ಗೆಳೆಯರಾದ ಬೋಧಿಸತ್ವ ಶ್ರೇಷ್ಠಿಯ ಮಗ!"

"ಏತಕ್ಕಾಗಿ ಬಂದೆ?"

"ತಾವು ಈ ಪತ್ರವನ್ನು ಓದಿದರೆ ವಿಷಯವು ಸ್ಪಷ್ಟವಾಗಿ ತಿಳಿಯುತ್ತದೆ!" ಎಂದು ತಾನೇ ಸಿದ್ಧಪಡಿಸಿ ತಂದ ಪತ್ರವನ್ನು ಕೊಟ್ಟ. ಆ ಪತ್ರವನ್ನು ನೋಡಿ ಅಪಾರ ಸಂತೋಷಗೊಂಡ ಶ್ರೇಷ್ಠಿಯು; "ಇಂದು ನನ್ನ ಜೀವನ ಸಾರ್ಥಕವಾಯಿತು. ನನ್ನ ಮುದ್ದು ಮಗಳನ್ನು ಯಾರಿಗೆ ಕೊಡುವುದು? ಹೇಗೆ ಮದುವೆ ಮಾಡುವುದು? ಎಂದು ಚಿಂತಿಸಿ ಜೀವ ಹಣ್ಣಾಗಿ ಹೋಗಿತ್ತು.!" ಎಂದ. ನಂತರದ ಕೇಲವೆ ದಿನಗಳಲ್ಲಿ ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆಯನ್ನು ಮಾಡಿ ಮುಗಿಸಿದ.

ಕಟಾಹಕನ ಕನಸು ನೆನಸಾಯಿತು. ನಾನಿನ್ನು ಗೆದ್ದೆನಂದು ಸಂಭ್ರಮಿಸಿದ. ಸುಂದರಳು, ಸುಕೋಮಲೆಯು, ಮುಗ್ಧಳೂ ಆದ ಹೆಂಡತಿಯೊಂದಿಗೆ ಸುಖವಾಗಿ ದಿನಗಳನ್ನು ದೂಡುತ್ತಿದ್ದ. ಆ ಪರಿವಾರವೂ ದೊಡ್ಡದಿತ್ತು. ಸಿರಿತನದಿಂದ ಕೂಡಿತ್ತು. ಆಳುಕಾಳುಗಳು ದಾಸ ದಾಸಿಯರು ಮನೆಯ ಅಳಿಯನಿಗೆ ವಿಶೇಷ ಗೌರವವನ್ನು ಕೊಡುತ್ತಿದ್ದರು. ಇದರಿಂದಾಗಿ ಆತನಿಗೆ ನಾನೂ ಕೂಡ ಒಬ್ಬ ಶ್ರೀಮಂತನೇ ಸರಿ ಎಂಬ ಅಹಂಕಾರ ಬಂದು ಬಿಟ್ಟಿತು. ಇದರ ಫಲವಾಗಿ ಹೆಂಡತಿಯಲ್ಲಿ ಏನಾದರು ಒಂದು ತಪ್ಪು ಕಂಡು ಹಿಡಿದು ಆಡಿಕೊಳ್ಳುತ್ತಿದ್ದ. ನಿನಗಿಂತ ನಾನು ಸಭ್ಯ, ಸುಶಿಕ್ಷಿತ, ನಯಗಾರ ಮತ್ತು ಭಾರೀ ಶ್ರೀಮಂತನ ಮಗ ಎಂಬ ದರ್ಪವನ್ನು ತೋರುತ್ತಿದ್ದ ಇದೇ ವರ್ತನೆಯನ್ನು ಮನೆಯ ನೌಕರರಲ್ಲಿ ತೋರುತ್ತಿದ್ದ.

ಹೀಗಿರಲು ಬೋಧಿಸತ್ವರ ಮಗನಿಗೆ ತನ್ನ ಗೆಳೆಯ ಬಹು ದಿನದಿಂದ ಕಾಣದೆ ಇರುವುದರಿಂದ ಚಿಂತೆಗೆ ಈಡಾದ. ಒಂದು ದಿನ ತನ್ನ ಸೇವಕರನ್ನು ಕರೆದು ನಾಲ್ಕು ದಿಕ್ಕುಗಳಿಗೂ ಹೋಗಿ "ನನ್ನ ಸ್ನೇಹಿತನನ್ನು ಹುಡುಕಿ ತನ್ನಿರಿ!" ಎಂದು ಆಜ್ಞೆ ಮಾಡಿದ. ಅದೇ ರೀತಿ ಒಂದೊಂದು ದಿಕ್ಕಿಗೂ ನಾಲ್ಕಾರು ಸೇವಕರು ಕುದುರೆ ಹತ್ತಿ ಕಟಾಹಕನ ಅನ್ವೇಷಣೆಗೆ ಹೋರಟರು. ಬಹು ದಿನಗಳ ನಂತರ ಒಬ್ಬ ಸೇವಕನ ಕಣ್ಣಿಗೆ ಕಟಾಹಕನು ಬಿದ್ದ. ಆತ ತನ್ನ ಒಡೆಯರ ಮಿತ್ರನ ಮಗಳನ್ನು ಮದುವೆಯಾಗಿರುವ ವಿಷಯವನ್ನು ತಿಳಿದ. ಇದರಲ್ಲಿ ಏನೋ ಮೋಸವಿದೆ ಎಂಬುದನ್ನು ಅರಿತು ಕಟಾಹಕನಿಗೆ ಮುಖ ತೋರದಂತೆ ವಾರಾಣಾಸಿಗೆ ಹಿಂದಿರುಗಿ ಬಂದು ವಿಷಯವನ್ನು ತಿಳಿಸಿದ. ಇದರಿಂದ ಗೊಂದಲಗೊಂಡ ಆತ ತನ್ನ ತಂದೆಯನ್ನು ಕಂಡು ಈ ಬಗ್ಗೆ ವಿಷಯವನ್ನು ತಿಳಿಸಿ;

"ನೀನು ನನ್ನ ಮಿತ್ರನ ಮದುವೆಯನ್ನು ನನಗೆ ತಿಳಿಸದೆ ಮಾಡಿದ ಕಾರಣವೇನು?" ಎನ್ನಲು ಅವರು ಮುಂದಿನ ವಂಚನೆಯನ್ನು ಅರಿತರು. ಮಗನಿಗೆ ಏನೇನೋ ಸಮಾಧಾನ ಮಾಡಿದ ಬಳಿಕ, ತನ್ನ ಸೇವಕನನ್ನು ಕರೆದು ಗಡಿನಾಡಿನ ತನ್ನ ಮಿತ್ರುವಿಗೆ;

"ತಾನು ನನ್ನ ಮಗ ಮತ್ತು ಸೊಸೆಯನ್ನು ನೋಡುವ ಸಲುವಾಗಿ ಇಂಥಹ ದಿನ ನಿನ್ನಲ್ಲಿಗೆ ಬರುತ್ತೇನೆ" ಎಂದು ಪತ್ರವನ್ನು ಕಳುಹಿಸಿ ಕೊಟ್ಟ. ತನ್ನ ಸ್ನೇಹಿತ ಮತ್ತು ಸಂಬಂಧಿ ಬರುವ ವಿಷಯವನ್ನು ತಿಳಿದು ಗಡಿ ನಾಡಿನ ಶ್ರೇಷ್ಠಿ ಸಂತೋಷಗೊಂಡ. ಈ ವಿಷಯವನ್ನು ತನ್ನ ಅಳಿಯನಿಗೆ ಕರೆದು ತಿಳಿಸಿದ. ಆಗ

ಕಟಾಹಕನ ಕನಸು ನೆನಸಾಯಿತು. ನಾನಿನ್ನು ಗೆದ್ದೆನಂದು ಸಂಭ್ರಮಿಸಿದ. ಸುಂದರಳು, ಸುಕೋಮಲೆಯು, ಮುಗ್ಧಳೂ ಆದ ಹೆಂಡತಿಯೊಂದಿಗೆ ಸುಖವಾಗಿ ದಿನಗಳನ್ನು ದೂಡುತ್ತಿದ್ದ. ಆ ಪರಿವಾರವೂ ದೊಡ್ಡದಿತ್ತು. ಸಿರಿತನದಿಂದ ಕೂಡಿತ್ತು. ಆಳುಕಾಳುಗಳು ದಾಸ ದಾಸಿಯರು ಮನೆಯ ಅಳಿಯನಿಗೆ ವಿಶೇಷ ಗೌರವವನ್ನು ಕೊಡುತ್ತಿದ್ದರು. ಇದರಿಂದಾಗಿ ಆತನಿಗೆ ನಾನೂ ಕೂಡ ಒಬ್ಬ ಶ್ರೀಮಂತನೇ ಸರಿ ಎಂಬ ಅಹಂಕಾರ ಬಂದು ಬಿಟ್ಟಿತು. ಇದರ ಫಲವಾಗಿ ಹೆಂಡತಿಯಲ್ಲಿ ಏನಾದರು ಒಂದು ತಪ್ಪು ಕಂಡು ಹಿಡಿದು ಆಡಿಕೊಳ್ಳುತ್ತಿದ್ದ. ನಿನಗಿಂತ ನಾನು ಸಭ್ಯ, ಸುಶಿಕ್ಷಿತ, ನಯಗಾರ ಮತ್ತು ಭಾರೀ ಶ್ರೀಮಂತನ ಮಗ ಎಂಬ ದರ್ಪವನ್ನು ತೋರುತ್ತಿದ್ದ. ಇದೇ ವರ್ತನೆಯನ್ನು ಮನೆಯ ನೌಕರರಲ್ಲಿ ತೋರುತ್ತಿದ್ದ. ಹೀಗಿರಲು ಬೋಧಿಸತ್ವರ ಮಗನಿಗೆ ತನ್ನ ಗೆಳೆಯ ಬಹು ದಿನದಿಂದ ಕಾಣದೆ ಇರುವುದರಿಂದ ಚಿಂತೆಗೆ ಈಡಾದ. ಒಂದು ದಿನ ತನ್ನ ಸೇವಕರನ್ನು ಕರೆದು ನಾಲ್ಕು ದಿಕ್ಕುಗಳಿಗೂ ಹೋಗಿ "ನನ್ನ ಸ್ನೇಹಿತನನ್ನು ಹುಡುಕಿ ತನ್ನಿರಿ!" ಎಂದು ಆಜ್ಞೆ ಮಾಡಿದ. ಅದೇ ರೀತಿ ಒಂದೊಂದು ದಿಕ್ಕಿಗೂ ನಾಲ್ಕಾರು ಸೇವಕರು ಕುದುರೆ ಹತ್ತಿ ಕಟಾಹಕನ ಅನ್ವೇಷಣೆಗೆ ಹೋರೆಟರು. ಬಹು ದಿನಗಳ ನಂತರ ಒಬ್ಬ ಸೇವಕನ ಕಣ್ಣಿಗೆ ಕಟಾಹಕನು ಬಿದ್ದ.

ಕಟಾಹಕನಿಗೆ ಆಕಾಶವೇ ಕುಸಿದು ತಲೆಯ ಮೇಲೆ ಬಿದ್ದಂತಾಯಿತು. ತಾನು ಯಾವ ಸಿರಿ ಸಂಪತ್ತು, ಐಶ್ವಯ, ಅಧಿಕಾರ ಮತ್ತು ಹೆಂಡತಿ ಶಾಶ್ವತವೆಂದು ಭಾವಿಸಿದ್ದನೋ ಅದು ಈಗ ಕೈ ತಪ್ಪುತ್ತಿದೆ ಎಂಬುದನ್ನು ಅರಿತು ಚಿಂತಾಕ್ರಾಂತನಾದ. ಬೋಧಿಸತ್ವರು ಉದಾರಿಗಳು ತಾನು ಮಾಡಿದ ತಪ್ಪನ್ನು ಅವರು ಕೇಳುವ ಮೊದಲೇ ನಿವೇದಿಸಿಕೊಂಡರೆ ಅವರು ಖಂಡಿತ ಮನ್ನಿಸುತ್ತಾರೆ ಎಂಬ ಧೈರ್ಯದಿಂದ ಅವರು ಬರುವ ದಿನ ತಾನೇ ಹೋಗಿ ಮಾರ್ಗ ಮಧ್ಯದಲ್ಲಿ ಅವರನ್ನು ಸಂಧಿಸಿ ಸಮಯ ಸಾಧಿಸಿ ಕ್ಷಮೆ ಕೇಳಲು ನಿರ್ಧರಿಸಿದ.

ಬೋಧಿಸತ್ವರು ಬರುವ ದಿನ ಎಲ್ಲರಿಗಿಂತ ಮೊದಲೇ ಎದ್ದು ಅವರಿಗೆ ತಿಂಡಿ, ಹೂವು, ಹಣ್ಣು, ಬಾಯಾರಿಕೆಗೆ ಮಜ್ಜಿಗೆ ಮುಂತಾದವನ್ನು ತೆಗೆದುಕೊಂಡು ಹೋಗಿ ಸಂಧಿಸಿದ. ಅವರ ಕಾಲಿಗೆರಗಿ ಆದ ತಪ್ಪಿಗಾಗಿ ಕ್ಷಮೆ ಕೇಳಿದ. ಅವರು ಮರು ಮಾತನಾಡದೆ ಮುನ್ನೇಡೆದರು. ಮನೆಗೆ ಬಂದು ತನ್ನ ಮಿತ್ರನನ್ನು ಕಂಡು ಸಂತೋಷಗೊಂಡರು. ಅಂದು ರಾತ್ರಿ ಬಾಲ್ಯದ ನೆನಪುಗಳನ್ನು ಮೆಲಕು ಹಾಕಿದರು. ಮರುದಿನ ಕಟಾಹಕನು ಮದುವೆಯಾಗಿರುವ ಹುಡುಗಿಯನ್ನು ಕರೆದು ಕ್ಷೇಮ ಸಮಾಚಾರವನ್ನು ವಿಚಾರಿಸಿದರು. ಬಳಿಕ ಆಕೆ ಗುಣವಂತೆ ಎಂಬುದನ್ನು ಅರಿತು;

"ಮಗು, ನನ್ನ ಮಗ ನಿನ್ನನ್ನು ನಯವಿನಯದಿಂದ ನೋಡಿಕೊಳ್ಳುತ್ತಾನೆಯೇ?"

"ಮಾವ, ತಮ್ಮ ಮಗನನ್ನು ನಾನೇಷ್ಟೇ ಧರ್ಮ ಸಮ್ಮತವಾಗಿ ನೋಡಿಕೊಂಡರೂ, ಇಲ್ಲದ ಕೊಂಕನ್ನು ತೆಗೆದು ದರ್ಪ ಮಾಡುತ್ತಾರೆ!" ಎನ್ನಲು ಅವರು;

"ಮಗು, ಇನ್ನೂ ಮುಂದೆ ನನ್ನ ಮಗ ಮೊದಲಿನ ಹಾಗೆ ದರ್ಪ ಮಾಡುವುದಿಲ್ಲ. ಒಂದು ಪಕ್ಷ ದರ್ಪ ಮಾಡಿದ್ದೇ ಆದರೆ ಆತನನ್ನು ಉದ್ದೇಶಿಸಿ ಹೀಗೆ ನುಡಿ; ನನಗೆ ಎಲ್ಲವೂ ಗೊತ್ತು. ಮತ್ತೇ ನನ್ನ ಬಾಯಿಂದ ನುಡಿಸಲು ಪ್ರಯತ್ನಿಸಬೇಡಿ! ಎಂದಷ್ಟೇ ಹೇಳು. ಆತ ನೀನು ಹೇಳಿದಂತೆ ಕೇಳಿ ನಿನ್ನ ಕೈವಶನಾಗುತ್ತಾನೆ" ಎಂದರು. ಮರುದಿನ ಬೋಧಿಸತ್ವರು ಎಲ್ಲರಿಂದ ಬಿಳ್ಗೊಂಡು ತಮ್ಮ ಊರನ್ನು ತಲುಪಿದರು. ಕಟಾಹಕ ನಾನು ಅಗ್ನಿಪರೀಕ್ಷೆಯಿಂದ ಗೆದ್ದೆನೆಂದು ಹಿರಿಹಿರಿ ಹಿಗ್ಗಿದ. ಆದರೆ ಅವನ ಸಂತೋಷ ಬಹು ಕಾಲ ಬಾಳಲಿಲ್ಲ.

ಏಕೆಂದರೆ ಆತ ನಿಧಾನವಾಗಿ ತನ್ನ ಎಂದಿನ ದರ್ಪವನ್ನು ಪ್ರಾರಂಭಿಸಿದ ಆಗ ಹೆಂಡತಿಯು ಮಾವ ಹೇಳಿದಂತೆ;

"ನನಗೆ ಎಲ್ಲವೂ ಗೊತ್ತು. ಮತ್ತೆ ನನ್ನ ಬಾಯಿಂದ ನುಡಿಸಲು ಪ್ರಯತ್ನ ಮಾಡಬೇಡ..! "ಎನ್ನಲು ಬೋಧಿಸತ್ವರು ಈಕೆಗೆ ನನ್ನ ಸಂಪೂರ್ಣ ನಕಲಿತನವನ್ನು ತಿಳಿಸಿ ಬಿಟ್ಟಿದ್ದಾರೆ ಎಂದು ಭಾವಿಸಿ ಕುಸಿದು ಕುಳಿತ. ಬಳಿಕ ನಾನು ಮೊದಲಿನಂತೆ ದರ್ಪ ತೋರಲು ಸಾಧ್ಯವಿಲ್ಲ ಎಂಬ ಅರಿವು ಮೂಡಿದ ನಂತರ ಇರುವ ಸತ್ಯವನ್ನೇಲ್ಲ ತನ್ನ ಹೆಂಡತಿ ಮುಂದೆ ನಿವೇದಿಸಿಕೊಂಡು ಕ್ಷಮೆಯಾಚಿಸಿದ. ಬಳಿಕ ತನ್ನ ಹೆಂಡತಿಯೊಂದಿಗೆ ಬೋಧಿಸತ್ವರನ್ನು ಸಂಧಿಸಿ;

"ಪೂಜ್ಯರೇ, ನಾನು ನನ್ನ ದುರಾಸೆಗಾಗಿ ನನ್ನ ನೆಮ್ಮದಿ, ಶಾಂತಿ, ಸ್ವಾಭಿಮಾನ, ಘನತೆ ಮತ್ತು ಭವಿಷ್ಯವನ್ನೇ ಹಾಳು ಮಾಡಿಕೊಂಡೆ. ನನ್ನ ತಪ್ಪಿಗೆ ತಾವು ಕೊಡುವ ಶಿಕ್ಷೆಯನ್ನು ಅನುಭವಿಸುತ್ತೇನೆ!" ಎಂದು ತಲೆಬಾಗಿ ನಿಂತ; ನಸುನಕ್ಕ ಬೋಧಿಸತ್ವರು;

"ಮಗು, ಇಂದಿನಿಂದ ನೀನು ನನ್ನ ಎರಡನೆಯ ಮಗ. ನಿನ್ನ ಹೆಂಡತಿಯೊಂದಿಗೆ ನೀನು ಇಲ್ಲಿಯೇ ಇರು. ದುರಾಸೆ ಮತ್ತು ದರ್ಪವಿದ್ದಲ್ಲಿ ಧರ್ಮವು ದಾರಿ ತಪ್ಪುತ್ತದೆ. ಸರಳತೆಯಲ್ಲಿಯೇ ಸತ್ಯವಿದೆ. ಸತ್ಯವನ್ನು ಮೈಗೂಡಿಸಿಕೋ..!" ಆಗ ಕಟಾಹಕನಿಗೆ ತನ್ನ ತಪ್ಪಿನ ಅರಿವಾಗಿ;

"ತಂದೇ, ನೀನು ಧರ್ಮ ರಕ್ಷಕನೇ ಸರಿ..! ನಾನು ದಾಸಿಯ ಮಗನೆಂದು ಬಗೆದು ಎಲ್ಲಿ ನನಗೆ ಕಠಿಣ ದಂಡನೆಯನ್ನು ಕೊಡುವೆಯೋ, ಎಂದು ಭಾವಿಸಿದ್ದೆ. ಆದರೆ ನೀನು ನನ್ನ ಊಹೆಗೂ ನಿಲುಕದ ಮಮಕಾರ ತೋರಿ ಮಹಾತ್ಮನಾಗಿ ಬಿಟ್ಟೆ. ನಿನ್ನ ಉದಾರತೆಯನ್ನು ನಾನೇಗೆ ತೀರಿಸಲಿ.....! ?" ಎಂದು ತಲೆಬಾಗಿ ವಂದಿಸಿದ. □

'SAMVADA' Kannada Monthly, February 2010 RNI-KAR KAN/2002/9246 CPMG/KA/BGW-706/2009-11
Office of Posting: 'Mail Business Center West' Bangalore-560104, Date of Posting: 1st & 7th of Every Month

"ಪ್ರಜ್ಞಾವಂತ ಗ್ರಾಹಕ - ಸಮರ್ಥಶಾಲಿ ಗ್ರಾಹಕ"



ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು

"ಬಿ.ಪಿ.ಎಲ್. ಕಾರ್ಡುಗಳು ಸಿಗದೆ ಸೌಲಭ್ಯದಿಂದ ವಂಚಿತರಾಗಿದ್ದ 30ಲಕ್ಷಕ್ಕಿಂತ ಹೆಚ್ಚು ಬಡಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಿ, ದಾಖಲೆ ನಿರ್ಮಿಸಿರುವ ಸರ್ಕಾರ"



ಶ್ರೀ ಹೆಚ್. ಹಾಲಪ್ಪ
ಮಾನ್ಯ ಆಹಾರ ಸಚಿವರು

ಗ್ರಾಹಕರ ಹಕ್ಕುಗಳು

* ಜೀವಕ್ಕೆ ಮತ್ತು ಆಸ್ತಿ ಪಾಸ್ತಿಗಳಿಗೆ ಅಪಾಯವನ್ನುಂಟುಮಾಡುವ ಸರಕುಗಳ ಮಾರಾಟದ ವಿರುದ್ಧ ರಕ್ಷಣೆ ಪಡೆಯುವ ಹಕ್ಕು.
* ಸರಕುಗಳ ಯೋಗ್ಯತೆ, ಪ್ರಮಾಣ, ಸಾಮರ್ಥ್ಯ, ಶುದ್ಧತೆ, ಗುಣಮಟ್ಟ ಮತ್ತು ಧಾರಣೆ ಬಗ್ಗೆ ಮಾಹಿತಿ ಪಡೆಯುವ ಹಕ್ಕು.
* ಸಾಧ್ಯವಾದ ಮಟ್ಟಿಗೆ ವಿವಿಧ ಸರಕುಗಳನ್ನು ಪೈಪೋಟಿ ದರದಲ್ಲಿ ದೊರಕುವಂತಾಗಿಸುವ ಆಯ್ಕೆಯ ಹಕ್ಕು.
* ಸೂಕ್ತ ವೇದಿಕೆಗಳ ಮುಂದೆ ಗ್ರಾಹಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಇರುವ ದೂರು ನೀಡುವ ಹಕ್ಕು.
* ಅನುಚಿತ ವ್ಯಾಪಾರ ವ್ಯವಹಾರದಿಂದಾಗಲಿ ಅಥವಾ ನೀತಿ ನಿಯಮಗಳಿಲ್ಲದ ವ್ಯವಹಾರದಿಂದಾಗಲಿ ಶೋಷಣೆಗೊಳಗಾಗುವುದರ ವಿರುದ್ಧ ಪರಿಹಾರ ಪಡೆಯುವ ಹಕ್ಕು.
* ಗ್ರಾಹಕ ಶಿಕ್ಷಣ ಪಡೆಯುವ ಹಕ್ಕು.

ಗ್ರಾಹಕರ ಜವಾಬ್ದಾರಿಗಳು

* ಐ.ಎಸ್.ಐ., ಅಗ್‌ಮಾರ್ಕ್, ಹಾಲ್‌ಮಾರ್ಕ್ ಇರುವ ವಸ್ತುಗಳನ್ನೇ ಖರೀದಿಸುವುದು.
* ವಸ್ತುಗಳನ್ನು ಖರೀದಿಸಿದಾಗ ತಪ್ಪದೇ ರಸೀತಿಯನ್ನು ಪಡೆಯುವುದು.
* ಗರಿಷ್ಠ ಮಾರಾಟ ದರಕ್ಕಿಂತ ಹೆಚ್ಚಿನ ದರವನ್ನು ವಿರೋಧಿಸುವುದು / ಪ್ರಶ್ನಿಸುವುದು.
* ಔಷಧಿಗಳನ್ನು ಖರೀದಿಸುವಾಗ ಅವಧಿ ಮುಗಿಯುವ ದಿನಾಂಕ ಹಾಗೂ ಉತ್ಪಾದಕರುಗಳ ವಿವರಗಳನ್ನು ಪರಿಶೀಲಿಸುವುದು.
* ಉತ್ತಮ ಹಾಗೂ ಪರಿಶುದ್ಧ ಪರಿಸರವನ್ನು ಕಾಪಾಡುವುದು.
* ಯಾವುದೇ ವಸ್ತುವಿನ ಖರೀದಿ ಅಥವಾ ಸೇವೆಯನ್ನು ಪಡೆಯುವ ಬಗ್ಗೆ ಅನುಮಾನ ಬಂದಲ್ಲಿ ಪ್ರಶ್ನೆ ಮಾಡಿ ಅನುಮಾನ ಪರಿಹರಿಸಿಕೊಳ್ಳುವುದು.
* ಶೋಷಿತ ಅಥವಾ ಮೋಸಕ್ಕೆ ಒಳಗಾದ ಗ್ರಾಹಕರು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಗ್ರಾಹಕರ ವೇದಿಕೆಗಳಲ್ಲಿ ದೂರು ಸಲ್ಲಿಸಿ ಪರಿಹಾರ ಪಡೆಯುವುದು.
* ತೂಕ ಮತ್ತು ಅಳತೆಯ ಸಾಧನಗಳು ಆಯಾ ಸಾಲಿನಲ್ಲಿ ಇಲಾಖೆಯವರಿಂದ ಪರಿಶೀಲಿಸಿ ಮುದ್ರೆ ಹಾಕಿರುವುದನ್ನು ಖಚಿತಪಡಿಸಿಕೊಳ್ಳುವುದು.
* ಕಾಳಸಂತೆಯಲ್ಲಿ ಖರೀದಿಸದಿರುವುದು.
* ನಕಲಿ ವಸ್ತುಗಳ ಬಗ್ಗೆ ನಿಗಾವಹಿಸಿ ತಯಾರಕರಿಗೆ ಮಾಹಿತಿ ನೀಡುವುದು.

ಇಲಾಖಾ ಕಾರ್ಯಕ್ರಮಗಳು

* ಸಾರ್ವಜನಿಕ ವಿತರಣಾ ಪದ್ಧತಿಯ ಯಶಸ್ವಿ ಅನುಷ್ಠಾನ
* ಆಹಾರ ಭದ್ರತೆ
* ಲೆವಿ ಸಂಗ್ರಹಣೆ ಹಾಗೂ ಸಮರ್ಪಕ ವಿತರಣೆ
* ಅವಶ್ಯಕ ವಸ್ತುಗಳ ಬೆಲೆ ನಿಯಂತ್ರಣ
* ಅಗತ್ಯ ವಸ್ತುಗಳ ಕಾಯ್ದೆ 1955 ಮತ್ತು ಅದರಡಿಯಲ್ಲಿ ಅನುಸರಿಸಲಾದ ಆದೇಶಗಳ ಸಮರ್ಪಕ ಅನುಷ್ಠಾನ

ಇಲಾಖಾ ಸಾಧನೆಗಳು

* ನ್ಯಾಯ ಬೆಲೆ ಅಂಗಡಿಗಳಲ್ಲಿ ಪಾಯಿಂಟ್ ಆಫ್ ಸೇಲ್ ಡಿವೈಸ್‌ನ ಅಳವಡಿಕೆಗೆ ಕ್ರಮ (ನ್ಯಾಯ ಬೆಲೆ ಅಂಗಡಿಗಳ ಗಣಕೀಕರಣ)
* ನಿಯಂತ್ರಣ ಕೊಠಡಿಯ ಸ್ಥಾಪನೆ
* ರಾಜ್ಯ ಗ್ರಾಹಕ ಸಹಾಯವಾಣಿ ಸ್ಥಾಪನೆಗೆ ಕ್ರಮ
* ಜಿಲ್ಲಾ ಗ್ರಾಹಕರ ರಕ್ಷಣಾ ಪರಿಷತ್ ಸ್ಥಾಪನೆ
* 650 ಶಾಲಾ ಗ್ರಾಹಕ ಕ್ಲಬ್‌ಗಳ ಸ್ಥಾಪನೆ
* ಗ್ರಾಹಕರ ಅದಾಲತ್
* ವಿಶ್ವ ಹಾಗೂ ರಾಷ್ಟ್ರೀಯ ಗ್ರಾಹಕರ ದಿನಗಳ ಅರ್ಥಪೂರ್ಣ ಆಚರಣೆ
* ನಾಗಾಭರಣ ನಿರ್ದೇಶನದ ನೂರು ಕಂತುಗಳ ಗ್ರಾಹಕ ಜಾಗೃತಿ ಧಾರಾವಾಹಿ

ಗ್ರಾಹಕ ಸಂರಕ್ಷಣೆ - ನಮ್ಮ ನಿಮ್ಮೆಲ್ಲರ ಹೊಣೆ

ಕರ್ನಾಟಕ ವಾರ್ತೆ